ಗುರುವಾರ, ಫೆಬ್ರುವರಿ 18, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 49 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೇಗೆ ತಯಾರಿ ನಡೆಸಬೇಕು ಎಂಬುದರ ಜೊತೆಗೆ ಏನನ್ನು ಮಾಡಬಾರದು ಎಂಬುದು ಕೂಡ ಮುಖ್ಯ. ವೈಫಲ್ಯಕ್ಕೆ ಕಾರಣ ಅರಿತರೆ ಯಶಸ್ಸು ನಿಶ್ಚಿತ...

ಆಳ-ಅಗಲ
ಬಿಜೆಪಿ ತಮಿಳುನಾಡು ಪ್ರವೇಶಕ್ಕೆ ಪುದುಚೇರಿ ದಾರಿ
ಕನ್ನಡದಲ್ಲಿ ಸರ್ಚ್ ಎಂಜಿನ್, ಗಣಪೆ ಕಾಯಿಯಿಂದ ಕ್ಯಾನ್ಸರ್ ಔಷಧ 8
ಬಾಲನ್ಯಾಯ ಕಾಯ್ದೆ ತಿದ್ದುಪಡಿಗೆ ಅಸ್ತು 9

ಸೆನ್ಸೆಕ್ಸ್	ನಿಫ್ಟಿ	₹/$
51,704	15,209	72.74

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ನೇತೃತ್ವದಲ್ಲಿ ಸಭೆ

ಮೀಸಲಾತಿ: ಒಕ್ಕಲಿಗರ ಸರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಸಲಾತಿ ಪಟ್ಟಿಯಲ್ಲಿ ಪರಿಷ್ಕರಣೆ, ಬದಲಾವಣೆ, ಪ್ರಮಾಣ ಹೆಚ್ಚಳ ಮಾಡುವಂತೆ ಆಗ್ರಹಿಸಿ ವಿವಿಧ ಸಮುದಾಯಗಳ ಹೋರಾಟ ಬಿರುಸುಗೊಂಡಿರುವ ಬೆನ್ನಲ್ಲೇ ಒಕ್ಕಲಿಗ ಸಮುದಾಯ ಕೂಡ ಮೀಸಲಾತಿ ಮುಂದಿಟ್ಟು ಹೋರಾಟದತ್ತ ಹೆಜ್ಜೆ ಇಟ್ಟಿದೆ.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ, ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರಯ್ಯ ನೇತೃತ್ವದಲ್ಲಿ ಆದಿಚುಂಚನಗಿರಿ ವಿಜಯನಗರ ಶಾಖಾ ಮಠದಲ್ಲಿ ಬುಧವಾರ ನಡೆದ ಸಭೆಯಲ್ಲಿ ಈ ಸಂಬಂಧ ವಿಸ್ತೃತ ಚರ್ಚೆ ನಡೆದಿದೆ.

ಮೀಸಲಾತಿ ಹೆಚ್ಚಳ ವಿಷಯದಲ್ಲಿ ಸಾಧಕ, ಬಾಧಕಗಳನ್ನು ಪರಿಶೀಲಿಸಿ ಎಚ್ಚರಿಕೆಯಿಂದ ಹೆಜ್ಜೆ ಇಡಲು ಸಭೆ ತೀರ್ಮಾನಿಸಿತು. ಹೋರಾಟದ ರೂಪುರೇಷೆಗಳನ್ನು ಸಿದ್ಧಪಡಿಸಲು ಮತ್ತು ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸಮಿತಿಗಳನ್ನು ರಚಿಸುವ ನಿರ್ಣಯವನ್ನೂ ಕೈಗೊಳ್ಳಲಾಗಿದೆ.

‘ಒಕ್ಕಲಿಗ ಸಮುದಾಯದ ಎಲ್ಲಾ 115 ಉಪಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿಲ್ಲ. ಇದರಿಂದ ಅನೇಕ ಉಪ ಜಾತಿಗಳು ಸವಲತ್ತುಗಳಿಂದ ವಂಚಿತವಾಗಿವೆ. ಆದ್ದರಿಂದ ಈ ಎಲ್ಲಾ ಉಪ ಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡಬೇಕು. ಇದಕ್ಕಾಗಿಯೂ ಹೋರಾಟ ಮಾಡುವ ಅವಶ್ಯಕತೆಯಿದೆ’ ಎಂದು ನಿರ್ಮಲಾನಂದನಾಥ ಸ್ವಾಮೀಜಿ ಪ್ರತಿಪಾದಿಸಿದರು.

‘ನಗರ ಪ್ರದೇಶದ ಒಕ್ಕಲಿಗ ಸಮುದಾಯ ಸಂಕಷ್ಟದಲ್ಲಿದ್ದು, ಅವರಿಗೆ ಮೀಸಲಾತಿ ಸೌಲಭ್ಯ ಸಿಗಬೇಕು. ಹಾಗಾಗಿ ಗ್ರಾಮೀಣ ಒಕ್ಕಲಿಗ ಮತ್ತು ನಗರ ಪ್ರದೇಶದ ಒಕ್ಕಲಿಗ ಎಂಬ ತಾರತಮ್ಯ ಇಲ್ಲದೆ ಎಲ್ಲರಂತೆ ಒಕ್ಕಲಿಗರಿಗೆ ಮೀಸಲಾತಿ ಸೌಲಭ್ಯ ದೊರಕಬೇಕು’ ಎಂದು ಹೇಳಿದರು.

ನಂಜಾವಧೂತ ಸ್ವಾಮೀಜಿ ಮಾತನಾಡಿ, ‘ಒಕ್ಕಲಿಗ ಸಮುದಾಯವನ್ನು ಒಡೆಯುವ ಪ್ರಯತ್ನಗಳು ನಡೆಯುತ್ತಿವೆ. ಒಕ್ಕಲಿಗ ಜಾತಿಯಿಂದ ಉಪ ಜಾತಿಗಳು ಹೊರನಡೆದರೆ ಅಲ್ಪಸಂಖ್ಯಾತರಾಗುವ ಭೀತಿ ಇದೆ. ಇಂತಹ ತಪ್ಪುಗಳನ್ನು ಸರಿಪಡಿಸಲು ಸಮುದಾಯದ ಮುಖಂಡರು ಮುಂದಾಗಬೇಕು’ ಎಂದು ಹೇಳಿದರು.

ಸಭೆಯಲ್ಲಿ ಪತ್ರಕರ್ತ ಟಿ. ವೆಂಕಟೇಶ್, ಲೇಖಕರಾದ ನಾಗತಿಹಳ್ಳಿ ಚಂದ್ರಶೇಖರ್, ಎಲ್.ಎನ್. ಮುಕುಂದರಾಜ್, ತಲಕಾಡು ಚಿಕ್ಕರಂಗೇಗೌಡ, ಲೆಕ್ಕ ಪರಿಶೋಧಕ ನಾಗರಾಜ್ ಯಲಕವಾಡಿ ಪಾಲ್ಗೊಂಡಿದ್ದರು.

ಹೋರಾಟದ ಹೊನಲು: ವಾಲ್ಮೀಕಿ ಸಮುದಾಯದ ಮೀಸಲಾತಿ ಪ್ರಮಾಣ ಹೆಚ್ಚಿಸಲು ಒಂದು ಸುತ್ತಿನ ಹೋರಾಟ ನಡೆದಿದ್ದು ಸರ್ಕಾರದ ಮೇಲೆ ಒತ್ತಡ ಹಾಕುವ ಕೆಲಸವನ್ನು ಸಮುದಾಯದ ಮಠಾಧೀಶರು, ಸಚಿವರು, ಶಾಸಕರು ನಡೆಸಿದ್ದಾರೆ.

ಪರಿಶಿಷ್ಟ ಪಂಗಡಗಳ ಪಟ್ಟಿ ಸೇರಿಸಬೇಕೆಂಬ ಬೇಡಿಕೆ ಮುಂದಿಟ್ಟು ಕುರುಬ ಸಮುದಾಯದವರು ಸ್ವಾಮೀಜಿ ಹಾಗೂ ಸಚಿವರ ನೇತೃತ್ವದಲ್ಲಿ ಪಾದ ಯಾತ್ರೆ ನಡೆಸಿ ಬೃಹತ್ ಸಮಾವೇಶವನ್ನೂ ನಡೆಸಿದ್ದಾರೆ.

ಲಿಂಗಾಯತ ಪಂಚಮಸಾಲಿ ಸಮುದಾಯದವರನ್ನು ಹಿಂದುಳಿದ ವರ್ಗಗಳ 2 ಎ ಪಟ್ಟಿಗೆ ಸೇರಿಸಬೇಕೆಂದು ಸಮುದಾಯದ ಸ್ವಾಮೀಜಿಗಳು, ಶಾಸಕರ ನೇತೃತ್ವದಲ್ಲಿ ಪಾದ ಯಾತ್ರೆ ನಡೆಯುತ್ತಿದ್ದು, ಇದೇ 21 ರಂದು ಬೃಹತ್ ಸಮಾವೇಶ ನಿಗದಿಯಾಗಿದೆ.

ಲಿಂಗಾಯತ-ವೀರಶೈವ ಸಮುದಾಯದ ಎಲ್ಲ ಉಪ ಪಂಗಡಗಳನ್ನು ಒಬಿಸಿ ಪಟ್ಟಿಗೆ ಸೇರಿಸಬೇಕೆಂದು ಮಠಾಧೀಶರ ಒಕ್ಕೂಟ ಸಮಾವೇಶ ನಡೆಸಿದ್ದು, ಸರ್ಕಾರಕ್ಕೆ ಮನವಿಯನ್ನೂ ಸಲ್ಲಿಸಿದೆ.

ಪರಿಶಿಷ್ಟ ಜಾತಿಯಲ್ಲಿರುವ ಆದಿ ಜಾಂಬವ ಸಮುದಾಯಕ್ಕೆ ಒಳಮೀಸಲಾತಿ ನೀಡಬೇಕೆಂಬ ಬೇಡಿಕೆ ಮುಂದಿಟ್ಟು ಸಮುದಾಯದ ಸ್ವಾಮೀಜಿ ಪಾದಯಾತ್ರೆ ನಡೆಸುತ್ತಿದ್ದಾರೆ.

ಒಂದು ಪಟ್ಟಿಯಿಂದ ಮತ್ತೊಂದು ಪಟ್ಟಿಗೆ ಸ್ಥಳಾಂತರಗೊಳ್ಳುವ ಬೇಡಿಕೆಯಿಂದ ಈಗಾಗಲೇ ಈ ಪಟ್ಟಿಯಲ್ಲಿರುವ ಸಮುದಾಯಕ್ಕೆ ಅನ್ಯಾಯವಾಗಲಿದೆ ಎಂಬ ವಿರೋಧದ ಧ್ವನಿಯೂ ವ್ಯಕ್ತವಾಗಿದೆ. ಕುರುಬ ಸಮುದಾಯದವರನ್ನು ಪರಿಶಿಷ್ಟ ಪಂಗಡಕ್ಕೆ, ಪಂಚಮಸಾಲಿಯವರನ್ನು 2 ಎ ಪಟ್ಟಿಗೆ ಸೇರಿಸುವ ಬಗ್ಗೆ ಈಗಾಗಲೇ ಪರಿಶಿಷ್ಟ ಪಂಗಡ ಹಾಗೂ 2 ಎ ಪಟ್ಟಿಯಲ್ಲಿರುವ ಸಮುದಾಯದವರು ವಿರೋಧ ವ್ಯಕ್ತಪಡಿಸಿ ಸರ್ಕಾರಕ್ಕೆ ಪತ್ರವನ್ನೂ ಬರೆದಿದ್ದಾರೆ.

ಈ ಬೆಳವಣಿಗೆಗಳು ನಡೆಯುತ್ತಿರುವ ಹೊತ್ತಿನಲ್ಲೇ ಒಕ್ಕಲಿಗ ಸಮುದಾಯ ಕೂಡ ಮೀಸಲಾತಿ ಹೋರಾಟದ ಹಾದಿ ಹಿಡಿದಿದೆ.

ಎರಡು ಸಮಿತಿ ರಚನೆ

ಒಕ್ಕಲಿಗರ ಮೀಸಲಾತಿ ಹೆಚ್ಚಳ ಹಾಗೂ ವಿವಿಧ ಬೇಡಿಕೆಗಳ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲು, ಹೋರಾಟ ರೂಪಿಸಲು ಎರಡು ಸಮಿತಿಗಳನ್ನು ರಚಿಸಲಾಗಿದೆ. ನಿವೃತ್ತ ಐಎಎಸ್ ಅಧಿಕಾರಿಗಳಾದ ವೈ.ಕೆ. ಪುಟ್ಟಸ್ವಾಮಿಗೌಡ, ಟಿ. ತಿಮ್ಮೇಗೌಡ, ನಿವೃತ್ತ ಐಪಿಎಸ್ ಅಧಿಕಾರಿ ಕೆ.ವಿ.ಆರ್. ಟಾಗೋರ್ ಹಾಗೂ ಡಾ.ಎಚ್.ಎನ್. ಕೃಷ್ಣ, ಸಿ.ಚಿಕ್ಕಣ್ಣ ಅವರನ್ನು ಈ ಎರಡೂ ಸಮಿತಿಗಳ ಸದಸ್ಯರಾಗಿ ನೇಮಿಸಲಾಗಿದೆ.

ಹೋರಾಟದ ರೂಪುರೇಷೆ ಮತ್ತು ಪ್ರಾಧಿಕಾರದ ಮಾರ್ಗಸೂಚಿಗಳನ್ನು ಸಿದ್ಧಪಡಿಸಲು ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರಯ್ಯ, ಶಂಕರಲಿಂಗೇಗೌಡ, ಎಚ್.ಎನ್. ಕೃಷ್ಣ, ಹಿ.ಚಿ.ಬೋರಲಿಂಗಯ್ಯ ಮತ್ತು ಪುಟ್ಟೇಗೌಡ ಅವರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.

ಸಮುದಾಯದ ಹಿತ ರಕ್ಷಣೆಗೆ ಮೀಸಲಾತಿಯ ಹೆಚ್ಚಳ ಅನಿವಾರ್ಯ. ಪ್ರಾಧಿಕಾರ ರಚನೆಯೂ ಆಗಬೇಕು.
ನಿರ್ಮಲಾನಂದನಾಥ ಸ್ವಾಮೀಜಿ, ಪೀಠಾಧ್ಯಕ್ಷರು, ಆದಿಚುಂಚನಗಿರಿ ಮಹಾ ಸಂಸ್ಥಾನ

ಒಕ್ಕಲಿಗರಿಗೆ ನೀಡುತ್ತಿರುವ ಮೀಸಲಾತಿ ಹೆಚ್ಚಳ ಮತ್ತು ಪ್ರಾಧಿಕಾರ ರಚನೆ ಆಗುವವರೆಗೆ ನಾವು ಹೋರಾಟ ನಡೆಸಲೇಬೇಕಾಗಿದೆ
ನಂಜಾವಧೂತ ಸ್ವಾಮೀಜಿ ಸ್ಫಟಿಕಪುರಿ ಮಠ, ಪಟ್ಟನಾಯಕನಹಳ್ಳಿ

ಹೋರಾಟ ನಿರತ ಸಮುದಾಯಗಳು
- ಕುರುಬ
- ಲಿಂಗಾಯತ ಪಂಚಮಸಾಲಿ
- ವಾಲ್ಮೀಕಿ ನಾಯಕ
- ಆದಿ ಜಾಂಬವ
- ನೇಕಾರ
- ಉಪ್ಪಾರ

ರಾಜಸ್ಥಾನದಲ್ಲಿ ₹ 100ರ ಗಡಿ ದಾಟಿದ ಪೆಟ್ರೋಲ್

ನವದೆಹಲಿ (ಪಿಟಿಐ): ತೈಲ ಮಾರಾಟ ಕಂಪನಿಗಳು ಸತತ ಒಂಬತ್ತನೆಯ ದಿನವೂ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿವೆ. ಇದರಿಂದಾಗಿ, ದೇಶದಲ್ಲಿ ಇದೇ ಮೊದಲ ಬಾರಿಗೆ ಕೆಲವೆಡೆ ಪೆಟ್ರೋಲ್ ಬೆಲೆಯು ₹ 100ರ ಗಡಿ ದಾಟಿದೆ.

ಬ್ರ್ಯಾಂಡೆಡ್ ಪೆಟ್ರೋಲ್ ಬೆಲೆಯು ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳ ಕೆಲವೆಡೆ ಈಗಾಗಲೇ ₹ 100 ಗಡಿ ದಾಟ ಆಗಿತ್ತು. ಈ ಬಗೆಯ ಪೆಟ್ರೋಲ್‌ಗೆ ಹೆಚ್ಚಿನ ತೆರಿಗೆ ವಿಧಿಸಲಾಗಿದೆ. ಮಾಮೂಲಿ ಪೆಟ್ರೋಲ್ ದರ ದೇಶದಲ್ಲಿ ₹ 100 ಗಡಿಯನ್ನು ಈ ಹಿಂದೆ ಎಂದೂ ದಾಟಿರಲಿಲ್ಲ.

ರಾಜಸ್ಥಾನದ ಶ್ರೀಗಂಗಾನಗರ ಪಟ್ಟಣದಲ್ಲಿ ಲೀಟರ್ ಪೆಟ್ರೋಲ್ ಬೆಲೆ ಬುಧವಾರ ₹ 100.13 ಆಗಿದೆ. ದೇಶದಲ್ಲಿ ಪೆಟ್ರೋಲ್ ಮೇಲೆ ಅತಿಹೆಚ್ಚಿನ ಪ್ರಮಾಣದ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಇರುವುದು ರಾಜಸ್ಥಾನದಲ್ಲಿ.

ಬುಧವಾರ ಆದ ಹೆಚ್ಚಳದ ನಂತರ ದೆಹಲಿಯಲ್ಲಿ ಪೆಟ್ರೋಲ್ ಬೆಲೆಯು ₹ 89.54, ಮುಂಬೈನಲ್ಲಿ ₹ 96 ಆಗಿದೆ.

11ನೇ ಪುಟ ನೋಡಿ

ಟೂಲ್‌ಕಿಟ್ ಪ್ರಕರಣ: ನಿಕಿತಾಗೆ ಜಾಮೀನು

ಪ್ರಜಾವಾಣಿ ವಾರ್ತೆ

ಮುಂಬೈ: ಟೂಲ್‌ಕಿಟ್ ಪ್ರಕರಣದ ಆರೋಪಿ, ಮುಂಬೈನ ವಕೀಲೆ ಮತ್ತು ಪರಿಸರ ಕಾರ್ಯಕರ್ತೆ ನಿಕಿತಾ ಜೇಕಬ್ ಅವರಿಗೆ ಬಾಂಬೆ ಹೈಕೋರ್ಟ್ ಬುಧವಾರ ಮೂರು ವಾರಗಳ ತಾತ್ಕಾಲಿಕ ನಿರೀಕ್ಷಣಾ ಜಾಮೀನು ನೀಡಿದೆ. ನಿಕಿತಾ ವಿರುದ್ಧ ದೆಹಲಿ ಪೊಲೀಸರು ಜಾಮೀನುರಹಿತ ವಾರಂಟ್ ಪಡೆದುಕೊಂಡಿದ್ದಾರೆ. ಬಂಧನದಿಂದ ರಕ್ಷಣೆ ಪಡೆಯಲು ದೆಹಲಿಯ ನ್ಯಾಯಾಲಯಕ್ಕೆ ಹೋಗುವುದಕ್ಕಾಗಿ ಜಾಮೀನು ಮಂಜೂರು ಮಾಡಲಾಗಿದೆ.

ಇನ್ನೊಬ್ಬ ಆರೋಪಿ ಶಾಂತನು ಮುಲುಕ್ ಅವರಿಗೆ ಬಾಂಬೆ ಹೈಕೋರ್ಟ್‌ನ ಔರಂಗಾಬಾದ್ ಪೀಠವು ಮಂಗಳವಾರವೇ ಜಾಮೀನು ನೀಡಿದೆ.

ಈ ಪ್ರಕರಣದ ಮತ್ತೊಬ್ಬ ಆರೋಪಿಯಾಗಿರುವ ಬೆಂಗಳೂರಿನ ಪರಿಸರ ಕಾರ್ಯಕರ್ತೆ ದಿಶಾ ರವಿ ಅವರನ್ನು ದೆಹಲಿ ಪೊಲೀಸರು ಶನಿವಾರ ಬಂಧಿಸಿದ್ದಾರೆ.

‘ಯಾವುದೇ ಸಂದರ್ಭದಲ್ಲಿ ತಮ್ಮನ್ನು ಪೊಲೀಸರು ಬಂಧಿಸಬಹುದು ಎಂಬ ಆತಂಕ ಅರ್ಜಿದಾರರಲ್ಲಿ (ನಿಕಿತಾ) ಇದೆ. ಬೇರೊಂದು ರಾಜ್ಯದ ನ್ಯಾಯಾಲಯದಿಂದ ಅವರು ಜಾಮೀನು ಪಡೆದುಕೊಳ್ಳಲು ವ್ಯವಸ್ಥೆ ಮಾಡಿಕೊಳ್ಳಬೇಕಿದೆ. ಹಾಗಾಗಿ, ಅರ್ಜಿದಾರರ ಕೋರಿಕೆಯಂತೆ ತಾತ್ಕಾಲಿಕವಾಗಿ ಜಾಮೀನು ನೀಡಬಹುದು’ ಎಂದು ನ್ಯಾಯಮೂರ್ತಿ ಪಿ.ಡಿ. ನಾಯ್ಕ್ ಹೇಳಿದರು.

₹25 ಸಾವಿರದ ವೈಯಕ್ತಿಕ ಭದ್ರತೆ ಮತ್ತು ಖಾತರಿಗಳನ್ನು ಒದಗಿಸುವಂತೆ ಕೋರ್ಟ್ ಸೂಚಿಸಿದೆ.

ಹಾರ್ಡ್‌ಡಿಸ್ಕ್ ಒಯ್ದವರ ವಿರುದ್ಧ ದೂರು

ದೆಹಲಿಯ ಪೊಲೀಸರು ಎಂದು ಹೇಳಿಕೊಂಡ ಇಬ್ಬರು ತಮ್ಮ ಮನೆಗೆ ಬಂದು ಕಂಪ್ಯೂಟರ್‌ನ ಹಾರ್ಡ್‌ಡಿಸ್ಕ್ ಮತ್ತು ಇತರ ಕೆಲವು ವಸ್ತುಗಳನ್ನು ಒಯ್ದಿದ್ದಾರೆ ಎಂದು ಶಾಂತನು ಮುಲುಕ್ ಅವರ ತಂದೆ ಶಿವಲಾಲ್ ಮುಲುಕ್ ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

9ನೇ ಪುಟ ನೋಡಿ

ತೆರಿಗೆ ವಂಚನೆ, ಆದಾಯ ಮಾಹಿತಿ ಮುಚ್ಚಿಟ್ಟ ಆರೋಪ

12 ವೈದ್ಯ ಕಾಲೇಜುಗಳ ಮೇಲೆ ಐಟಿ ದಾಳಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ತಡರಾತ್ರಿವರೆಗೂ ನಡೆದ ದಾಳಿ
- ವಹಿವಾಟಿಗೆ ಸಂಬಂಧಿಸಿದ ದಾಖಲೆಗಳ ವಶ

ಬೆಂಗಳೂರು: ತೆರಿಗೆ ವಂಚನೆ ಮತ್ತು ಆದಾಯ ಮಾಹಿತಿ ಮುಚ್ಚಿಟ್ಟ ಆರೋಪಕ್ಕೆ ಸಂಬಂಧಿಸಿದಂತೆ ಬೆಂಗಳೂರು, ತುಮಕೂರು, ದಾವಣಗೆರೆ ಮತ್ತು ಮಂಗಳೂರಿನ 12 ವೈದ್ಯಕೀಯ ಕಾಲೇಜುಗಳು ಹಾಗೂ ಆಸ್ಪತ್ರೆಗಳ ಮೇಲೆ ಬುಧವಾರ ದಾಳಿ ನಡೆಸಿರುವ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, ವ್ಯಾಪಕ ಶೋಧ ನಡೆಸಿದ್ದಾರೆ.

ಮಂಗಳೂರಿನ ಎ.ಜೆ. ವೈದ್ಯಕೀಯ ಕಾಲೇಜು, ಯೇನೆಪೋಯ ವೈದ್ಯಕೀಯ ಕಾಲೇಜು, ಕಣಚೂರು ವೈದ್ಯಕೀಯ ಕಾಲೇಜು, ಶ್ರೀನಿವಾಸ ವೈದ್ಯಕೀಯ ಕಾಲೇಜು, ಬೆಂಗಳೂರಿನ ಸಪ್ತಗಿರಿ ವೈದ್ಯಕೀಯ ಕಾಲೇಜು, ಬಿಜಿಎಸ್ ವೈದ್ಯಕೀಯ ಕಾಲೇಜು, ದೇವನಹಳ್ಳಿಯ ಆಕಾಶ್ ವೈದ್ಯಕೀಯ ಕಾಲೇಜು, ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜು ಹಾಗೂ ಅವುಗಳ ಆಸ್ಪತ್ರೆಗಳ ಮೇಲೆ ಐ.ಟಿ ದಾಳಿ ನಡೆದಿದೆ.

ದಾವಣಗೆರೆಯ ಶಾಮನೂರು ಶಿವಶಂಕರಪ್ಪ ಒಡೆತನದ ಎಸ್.ಎಸ್. ವೈದ್ಯಕೀಯ ಕಾಲೇಜು, ಜೆ.ಜೆ. ವೈದ್ಯಕೀಯ ಕಾಲೇಜು, ಬಾಪೂಜಿ ದಂತ ವೈದ್ಯಕೀಯ ಕಾಲೇಜು, ಕಾಲೇಜ್ ಆಫ್ ಡೆಂಟಲ್ ಸೈನ್ಸಸ್‌ನಲ್ಲೂ (ಸಿಒಡಿಎಸ್) ಐ.ಟಿ ಅಧಿಕಾರಿಗಳು ಶೋಧ ನಡೆಸಿದ್ದಾರೆ. ಆದರೆ, ಸಂಸ್ಥೆಯ ಮುಖ್ಯಸ್ಥರು ಐ.ಟಿ ದಾಳಿಯನ್ನು ನಿರಾಕರಿಸಿದ್ದಾರೆ.

ಈ ಎಲ್ಲ ಕಾಲೇಜುಗಳ ಆಡಳಿತ ಮಂಡಳಿಗಳ ಕಚೇರಿಗಳು, ಆಸ್ಪತ್ರೆಗಳ ಕಚೇರಿಗಳು, ಆಡಳಿತ ಮಂಡಳಿಗಳ ಪ್ರಮುಖರ ಮನೆಗಳು, ಟ್ರಸ್ಟ್ ನಿರ್ದೇಶಕರ ಮನೆಗಳು ಮತ್ತು ಅವರ ನಿಕಟವರ್ತಿಗಳ ಮನೆಗಳಲ್ಲಿ ಶೋಧ ನಡೆಸಲಾಗಿದೆ. 200 ಅಧಿಕಾರಿಗಳ ತಂಡ ಬುಧವಾರ ನಸುಕಿನಲ್ಲಿ 4.30ಕ್ಕೆ ಶೋಧ ಆರಂಭಿಸಿದ್ದು, ತಡ ರಾತ್ರಿಯವರೆಗೂ ಕಾರ್ಯಾಚರಣೆ ಮುಂದುವರಿದಿತ್ತು.

ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನ ಮುಖ್ಯಸ್ಥ ಡಾ. ಹುಲಿನಾಯ್ಕರ್, ದೇವನಹಳ್ಳಿಯ ಆಕಾಶ್ ವೈದ್ಯಕೀಯ ಕಾಲೇಜಿನ ಮುಖ್ಯಸ್ಥ ಮುನಿರಾಜು, ಸಪ್ತಗಿರಿ ವೈದ್ಯಕೀಯ ಕಾಲೇಜಿನ ಮುಖ್ಯಸ್ಥ ದಯಾನಂದ್ ಅವರ ಮನೆಗಳಲ್ಲೂ ಶೋಧ ನಡೆಸಲಾಗಿದೆ. ದಾಳಿಯ ವೇಳೆ ಮೂವರೂ ಮನೆಯಲ್ಲೇ ಇದ್ದರು. ಆದಾಯ ತೆರಿಗೆ ಅಧಿಕಾರಿಗಳು ಈ ಎಲ್ಲರನ್ನೂ ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತೆರಿಗೆ ವಂಚನೆ ಶಂಕೆ: ಈ ಎಲ್ಲ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳ ಆಡಳಿತ ಮಂಡಳಿಗಳು ನೈಜ ಆದಾಯದ ಮಾಹಿತಿಯನ್ನು ಬಹಿರಂಗಪಡಿಸದೇ ತೆರಿಗೆ ವಂಚಿಸಿರುವ ಶಂಕೆಯ ಮೇಲೆ ಐ.ಟಿ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. ಈ ಕಾರಣಕ್ಕಾಗಿ ಹಿಂದಿನ ವರ್ಷಗಳ ಹಣಕಾಸು ವಹಿವಾಟಿಗೆ ಮತ್ತು ಬಿಲ್‌ಗಳಿಗೆ ಸಂಬಂಧಿಸಿದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಕೋವಿಡ್ ಅವಧಿಯಲ್ಲಿ ಕೆಲವು ಆಸ್ಪತ್ರೆಗಳಲ್ಲಿ ನಿಗದಿಗಿಂತ ಹೆಚ್ಚಿನ ಬಿಲ್ ಪಡೆದಿರುವ ಆರೋಪಗಳಿವೆ. ಆ ಬಗ್ಗೆಯೂ ಪರಿಶೀಲನೆ ನಡೆಸಲಾಗುತ್ತಿದೆ. ಕೆಲವು ಸ್ಥಳಗಳಲ್ಲಿ ಬೃಹತ್ ಮೊತ್ತದ ನಗದು ಪತ್ತೆಯಾಗಿದೆ. ಚಿನ್ನಾಭರಣ, ಬ್ಯಾಂಕ್ ದಾಖಲೆಗಳು, ಆಸ್ತಿ ಖರೀದಿ ಮತ್ತು ಹಣಕಾಸು ವಹಿವಾಟಿಗೆ ಸಂಬಂಧಿಸಿದ ದಾಖಲೆಗಳನ್ನೂ ತನಿಖಾ ತಂಡ ವಶಕ್ಕೆ ಪಡೆದಿದೆ ಎಂದು ಆದಾಯ ತೆರಿಗೆ ಇಲಾಖೆ ಮೂಲಗಳು ತಿಳಿಸಿವೆ.

ಮೀಟೂ ಪ್ರಕರಣ: ಅಕ್ಬರ್ ವಿರುದ್ಧ ಪ್ರಿಯಾಗೆ ಗೆಲುವು

ಪ್ರಿಯಾ ರಮಣಿ

ನವದೆಹಲಿ: ಕೇಂದ್ರದ ಮಾಜಿ ಸಚಿವ ಎಂ.ಜೆ. ಅಕ್ಬರ್ ಅವರು ಪತ್ರಕರ್ತೆ ಪ್ರಿಯಾ ರಮಣಿ ವಿರುದ್ಧ ಹೂಡಿದ್ದ ಮಾನನಷ್ಟ ಪ್ರಕರಣದಲ್ಲಿ ಪ್ರಿಯಾ ಅವರನ್ನು ದೆಹಲಿಯ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ನ್ಯಾಯಾಲಯ ಬುಧವಾರ ಖುಲಾಸೆ ಮಾಡಿದೆ.

ಅಕ್ಬರ್ ಅವರು ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದರು ಎಂದು ‘ಮೀಟೂ’ ಅಭಿಯಾನದ ಸಂದರ್ಭದಲ್ಲಿ ಪ್ರಿಯಾ ಹೇಳಿದ್ದರು. ಈ ಹೇಳಿಕೆಯ ವಿರುದ್ಧ ಅಕ್ಬರ್ ಅವರು ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ಒಬ್ಬ ವ್ಯಕ್ತಿಯ ಜೀವ ಮತ್ತು ಘನತೆಯ ಬೆಲೆ ತೆತ್ತು ಇನ್ನೊಬ್ಬ ವ್ಯಕ್ತಿಯ ಒಳ್ಳೆಯ ಹೆಸರು ಉಳಿಸಿಕೊಳ್ಳುವ ಹಕ್ಕನ್ನು ರಕ್ಷಿಸಲು ಸಾಧ್ಯವಿಲ್ಲ. ತಮ್ಮ ಮೇಲಿನ ಲೈಂಗಿಕ ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವ ಮಹಿಳೆಯರನ್ನು ಮಾನನಷ್ಟ ದೂರಿನ ಹೆಸರಿನಲ್ಲಿ ಶಿಕ್ಷಿಸಲು ಸಾಧ್ಯವಿಲ್ಲ ಎಂದು ನ್ಯಾಯಾಧೀಶ ರವೀಂದ್ರ ಕುಮಾರ್ ಪಾಂಡೆ ಅವರು 91 ಪುಟಗಳ ತೀರ್ಪಿನಲ್ಲಿ ಹೇಳಿದ್ದಾರೆ.

9ನೇ ಪುಟ ನೋಡಿ

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ.. ಪುಟ-5

ಒಳ ಪುಟಗಳು

‘ರಾಜೀವ್ ಹಂತಕರನ್ನು ಕ್ಷಮಿಸಿದ್ದೇನೆ’ 9
ಪಂಜಾಬ್: ಕಾಂಗ್ರೆಸ್‌ಗೆ ಭಾರಿ ಗೆಲುವು 10

ಇಂದಿನ ಪಾಡ್‌ಕಾಸ್ಟ್ ವಿಶೇಷ
ಆಟ-ನೋಟ ವನಿತಾ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಮಿಸಳ್ ಹಾಪ್ಚಾ
ರಥಸಪ್ತಮಿ ಸಂಭ್ರಮ
ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ
ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕೆಟಿಪಿಪಿ ಕಾಯ್ದೆಗೆ ತಿದ್ದುಪಡಿ ತರಲು ಮುಂದಾದ ಸರ್ಕಾರ

₹2ಕೋಟಿವರೆಗಿನ ಕಾಮಗಾರಿ ಕೆಆರ್‌ಐಡಿಎಲ್‌ಗೆ?

• ಗುರು ಪಿ.ಎಸ್.

ಬೆಂಗಳೂರು: ಟೆಂಡರ್ ಕರೆಯದೇ ₹2 ಕೋಟಿ ಮೊತ್ತದವರೆಗಿನ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಮೂಲಕ ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸುವುದಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆಗೆ (ಕೆಟಿಪಿಪಿ ಕಾಯ್ದೆ) ತಿದ್ದುಪಡಿ ತರಲು ಸರ್ಕಾರ ಮುಂದಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಈ ಪ್ರಸ್ತಾವಕ್ಕೆ ಹಣಕಾಸು ಇಲಾಖೆ ಮತ್ತು ಕಾನೂನು ಇಲಾಖೆ ವಿರೋಧ ವ್ಯಕ್ತಪಡಿಸಿವೆ. ಆದರೂ ಈ ಪ್ರಸ್ತಾವವನ್ನು ಗುರುವಾರ (ಫೆ.18) ನಡೆಯಲಿರುವ ಸಚಿವ ಸಂಪುಟ ಸಭೆಯ ಮುಂದಿಡಲು ಸರ್ಕಾರ ಮುಂದಾಗಿದೆ.

ಕೆಆರ್‌ಐಡಿಎಲ್ ನಡೆಸುವ ಕಾಮಗಾರಿಗಳಿಗೆ ಕೆಟಿಟಿಪಿ ಕಾಯ್ದೆಯ 4ಜಿ ಕಲಂ ಅಡಿ ವಿನಾಯಿತಿ ನೀಡುವುದಕ್ಕೆ ಪೂರಕವಾಗಿ ಕಾಯ್ದೆಗೆ ತಿದ್ದುಪಡಿ ತರದೇ ಇದ್ದರೆ, ನಿಗಮವು ಆರ್ಥಿಕವಾಗಿ ಭಾರಿ ಸಂಕಷ್ಟ ಎದುರಿಸಬೇಕಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ನಿವಾರಣೆ ಹಾಗೂ ಆರ್ಥಿಕ ಸ್ಥಿತಿ ಸುಧಾರಣೆ ಕಾರ್ಯವನ್ನು ನಿಗಮ ಮಾಡುತ್ತಿದೆ. ಕಾಯ್ದೆ ತಿದ್ದುಪಡಿಯಿಂದ ಈ ಉದ್ದೇಶವನ್ನು ಇನ್ನಷ್ಟು ಸಮರ್ಪಕವಾಗಿ ಈಡೇರಿಸಲು ಸಾಧ್ಯವಾಗುತ್ತದೆ ಎಂದು ಇಲಾಖೆ ತನ್ನ ಪ್ರಸ್ತಾವವನ್ನು ಸಮರ್ಥಿಸಿಕೊಂಡಿದೆ.

ವಿರೋಧ: ‘ಕೆಆರ್‌ಐಡಿಎಲ್ ಸಂಸ್ಥೆಗೆ ಮಾತ್ರ ಈ ರೀತಿ ವಿನಾಯಿತಿ ನೀಡುವುದು ಸಂವಿಧಾನದ 14ನೇ ಅನುಚ್ಛೇದಕ್ಕೆ ವಿರುದ್ಧ. ಸರ್ಕಾರದ ಒಂದು ಅಂಗ ಸಂಸ್ಥೆಗೆ ಇಂತಹ ವಿನಾಯಿತಿ ನೀಡಿದರೆ, ಉಳಿದ ಸಂಸ್ಥೆಗಳಿಗೂ ನೀಡಬೇಕಾಗುತ್ತದೆ. ಕಾಯ್ದೆಯ ಮೂಲ ಉದ್ದೇಶಕ್ಕೂ ಇದರಿಂದ ಧಕ್ಕೆಯಾಗುತ್ತದೆ’ ಎಂದು ಕಾನೂನು ಇಲಾಖೆ ಅಭಿಪ್ರಾಯಪಟ್ಟಿದೆ.

ಪ್ರಜಾವಾಣಿ ವಿಶೇಷ

‘ಕಾಯ್ದೆಯ ಪ್ರಕಾರ, ₹50 ಲಕ್ಷಗಳವರೆಗೆ ಕಾಮಗಾರಿಗಳಲ್ಲಿ ಶೇ 24.10ರಷ್ಟು ಕಾಮಗಾರಿಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ಟೆಂಡರ್ ನೀಡಬೇಕಿದೆ. ಪ್ರಸ್ತಾವಿತ ತಿದ್ದುಪಡಿ ಮಾಡಿದ್ದೇ ಆದರೆ ಈ ನಿಯಮದ ಉಲ್ಲಂಘನೆ ಆಗಲಿದೆ. ಹಾಗಾಗಿ ತಿದ್ದುಪಡಿ ಪ್ರಸ್ತಾವವನ್ನು ಮರುಪರಿಶೀಲಿಸಬೇಕು’ ಎಂದೂ ಸಲಹೆ ನೀಡಿದೆ.

ಗುತ್ತಿಗೆದಾರರು ಬೀದಿಪಾಲು: ‘ಕಾಮಗಾರಿ ಅನುಷ್ಠಾನದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು ಮತ್ತು ಟೆಂಡರ್ ನೀಡುವಾಗ ಸ್ಪರ್ಧೆ ಇರಬೇಕು ಎಂಬ ಉದ್ದೇಶದಿಂದಲೇ ಕೆಟಿಪಿಪಿ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಆದರೆ ಈಗ ಕೆಆರ್‌ಐಡಿಎಲ್‌ಗೆ 4ಜಿ ಅಡಿ ವಿನಾಯಿತಿ ನೀಡಿದರೆ ಕಾಯ್ದೆಯ ಉದ್ದೇಶವೇ ವಿಫಲವಾಗುತ್ತದೆ’ ಎಂದು ಕರ್ನಾಟಕ ರಾಜ್ಯ ಎಸ್.ಸಿ, ಎಸ್‌ಟಿ ಗುತ್ತಿಗೆದಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಮಹಾದೇವಸ್ವಾಮಿ ಕಳವಳ ವ್ಯಕ್ತಪಡಿಸಿದರು.

‘₹2 ಕೋಟಿಗಿಂತ ಕಡಿಮೆ ಮೊತ್ತದ ಕಾಮಗಾರಿ ಕೈಗೆತ್ತಿಕೊಳ್ಳುವವರು ಸಣ್ಣ ಗುತ್ತಿಗೆದಾರರೇ. ಅದರಲ್ಲಿಯೂ ಪರಿಶಿಷ್ಟ ಜಾತಿ, ಪಂಗಡದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕಾಯ್ದೆ ತಿದ್ದುಪಡಿ ಜಾರಿಯಾದರೆ, ಯಾರಿಗೆ ಬೇಕಾದರೂ ಕಾಮಗಾರಿ ವಹಿಸಬಹುದು. ಇದರಿಂದ ಲಕ್ಷಾಂತರ ಮಂದಿ ನಿರುದ್ಯೋಗಿಗಳಾಗಬೇಕಾಗುತ್ತದೆ’ ಎಂದರು.

‘ಗ್ರಾಮೀಣ ಭಾಗದಲ್ಲಿ ಕಾಮಗಾರಿಯ ಗುಣಮಟ್ಟ ಪರಿಶೀಲನೆ ನಡೆಯುವುದಿಲ್ಲ. ಟೆಂಡರ್ ಕರೆಯದೇ ಕೈಗೆತ್ತಿಕೊಳ್ಳುವ ಕಾಮಗಾರಿಗಳು ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಡುತ್ತವೆ’ ಎಂದೂ ಎಚ್ಚರಿಸಿದರು.

‘ಹಣಕಾಸು ಇಲಾಖೆ ವಿವೇಚನೆಗೆ’



‘ಕೆಆರ್‌ಐಡಿಎಲ್ ವರ್ಷಕ್ಕೆ ₹3,500 ಕೋಟಿ ಮೊತ್ತದ ಕಾಮಗಾರಿ ನಡೆಸುತ್ತದೆ. 4ಜಿ ವಿನಾಯಿತಿ ದೊರೆಯದೆ ಇದ್ದರೆ ನಿಗಮವು ಭಾರಿ ಆರ್ಥಿಕ ತೊಂದರೆ ಎದುರಿಸಬೇಕಾಗುತ್ತದೆ. ಹಾಗಾಗಿ ಕಾಯ್ದೆಗೆ ತಿದ್ದುಪಡಿ ತರಲು ಪ್ರಸ್ತಾವ ಸಲ್ಲಿಸಲಾಗಿತ್ತು. ಇದನ್ನು ಒಪ್ಪುವುದು, ಬಿಡುವುದು ಹಣಕಾಸು ಇಲಾಖೆಯ ವಿವೇಚನೆಗೆ ಬಿಟ್ಟದ್ದು’ ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಲ್.ಕೆ. ಅತೀಕ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಾನೂನು ತೊಡಕು ನಿವಾರಿಸುವ ಉದ್ದೇಶದಿಂದ ಈ ಪ್ರಸ್ತಾವ ಸಲ್ಲಿಸಲಾಗಿದೆ. ಸಚಿವ ಸಂಪುಟದ ಮುಂದೆ ಗುರುವಾರ ಈ ವಿಷಯ ಚರ್ಚೆಗೆ ಬರಲಿದೆ. ಸರ್ಕಾರ ಅಂತಿಮ ನಿರ್ಧಾರ ಕೈಗೊಳ್ಳಲಿದೆ’ ಎಂದೂ ಹೇಳಿದರು.

ಗುರುವಾರದ ಉಷ್ಣಾಂಶ: 31° ಗರಿಷ್ಠ, 19° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ. ನಂತರ ಶುಭ್ರ ಆಗಸ ಬೆಂಗಳೂರು- ಮೈಸೂರು ಹೆದ್ದಾರಿಯಲ್ಲಿ ಒಣಹವೆ.

ಹವಾಮಾನ

ಶುಕ್ರವಾರ	ಶನಿವಾರ	ಭಾನುವಾರ
30° 18°	31° 18°	30° 15°

ಸೂರ್ಯೋದಯ: 6:20 ಸೂರ್ಯಾಸ್ತ : 6:40 ಚಂದ್ರೋದಯ: ಬೆ. 8:10 ಚಂದ್ರಾಸ್ತ: ರಾ. 9:30

ಬುಧವಾರದ ಹವಾಮಾನ : ಗರಿಷ್ಠ 31° ಕನಿಷ್ಠ 18°



ಕನ್ನಡ ಕಂಕಣ ಕಾರ್ಯಕ್ರಮದ ಪೋಸ್ಟರ್

ಕನಕಪುರ ರಸ್ತೆಯಲ್ಲಿ 'ಕನ್ನಡ ಕಂಕಣ' 20ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ರಸ್ತೆ ಕನ್ನಡ ಬಳಗದ ವತಿಯಿಂದ ಪ್ರತಿ ತಿಂಗಳು ನಡೆಯುವ 'ಕನ್ನಡ ಜಾತ್ರೆ' ಅಂಗವಾಗಿ ಇದೇ 20ರಂದು ಸಂಜೆ 5ಕ್ಕೆ ಜರಗನಹಳ್ಳಿ ಉದ್ಯಾನದಲ್ಲಿ 'ಕನ್ನಡ ಕಂಕಣ' ಕಾರ್ಯಕ್ರಮ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ಕನ್ನಡದ ಹೋರಾಟಗಾರ ರಾ.ನಂ.ಚಂದ್ರಶೇಖರ್ ಮತ್ತು ಹಿರಿಯ ಸಾಹಿತಿ ಜರಗನಹಳ್ಳಿ ಶಿವಶಂಕರ್ ಚಾಲನೆ ನೀಡಲಿದ್ದಾರೆ. ಕನ್ನಡ ಕಂಕಣ ಧರಿಸಿ ಪ್ರಮಾಣವಚನ ಸ್ವೀಕರಿಸುವ ಈ ಕಾರ್ಯಕ್ರಮ ಮಂಜುನಾಥ ಹಾಲುವಾಗಿಲು ಪರಿಕಲ್ಪನೆಯಲ್ಲಿ ನಡೆಯಲಿದೆ ಎಂದು ಭಾರ್ಗವಿ ಕನ್ನಡನಾಡು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಬಿಎಂಪಿ: ಮಾಜಿ ಮೇಯರ್‌ಗಳೊಂದಿಗೆ ಬಜೆಟ್ ರೂಪರೇಷೆ ಕುರಿತು ಸಮಾಲೋಚನೆ

'ಬಜೆಟ್ ವಾಸ್ತವಕ್ಕೆ ಹತ್ತಿರದಲ್ಲಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯಾದರೂ ಅನಗತ್ಯ ಖರ್ಚುವೆಚ್ಚಗಳಿಗೆ ಕಡಿವಾಣ ಹಾಕಿ, ವಾಸ್ತವಕ್ಕೆ ಹತ್ತಿರವಿರುವ ಬಜೆಟ್ ಮಂಡಿಸುವಂತೆ ಮಾಜಿ ಮೇಯರ್‌ಗಳು ಬಿಬಿಎಂಪಿಗೆ ಸಲಹೆ ನೀಡಿದರು.

ಬಿಬಿಎಂಪಿಯ 2021-22ನೇ ಸಾಲಿನ ಬಜೆಟ್ ರೂಪರೇಷೆ ಹೇಗಿರಬೇಕು ಎಂಬ ಬಗ್ಗೆ ಆಡಳಿತಾಧಿಕಾರಿ ಗೌರವ್ ಗುಪ್ತ ಹಾಗೂ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಅವರು ಮಾಜಿ ಮೇಯರ್‌ಗಳ ಜೊತೆ ಬುಧವಾರ ಸಮಾಲೋಚನೆ ನಡೆಸಿದರು.

'ಪಾಲಿಕೆಯ ವರಮಾನಕ್ಕಿಂತ ಹೆಚ್ಚು ವೆಚ್ಚ ಮಾಡುವಂತಹ ಬಜೆಟ್ ಮಂಡಿಸುವ ಪರಿಪಾಠ ಈ ಬಾರಿಯಾದರೂ ಕೊನೆಯಾಗಲಿ. ಅಭಿವೃದ್ಧಿಕಾರ್ಯಗಳು ಸಮರ್ಪಕವಾಗಿ ಅನುಷ್ಠಾನವಾಗಬೇಕಾದರೆ, ಅವುಗಳಿಗೆ ಅನುದಾನದ ಕೊರತೆ ಆಗದಂತೆ ನೋಡಿಕೊಳ್ಳಬೇಕು. ಆಗ ಮಾತ್ರ ಅವುಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬಹುದು' ಎಂದು ಜಿ.ಪದ್ಮಾವತಿ ಸಲಹೆ ನೀಡಿದರು.

'ಮುಂದುವರೆದ ಕಾಮಗಾರಿಗಳಿಗೆ ಮತ್ತು ಕಾಮಗಾರಿಗಳ ಬಾಕಿ ಬಿಲ್ ಮೊತ್ತವನ್ನು ಪಾವತಿಸಲು ಅನುದಾನ ನಿಗದಿ ಮಾಡಬೇಕು. ಪಾಲಿಕೆಗೆ ಹೊರೆಯಾಗದಂತೆ ಬಜೆಟ್ ರೂಪಿಸಬೇಕು. ಉಪನಗರಗಳ ಅಭಿವೃದ್ಧಿಗೆ ಮನ್ನಣೆ ನೀಡಿ' ಎಂದು ಲಕ್ಕಣ್ಣ ಸಲಹೆ ನೀಡಿದರು.

'ಬಿ-ಖಾತಾ ಹೊಂದಿರುವ ಸ್ವತ್ತುಗಳಿಗೆ ಎ-ಖಾತೆ ನೀಡುವ ಮೂಲಕ ಸಂಪನ್ಮೂಲ ಕ್ರೋಡೀಕರಿಸಬಹುದು' ಎಂದು ಕೆ.ಚಂದ್ರಶೇಖರ್ ಹಾಗೂ ಮಂಜುನಾಥ ರೆಡ್ಡಿ ಸಲಹೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್, 'ನಗರದ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವ ಕಾರ್ಯಕ್ಕೆ ಒತ್ತು ನೀಡಬೇಕು. ಕಸ ವಿಲೇವಾರಿ ವ್ಯವಸ್ಥೆ ಸುಧಾರಣೆಗೆ ಪರಿಸರವಾದಿಗಳು ಮತ್ತು ಸ್ವಯಂಸೇವಕರ ಅಭಿಪ್ರಾಯಪಡೆದು ಕ್ರಮಕೈಗೊಳ್ಳಬೇಕು' ಎಂದರು.

'ಹೊಸ ವಲಯಗಳಲ್ಲಿ ಆಸ್ತಿ ಮಾಲೀಕರು ಸರಿಯಾಗಿ ತೆರಿಗೆ ಹಾಗೂ ಸುಧಾರಣಾ ಶುಲ್ಕ ಪಾವತಿಸುತ್ತಿಲ್ಲ. ಇದರ ವಸೂಲಿಗೆ ಕ್ರಮವಹಿಸಬೇಕು. ರಾಜಕಾಲುವೆಗಳನ್ನು ಪೂರ್ಣಪ್ರಮಾಣದಲ್ಲಿ ಅಭಿವೃದ್ಧಿಪಡಿಸಬೇಕು' ಎಂದು ಎಸ್.ಕೆ.ನಟರಾಜ್ ಅಭಿಪ್ರಾಯಪಟ್ಟರು.

'ಸಂಘ ಸಂಸ್ಥೆಗಳಿಗೆ ನೀಡುವ ಅನುದಾನಕ್ಕೆ ಕತ್ತರಿ ಹಾಕಬಾರದು. ಶಾಲಾ-ಕಾಲೇಜು ಹಾಗೂ ಆಸ್ಪತ್ರೆಗಳಿಗೆ ಭದ್ರತಾ ಸಿಬ್ಬಂದಿಯನ್ನು ನಿಯೋಜನೆ ಮಾಡಲು ಕ್ರಮ ಕೈಗೊಳ್ಳಬೇಕು' ಎಂದು ಬಿ.ಎಸ್.ಸತ್ಯನಾರಾಯಣ ಒತ್ತಾಯಿಸಿದರು.

'ಪಾಲಿಕೆಯ ಆರ್ಥಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಬಜೆಟ್ ಮಂಡಿಸಬೇಕಿದೆ. ಕಸ ನಿರ್ವಹಣೆ, ಬೀದಿ ದೀಪ ನಿರ್ವಹಣೆ ವ್ಯವಸ್ಥೆಯ ಸುಧಾರಣೆಗೆ ಆದ್ಯತೆ ನೀಡಲು ಬಯಸಿದ್ದೇವೆ' ಎಂದು ಆಡಳಿತಾಧಿಕಾರಿ ತಿಳಿಸಿದರು.

ಬಜೆಟ್‌ನಲ್ಲಿ ಅಡಕಗೊಳಿಸಬೇಕಾದ ಅಂಶಗಳ ಬಗ್ಗೆ ಮಾಜಿ ಮೇಯರ್‌ಗಳು ಎನ್‌.ಮಂಜುನಾಥ ಪ್ರಸಾದ್ ಹಾಗೂ ಗೌರವ ಗುಪ್ತ ಅವರಿಗೆ ಮನವಿ ಸಲ್ಲಿಸಿದರು. ಎಂ.ರಾಮಚಂದ್ರಪ್ಪ, ಮಂಜುನಾಥ ರೆಡ್ಡಿ, ಲಕ್ಕಣ್ಣ, ಎಸ್‌.ಕೆ.ನಟರಾಜ್, ಪಿ.ಆರ್‌.ರಮೇಶ್, ಕೆ.ಚಂದ್ರಶೇಖರ್, ಹುಚ್ಚಪ್ಪ, ಬಿ.ಎಸ್‌.ಸತ್ಯನಾರಾಯಣ, ಪದ್ಮಾವತಿ ಗಂಗಾಧರ ಗೌಡ, ಜಿ.ಪದ್ಮಾವತಿ, ಮುಮ್ತಾಜ್ ಬೇಗಂ, ಗಂಗಾಂಬಿಕೆ ಇದ್ದಾರೆ.

'ತೆರಿಗೆ ಹೊರೆ ಬೇಡ'

'ಕೋವಿಡ್‌ನಿಂದ ಜನರು ಆರ್ಥಿಕ ತೊಂದರೆಗೆ ಸಿಲುಕಿದ್ದಾರೆ. ತೆರಿಗೆ ಹೆಚ್ಚಿಸುವ ಮೂಲಕ ಅವರ ಹೊರೆಯನ್ನು ಹೆಚ್ಚಸಬೇಡಿ' ಎಂದು ಎಂ.ರಾಮಚಂದ್ರಪ್ಪ ಕೋರಿದರು.

'ಪಾಲಿಕೆಯಲ್ಲಿ ಸಂಪನ್ಮೂಲ ಸೋರಿಕೆ ತಡೆಯುವ ಬಗ್ಗೆ ಗಮನಹರಿಸಬೇಕು. ಟೋಟಲ್ ಸ್ಟೇಷನ್ ಸರ್ವೆ ನಡೆಸುವ ಹಾಗೂ ತೆರಿಗೆ ಪಾವತಿಯಿಂದ ತಪ್ಪಿಸಿಕೊಂಡಿರುವ ಸ್ವತ್ತುಗಳನ್ನು ಗುರುತಿಸಿ ದಂಡ ವಿಧಿಸುವ ಮೂಲಕ ಇದನ್ನು ಸಾಧಿಸಬಹುದು. ಉದ್ಯಾನಗಳು, ಇ-ಶೌಚಾಲಯಗಳ ನಿರ್ವಹಣೆಗೆ ಅನುದಾನ ಹೆಚ್ಚಿಸಬೇಕು. ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು ಈ ಕಾರ್ಯಗಳಿಗೆ ಬಳಸಬಹುದು' ಎಂದು ಗಂಗಾಂಬಿಕೆ ಮಲ್ಲಿಕಾರ್ಜುನ್ ಸಲಹೆ ನೀಡಿದರು.

'ಅನವಶ್ಯಕ ಕಾಮಗಾರಿಗಳ ಮೇಲೆ ಹಣ ಪೋಲು ಮಾಡುವುದನ್ನು ತಪ್ಪಿಸಲು ಹಾಗೂ ಅತಿ ಅವಶ್ಯಕ ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳಲು ಕಾಮಗಾರಿಗಳ ಯೋಜನಾ ವರದಿ ಸಿದ್ಧಪಡಿಸುವಾಗಲೇ ಕ್ರಮವಹಿಸಬೇಕು' ಎಂದು ಮಂಜುನಾಥ ರೆಡ್ಡಿ ಹೇಳಿದರು.

ಮಾಜಿ ಮೇಯರ್‌ಗಳ ಸಲಹೆಗಳು

'ನಿರ್ವಹಣೆ ಕಾಮಗಾರಿಗಳಿಗೆ ಆದ್ಯತೆ ನೀಡಬೇಕು. ಅತೀ ಅವಶ್ಯಕತೆ ಇದ್ದಲ್ಲಿ ಮಾತ್ರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕು'
–ಹುಚ್ಚಪ್ಪ

'ಆದಾಯವಿರುವಷ್ಟೇ ವೆಚ್ಚ ಮಾಡಲು ಯೋಜನೆ ರೂಪಿಸಬೇಕು. ಕಾಮಗಾರಿಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸುವುದಕ್ಕೆ ಕ್ರಮಕೈಗೊಳ್ಳಬೇಕು'
–ಪದ್ಮಾವತಿ ಗಂಗಾಧರ್‌ಗೌಡ

'ಪಾಲಿಕೆಯ ಆಡಳಿತ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳು ಜನರಿಗೆ ಸಿಗುವಂತಾಗಬೇಕು. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದ ಸುಧಾರಣೆಗೆ ಒತ್ತು ನೀಡಬೇಕು'
–ಮಮ್ತಾಜ್ ಬೇಗಂ

'ಜನಪ್ರತಿನಿಧಿಗಳ ಆಡಳಿತ ಇದ್ದಾಗ ಬಡಜನರ ವೈದ್ಯಕೀಯ ವೆಚ್ಚದ ಬಿಲ್ ಮರುಪಾವತಿ ಮಾಡಲಾಗುತ್ತಿತ್ತು. ಆಡಳಿತಾಧಿಕಾರಿಯವರೂ ಈ ಕಾರ್ಯವನ್ನು ಮುಂದುವರೆಸಬೇಕು'
–ಬಿ.ಎಸ್.ಸತ್ಯನಾರಾಯಣ

ಸುದ್ದಿ 2 ನಿಮಿಷ

ಸಂಪತ್‌ರಾಜ್ ವಿರುದ್ಧ ಸುರ್ಜೇವಾಲಗೆ ಅಖಂಡ ದೂರು

ಬೆಂಗಳೂರು: 'ಡಿ.ಜೆ ಹಳ್ಳಿ ಹಾಗೂ ಕೆ.ಜಿ ಹಳ್ಳಿ ಘಟನೆಯಲ್ಲಿ ನನ್ನ ಮನೆಗೆ ಬೆಂಕಿ ಇಟ್ಟ ಪ್ರಕರಣದ ಸಂಪೂರ್ಣ ಮಾಹಿತಿಯನ್ನು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರಿಗೆ ನೀಡಿದ್ದೇನೆ. ಮಾಜಿ ಮೇಯರ್ ಸಂಪತ್ ರಾಜ್ ಅವರನ್ನು ಪಕ್ಷದಿಂದ ಉಚ್ಚಾಟಿಸುವಂತೆ ಮನವಿ ಮಾಡಿಕೊಂಡಿದ್ದೇನೆ. ಹೈಕಮಾಂಡ್ ಜತೆ ಚರ್ಚಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ' ಎಂದು ಪುಲಿಕೇಶಿನಗರ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಹೇಳಿದರು.

ಕುಮಾರಕೃಪಾ ಅತಿಥಿಗೃಹದಲ್ಲಿ ಸುರ್ಜೇವಾಲ ಅವರನ್ನು ಬುಧವಾರ ಭೇಟಿ ಮಾಡಿ ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಅವರು, 'ನನ್ನ ಅಹವಾಲು ಸಲ್ಲಿಸಿದ್ದೇನೆ. ಬಿಬಿಎಂಪಿ ಚುನಾವಣೆಯಲ್ಲಿ ಸಂಪತ್‌ರಾಜ್ ಅವರಿಗೆ ಟಿಕೆಟ್ ನೀಡದಂತೆ ಮನವಿ ಮಾಡಿದ್ದೇನೆ' ಎಂದರು.

'ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿರುವ ಶಾಸಕ ರಾಮಲಿಂಗಾರೆಡ್ಡಿ ಪಕ್ಷದ ಹಿರಿಯ ಮುಖಂಡ. ಅವರೂ ಸೇರಿದಂತೆ ಪಕ್ಷದ ಎಲ್ಲ ನಾಯಕರಿಂದ ಸಹಕಾರ ಸಿಕ್ಕಿದೆ. ಎಲ್ಲರೂ ನನ್ನ ಪರವಾಗಿದ್ದಾರೆ ಎಂಬ ವಿಶ್ವಾಸ ಇದೆ' ಎಂದೂ ಹೇಳಿದರು.

'ಶೂನ್ಯ' ಬ್ರ್ಯಾಂಡ್‌ನ ಪಾಲುದಾರರಾದ ಶ್ರದ್ಧಾ

ಬೆಂಗಳೂರು: ಬಾಲಿವುಡ್ ನಟಿ ಶ್ರದ್ಧಾ ಕಪೂರ್ ಅವರು ಬೈದ್ಯನಾಥ್ ಸಮೂಹದಡಿ ಕಾರ್ಯನಿರ್ವಹಿಸುತ್ತಿರುವ ನೇಚರ್‌ಎಡ್ಜ್ ಬೆವರೇಜಸ್ ಪ್ರೈ. ಲಿ. ಹೊರತಂದಿರುವ 'ಶೂನ್ಯ' ಬ್ರ್ಯಾಂಡ್‌ನ ಬಂಡವಾಳ ಪಾಲುದಾರರಾಗಿದ್ದಾರೆ. ಸಿದ್ದೇಶ್ ಶರ್ಮಾ ಅವರು ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದಾರೆ.

'ಶೂನ್ಯ ಬ್ರ್ಯಾಂಡ್‌ನಡಿ ಆಯುರ್ವೇದ ಪದ್ಧತಿ ಅನುಸಾರ ಸಂಶೋಧಿಸಲ್ಪಟ್ಟ ಗಿಡಮೂಲಿಕೆಗಳಿಂದ ತಯಾರಿಸಿದ ಶೂನ್ಯ ಗೊ, ಶೂನ್ಯ ಫಿಜ್ ಪಾನೀಯ ಜನಪ್ರಿಯವಾಗಿದೆ. 2019ರ ಜನವರಿಯಲ್ಲಿ ಭಾರತೀಯ ಮಾರುಕಟ್ಟೆಗೆ ಇವುಗಳನ್ನು ಪರಿಚಯಿಸಲಾಯಿತು. ಅಲ್ಪಾವಧಿಯಲ್ಲಿಯೇ 15 ಸಾವಿರಕ್ಕೂ ಅಧಿಕ ಮಳಿಗೆಗಳು, ರೆಸ್ಟೋರೆಂಟ್, ಬಾರ್ ಸೇರಿದಂತೆ ವಿವಿಧೆಡೆ ಮಾರಾಟ ಮಾಡಲಾಗುತ್ತಿದೆ. ಆನ್‌ಲೈನ್ ವೇದಿಕೆಗಳಲ್ಲಿ ಕೂಡ ಈ ಪಾನೀಯ ದೊರೆಯುತ್ತಿದೆ' ಎಂದು ಕಂಪನಿ ತಿಳಿಸಿದೆ.

'ನಮಗೆ ಪಾಲುದಾರರು ಬೇಕಿದ್ದರೇ ಹೊರತು ರಾಯಭಾರಿಗಳಲ್ಲ. ಶ್ರದ್ಧಾ ಕಪೂರ್ ಅವರು ನಮ್ಮ ಬ್ರ್ಯಾಂಡ್‌ನ ಉತ್ಪನ್ನಗಳ ಮೇಲೆ ವಿಶ್ವಾಸ ವಿಟ್ಟು, ಹೂಡಿಕೆ ಮಾಡಿದ್ದಾರೆ. ಮುಂದಿನ ಆರು ತಿಂಗಳಲ್ಲಿ 25 ಸಾವಿರ ಮಳಿಗೆಗಳಿಗೆ ಪರಿಚಯಿಸುವ ಗುರಿ ಹೊಂದಲಾಗಿದೆ' ಎಂದು ಸಿದ್ದೇಶ್ ಶರ್ಮಾ ಹೇಳಿದ್ದಾರೆ.

'ಈ ಪಾನೀಯವು ರುಚಿಕರವಾಗಿರುವ ಜತೆಗೆ ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡಿದೆ. ಆರೋಗ್ಯ ವೃದ್ಧಿಗೆ ಸಹಕಾರಿ, ಎಲ್ಲ ರೀತಿಯಲ್ಲಿಯೂ ಪರಿಶೀಲಿಸಿದ ಬಳಿಕವೇ ಪಾಲುದಾರನಾಗಿದ್ದೇನೆ' ಎಂದು ಶ್ರದ್ಧಾ ಕಪೂರ್ ತಿಳಿಸಿದ್ದಾರೆ.

ಮೆಟ್ರೊ ನೋಟ

'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ಮೈಸೂರು ರಸ್ತೆ ನಿಲ್ದಾಣದ ವಿಸ್ತರಿತ ಮಾರ್ಗದಲ್ಲಿ ಕೆಂಗೇರಿ ನಿಲ್ದಾಣದಲ್ಲಿ ನಡೆಯುತ್ತಿರುವ ಕಾಮಗಾರಿಯ ನೋಟ. ಪ್ರಜಾವಾಣಿ ಚಿತ್ರ : ಅನೂಪ್ ರಾಘ. ಟಿ.

'ನಮ್ಮ ಮೆಟ್ರೊ': ಟೋಕನ್ ವಿತರಣೆ ವ್ಯವಸ್ಥೆ ಪ್ರಾರಂಭಿಸಲು ಒತ್ತಾಯ

ಸ್ಮಾರ್ಟ್‌ಕಾರ್ಡ್ ರಿಚಾರ್ಜ್ ಮಾಡಿಸಲು ಸಮಸ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಸ್ಮಾರ್ಟ್ ಕಾರ್ಡ್ ರಿಚಾರ್ಜ್ ಮಾಡಿಸುವುದಕ್ಕೆ ತೊಂದರೆಯಾಗುತ್ತಿದ್ದು, ಕೂಡಲೇ ಟೋಕನ್ ವಿತರಣೆ ವ್ಯವಸ್ಥೆ ಆರಂಭಿಸಬೇಕು ಎಂದು ಪ್ರಯಾಣಿಕರು ಒತ್ತಾಯಿಸಿದ್ದಾರೆ.

'ಸ್ಮಾರ್ಟ್‌ಕಾರ್ಡ್ ರಿಚಾರ್ಜ್ ಮಾಡಿಸಬೇಕೆಂದರೆ ನಗದು ತೆಗೆದುಕೊಳ್ಳುತ್ತಿಲ್ಲ. ಡೆಬಿಟ್ ಕಾರ್ಡ್ ಮೂಲಕ ಅಥವಾ ಡಿಜಿಟಲ್ ಮಾಧ್ಯಮಗಳ ಮೂಲಕ ಹಣ ಪಾವತಿಸಿ, ರಿಚಾರ್ಜ್ ಮಾಡಿಸಬೇಕು. ಡೆಬಿಟ್ ಕಾರ್ಡ್ ತೆಗೆದುಕೊಂಡು ಹೋಗಿರದಿದ್ದರೆ ತುಂಬಾ ಸಮಸ್ಯೆಯಾಗುತ್ತದೆ' ಎಂದು ಪ್ರಯಾಣಿಕ ವಿಜಯ್ ಹೇಳಿದರು.

'ಮೆಜೆಸ್ಟಿಕ್ ನಿಲ್ದಾಣದಲ್ಲಿ ಸ್ಮಾರ್ಟ್‌ಕಾರ್ಡ್ ರಿಚಾರ್ಜ್ ಮಾಡಿಸಲು ಹೋಗಿದ್ದೆ. ಎಟಿಎಂ ಕಾರ್ಡ್ ನನ್ನ ಬಳಿ ಇರಲಿಲ್ಲ. ಫೋನ್ ಪೇ ಅಥವಾ ಗೂಗಲ್ ಪೇ ಮಾಡುತ್ತೇನೆ ಎಂದರೂ ಸಿಬ್ಬಂದಿ ಅದನ್ನು ಸ್ವೀಕರಿಸಲಿಲ್ಲ. ಗೂಗಲ್ ಪೇ ಮೂಲಕ ಪಾವತಿಸುವ ವೇಳೆ ತಾಂತ್ರಿಕ ಸಮಸ್ಯೆಯಾಗುತ್ತಿದೆ ಎಂದರು' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

'ಗೂಗಲ್ ಪೇ ಮಾಡುವಾಗ ಬೇಗ ಮೆಸೇಜ್ ಬರುವುದಿಲ್ಲ. ಇದರಿಂದ ಈ ಮಾಧ್ಯಮಗಳಲ್ಲಿ ಹಣ ಪಾವತಿಗೆ ಸಿಬ್ಬಂದಿ ಹಿಂದೇಟು ಹಾಕುತ್ತಿದ್ದಾರೆ. ಆದರೆ, ಇದರಿಂದ ಸಾರ್ವಜನಿಕರಿಗೆ ಕಿರಿಕಿರಿಯಾಗುತ್ತಿದೆ' ಎಂದು ಮತ್ತೊಬ್ಬ ಪ್ರಯಾಣಿಕ ರಮೇಶ್ ದೂರಿದರು.

'ಕೋವಿಡ್ ಪ್ರಕರಣಗಳ ಸಂಖ್ಯೆ ಕ್ಷೀಣಿಸುತ್ತಿದೆ. ಈಗಾಗಲೇ ಲಸಿಕೆಯೂ ಬಂದಿದೆ. ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಹೆಚ್ಚು ಜನ ಪ್ರಯಾಣಿಸುತ್ತಿದ್ದಾರೆ. ಮಾರುಕಟ್ಟೆಯಲ್ಲಿ, ಚಿತ್ರಮಂದಿರಗಳಲ್ಲಿಯೂ ಹೆಚ್ಚು ಜನ ಸೇರುತ್ತಿದ್ದಾರೆ. ಆದರೆ, ಮೆಟ್ರೊ ನಿಲ್ದಾಣಗಳಲ್ಲಿ ಮಾತ್ರ ಟೋಕನ್ ವಿತರಿಸುತ್ತಿಲ್ಲ ಎಂಬುದು ವಿಚಿತ್ರ ಎನಿಸುತ್ತದೆ' ಎಂದು ಪ್ರಯಾಣಿಕ ಓಂಕಾರ್ ಪ್ರಸಾದ್ ಹೇಳಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಜಯ್ ಸೇಠ್ ಅವರಿಗೆ ಕರೆ ಮಾಡಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.

Gold Standard Safety Protocol • Book an appointment • Live Video Call

To locate your nearest store and know more on 6366920017. Buy online at tanishq.co.in or Download our App • *Conditions apply • Check tanishq.co.in/offers for more details.

• Additional discount on diamond jewellery above ₹12 Lakhs • **Valid on gold bought from any jeweller, assuming old gold exchanged is of 22kt & above purity.

New stores now open at Rajajinagar- Modi Hospital Road, HSR layout & Kanakapura Road

ಜಯಮಹಲ್ ರಸ್ತೆ: ‘ಸುಪ್ರೀಂ’ ಮೊರೆಗೆ ಚಿಂತನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಚಿವ ಸಂಪುಟದ ಮುಂದೆ ಇಂದು ವಿಷಯ ಮಂಡನೆ
- ಮಾರ್ಚ್ 10ಕ್ಕೆ ವಿಚಾರಣೆ ಮುಂದೂಡಿದ ನ್ಯಾಯಪೀಠ

ಬೆಂಗಳೂರು: ಜಯಮಹಲ್ ರಸ್ತೆ ಟಿಡಿಆರ್ (ಅಭಿವೃದ್ಧಿ ಹಕ್ಕು) ಪ್ರಮಾಣ ಪತ್ರ ಮಂಜೂರು ನಿಯಮಗಳನ್ನು ಮಾರ್ಪಡಿಸಲು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ಚಿಂತಿಸಲಾಗಿದೆ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ತಿಳಿಸಿದೆ.

ಈ ವಿಷಯವನ್ನು ಸಚಿವ ಸಂಪುಟದ ಮುಂದೆ ಗುರುವಾರ ಮಂಡಿಸಲಾಗುತ್ತಿದೆ ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವಡಗಿ ಅವರು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠಕ್ಕೆ ವಿವರಿಸಿದರು. ಸಚಿವ ಸಂಪುಟದಲ್ಲಿ ಕೈಗೊಂಡ ನಿರ್ಣಯ ಮಂಡಿಸುವಂತೆ ತಿಳಿಸಿದ ಪೀಠ, ವಿಚಾರಣೆಯನ್ನು ಮಾರ್ಚ್10ಕ್ಕೆ ಮುಂದೂಡಿತು.

ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘಟನೆಯಾದ ‘ಸಮರ್ಪಣ’ ಸಂಸ್ಥೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಕಂಟೋನ್ಮೆಂಟ್ ರೈಲು ನಿಲ್ದಾಣದಿಂದ ಮೇಕ್ರಿ ವೃತ್ತದ ತನಕ ರಸ್ತೆ ವಿಸ್ತರಣೆ ಕಾಮಗಾರಿ ಆರಂಭಿಸಿಲ್ಲ ಎಂದು ಆರೋಪಿಸಿದ್ದರು.

ಭೂಸ್ವಾಧೀನ ಪ್ರಶ್ನಿಸಿ ಮೈಸೂರು ರಾಜಮನೆತನದ ಸದಸ್ಯರು ನ್ಯಾಯಾಲಯದ ಮೊರೆ ಹೋಗಿದ್ದರು. ಟಿಡಿಆರ್ ನಿಯಮಗಳ ಪ್ರಕಾರ ಅರ್ಜಿದಾರರಿಗೆ ಪ್ರಮಾಣ ಪತ್ರ ನೀಡುವಂತೆ ಬಿಬಿಎಂಪಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು.

‘ಸೂಪರ್ ನ್ಯೂಮರರಿ’ ಹುದ್ದೆಗಳ ತ್ವರಿತ ಮರು ವಿನ್ಯಾಸಕ್ಕೆ ಸೂಚನೆ

ಬೆಂಗಳೂರು: ವಿವಿಧ ಇಲಾಖೆಗಳಲ್ಲಿ ದಿನಗೂಲಿ ಸೇವೆಯಿಂದ ಸಕ್ರಮಗೊಂಡು ‘ಸೂಪರ್ ನ್ಯೂಮರರಿ’ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ನೌಕರರ ಸೇವೆಯನ್ನು ಮಂಜೂರಾದ ಹುದ್ದೆಗಳ ಜತೆಗೆ ತ್ವರಿತವಾಗಿ ಮರು ವಿನ್ಯಾಸ ಮಾಡುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸುತ್ತೋಲೆ ಹೊರಡಿಸಿದೆ.

1984ರ ಜುಲೈ 1 ಮತ್ತು ಅದಕ್ಕೂ ಮೊದಲು ನೇಮಕಾತಿ ಹೊಂದಿದ್ದ ದಿನಗೂಲಿ ನೌಕರರ ಸೇವೆಯನ್ನು ಕಾಯಂಗೊಳಿಸಲು 1999ರ ಆಗಸ್ಟ್ 6ರಂದು ಆದೇಶ ಹೊರಡಿಸಲಾಗಿತ್ತು. ಸೇವೆಯನ್ನು ಕಾಯಂಗೊಳಿಸುವ ಸಂದರ್ಭದಲ್ಲಿ ಅಗತ್ಯ ಸಂಖ್ಯೆಯ ಖಾಲಿ ಹುದ್ದೆಗಳು ಲಭ್ಯವಿರದಿದ್ದರೆ, ಸೂಪರ್ ನ್ಯೂಮರರಿ ಹುದ್ದೆಗಳನ್ನು ಸೃಜಿಸಿ ನೇಮಕಾತಿ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ನಂತರದಲ್ಲಿ ಈ ಹುದ್ದೆಗಳನ್ನು ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಮಂಜೂರಾದ ಹುದ್ದೆಗಳ ಜತೆಗೆ ಮರುವಿನ್ಯಾಸ ಮಾಡಲು 2028ರವರೆಗೂ ಹಲವು ಆದೇಶ ಹೊರಡಿಸಲಾಗಿತ್ತು.

ಮರು ವಿನ್ಯಾಸ ಮಾಡುವವರೆಗೂ ಈ ನೌಕರರಿಗೆ ಕಾಲಬದ್ಧ ಬಡ್ತಿ ಮತ್ತು ವೇತನ ನೀಡುವಂತಿಲ್ಲ ಎಂಬ ಷರತ್ತುಗಳನ್ನು 2018ರಲ್ಲಿ ಹಾಕಲಾಗಿತ್ತು. ಈ ಸೂಚನೆಯನ್ನೂ ಹಿಂತೆಗೆದುಕೊಂಡು ಆದೇಶ ಹೊರಡಿಸಲಾಗಿದೆ.

ದೊಡ್ಡಗುಬ್ಬಿ ಗ್ರಾ.ಪಂ: ಮಂಜುಳಾ ಅಧ್ಯಕ್ಷೆ

ಕೆ.ಆರ್.ಪುರ: ದೊಡ್ಡಗುಬ್ಬಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಮಂಜುಳಾ ವಿ. ನಾಗರಾಜ್ ಹಾಗೂ ಉಪಾಧ್ಯಕ್ಷರಾಗಿ ವೇಣುಗೋಪಾಲ್ ಆಯ್ಕೆಯಾಗಿದ್ದಾರೆ.

ಪಂಚಾಯಿತಿಯಲ್ಲಿ ಒಟ್ಟು 15 ಸದಸ್ಯರಿದ್ದು, ಮಂಜುಳಾ 9 ಮತ ಪಡೆದರೆ, ವೇಣುಗೋಪಾಲ್ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಮಧುಸೂದನ್ ಕಾರ್ಯನಿರ್ವಹಿಸಿದರು.



ದಲಿತ ಚಳವಳಿ ಕಾರ್ಯಾಗಾರ ಫೆ.20–21ಕ್ಕೆ

ಬೆಂಗಳೂರು: ದಲಿತ ಸಂಘರ್ಷ ಸಮಿತಿ ಸಂಘಟನೆಗಳ ಜಂಟಿ ವೇದಿಕೆ (ದಸಂಸ ಒಕ್ಕೂಟ) ಇದೇ 20 ಮತ್ತು 21ರಂದು ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ 'ದಲಿತ ಚಳವಳಿಯ ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳ' ಕಾರ್ಯಾಗಾರ ಹಮ್ಮಿಕೊಂಡಿದೆ.

'ಜನಸಾಮಾನ್ಯರು ಮತ್ತು ರೈತರ ಸಾಂವಿಧಾನಿಕ ಹಕ್ಕು ಕಿತ್ತುಕೊಳ್ಳುತ್ತಿರುವ ನೀತಿಗಳ ವಿರುದ್ಧ ಹೋರಾಟವನ್ನು ಜಾಗೃತಗೊಳಿಸಲು ಕಾರ್ಯಾಗಾರ ಏರ್ಪಡಿಸಲಾಗಿದೆ' ಎಂದು ವೇದಿಕೆಯ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಲೇಖಕ ದುಗ್ಗಾರ ಸುಬ್ಬಣ್ಣ ರಚಿತ 'ಅಂಬೇಡ್ಕರ್ ಸಿದ್ಧಾಂತ' ಕೃತಿಯನ್ನು ಇದೇ ವೇಳೆ ಬಿಡುಗಡೆ ಮಾಡಲಾಗುವುದು. 'ಸಂವಿಧಾನ ಮತ್ತು ಪ್ರಜಾಪ್ರಭುತ್ವಕ್ಕೆ ಎದುರಾಗಿರುವ ಅಪಾಯಗಳು' ವಿಷಯ ಕುರಿತು ಚಿಂತಕ ಶಿವ ಸುಂದರ್, ಎಸ್.ಮುನಿಸ್ವಾಮಿ, 'ಖಾಸಗೀಕರಣ ವರ್ಸಸ್ ಮೀಸಲಾತಿ' ಕುರಿತು ಚಿಂತಕ ಶ್ರೀಪಾದ್ ಭಟ್, 'ಮೀಸಲಾತಿ ವರ್ಗೀಕರಣ' ಕುರಿತು ಮುಖಂಡ ದೊರೆರಾಜು, 'ರಾಷ್ಟ್ರೀಯ ಹೊಸ ಶಿಕ್ಷಣ ನೀತಿ' ಕುರಿತು ಶಿಕ್ಷಣ ತಜ್ಞ ಕೆ.ನಂದಿನಿ ಮಾತನಾಡಲಿದ್ದಾರೆ ಎಂದರು.

ಮಿಷನ್ 2022 ಪಟ್ಟಿಯಿಂದಲೂ ಕೈಬಿಡಲು ಕ್ರಮ: ಅರಣ್ಯ ಸಚಿವರ ಭರವಸೆ

ತುರಹಳ್ಳಿ ಟ್ರೀ ಪಾರ್ಕ್‌ಗೆ ತಾತ್ಕಾಲಿಕ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುರಹಳ್ಳಿ ಮೀಸಲು ಅರಣ್ಯಪ್ರದೇಶದಲ್ಲಿ 'ವೃಕ್ಷೋದ್ಯಾನ' (ಟ್ರೀ ಪಾರ್ಕ್) ನಿರ್ಮಿಸುವ ಯೋಜನೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಸರ್ಕಾರ ನಿರ್ಧರಿಸಿದೆ.

ನೈಸರ್ಗಿಕ ಕಾಡಿನ 38 ಎಕರೆ ಪ್ರದೇಶದಲ್ಲಿ ವೃಕ್ಷೋದ್ಯಾನ ನಿರ್ಮಿಸುವುದಕ್ಕೆ ಪರಿಸರವಾದಿಗಳು ಮತ್ತು ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು.

ಈ ಯೋಜನೆ ಕೈಬಿಡುವಂತೆ ಒತ್ತಾಯಿಸಿ ಸ್ಥಳೀಯರು ಹಾಗೂ ಪರಿಸರ ಕಾರ್ಯಕರ್ತರು ಸರಣಿ ಪ್ರತಿಭಟನೆಗಳನ್ನು ನಡೆಸಿದ್ದರು. ಸ್ಥಳೀಯರ ಮನವಿಗೆ ಸ್ಪಂದಿಸಿದ ಅರಣ್ಯ ಸಚಿವ ಅರವಿಂದ ಲಿಂಬಾವಳಿ, 'ತುರಹಳ್ಳಿ ಅರಣ್ಯ ಪ್ರದೇಶದಲ್ಲಿ ಟ್ರೀ ಪಾರ್ಕ್ ನಿರ್ಮಾಣ ಯೋಜನೆಗೆ ತಾತ್ಕಾಲಿಕ ತಡೆ ನೀಡಲಾಗಿದೆ' ಎಂದು ಘೋಷಿಸಿದರು.

ಈ ಯೋಜನೆ ಕುರಿತು ಸ್ಥಳೀಯ ನಿವಾಸಿಗಳೊಂದಿಗೆ ಅರವಿಂದ ಲಿಂಬಾವಳಿ ಮತ್ತು ಈ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಬುಧವಾರ ಸಭೆ ನಡೆಸಿದರು.

'ಮಿಷನ್ 2022 ಯೋಜನೆಯ ಪಟ್ಟಿಯಿಂದಲೂ ಈ ಪ್ರಸ್ತಾವವನ್ನು ಕೈಬಿಡಲಾಗುವುದು' ಎಂದು ಲಿಂಬಾವಳಿ ಭರವಸೆ ನೀಡಿದರು.

ಈಗಿನ ಟ್ರೀ ಪಾರ್ಕ್ ಅಭಿವೃದ್ಧಿ: ತುರಹಳ್ಳಿ ಅರಣ್ಯ ಪ್ರದೇಶ ಒತ್ತುವರಿಯಾಗಿದ್ದು, ತೆರವುಗೊಳಿಸಲಾಗಿರುವ ಪ್ರದೇಶದಲ್ಲಿ ಈಗಾಗಲೇ ಟ್ರೀ ಪಾರ್ಕ್ ನಿರ್ಮಿಸಲಾಗಿದೆ. ಅದೀಗ ಸೊರಗುತ್ತಿದ್ದು, ಅದನ್ನು ಉನ್ನತೀಕರಿಸಲಾಗುವುದು ಎಂದು ಅರಣ್ಯ ಸಚಿವರು ತಿಳಿಸಿದರು.

'ಕಾಡು ಉಳಿಸಬೇಕು ಎಂಬ ಸಾರ್ವಜನಿಕರ ಕಳಕಳಿ ನಿಜಕ್ಕೂ ಮೆಚ್ಚುವಂಥದ್ದು. ನಿಮ್ಮನ್ನು ಅದಕ್ಕಾಗಿ ಅಭಿನಂದಿಸುತ್ತೇನೆ' ಎಂದೂ ಹೇಳಿದರು.

'ನಮ್ಮ ಯೋಜನೆಯ ಅಂತಿಮ ಉದ್ದೇಶ ಅರಣ್ಯದ ರಕ್ಷಣೆಯೇ ಆಗಿದೆ. ಆದರೆ ಅದನ್ನು ಪ್ರಾಕೃತಿಕವಾಗಿ ಬಿಡಬೇಕು ಎಂಬ ನಿಮ್ಮ ಸಲಹೆಯನ್ನು ನಾನು ಗೌರವಿಸುತ್ತೇನೆ. ಮುಂದೆ ಇದರ ಬಗ್ಗೆ ಇನ್ನೂ ಹೆಚ್ಚಿನ ವಿಚಾರ ವಿನಿಮಯ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳುತ್ತೇನೆ' ಎಂದು ತಿಳಿಸಿದರು.

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, 'ಹೊಸ ಟ್ರೀ ಪಾರ್ಕ್ ನಿರ್ಮಿಸುವ ಸಂಬಂಧ ಸಾರ್ವಜನಿಕರ ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳಬೇಕು ಎಂಬುದು ನನ್ನ ಅಭಿಪ್ರಾಯ. ಈ ಬಗ್ಗೆ ಸಚಿವರ ಮೇಲೆ ಸಂಪೂರ್ಣ ವಿಶ್ವಾಸವಿದ್ದು, ಸೂಕ್ತ ಕ್ರಮ ಕೈಗೊಳ್ಳುವರು' ಎಂದು ವಿವರಿಸಿದರು.

ಅರಣ್ಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

'ಪ್ರಜಾವಾಣಿ'ಯ ಫೆ.8ರ ಸಂಚಿಕೆಯಲ್ಲಿ 'ತುರಹಳ್ಳಿ ಕಾಡು ಕೆಡಿಸಲು ತರಾತುರಿ' ಶೀರ್ಷಿಕೆಯ ವಿಶೇಷ ವರದಿ ಪ್ರಕಟವಾಗಿತ್ತು. ಈ ಕಾಡನ್ನು ಕಳೆದುಕೊಂಡರೆ ಭವಿಷ್ಯದಲ್ಲಿ ಆಗಲಿರುವ ಪರಿಣಾಮಗಳ ಬಗ್ಗೆ ಪರಿಸರ ಕಾರ್ಯಕರ್ತರು ಹಾಗೂ ಸ್ಥಳೀಯರು ವ್ಯಕ್ತಪಡಿಸಿದ ಕಳವಳಕ್ಕೆ ಪತ್ರಿಕೆ ಧ್ವನಿಯಾಗಿತ್ತು.

ಅರಣ್ಯ ಸಚಿವ ಅರವಿಂದ ಲಿಂಬಾವಳಿ ಅವರು ಸಾರ್ವಜನಿಕರೊಂದಿಗೆ ಬುಧವಾರ ಚರ್ಚೆ ನಡೆಸಿದರು. ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಇದ್ದಾರೆ

ಸುದ್ದಿ 2 ನಿಮಿಷ

ಬಾಲ ನ್ಯಾಯ ಮಂಡಳಿ: ಏಕರೂಪದ ನೀತಿಗೆ ನಿರ್ದೇಶನ

ಬೆಂಗಳೂರು: ಬಾಲಾಪರಾಧಿ ನ್ಯಾಯ ಮಂಡಳಿ (ಜೆಜೆಬಿ) ಕಚೇರಿಗಳಿಗೆ ಮೂಲ ಸೌಕರ್ಯ ಒದಗಿಸಲು ಬಾಲನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ) ಕಾಯ್ದೆಯ ನಿಯಮಗಳ ಪ್ರಕಾರ ಏಕರೂಪದ ನೀತಿ ಸಿದ್ಧಪಡಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ (ಕೆಎಸ್‌ಎಲ್‌ಎಸ್‌ಎ) ಸೇರಿದಂತೆ ಎಲ್ಲ ಪಾಲುದಾರ ಸಂಸ್ಥೆಗಳೊಂದಿಗೆ ಸರ್ಕಾರ ಸಮಾಲೋಚನೆ ನಡೆಸಬೇಕು. ಮೂಲಸೌಕರ್ಯ ಮತ್ತು ಸಿಬ್ಬಂದಿ ವರ್ಗೀಕರಣಕ್ಕೆ ಸಂಬಂಧಿಸಿದ ಮಾದರಿ ವಿನ್ಯಾಸ ಮತ್ತು ನೀತಿಯನ್ನು ಒಂದು ತಿಂಗಳ ಅವಧಿಯಲ್ಲಿ ಮಂಡಿಸಬೇಕು' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಆದೇಶಿಸಿತು.

'ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸಲು ಎಲ್ಲಾ ಜೆಜೆಬಿಗಳಿಗೆ ಮೂಲ ಸೌಕರ್ಯ ಕಲ್ಪಿಸಬೇಕು. ಮಂಡಳಿಯ ಆವರಣವು ಮಕ್ಕಳ ಸ್ನೇಹಿಯಾಗಿರಬೇಕು' ಎಂದು ಪೀಠ ತಿಳಿಸಿತು. ವಿಚಾರಣೆಯನ್ನು ಮಾ.2ಕ್ಕೆ ಮುಂದೂಡಿತು.

ದಿಶಾ ರವಿಗೆ ಮೌಂಟ್ ಕಾರ್ಮೆಲ್ ಕಾಲೇಜಿನ ಹಳೆ ವಿದ್ಯಾರ್ಥಿಗಳ ಬೆಂಬಲ

ಬೆಂಗಳೂರು: ರೈತರ ಪ್ರತಿಭಟನೆ ಬೆಂಬಲಿಸಿ ಟೂಲ್ ಕಿಟ್ ಸಿದ್ಧಪಡಿಸಿದ ಆರೋಪದಲ್ಲಿ ಬಂಧನಕ್ಕೊಳಗಾಗಿರುವ ದಿಶಾ ರವಿ ಅವರ ಬೆಂಬಲಕ್ಕೆ ಮೌಂಟ್ ಕಾರ್ಮೆಲ್ ಕಾಲೇಜಿನ ಹಳೆವಿದ್ಯಾರ್ಥಿಗಳು ಧಾವಿಸಿದ್ದಾರೆ. ದಿಶಾ ಅವರನ್ನು ಬಂಧಿಸಿರುವ ದೆಹಲಿ ಪೊಲೀಸರ ನಡೆಯನ್ನು ಖಂಡಿಸಿದ್ದಾರೆ.

'ದೆಹಲಿ ಪೊಲೀಸರು ದಿಶಾ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕು ಮತ್ತು ಬೆಂಗಳೂರು ಪೊಲೀಸರು ಹಾಗೂ ಕರ್ನಾಟಕ ಸರ್ಕಾರವು ಅವರಿಗೆ ರಕ್ಷಣೆ ಒದಗಿಸಬೇಕು' ಎಂದು ಒತ್ತಾಯಿಸಿ, 330 ವಿದ್ಯಾರ್ಥಿಗಳು ಪತ್ರಕ್ಕೆ ಸಹಿ ಹಾಕಿದ್ದಾರೆ.

'ಮೌಂಟ್ ಕಾರ್ಮೆಲ್ ಕಾಲೇಜಿನ ವಿದ್ಯಾರ್ಥಿನಿಯಾಗಿ, ದೇಶದ ಪ್ರಜ್ಞಾವಂತ ಪ್ರಜೆಯಾಗಿ ದಿಶಾ ತಮ್ಮ ಕರ್ತವ್ಯವನ್ನು ನಿಭಾಯಿಸಿದ್ದಾರೆ. 'ಫ್ರೈಡೇ ಫಾರ್ ಫ್ಯೂಚರ್' ಸಂಸ್ಥೆಯ ಸಹಸಂಸ್ಥಾಪಕಿಯಾಗಿರುವ ಅವರು ಹವಾಮಾನ ಬದಲಾವಣೆಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಕೆಲಸದಲ್ಲಿ ತೊಡಗಿದ್ದರು. ಅದೇ ರೀತಿಯಲ್ಲಿಯೇ, ರೈತರ ಪ್ರತಿಭಟನೆಗೂ ಬೆಂಬಲ ವ್ಯಕ್ತಪಡಿಸಿದ್ದರು' ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.

'ಹವಾಮಾನ ಬದಲಾವಣೆಗೆ ಸಂಬಂಧಿಸಿದಂತೆ ದಿಶಾ ಅವರ ಹೋರಾಟ ಮತ್ತು ಅವರ ಸಾಮಾಜಿಕ ಕಳಕಳಿಯ ಬಗ್ಗೆ ಮೌಂಟ್ ಕಾರ್ಮೆಲ್ ಕಾಲೇಜು ಹೆಮ್ಮೆ ವ್ಯಕ್ತಪಡಿಸುತ್ತದೆ' ಎಂದೂ ಹಳೆವಿದ್ಯಾರ್ಥಿಗಳು ಹೇಳಿದ್ದಾರೆ.

ವರ್ಷವಾದರೂ ಜಾರಿಯಾಗದ ಆದೇಶ

ಬಿಬಿಎಂಪಿ ಜಂಟಿ ಆಯುಕ್ತ (ಕಂದಾಯ) ವಿರುದ್ಧ ಶಿಸ್ತುಕ್ರಮಕ್ಕೆ ಮೀನಮೇಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಳ್ಳು ದಾಖಲೆ ಆಧರಿಸಿ ವಸತಿ ಸಮುಚ್ಚಯ ನಿರ್ಮಿಸಲು ಅವಕಾಶ ಮಾಡಿಕೊಟ್ಟ ಪ್ರಕರಣದ ಲೋಕಾಯುಕ್ತ ತನಿಖೆಗೆ ಸಹಕರಿಸದ ಬಿಬಿಎಂಪಿ ಜಂಟಿ ಆಯುಕ್ತ (ಕಂದಾಯ) ವೆಂಕಟಾಚಲಪತಿ ಅವರಿಗೆ ಹಿಂಬಡ್ತಿ ನೀಡಬೇಕು ಎಂಬ ನಗರಾಭಿವೃದ್ಧಿ ಇಲಾಖೆಯ ಆದೇಶ ವರ್ಷ ಕಳೆದ ಬಳಿಕವೂ ಜಾರಿ ಆಗಿಲ್ಲ.

ನಗರಾಭಿವೃದ್ಧಿ ಇಲಾಖೆಯು 2019 ನ.21ರಂದು ಈ ಆದೇಶ ಹೊರಡಿಸಿತ್ತು. ಆದರೆ, ಶಿಸ್ತುಕ್ರಮಕ್ಕೆ ಒಳಗಾಗಬೇಕಾದ ಅಧಿಕಾರಿ ಈಗಲೂ ಅದೇ ಹುದ್ದೆಯಲ್ಲಿ ಮುಂದುವರೆದಿದ್ದಾರೆ!

ಪ್ರಕರಣವೇನು: ಮೆ. ನಕೋಡಾ ಕನ್‌ಸ್ಟ್ರಕ್ಷನ್ಸ್ ಲಿಮಿಟೆಡ್ ಸಂಸ್ಥೆಯ 'ಅಸ್ತ್ರ ವಾಲ್ ಮಾರ್ಕ್' ವಸತಿ ಸಮುಚ್ಚಯ ಕಟ್ಟಡ ನಿರ್ಮಾಣಕ್ಕೆ (ತಳ ಮಹಡಿ, ನೆಲ ಮಹಡಿ ಸೇರಿ 16 ಅಂತಸ್ತುಗಳ ಕಟ್ಟಡ) ಸುಳ್ಳು ದಾಖಲೆ ಆಧರಿಸಿ 2014ರ ಮಾ 12ರಂದು ಅನುಮತಿ ನೀಡಲಾಗಿದೆ ಎಂದು ಸುಬ್ಬು ಹೆಗ್ಡೆ ಎಂಬವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಈ ಬಗ್ಗೆ ವಿಚಾರಣೆ ಕೈಗೆತ್ತಿಕೊಂಡಿದ್ದ ಲೋಕಾಯುಕ್ತರು, ಆಗ ಬಿಬಿಎಂಪಿಯ ಉಪ ಆಯುಕ್ತರಾಗಿದ್ದ (ಕಂದಾಯ) ವೆಂಕಟಾಚಲಪತಿ ಅವರಲ್ಲಿ ಸ್ಪಷ್ಟೀಕರಣ ಕೋರಿದ್ದರು. ಅದಕ್ಕೆ ಅಧಿಕಾರಿ ಯಾವುದೇ ಮಾಹಿತಿ ನೀಡಿರಲಿಲ್ಲ. ತನಿಖೆಗೆ ಸಹಕಾರ ನೀಡದಿರುವುದನ್ನು ಗಂಭೀರವಾಗಿ ಪರಿಗಣಿಸಿದ್ದ ಲೋಕಾಯುಕ್ತರು, 1966ರ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮ 3 (i) (ii) (iii) ಉಲ್ಲಂಘಿಸಿ ಕರ್ತವ್ಯ ಲೋಪ ಎಸಗಿರುವ ಅಧಿಕಾರಿ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು.

ವೆಂಕಟಾಚಲಪತಿ ಅವರು ಕರ್ತವ್ಯಲೋಪವೆಸಗಿದ್ದು ಇಲಾಖಾ ವಿಚಾರಣೆಯಲ್ಲೂ ಸಾಬೀತಾಗಿತ್ತು. ವಿಚಾರಣಾ ಸಮಿತಿಯು, 'ಅವರು ಈಗ ಹೊಂದಿರುವ ಹುದ್ದೆಗಿಂತ ಒಂದು ಹಂತ ಕೆಳಗಿನ ಹುದ್ದೆಗೆ ಹಿಂಬಡ್ತಿ ನೀಡಬೇಕು. ಅವರಿಗೆ ಮೂರು ವರ್ಷ ಯಾವುದೇ ಬಡ್ತಿ ನೀಡಬಾರದು' ಎಂದು ಶಿಫಾರಸು ಮಾಡಿತ್ತು.

ಈ ಬಗ್ಗೆ ಸಮಜಾಯಿಷಿ ನೀಡುವಂತೆ ನಗರಾಭಿವೃದ್ಧಿ ಇಲಾಖೆ ವೆಂಕಟಾಚಲಪತಿ ಅವರಿಗೆ 2019ರ ಆ 17ರಂದು ಬಿಬಿಎಂಪಿ ಆಯುಕ್ತರ ಮೂಲಕ ನೋಟಿಸ್ ನೀಡಿತ್ತು. ಅದಕ್ಕೆ ಅವರು ಸಮಜಾಯಿಷಿಯನ್ನೂ ನೀಡಿದ್ದರು. 'ಲೋಕಾಯುಕ್ತ ವಿಚಾರಣಾಧಿಕಾರಿಗಳ ವರದಿಯ ಶಿಫಾರಸುಗಳನ್ನು ತಳ್ಳಿ ಹಾಕುವ ಸ್ಪಷ್ಟ ಅಂಶಗಳು ಸಮಜಾಯಿಷಿಯಲ್ಲಿ ಇರಲಿಲ್ಲ' ಎಂಬ ಕಾರಣಕ್ಕೆ ಅವರಿಗೆ ದಂಡನೆ ವಿಧಿಸಲು ನಗರಾಭಿವೃದ್ಧಿ ಇಲಾಖೆ ಕ್ರಮ ಕೈಗೊಂಡಿತ್ತು. 'ವೆಂಕಟಾಚಲಪತಿ ಅವರಿಗೆ ಹಿಂಬಡ್ತಿ ನೀಡಬೇಕು ಹಾಗೂ ಮೂರು ವರ್ಷ ಬಡ್ತಿ ನೀಡಬಾರದು' ಎಂದು ಸ್ಪಷ್ಟಪಡಿಸಿತ್ತು.

ಶಿಸ್ತುಕ್ರಮದ ಆದೇಶ ಜಾರಿಯಾಗದ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್, 'ನಾನು ಆಯುಕ್ತನಾಗಿ ಅಧಿಕಾರ ವಹಿಸಿಕೊಳ್ಳುವ ಮುನ್ನವೇ ಹೊರಡಿಸಿರುವ ಆದೇಶವಿದು. ಹಾಗಾಗಿ ಇದು ನನ್ನ ಗಮನಕ್ಕೆ ಬಂದಿರಲಿಲ್ಲ. ಈ ಬಗ್ಗೆ ಪರಿಶೀಲಿಸಿ ಶೀಘ್ರವೇ ಕ್ರಮ ಕೈಗೊಳ್ಳುತ್ತೇನೆ' ಎಂದು ಹೇಳಿದರು.

ಮುಖ್ಯಾಂಶಗಳು

- ಲೋಕಾಯುಕ್ತರು ಕೇಳಿದ ಮಾಹಿತಿ ನೀಡದ ಅಧಿಕಾರಿ
- ಅಧಿಕಾರಿ ವಿರುದ್ಧ ಶಿಸ್ತುಕ್ರಮಕ್ಕೆ ಲೋಕಾಯುಕ್ತ ಶಿಫಾರಸು
- ಕರ್ತವ್ಯಲೋಪ– ಇಲಾಖಾ ವಿಚಾರಣೆಯಲ್ಲೂ ಸಾಬೀತು

ಎರಡು ಬಾರಿ ಜೈಲು: ಮತ್ತೆ ಕೊಲೆಗೈದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆ ಪ್ರಕರಣಗಳಲ್ಲಿ ಎರಡು ಬಾರಿ ಜೈಲು ಶಿಕ್ಷೆ ಅನುಭವಿಸಿ, ಮತ್ತೆ ವ್ಯಕ್ತಿಯೊಬ್ಬರನ್ನು ಕಲ್ಲಿನಿಂದ ಹೊಡೆದು ಕೊಲೆ ಮಾಡಿದ್ದ ಆರೋಪಿಯನ್ನು ತಲಘಟ್ಟಪುರ ಪೊಲೀಸರು ಬಂಧಿಸಿದ್ದಾರೆ.

ಆರ್ಮುಗಂ (48) ಬಂಧಿತ ಆರೋಪಿ. ಬನಶಂಕರಿ 6ನೇ ಹಂತದಲ್ಲಿ ನಿರ್ಮಾಣ ಹಂತದಲ್ಲಿದ್ದ ಕಟ್ಟಡವೊಂದರಲ್ಲಿ ಈತ ಕಾವಲುಗಾರನಾಗಿದ್ದ.

ಅದೇ ಕಟ್ಟಡದಲ್ಲಿ ಕೆಲಸಕ್ಕೆಂದು ಆರೋಪಿಯೇ ಕರೆತಂದಿದ್ದ ಧಾರವಾಡ ಮೂಲದ ಮೆಹಬೂಬ್ ಸಾಬ್ (45) ಎಂಬುವರ ಜೊತೆಗೆ ಹಣದ ವಿಚಾರಕ್ಕಾಗಿ ಜ.28ರ ರಾತ್ರಿ ಜಗಳವಾಗಿತ್ತು. ಈ ವೇಳೆ ಮೆಹಬೂಬ್ ತಲೆಗೆ ಇಟ್ಟಿಗೆಯಿಂದ ಹೊಡೆದು ಕೊಲೆಮಾಡಿದ್ದ. ಕೃತ್ಯದ ಬಳಿಕ ಆರೋಪಿ ತಲೆಮರೆಸಿಕೊಂಡಿದ್ದು, ಈ ಸಂಬಂಧ ತಲಘಟ್ಟಪುರ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಎರಡು ಬಾರಿ ಜೈಲು ಶಿಕ್ಷೆ: 'ಆರೋಪಿ ತಮಿಳುನಾಡಿನ ತಿರುವಣ್ಣಾಮಲೈಯವನಾಗಿದ್ದು, ಅಲೆಮಾರಿಯಾಗಿ ಜೀವನ ನಡೆಸುತ್ತಿದ್ದ. 1998ರಲ್ಲಿ ಮೈಸೂರಿನ ದೇವರಾಜ ನಗರ ಠಾಣಾ ವ್ಯಾಪ್ತಿಯಲ್ಲಿ ತನ್ನ ಅಣ್ಣನ ಹೆಂಡತಿಯನ್ನು ಕೊಲೆ ಮಾಡಿ ಜೈಲು ಸೇರಿದ್ದ. ಹೊರ ಬಂದ ನಂತರ 2004ರಲ್ಲಿ ಬೆಂಗಳೂರಿನ ಹೆಬ್ಬಾಳ ಠಾಣಾ ವ್ಯಾಪ್ತಿಯಲ್ಲಿ ತನ್ನ ಹೆಂಡತಿಯ ತಲೆಗೆ ಕಲ್ಲಿನಿಂದ ಹೊಡೆದು, ಕೊಲೆ ಮಾಡಿದ್ದ. ಈ ಪ್ರಕರಣದಲ್ಲಿ 14 ವರ್ಷಗಳ ಜೈಲುಶಿಕ್ಷೆಗೂ ಗುರಿಯಾಗಿದ್ದ. ಐದು ವರ್ಷಗಳ ಹಿಂದೆ ಜೈಲಿನಿಂದ ಬಿಡುಗಡೆಗೊಂಡ ನಂತರ, ಗಾರೆ ಕೆಲಸ ಮಾಡಿಕೊಂಡಿದ್ದ' ಎಂದು ಪೊಲೀಸರು ತಿಳಿಸಿದರು.

ಮೇಲ್ಸೇತುವೆಗೆ ಮರ ಬಲಿ

ಶಿವಾನಂದ ವೃತ್ತದಲ್ಲಿ ನಿರ್ಮಿಸುತ್ತಿರುವ ಉಕ್ಕಿನ ಮೇಲ್ಸೇತುವೆ ಕಾಮಗಾರಿಗಾಗಿ ಬೃಹತ್ ಮರವನ್ನು ಕಡಿದ ಬಿಬಿಎಂಪಿ ಸಿಬ್ಬಂದಿ

–ಪ್ರಜಾವಾಣಿ ಚಿತ್ರ

ಹಳ್ಳಿಕಾರ ಮಠ ಭೂಮಿಪೂಜೆ 22ರಂದು

ಬೆಂಗಳೂರು: ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ಮಾಯಸಂದ್ರದ ಕಲ್ಲೂರು ಮುಖ್ಯರಸ್ತೆಯಲ್ಲಿ ಹಳ್ಳಿಕಾರ ಮಠ ನಿರ್ಮಾಣವಾಗಲಿದ್ದು, ಫೆ.22ರಂದು ಭೂಮಿಪೂಜೆ ನೆರವೇರಿಸಲಾಗುತ್ತದೆ ಎಂದು ಹಳ್ಳಿಕಾರ ಮಠ ಟ್ರಸ್ಟ್‌ನ ಅಧ್ಯಕ್ಷ ನಾಗಯ್ಯ ತಿಳಿಸಿದರು.

'ಹಳ್ಳಿಕಾರ ಜನಾಂಗ ಮಾರ್ಗದರ್ಶನವಿಲ್ಲದೆ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಹಿಂದುಳಿದಿದೆ. ಜನಾಂಗದ ಅಭಿವೃದ್ಧಿಗಾಗಿ ಒಂದು ಎಕರೆ ಸ್ಥಳದಲ್ಲಿ ಈ ಮಠ ಸ್ಥಾಪಿಸುತ್ತಿದ್ದೇವೆ' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಇಸ್ಕಾನ್ ಸಂಸ್ಥೆಯ ಆಸ್ಟ್ರೇಲಿಯಾ ಘಟಕದ ಮುಖ್ಯಸ್ಥರಾದ ಬಾಲಗುರು ಅವರನ್ನು ಮಠದ ಪೀಠಾಧಿಪತಿಯಾಗಿ ಆಯ್ಕೆ ಮಾಡಲಾಗಿದೆ' ಎಂದರು.

ಆಯುರ್ವೇದ ಚಿಕಿತ್ಸೆ ನೀಡುವುದಾಗಿ ವೃದ್ಧರನ್ನು ವಂಚಿಸುತ್ತಿದ್ದ ತಂಡ

ನಕಲಿ ಔಷಧ ಮಾರಾಟ: 6 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಯಿಲೆಗಳನ್ನು ಸಂಪೂರ್ಣ ಗುಣಪಡಿಸುವ ಆಯುರ್ವೇದ ಚಿಕಿತ್ಸೆ ಕೊಡಿಸುವುದಾಗಿ ವೃದ್ಧರನ್ನು ಮನವೊಲಿಸಿ, ನಕಲಿ ಔಷಧಗಳನ್ನು ಮಾರಾಟ ಮಾಡಿ ವಂಚಿಸುತ್ತಿದ್ದ ಆರು ಮಂದಿ ಆರೋಪಿಗಳನ್ನು ತಿಲಕನಗರ ಪೊಲೀಸರು ಬಂಧಿಸಿದ್ದಾರೆ.

ಯಶವಂತಪುರದ ಸಂಜೀತ್ (30), ಮಂಜುನಾಥ್ (40), ಶಿವಲಿಂಗ (42), ರಮಾಕಾಂತ್ (37), ಕಿಶನ್ (23) ಹಾಗೂ ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಕಲ್ಲೋಳಪ್ಪ ಗುರಪ್ಪ (63) ಬಂಧಿತ ಆರೋಪಿಗಳು.

'ವಯೋಸಹಜ ಕಾಯಿಲೆಗಳನ್ನು ಗುಣಪಡಿಸಲಾಗುವುದು ಎಂದು ಆರೋಪಿಗಳು ವೃದ್ಧರನ್ನು ಮನವೊಲಿಸಿ, ನಕಲಿ ಆಯುರ್ವೇದ ಔಷಧಗಳನ್ನು ಮಾರಾಟ ಮಾಡುತ್ತಿದ್ದರು. ಇದರಿಂದ ಲಕ್ಷಗಟ್ಟಲೆ ಹಣ ಸಂಪಾದಿಸಿದ್ದರು' ಎಂದು ಪೊಲೀಸರು ತಿಳಿಸಿದರು.

ರವಿ ಅನುಕರ್ ಎಂಬುವರು ಕಾಲು ಮತ್ತು ಸೊಂಟ ನೋವಿಗೆ ಚಿಕಿತ್ಸೆ ಪಡೆಯಲು ಜಯನಗರದ ಕ್ಲಿನಿಕ್‌ವೊಂದಕ್ಕೆ ತೆರಳಿದ್ದರು. ಇದೇ ವೇಳೆ ಹೊರಗೆ ನಿಂತಿದ್ದ ಆರೋಪಿಗಳು, ರವಿ ಅವರನ್ನು ಪರಿಚಯಿಸಿಕೊಂಡಿದ್ದರು. ರಾಜಾಜಿನಗರದ ಧನ್ವಂತರಿ ಆಯುರ್ವೇದ ಕೇಂದ್ರದಲ್ಲಿ ನಮ್ಮ ಸಹೋದರ ಕೆಲಸ ಮಾಡುತ್ತಿದ್ದು, ಎಲ್ಲ ರೀತಿಯ ಖಾಯಿಲೆಗಳನ್ನು ಗುಣಪಡಿಸುತ್ತಾರೆ ಎಂದು ಕ್ಲಿನಿಕ್ ಮಾದರಿಯಲ್ಲಿದ್ದ ಸ್ಥಳಕ್ಕೆ ಕರೆದೊಯ್ದಿದ್ದರು.

ಕ್ಲಿನಿಕ್‌ನಲ್ಲಿದ್ದ ಆರೋಪಿಗಳನ್ನೇ ಅವರು ವೈದ್ಯರು ಹಾಗೂ ಕೆಲಸಗಾರರು ಎಂದು ನಂಬಿಸಿದ್ದರು. ಬಳಿಕ ಕಾಯಿಲೆ ಗುಣಪಡಿಸಲು ₹2.59 ಲಕ್ಷ ಖರ್ಚಾಗುತ್ತದೆ. ಒಂದು ವೇಳೆ ಸಮಸ್ಯೆ ನಿವಾರಣೆಯಾಗದಿದ್ದರೆ, ಎಲ್ಲ ಹಣ ವಾಪಸ್ ನೀಡುವುದಾಗಿ ತಿಳಿಸಿದ್ದರು. ಇದನ್ನು ನಂಬಿದ್ದ ರವಿ, ಚೆಕ್ ಮೂಲಕ ₹2.50 ಲಕ್ಷ ಹಾಗೂ ₹9,850 ನಗದು ಪಾವತಿಸಿ ಔಷಧ ಪಡೆದುಕೊಂಡಿದ್ದರು.

'ಔಷಧ ಬಳಸಿದರೂ ಖಾಯಿಲೆ ಗುಣವಾಗದೆ ಇದ್ದುದರಿಂದ ವಿಚಾರಿಸಲು ಕ್ಲಿನಿಕ್ ಬಳಿ ತೆರಳಿದಾಗ ಬಾಗಿಲು ಮುಚ್ಚಿತ್ತು. ಸ್ಥಳೀಯರನ್ನು ವಿಚಾರಿಸಿದಾಗ ಮೋಸಹೋಗಿರುವುದು ತಿಳಿಯಿತು ಎಂದು ರವಿ ಅವರು ದೂರಿನಲ್ಲಿ ತಿಳಿಸಿದ್ದಾರೆ.'

'ಆರೋಪಿಗಳು ನಕಲಿ ಔಷಧದ ಮಾರಾಟದಿಂದ ಸಂಪಾದಿಸಿದ್ದ ₹5 ಲಕ್ಷ ಹಣ ಜಪ್ತಿ ಮಾಡಲಾಗಿದೆ. ಆರೋಪಿಗಳ ಪೈಕಿ ಕಲ್ಲೋಳಪ್ಪ ಗುರಪ್ಪನನ್ನು ಬಾಗಲಕೋಟೆ ಪೊಲೀಸರು ಬಂಧಿಸಿದ್ದು, ಉಳಿದವರು ನ್ಯಾಯಾಂಗ ಬಂಧನದಲ್ಲಿದ್ದಾರೆ. ತನಿಖೆ ಮುಂದುವರೆದಿದೆ' ಎಂದು ಪೊಲೀಸರು ತಿಳಿಸಿದರು.

ಬಂಧಿತ ಆರೋಪಿಗಳು

ಅಪರಾಧ ಸುದ್ದಿ

ಕಳವು: ₹22 ಲಕ್ಷದ ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೋಜಿನ ಜೀವನ ನಡೆಸಲು ಮನೆಗಳಲ್ಲಿ ಚಿನ್ನಾಭರಣ ಹಾಗೂ ಹಣ ಕದಿಯುತ್ತಿದ್ದ ಇಬ್ಬರು ಆರೋಪಿಗಳನ್ನು ಸುದ್ದಗುಂಟೆ ಪಾಳ್ಯ ಪೊಲೀಸರು ಬಂಧಿಸಿದ್ದಾರೆ.

'ಹೊಸೂರು ರಸ್ತೆ ಬಳಿಯ ನಿವಾಸಿ ಗುಣ (21) ಹಾಗೂ ಕೋಲಾರದ ಸೂರ್ಯ (23) ಬಂಧಿತರು. ಕಳವಾಗಿದ್ದ ₹22 ಲಕ್ಷ ಬೆಲೆಬಾಳುವ 510 ಗ್ರಾಂ ಚಿನ್ನಾಭರಣಗಳನ್ನು ಆರೋಪಿಗಳು ನೀಡಿದ ಮಾಹಿತಿ ಮೇರೆಗೆ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಜನವರಿಯಲ್ಲಿ ಸುದ್ದಗುಂಟೆ ಪಾಳ್ಯ ಠಾಣಾ ವ್ಯಾಪ್ತಿಯ ಎ.ಕೆ.ಕಾಲೊನಿಯ ಮನೆಯೊಂದರ ಕಿಟಕಿ ಗಾಜು ಒಡೆದು ಆರೋಪಿಗಳು ಒಳಪ್ರವೇಶಿಸಿದ್ದರು. ಬೀರುವಿನಲ್ಲಿದ್ದ ಚಿನ್ನಾಭರಣ ಹಾಗೂ ನಗದು ಕದ್ದು ಪರಾರಿಯಾಗಿದ್ದರು. ಈ ಸಂಬಂಧ ಮನೆಯ ಮಾಲೀಕ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

'ಆರೋಪಿಗಳ ವಿರುದ್ಧ ಬಸವೇಶ್ವರ ನಗರ, ಜಯನಗರ, ಬೇಗೂರು, ಪರಪ್ಪನ ಅಗ್ರಹಾರ, ಕಾಡುಗೋಡಿ, ಕೆ.ಆರ್.ಪುರ, ಬೆಳ್ಳಂದೂರು ಸೇರಿದಂತೆ ಅನೇಕ ಠಾಣೆಗಳಲ್ಲಿ ಕನ್ನ–ಕಳವು ಪ್ರಕರಣಗಳು ದಾಖಲಾಗಿದ್ದವು. ಕೆಲವು ಪ್ರಕರಣಗಳಲ್ಲಿ ಜೈಲುವಾಸವನ್ನೂ ಅನುಭವಿಸಿದ್ದರು. ಜಾಮೀನಿನ ಮೇಲೆ ಹೊರಬಂದ ನಂತರವೂ ಕೃತ್ಯ ಮುಂದುವರಿಸಿದ್ದರು. ರಾತ್ರಿ ವೇಳೆ ಮನೆಗಳಿಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ ಇವರು, ಮೋಜಿನ ಜೀವನ ನಡೆಸುತ್ತಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

ಆರೋಪಿಗಳಾದ ಗುಣ ಮತ್ತು ಸೂರ್ಯ

ರೇಣುಕಾ ಯಲ್ಲಮ್ಮದೇವಿ ದೇಗುಲ ಜೀರ್ಣೋದ್ಧಾರ

ಬೆಂಗಳೂರು: 'ಶ್ರೀ ಸಾವಿತ್ರಮ್ಮ ತಿಮ್ಮೇಗೌಡ ಟ್ರಸ್ಟ್‌ನಿಂದ ಮಂಡ್ಯ ಜಿಲ್ಲೆ ಕಾಟೆದೊಡ್ಡಿಯ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಗುವುದು. ಇದೇ 19ರಂದು ದೇವಾಲಯದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ' ಎಂದು ಎಂದು ಟ್ರಸ್ಟಿ ಎಂ.ಡಿ ಸುನೀತಾ ತಿಮ್ಮೇಗೌಡ ಹೇಳಿದರು.

'ನನ್ನ ತಾಯಿ ಕೆ.ಸಾವಿತ್ರಮ್ಮ ಕಾಟೆದೊಡ್ಡಿ ಗ್ರಾಮದಲ್ಲಿ 100 ವರ್ಷದ ಹಿಂದಿನ ಯಲ್ಲಮ್ಮ ದೇವಸ್ಥಾನ ಮರು ನಿರ್ಮಾಣಕ್ಕೆ ಕೈ ಹಾಕಿದ್ದರು. ಅವರು ನಿಧನರಾಗಿದ್ದರಿಂದ ಈ ಕಾರ್ಯ ನನೆಗುದಿಗೆ ಬಿದ್ದಿತ್ತು. ಈಗ ಚಾಲನೆ ನೀಡಲಾಗುತ್ತಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Lost

DOCUMENT LOST

My Client NISHANKA HK, is the absolute owner of site No.244, 4th cross, 6th main, Sy No.19, Sarakki (Dollars Scheme), 4th Phase, JP Nagar, Bangalore - 560078. Having lost the original GPA document, executed by Suman CK to CJ Kempegowda, has registered a police complaint at JP Nagar police station on 03/02/2021 with the lost report No.021146/2021. Nobody other than my client has rights on these documents and if any person finds the documents. I request them to hand it over to my client.
Sd/-
M.S.KRISHNA MURTHY
ADVOCATE
PH. 9739962323

PUBLIC NOTICE
To Place your Classified Ads Contact:
9880856233

DOCUMENTS LOST
I, UMA SHANKAR S/o Late Venkataramanappa, R/a. No.106, 2nd Floor, "Shankarashana Home" No.04, Bob Main Road, J.P.Nagar, 7th Phase Puttenahalli, Bangalore -78. have lost Original Sale Deed Documents No. 8304/2010-11, dt.24.01.2011, Registered in the office of the Sub-Register, J.P.Nagar, Bangalore, in the name of Smt. Jayamma W/o Late Nanja Reddy. BBMP Katha No.200/269/107/4, Puttenahalli, Bangalore.
Finders Please Contact : 8904636811

Change of Name

I, SATISH Kumar G aged 46 Years S/o Giriraj V R/a #22, Muthyalamma Temple H Street ,Seppings Road Cross, Bangalore 01. have changed my name to SATISH KUMAR GIRIRAJ vide affidavit dated 17/02/2021 before notary K Venkateshan, Bangalore.

GEETA DEVI W/o. 14817343K, HAV/MT, Raghav Kumar Singh, Vill: Bhabat, Zirakpur, Sasnagar, Punjab, my name GEETA DEVI to GEETA KUMARI, notary K.V. Mani, Bangalore.

I,RAJESHWARI.V RESIDING at #6/A,7th Cross,Yellamma Temple, Magadi-Road, Bengaluru-23,have changed name fromRAJAMMA.V as to RAJESHWARI.V vide affidavit dated:17.02.2021sworn before notary L.Puttaraju,Bengaluru

YASKRIT KUMAR SINGH, S/o. 14817343K, HAV/MT, Raghav Kumar Singh, #3474, Sector 29D, Chandigarh, my name YASKRIT KUMAR SINGH to YASHKRIT KUMAR SINGH, notary K.V. Mani, Bangalore.

Announcements

AN ANNOUNCEMENT
The Institution of Engineers (India), HQ has decided that all IEI Elections will be held online during 2021.
In this connection, all corporate members who have not registered their e-mail ids and mobile numbers are requested to update their e-mail ids and mobile numbers which is mandatory for any corporate member to exercise the voting right in this full online system and also intimate if there is any change in their postal addresses. This would facilitate IEI HQ to reach out and have access to them for all information in addition to voting rights during the IEI Elections.
Corporate Members are also requested to inform other members known to them to update their e-mail ids/mobile numbers and intimate change of address, if any.
This information may please be furnished along with Membership Number directly by e-mail to: datamemb@ieindia.org.
Er. Jasmail Singh - Chairman
The Institution of Engineers (India)
Karnataka State Centre office- Bengaluru

JOB OPPORTUNITIES

Part-Time Jobs

COVID'19 SITUATION those who lost there job Our Company providing Work from home Earn 35-40K Per month Call 7019215243

ASTRO YATRA

ಶ್ರೀ ದುರ್ಗಾಂಬಿಕಾ ಜ್ಯೋತಿಷ್ಯಾಲಯ
ಪಂಡಿತ್ ಶ್ರೀ ರಾಜಶೇಖರ್‌ಭಟ್ (ಕುಡ್ಲ)
ನೀವು ಇಲ್ಲಿಯವರೆಗೂ ಎಷ್ಟೋ ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ಮನನೊಂದಿದ್ದರೆ ಇವರನ್ನು ಸಂಪರ್ಕಿಸಿ
ಫೋ: 9591000766
ನಿಮ್ಮ ಕುಟುಂಬದ ಸಮಸ್ಯೆಗಳಾದ ಉದ್ಯೋಗ, ವ್ಯಾಪಾರ, ಮದುವೆ ವಿಳಂಬ, ಸಂತಾನ ತೊಂದರೆ, ಆರೋಗ್ಯ ಸಮಸ್ಯೆ, ವ್ಯಾಪಾರದಲ್ಲಿ ನಷ್ಟ, ವಾಸ್ತುದೋಷ, ಮಕ್ಕಳ ಸಮಸ್ಯೆ, ಸತಿಪತಿ ಕಲಹ, ಅತ್ತೆಸೊಸೆ ಕಿರಿಕಿರಿ, ಸಾಲಬಾಧೆ, ಡೈವೋರ್ಸ್ ಪ್ರಾಬ್ಲಂ, ಅಣ್ಣತಮ್ಮಂದಿರ ಆಸ್ತಿಯಲ್ಲಿ ಕಿರಿಕಿರಿ, ಕೋರ್ಟ್‌ಕೇಸ್, ರಾಜಕೀಯ, ಪ್ರಮೋಷನ್, ಪ್ರೇಮವಿಚಾರ, ಇನ್ನಿತರ
ಯಾವುದೇ ಕಠಿಣ ಸಮಸ್ಯೆಗಳಿದ್ದರೂ ಕೇರಳ ಅದಿದೇವತೆ ಶ್ರೀಭದ್ರಕಾಳಿ ಅಮ್ಮನವರ ಸರ್ವಾಭಿಷ್ಟ ಸಿದ್ಧಿಪೂಜಾಶಕ್ತಿಯಿಂದ ಶಾಸ್ತ್ರೋಕ್ತ ಪದ್ಧತಿಯಲ್ಲಿ
ಕೆಲವೇ ದಿನಗಳಲ್ಲಿ ಗ್ಯಾರಂಟಿ ಪರಿಹಾರ ಶತಸಿದ್ಧ
ವಿಳಾಸ: ಉಮಾ ಚಿತ್ರಮಂದಿರದ ಎದುರುಗಡೆ, ಬುಲ್‌ಟೆಂಪಲ್ ರಸ್ತೆ, ಚಾಮರಾಜಪೇಟೆ, ಬೆಂ.

Engg/ Production Technical

REQUIRED HR Admin, Manager, Accounts, BE, Diploma, B-Tech-M-Tech, MSc, Mechanical, Electronics, Electrical, Computer Engineers -7676760299

Multiple Vacancy

REQUIREDEXPERIENCED MANAGER, SUPERVISOR, FIELD EXECUTIVES (DRA_QUALIFIED) & TELECALLER (Males_&_Females) For MNC Banking Collections.Contact:- 9902952498, 7019700755, 080-42123018.

AUTOMOTIVE

Four Wheelers Selling

Others

2010 MODEL Tempo Traveller, White colour, 16 + 1 seater, 101000 kms used, Good condition for sale. 40 Kms permit only. Up to date records. Interested parties may contact : 9845326347.

REAL ESTATE SELLING

Sites

Hosur Road

APPROX. ONE Acre Industrial Land for Sale. Power, Water available. Papers upto date. Ideal for Pharma as well. Brokers Excuse. Contact: 9620938350/ 9342825263.

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 8618691434, 8073277210

BUSINESS

Business to Business

Finance

NRI'S INVESTMENT AND FINANCE AVAILABLE ON LOW INTEREST AGAINST PROPERTIES,LAND & BUILDINGS, SITES, FLATS ALSO COMPANIES, BUSINESSES CALL:7411265189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ **Classifieds**

EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

‘ಉಗ್ರ’ರ ವಿರುದ್ಧ ಆರೋಪಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಕಾಯಿತಿ ಪ್ರಕರಣದಲ್ಲಿ ಜಮಾತ್-ಉಲ್-ಮುಜಾಹಿದ್ದೀನ್ ಬಾಂಗ್ಲಾದೇಶ್ (ಜೆಎಂಬಿ) ಉಗ್ರ ಸಂಘಟನೆಯ 11 ಸದಸ್ಯರ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ.

ಜೆಎಂಬಿ ಸದಸ್ಯರಾದ ನಜೀರ್ ಶೇಖ್, ಆರೀಫ್ ಹುಸೇನ್, ಆಸಿಫ್ ಇಕ್ಬಾಲ್, ಜಹಿದುಲ್ ಇಸ್ಲಾಂ, ಕಡೋರ್‌ಖಾಝಿ, ಹಬಿಬೂರ್

ಎನ್‌ಐಎ

ರೆಹಮಾನ್, ದಿಲ್ವರ್ ಹುಸೇನ್, ಮುಸ್ತಾಫಿಜಾರ್ ರೆಹಮಾನ್, ಆದಿಲ್ ಶೇಖ್, ಅಬ್ದುಲ್ ಕರೀಂ ಹಾಗೂ ಮೊಸರಫ್ ಹುಸೇನ್ ಎಂಬುವರ ವಿರುದ್ಧ ಆರೋಪಪಟ್ಟಿ ಸಲ್ಲಿಕೆಯಾಗಿದೆ.

2018ರಲ್ಲಿ ಜೆಎಂಬಿ ಸಂಘಟನೆಯ ಉಗ್ರರ ಅಗತ್ಯಗಳನ್ನು ಪೂರೈಸಲು ‘ಮಾಲ್ ಎ ಗನಿಮತ್’ ಹೆಸರಿನಲ್ಲಿ ಹಣ ಸಂಗ್ರಹಕ್ಕೆ ಯತ್ನಿಸಿದ್ದರು. ವಿಧ್ವಂಸಕ ಕೃತ್ಯವೆಸಗಲು ಶಸ್ತ್ರಾಸ್ತ್ರ, ಸ್ಫೋಟಕಗಳ ವಸ್ತುಗಳ ಸಂಗ್ರಹಕ್ಕೆ ಮುಂದಾಗಿದ್ದರು. ಇದಕ್ಕಾಗಿ 2020ರ ಫೆಬ್ರುವರಿಯಿಂದ ಏಪ್ರಿಲ್‌ವರೆಗೆ ಬೆಂಗಳೂರಿನ ನಾಲ್ಕು ಸ್ಥಳಗಳಲ್ಲಿ ಡಕಾಯಿತಿ ನಡೆದಿತ್ತು. ಈ ಸಂಬಂಧ ಅತ್ತಿಬೆಲೆ ಠಾಣೆಯಲ್ಲಿ ಎರಡು, ಕೊತ್ತನೂರು ಹಾಗೂ ಕೆ.ಆರ್.ಪುರ ಠಾಣೆಗಳಲ್ಲಿ ತಲಾ ಒಂದು ಎಫ್‌ಐಆರ್ ದಾಖಲಾಗಿತ್ತು.

‘ಪ್ರಮುಖ ಆರೋಪಿಯಾಗಿರುವ ಜಹಿದುಲ್ ಇಸ್ಲಾಂ, ಭಾರತದಲ್ಲಿ ಜೆಎಂಬಿ ಚಟುವಟಿಕೆಗಳ ಪ್ರಚಾರದಲ್ಲಿ ಮುಖ್ಯ ಪಾತ್ರವಹಿಸಿದ್ದ. ಬಾಂಗ್ಲಾದೇಶದ ಸರಣಿ ಬಾಂಬ್ ಸ್ಫೋಟ ಸೇರಿದಂತೆ ವಿವಿಧ ಸ್ಫೋಟ ಕೃತ್ಯಗಳಲ್ಲಿ ಪ್ರಮುಖ ಆರೋಪಿಯೂ ಆಗಿದ್ದಾನೆ. ಅಡಗುತಾಣಗಳು, ಆಶ್ರಯ ಪಡೆದಿದ್ದ ಸ್ಥಳಗಳು ಹಾಗೂ ಡಕಾಯಿತಿ ಕುರಿತಾದ ಮಾಹಿತಿಗಳನ್ನು ವಿಚಾರಣೆ ವೇಳೆ ತನಿಖಾಧಿಕಾರಿಗಳ ಮುಂದೆ ಹೇಳಿದ್ದು, ತನಿಖೆ ನಡೆಯುತ್ತಿದೆ’ ಎಂದು ಎನ್‌ಐಎ ತಿಳಿಸಿದೆ.

ಬೆಂಗಳೂರಿನಲ್ಲೂ ಜೆಎಂಬಿ ಅಡಗುತಾಣಗಳನ್ನು ಸ್ಥಾಪನೆ ಮಾಡಿತ್ತು. ಈ ಮೂಲಕ ದಕ್ಷಿಣ ಭಾರತದಲ್ಲಿ ತನ್ನ ಕಾರ್ಯವನ್ನು ವಿಸ್ತರಣೆ ಮಾಡಿಕೊಳ್ಳುವ ಉದ್ದೇಶ ಹೊಂದಿತ್ತು.

ಕಾಂಗ್ರೆಸ್ ನಾಯಕರ ಜತೆ ಸುರ್ಜೇವಾಲ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಬಿಬಿಎಂಪಿ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆ ಸೇರಿದಂತೆ ಹಲವು ವಿಚಾರಗಳ ಕುರಿತು ಪಕ್ಷದ ನಾಯಕರ ಜೊತೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಬುಧವಾರ ಸರಣಿ ಸಭೆ ನಡೆಸಿದರು.

ಗುರುವಾರ ಕೂಡಾ ಪ್ರಮುಖ ನಾಯಕರ ಜೊತೆ ಅವರು ಸಭೆ ನಡೆಸಲಿದ್ದಾರೆ.

ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿರುವ ರಾಮಲಿಂಗಾ ರೆಡ್ಡಿ, ಈಶ್ವರ ಖಂಡ್ರೆ, ಸಲೀಂ ಅಹ್ಮದ್, ಶಾಸಕರಾದ ಕೆ.ಜೆ. ಜಾರ್ಜ್, ಎಂ. ಕೃಷ್ಣಪ್ಪ, ಎನ್.ಎ. ಹ್ಯಾರಿಸ್, ಅಖಂಡ ಶ್ರೀನಿವಾಸಮೂರ್ತಿ ಸೇರಿದಂತೆ ಬೆಂಗಳೂರು ನಗರ ವ್ಯಾಪ್ತಿಯ ಶಾಸಕರು ಸಭೆಯಲ್ಲಿದ್ದರು.

‘ಬಿಜೆಪಿಯವರು ಸರದಿಯಲ್ಲಿದ್ದಾರೆ’

‘ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಎಲ್ಲಾ ರಂಗಗಳಲ್ಲೂ ವಿಫಲವಾಗಿವೆ. ನಾಯಕರು ತಮ್ಮ ಅಸ್ತಿತ್ವ ಕಳೆದುಕೊಂಡಿದ್ದಾರೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ್ ಖಂಡ್ರೆ ಹೇಳಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಕಾಂಗ್ರೆಸ್ ಶಾಸಕರು ಬಿಜೆಪಿಗೆ ಬರುತ್ತಾರೆಂದು ಅವರು ಹೇಳಿದ್ದಾರೆ. ಕಟೀಲ್‌ಗೆ ಸುಳ್ಳು ಹೇಳುವ ಚಾಳಿಯಿದೆ. ಸುಳ್ಳನ್ನೇ ಸತ್ಯವೆಂದು ಬಿಂಬಿಸುತ್ತಿದ್ದಾರೆ. ಸಣ್ಣ ಪುಟ್ಟ ವಿಚಾರದಿಂದ ಕೆಲವರು ಬಿಜೆಪಿಗೆ ಹೋಗಿದ್ದು, ಅವರು ಈಗಾಗಲೇ ಪಶ್ಚಾತ್ತಾಪ ಪಡುತ್ತಿದ್ದಾರೆ’ ಎಂದರು.

‘ಇಲ್ಲಿಂದ (ಕಾಂಗ್ರೆಸ್) ಯಾರೂ ಅಲ್ಲಿಗೆ ಹೋಗಲ್ಲ. ಅಲ್ಲಿಂದ (ಬಿಜೆಪಿಯಿಂದ) ಬರಲು ಸರದಿಯಲ್ಲಿದ್ದಾರೆ. ಸಮಯ ಬಂದಾಗ ಅದನ್ನು ಹೇಳುತ್ತೇವೆ. ಬಿಜೆಪಿಯಲ್ಲಿರುವವರೇ ಭ್ರಮನಿರಸನಗೊಂಡಿದ್ದು, ಇಲ್ಲಿಂದ ಹೋದವರಷ್ಟೇ ಅಲ್ಲ, ಅಲ್ಲಿರುವವರೂ ಬರಲು ಸಿದ್ಧವಾಗಿದ್ದಾರೆ’ ಎಂದರು.

ರಾಜ್ಯ ಸರ್ಕಾರದ ವಿರುದ್ಧ ಹೋರಾಟ ರೂಪಿಸುವ ಬಗ್ಗೆಯೂ ಚರ್ಚೆ ನಡೆದಿದೆ.

ಸಭೆಯ ಬಳಿಕ ಮಾತನಾಡಿದ ರಾಮಲಿಂಗಾರೆಡ್ಡಿ, ‘ಸುರ್ಜೇವಾಲ ಅವರು ಪಕ್ಷ ಸಂಘಟನೆ ಹಾಗೂ ಬೆಂಗಳೂರು ವ್ಯಾಪ್ತಿಯಲ್ಲಿ ಪಕ್ಷದ ಬಲವರ್ಧನೆ ಬಗ್ಗೆ ವಿಶೇಷವಾಗಿ ಗಮನಹರಿಸಿ ಸಭೆ ನಡೆಸಿದ್ದಾರೆ. ಬಿಬಿಎಂಪಿ ಚುನಾವಣೆ ಎದುರಾಗುವ ಮುನ್ನವೇ ಪಕ್ಷವನ್ನು ಸಂಘಟಿಸುವ ವಿಚಾರವಾಗಿ ಚರ್ಚಿಸಿದ್ದಾರೆ’ ಎಂದರು.

‘ಬೆಂಗಳೂರು ನಗರ ವ್ಯಾಪ್ತಿಯ ಶಾಸಕರು ಹಾಗೂ ಸೋತ ಅಭ್ಯರ್ಥಿಗಳ ಜೊತೆ ವೈಯಕ್ತಿಕವಾಗಿ ಚರ್ಚಿಸಿದ್ದಾರೆ. ಪ್ರತಿಯೊಬ್ಬರಿಗೂ ಹತ್ತು ನಿಮಿಷಗಳ ಕಾಲಾವಕಾಶ ನೀಡಿದ್ದಾರೆ’ ಎಂದರು.

‘ಅಭಿಜಾತ ಸಾಹಿತ್ಯ ಕಲ್ಯಾಣ ಯೋಜನೆಗೆ ಅನುದಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆಗನ್ನಡ ಸಾಹಿತ್ಯವನ್ನು ಡಿಜಿಟಲೀಕರಣಗೊಳಿಸುವ ಅಭಿಜಾತ ಕನ್ನಡ ಸಾಹಿತ್ಯ ಕಲ್ಯಾಣ ಯೋಜನೆಗೆ ಬಜೆಟ್‌ನಲ್ಲಿ ಅನುದಾನ ಒದಗಿಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಕೋರಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಯುವ ಬರಹಗಾರರ 58 ಚೊಚ್ಚಲ ಕೃತಿಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

‘2 ಸಾವಿರ ವರ್ಷಗಳಷ್ಟು ಹಳೆಯದಾದ ಕನ್ನಡ ಸಾಹಿತ್ಯವನ್ನು ಸಂರಕ್ಷಣೆ ಮಾಡುವ ಅಗತ್ಯವಿದೆ. ಅದನ್ನು ಮುಖ್ಯಮಂತ್ರಿ ಅವರಿಗೂ ಮನವರಿಕೆ ಮಾಡಿಸಲಾಗಿದೆ. ಅನುದಾನ ನೀಡಲು ಅವರೂ ಒಪ್ಪಿದ್ದಾರೆ’ ಎಂದು ಹೇಳಿದರು.

‘ಪುಸ್ತಕ ಪ್ರಕಟಣೆಗೆ 144 ಕೃತಿಗಳು ಬಂದಿದ್ದವು. ಪರಿಶೀಲನಾ ಸಮಿತಿಯು ಅವುಗಳಲ್ಲಿ 58 ಕೃತಿಗಳನ್ನು ಆಯ್ಕೆ ಮಾಡಿದೆ. ಲಭ್ಯ ಇರುವ ಅನುದಾನಕ್ಕೆ ಸೀಮಿತವಾಗಿ ಪುಸ್ತಕ ಪ್ರಕಟಿಸಲಾಗಿದೆ. ಈ ಕಾರ್ಯಕ್ಕೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಉಪಯೋಜನೆಯಿಂದಲೂ ಅನುದಾನ ನೀಡುವಂತೆ ಸಮಾಜ ಕಲ್ಯಾಣ ಸಚಿವರಲ್ಲಿ ಕೋರುತ್ತೇವೆ’ ಎಂದು ಹೇಳಿದರು.

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಯುವ ಬರಹಗಾರರ ಜೊತೆ ಕನ್ನಡ ಪುಸ್ತಕ ಪ್ರಾಧಿಕಾರದ ಸಹಾಯಕ ನಿರ್ದೇಶಕಿ ಸೌಭಾಗ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್ ರಂಗಪ್ಪ, ಸಚಿವ ಅರವಿಂದ ಲಿಂಬಾವಳಿ, ಡಾ. ಸಿದ್ಧಲಿಂಗಯ್ಯ, ಪ್ರಾಧಿಕಾರದ ಅಧ್ಯಕ್ಷ ಎಂ.ಎನ್. ನಂದೀಶ್ ಹಂಚೆ ಮತ್ತು ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ಇದ್ದಾರೆ –ಪ್ರಜಾವಾಣಿ ಚಿತ್ರ

ಯುವ ಸಮೂಹ ಡಿಜಿಟಲ್ ಮಾಧ್ಯಮವನ್ನು ಹೆಚ್ಚಾಗಿ ಅವಲಂಬಿಸುತ್ತಿದೆ. ಹೀಗಾಗಿ, ಪುಸ್ತಕಗಳನ್ನು ಡಿಜಿಟಲ್ ರೂಪದಲ್ಲೂ ಪ್ರಕಟಿಸುವ ಅಗತ್ಯ ಇದೆ ಎಂದರು.

ಕವಿ ಡಾ. ಸಿದ್ಧಲಿಂಗಯ್ಯ, ‘ಅಸ್ಪೃಶ್ಯತೆ ಎಂಬುದು ದಲಿತರ ಸಮಸ್ಯೆಯಲ್ಲ, ಅದೊಂದು ಸಾಮಾಜಿಕ ಸಮಸ್ಯೆ. ಅದನ್ನು ಹೋಗಲಾಡಿಸಲು ದಲಿತರು ಮಾತ್ರ ಪ್ರಯತ್ನಿಸಿದರೆ ಆಗುವುದಿಲ್ಲ. ಬೇರೆ ಸಮುದಾಯದವರೂ ಕೈಜೋಡಿಸುವ ಅಗತ್ಯವಿದೆ’ ಎಂದು ಹೇಳಿದರು.

‘ದಲಿತರ ಏಳಿಗೆಗಾಗಿ ಹಲವರು ತಮ್ಮ ಜೀವನ ಮುಡಿಪಾಗಿಟ್ಟು ಹೋರಾಟ ನಡೆಸಿದ್ದಾರೆ. ಅಂತಹ ದಲಿತೇತರರ ಬಗ್ಗೆ ಅಧ್ಯಯನಗಳನ್ನು ನಡೆಸಿ ಯುವ ಬರಹಗಾರರು ಪುಸ್ತಕಗಳನ್ನು ಪ್ರಕಟಿಸಬೇಕು. ಅದು ಉಳಿದವರಿಗೂ ಸ್ಫೂರ್ತಿಯಾಗಲಿದೆ’ ಎಂದರು.

‘ಪಂಪ, ರನ್ನರ ಆದಿಯಾಗಿ ಎಲ್ಲಾ ಕನ್ನಡ ಸಾಹಿತ್ಯವನ್ನು ಬರಹಗಾರರು ಓದಬೇಕು. ನಮ್ಮದು ಕೇವಲ ಕ್ರಾಂತಿಕಾರಿ ಸಾಹಿತ್ಯ ಎಂದು ಭಾವಿಸಿಕೊಂಡು, ಅನ್ಯ ಸಾಹಿತ್ಯ ಓದದಿದ್ದರೆ ಅವರ ಸಾಹಿತ್ಯವೇ ಬಡವಾಗುತ್ತದೆ. ಸಾಹಿತ್ಯ ಪರಂಪರೆಯ ಅರಿವು ಬರಹಗಾರನಿಗೆ ಇರಬೇಕು’ ಎಂದು ಪ್ರತಿಪಾದಿಸಿದರು.

₹250 ಕೋಟಿ ಮೀಸಲಿಗೆ ಅಲೆಮಾರಿ ಮಹಾಸಭಾ ಮನವಿ

ಬೆಂಗಳೂರು: ಅಲೆಮಾರಿ ಸಮುದಾಯಗಳ ಏಳಿಗೆಗೆ ಬಜೆಟ್‌ನಲ್ಲಿ ಕನಿಷ್ಠ ₹250 ಕೋಟಿ ಮೀಸಲಿಡುವಂತೆ ಅಲೆಮಾರಿ ಬುಡಕಟ್ಟು ಮಹಾಸಭಾ ಒತ್ತಾಯಿಸಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ 74 ಅಲೆಮಾರಿ ಸಮುದಾಯಗಳಿವೆ. ಅಲೆಮಾರಿ ಅಭಿವೃದ್ಧಿ ಕೋಶ ರಚಿಸಲಾಗಿದ್ದು, ಅನುದಾನ ಇಲ್ಲದೆ ಯಾವುದೇ ಪ್ರಯೋಜನಕ್ಕೆ ಬರುತ್ತಿಲ್ಲ. ಈ ಕೋಶವನ್ನೇ ಅಲಮಾರಿ ಅಭಿವೃದ್ಧಿ ನಿಗಮವಾಗಿ ಪರಿವರ್ತಿಸಬೇಕು ಎಂದು ಆಗ್ರಹಿಸಿ ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು ಅವರಿಗೆ ಮಹಾಸಭಾದ ಮುಖಂಡರು ಮನವಿ ಸಲ್ಲಿಸಿದರು.

ರಾಜ್ಯದಲ್ಲಿ ಅಲೆಮಾರಿ ಸಮುದಾಯದ 2 ಲಕ್ಷ ಜನರಿದ್ದು, ಕೌದಿ ಬಟ್ಟೆಗಳಿಂದ ಟೆಂಟ್‌ಗಳನ್ನು ನಿರ್ಮಿಸಿಕೊಂಡು ಪ್ರಾಣಿಗಳಂತೆ ಜೀವನ ಮಾಡುತ್ತಿದ್ದಾರೆ. ಇವರಿಗೆ ಶಾಶ್ವತ ಸೂರು ಒದಗಿಸಲು ಬಜೆಟ್‌ನಲ್ಲಿ ‘ಟೆಂಟ್ ಮುಕ್ತ ಕರ್ನಾಟಕ’ದ ಘೋಷಣೆ ಮಾಡಬೇಕು. ಅದಕ್ಕಾಗಿ ವಿಶೇಷ ಪ್ಯಾಕೇಜ್ ನೀಡಬೇಕು ಎಂದು ಆಗ್ರಹಿಸಿದರು.

ತಾಲ್ಲೂಕಿಗೆ ಒಂದು ನವಗ್ರಾಮ ನಿರ್ಮಾಣ ಮಾಡಿ ಅಲ್ಲಿ ಅಲೆಮಾರಿಗಳಿಗೆ ಶಾಶ್ವತ ಸೂರು ಒದಗಿಸಬೇಕು. ಅಲೆಮಾರಿಗಳ ಪಾರಂಪರಿಕ ವೃತ್ತಿಗೆ ಆಧುನಿಕ ಸ್ಪರ್ಶ ನೀಡುವ ಮೂಲಕ ಅವರನ್ನು ಆರ್ಥಿಕವಾಗಿ ಸದೃಢರನ್ನಾಗಿಸಲು ಬಜೆಟ್ ₹5 ಕೋಟಿ ಅನುದಾನ ನೀಡಬೇಕು ಎಂದು ಮನವಿ ಮಾಡಿದರು.

ಅಲೆಮಾರಿ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಕುರಿತ ಕೇಂದ್ರ ಸರ್ಕಾರದ ನಿರ್ದೇಶನದಂತೆ ಸಮೀಕ್ಷೆ ನಡೆಸಬೇಕು. ಜಿಲ್ಲಾ, ತಾಲ್ಲೂಕು ಮತ್ತು ಹೋಬಳಿ ಕೇಂದ್ರಗಳಲ್ಲಿ ಅಲೆಮಾರಿ ಸಮುದಾಯ ಭವನಗಳನ್ನು ನಿರ್ಮಿಸಲು ತಲಾ ₹5 ಕೋಟಿ ಪ್ರತ್ಯೇಕ ಅನುದಾನ ನೀಡಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ವಿಕಾಸ ರಂಗ ಹಾಗೂ ಸಪ್ನ ಬುಕ್ ಹೌಸ್ ಜಂಟಿಯಾಗಿ ನಗರದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಡಾ.ಸಿ. ಎನ್. ರಾಮಚಂದ್ರನ್ ಅವರ ‘ಬಂಡುಕೋರ ಸಾಹಿತಿಗಳು’, ರಾ.ನಂ. ಚಂದ್ರಶೇಖರ ಅವರ ‘ಕನ್ನಡ ಹಾದಿಯ ಕೈಮರಗಳು’ ಎಚ್. ಡುಂಡಿರಾಜ್ ಅವರ ‘ಪತ್ರೊಡೆ ಮಿತ್ರರು’ ಹಾಗೂ ಬೇಲೂರು ರಘುನಂದನ್ ಅವರ ‘ಮೋಹನ ತರಂಗಿಣಿ’ ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ರಾಜ್ಯಸಭೆ ಸದಸ್ಯ ಎಲ್. ಹನುಮಂತಯ್ಯ, ಸಂಸ್ಕೃತ ವಿದ್ವಾಂಸ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಕಲಾವಿದ ‘ಮುಖ್ಯಮಂತ್ರಿ’ ಚಂದ್ರು, ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ, ಸಪ್ನ ಬುಕ್ ಹೌಸ್‌ನ ವ್ಯವಸ್ಥಾಪಕ ಆರ್. ದೊಡ್ಡೇಗೌಡ ಹಾಗೂ ಕೃತಿಯ ಲೇಖಕರು ಇದ್ದರು.

‘ಆನ್‌ಲೈನ್ ಜೂಜು: ಸಂಪುಟದ ನಿರ್ಧಾರ ತಿಳಿಸಿ’

ಬೆಂಗಳೂರು: ಆನ್‌ಲೈನ್ ಜೂಜು ಚಟುವಟಿಕೆ ನಿಯಂತ್ರಿಸುವ ವಿಷಯದಲ್ಲಿ ರಾಜ್ಯ ಸಚಿವ ಸಂಪುಟ ತೆಗೆದುಕೊಳ್ಳುವ ನಿರ್ಧಾರವನ್ನು ದಾಖಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

‘ಆನ್‌ಲೈನ್ ಬೆಟ್ಟಿಂಗ್‌ಗೆ ಸಂಬಂಧಿಸಿದ ವಿಷಯವನ್ನು ಸಂಪುಟದ ಮುಂದೆ ಇಡಲಾಗಿದೆ. ಶೀಘ್ರವೇ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆ ಇದೆ’ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠಕ್ಕೆ ಸರ್ಕಾರದ ಪರ ವಕೀಲರು ತಿಳಿಸಿದರು.

‘ಸೂಕ್ತ ನಿಯಮಾವಳಿ ರೂಪಿಸುವ ತನಕ ಆನ್‌ಲೈನ್ ಜೂಜಾಟ ನಿಲ್ಲಿಸಬೇಕು’ ಎಂದು ದಾವಣಗೆರೆ ನಿವಾಸಿ ಡಿ.ಆರ್. ಶಾರದಾ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆಯಲ್ಲಿ ತಮ್ಮನ್ನೂ ಪ್ರತಿವಾದಿ ಆಗಿಸುವಂತೆ ಕೋರಿ ಮುಂಬೈ ಮೂಲದ ಆನ್‌ಲೈನ್ ರಮ್ಮಿ ಫೌಂಡೇಷನ್(ಟಿಒಆರ್‌ಎಫ್) ಮಧ್ಯಂತರ ಅರ್ಜಿ ಸಲ್ಲಿಸಿದೆ. ಅರ್ಜಿ ಅನುಮತಿಸಿರುವ ಪೀಠ, ಮಾ.31ರೊಳಗೆ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶನ ನೀಡಿದೆ.

‘ಆನ್‌ಲೈನ್ ರಮ್ಮಿ ಆಟವನ್ನು ಪ್ರೋತ್ಸಾಹಿಸಿ, ಸುಗಮಗೊಳಿಸುವುದು ಫೆಡರೇಷನ್‌ನ ಉದ್ದೇಶ. ಆಟಗಾರರ ಆಸಕ್ತಿಗಳನ್ನು ರಕ್ಷಿಸುವ ಕೆಲಸವನ್ನೂ ಫೆಡರೇಷನ್ ಮಾಡುತ್ತಿದೆ’ ಎಂದು ಟಿಒಆರ್‌ಎಫ್ ಪರ ವಕೀಲ ಮುಕುಲ್ ರೋಹಟಗಿ ವಿವರಿಸಿದರು.

‘ರಮ್ಮಿ ಒಂದು ಕೌಶಲದ ಆಟವೇ ಹೊರತು ಜೂಜಲ್ಲ. ಇದಕ್ಕೆ ಪರವಾನಗಿ ನೀಡಿದರೆ ಶುಲ್ಕದಿಂದಲೇ ಮುಂದಿನ ಐದು ವರ್ಷಗಳಲ್ಲಿ ರಾಜ್ಯ ಸರ್ಕಾರ ₹1 ಸಾವಿರ ಕೋಟಿ ವರಮಾನ ನಿರೀಕ್ಷಿಸಬಹುದು’ ಎಂದು ಅವರು ವಿವರಿಸಿದರು.

ಎಚ್‌ಡಿಕೆ ಹೇಳಿಕೆ ಹಿಂಪಡೆಯಲಿ: ಎನ್. ರವಿಕುಮಾರ್

ಬೆಂಗಳೂರು: ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕಾಗಿ ದೇಣಿಗೆ ಸಂಗ್ರಹಿಸುತ್ತಿರುವುದರ ಕುರಿತು ಸಂಶಯ ವ್ಯಕ್ತಪಡಿಸಿ ನೀಡಿರುವ ಹೇಳಿಕೆಯನ್ನು ತಕ್ಷಣ ವಾಪಸ್ ಪಡೆಯಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರನ್ನು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಆಗ್ರಹಿಸಿದ್ದಾರೆ.

ಈ ಕುರಿತು ಮಂಗಳವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ರಾಮ ಮಂದಿರ ನಿರ್ಮಾಣಕ್ಕೆ ಇಡೀ ದೇಶದ ಜನತೆ ಸ್ವಯಂಪ್ರೇರಿತರಾಗಿ ದೇಣಿಗೆ ನೀಡುತ್ತಿದ್ದಾರೆ. ಈ ಕುರಿತು ಕುಮಾರಸ್ವಾಮಿ ಸಂಶಯ ವ್ಯಕ್ತಪಡಿಸಿ ಮಾತನಾಡಿರುವುದು ಸರಿಯಲ್ಲ’ ಎಂದಿದ್ದಾರೆ.

ತೆಲಂಗಾಣ: ವಕೀಲ ದಂಪತಿ ಬರ್ಬರ ಹತ್ಯೆ

ಕರಿಂನಗರ (ಪಿಟಿಐ): ತೆಲಂಗಾಣ ಹೈಕೋರ್ಟ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಕೀಲ ದಂಪತಿಯನ್ನು ಬುಧವಾರ ಹಾಡಹಗಲೇ ಪೆದ್ದಪಲ್ಲಿ ಜಿಲ್ಲೆಯಲ್ಲಿ ಬರ್ಬರವಾಗಿ ಹತ್ಯೆ ಮಾಡಲಾಗಿದೆ.

ವಕೀಲರಾದ ಗಟ್ಟು ವಾಮನ್ ರಾವ್ ಮತ್ತು ಅವರ ಪತ್ನಿ ಕಾರಿನಲ್ಲಿ ತೆರಳುತ್ತಿದ್ದಾಗ ಮಧ್ಯಾಹ್ನ 2.30ರ ವೇಳೆಗೆ ಹಿಂಬಾಲಿಸಿ ಬಂದ ಇಬ್ಬರು ವ್ಯಕ್ತಿಗಳು ರಾಮಗಿರಿ ಮಂಡಲ್‌ದ ಗ್ರಾಮವೊಂದರ ಬಳಿ ದಾಳಿ ಮಾಡಿದ್ದಾರೆ. ಚೂರಿ ಇರಿದು ಇಬ್ಬರನ್ನು ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದರೆ.

‘ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಿದೆ’ ಎಂದು ಗೃಹ ಸಚಿವ ಮಹಮೂದ್ ಅಲಿ ತಿಳಿಸಿದ್ದಾರೆ.

ಸ್ಥಳೀಯ ಟಿಆರ್‌ಎಸ್ ನಾಯಕರೊಬ್ಬರು ಈ ಹತ್ಯೆಗೆ ಕಾರಣ ಎಂದು ರಾವ್ ಸಾವಿಗೆ ಮುನ್ನ ಹೇಳಿಕೆ ನೀಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಹತ್ಯೆ ಮಾಡಿದ ಇಬ್ಬರು ವೃತ್ತಿಪರ ಕೊಲೆಗಾರರು ಎನ್ನುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಆರೋಪಿಗಳ ಪತ್ತೆಗೆ ಆರು ತಂಡಗಳನ್ನು ರಚಿಸಲಾಗಿದೆ’ ಎಂದು ರಾಮಗುಂಡಂ ಪೊಲೀಸ್ ಆಯುಕ್ತ ವಿ. ಸತ್ಯನಾರಾಯಣ ತಿಳಿಸಿದ್ದಾರೆ.

ಈ ಹತ್ಯೆಯ ಹಿಂದೆ ಟಿಆರ್‌ಎಸ್ ಸ್ಥಳೀಯ ನಾಯಕನ ಕೈವಾಡವಿದೆ ಎಂದು ವಕೀಲ ರಾವ್ ಅವರ ಕುಟುಂಬದ ಸದಸ್ಯರು ಆರೋಪಿಸಿದ್ದಾರೆ. ತೆಲಂಗಾಣ ವಕೀಲರ ಪರಿಷತ್ ಈ ಕೃತ್ಯವನ್ನು ಖಂಡಿಸಿದೆ.

‘ಕಿರಾಣಿ ಅಂಗಡಿ ಸಿಬ್ಬಂದಿಗೂ ಲಸಿಕೆ ನೀಡಿ’

ಬೆಂಗಳೂರು: ‘ಕಿರಾಣಿ ಅಂಗಡಿ ಹಾಗೂ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿಕೊಂಡಿರುವವರನ್ನೂ ಕೊರೊನಾ ಸೇನಾನಿಗಳೆಂದು ಪರಿಗಣಿಸಿ ಕೋವಿಡ್ ಲಸಿಕಾ ಅಭಿಯಾನದಲ್ಲಿ ಸೇರ್ಪಡೆ ಮಾಡಬೇಕು’ ಎಂದು ಮೆಟ್ರೊ ಕ್ಯಾಷ್ ಆ್ಯಂಡ್ ಕ್ಯಾರಿ ಇಂಡಿಯಾ ಪ್ರೈವೆಟ್ ಲಿಮಿಟೆಡ್ ವತಿಯಿಂದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು.

‘ಭಾರತದಲ್ಲಿ ಅಂದಾಜು 1.2 ಕೋಟಿ ಮಂದಿ ಕಿರಾಣಿ ಅಂಗಡಿಗಳಲ್ಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ ಅವರು ಜೀವದ ಹಂಗು ತೊರೆದು ಕಾರ್ಯ ನಿರ್ವಹಿಸುತ್ತಿದ್ದಾರೆ. ಲಾಕ್‌ಡೌನ್ ಸಮಯದಲ್ಲಿ ಇವರೆಲ್ಲಾ ಮನೆ ಮನೆಗೆ ಹೋಗಿ ದಿನಸಿ ಪೂರೈಸಿದ್ದಾರೆ. ಅವರಿಗೂ ಸೋಂಕು ತಗುಲುವ ಅಪಾಯ ಇದೆ. ಹೀಗಾಗಿ ಲಸಿಕೆ ನೀಡಿ’ ಎಂದು ಮನವಿ ಪತ್ರದಲ್ಲಿ ಹೇಳಲಾಗಿದೆ.

ಸಂಚಾರ ದಟ್ಟಣೆ

ಆರ್.ವಿ ರಸ್ತೆಯ ಟೀಚರ್ಸ್ ಕಾಲೇಜು ಸಿಗ್ನಲ್‌ನಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿರುವುದರಿಂದ ಸಂಚಾರ ದಟ್ಟಣೆ ಉಂಟಾಗುತ್ತಿದೆ –ಪ್ರಜಾವಾಣಿ ಚಿತ್ರ

ರಾಜ್ ಪ್ರತಿಮೆಗೆ ಅವಹೇಳನ ಮಾಡಿಲ್ಲ: ಹ್ಯಾರಿಸ್

ಬೆಂಗಳೂರು: ನಟ ರಾಜ್‌ಕುಮಾರ್ ಪ್ರತಿಮೆ ವಿಷಯದಲ್ಲಿ ಅವಹೇಳನಕಾರಿ ಧಾಟಿಯಲ್ಲಿ ಶಾಸಕ ಎನ್.ಎ. ಹ್ಯಾರಿಸ್ ಮಾತನಾಡಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿ ಟೀಕೆಗೆ ಗುರಿಯಾಗಿತ್ತು. ಈ ಬಗ್ಗೆ ಸ್ಪಷ್ಟನೆ ನೀಡಿರುವ ಹ್ಯಾರಿಸ್, ‘ನಾನು ರಾಜಕುಮಾರ್ ಅಭಿಮಾನಿ. ಅವಹೇಳನಕಾರಿಯಾಗಿ ಮಾತನಾಡಿಲ್ಲ’ ಎಂದು ಸ್ಪಷ್ಟನೆ ನೀಡಿದ್ದಾರೆ.

ತಮ್ಮ ಬೆಂಬಲಿಗರ ಸಮ್ಮುಖದಲ್ಲಿ ಮಾತನಾಡಿರುವ ಹ್ಯಾರಿಸ್, ‘ಪ್ರತಿಮೆಗಳನ್ನು ಇಡುವುದೇ ದೊಡ್ಡ ಕತೆ, ಅದರಲ್ಲಿ ಆಫೀಸ್ ಬೇರೆ ಮಾಡಿಕೊಡುವುದಕ್ಕೆ ಆಗುತ್ತಾ? ಮೇಲೆ ಪ್ರೊಟೆಕ್ಷನ್ ಏನ್ ಬೇಕಾಗಿಲ್ಲ. ಓಪನ್ ಇಡಿ. ಅವರು ಯಾರೋ ರಾಜ್ ಕುಮಾರ್‌ಗೆ ಅಂತ ಮಾಡಿತಾರೆ, ಅದನ್ನು ತೆಗೆಬೇಕು. ಸ್ಟ್ಯಾಚ್ಯುಗಳನ್ನೆಲ್ಲಾ ಕವರ್ ಮಾಡಿ ಮನೆಯಲ್ಲಿ ಇಟ್ಟಿದ್ರೆ ಆಗಿರ್ತಿತ್ತು, ರೋಡಲ್ಲಿ ಯಾಕೆ ಇಡ್ತಾರೆ ಅಲ್ವಾ? ಯಾರ್ ಕೇಳಿರುವವರು? ಏನಾದ್ರು ಹೇಳಿದ್ರೆ ಬೇರೆ ರೀತಿಯಲ್ಲಿ ತೆಗೆದುಕೊಳ್ಳುತ್ತಾರೆ’ ಎಂದು ಮಾತನಾಡಿರುವ ವಿಡಿಯೊ ಹರಿದಾಡುತ್ತಿದೆ.

ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಹ್ಯಾರಿಸ್, ‘ನಾನು ಅಲ್ಲಿ ಮಾತನಾಡಿದ ಸಂಪೂರ್ಣ ವಿಡಿಯೊ ಫೇಸ್‌ಬುಕ್‌ನಲ್ಲಿ ಲಭ್ಯವಿದೆ. ಅದನ್ನು ಪೂರ್ತಿ ವೀಕ್ಷಿಸಿದರೆ ಅರ್ಥವಾಗುತ್ತದೆ. ಅಲ್ಲಿ ನಾನು ನೀಡಿದ್ದು ಸಲಹೆ ಮಾತ್ರ’ ಎಂದರು.

ಬೆಂಗಳೂರು ವಿಶ್ವವಿದ್ಯಾಲಯ

ಕುಲಸಚಿವರುಗಳವರ ಕಛೇರಿ, ಜ್ಞಾನಭಾರತಿ, ಬೆಂಗಳೂರು – 56

ನಂ.ಬಿಯು/ಇ–ಆಡಳಿತ/ಟೆಂಡರ್–ಜಾಹಿರಾತು–06/2020–21 ದಿನಾಂಕ: 11.02.2021

ಇ–ಟೆಂಡರ್‌ಗಳಿಗಾಗಿ ಆಹ್ವಾನ ಪ್ರಕಟಣೆ

ಬೆಂಗಳೂರು ವಿಶ್ವವಿದ್ಯಾಲಯವು ಈ ಕೆಳಕಂಡ ಟೆಂಡರ್‌ಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ **https://eproc.karnataka.gov.in** ವೇದಿಕೆಯಲ್ಲಿ ದೊರಕುತ್ತವೆ. ಬಿಡ್‌ಗಳನ್ನು **https://eproc,karnataka.gov.in** ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬೇಕು. ಟೆಂಡರ್‌ನಲ್ಲಿ ಸೂಚಿಸಲಾದ ಸಮಯ ವೇಳಾಪಟ್ಟಿಗೆ ಬದ್ಧರಾಗಿರಲು ಬಿಡ್‌ದಾರರಲ್ಲಿ ವಿನಂತಿಸಲಾಗಿದೆ.

ಕ್ರ.ಸಂ	ಟೆಂಡರ್ ಗಳ ವಿವರ
1	ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆಗಳಿಗಾಗಿ ಸ್ಕ್ಯಾನಿಂಗ್ ಕೇಂದ್ರವನ್ನು ಹೆಚ್ಚಿಸಲು ಮತ್ತು ಸ್ಥಾಪಿಸಲು ನೆಟ್ ವರ್ಕಿಂಗ್, ಸಿಸಿಟಿವಿ, ಪ್ರವೇಶ ನಿಯಂತ್ರಣ ವ್ಯವಸ್ಥೆ ಮತ್ತು ವಿವಿಧ ವಸ್ತುಗಳ ಪೂರೈಕೆ (call-2)
2	ಸ್ಕ್ಯಾನಿಂಗ್ ಸೆಂಟರ್ ಮತ್ತು ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆ(ಡಿವಿಎಸ್), ಇ–ಆಫೀಸ್ ಮತ್ತು FBAS ಅನುಷ್ಠಾನಕ್ಕಾಗಿ ಹೆಸರಾಂತ ಸಂಸ್ಥೆಗಳಿಂದ ಸರ್ವರ್, ಡೆಸ್ಕ್ ಟಾಪ್ ಗಣಕಯಂತ್ರ, ಯುಪಿಎಸ್ ಗಳ ಪೂರೈಕೆ (call-2)
3	ಸ್ಕ್ಯಾನಿಂಗ್ ಸೆಂಟರ್ ಮತ್ತು ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆಯನ್ನು ಹೆಚ್ಚಿಸಲು ಮತ್ತು ಸ್ಥಾಪಿಸಲು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಹೈ ಎಂಡ್ ಸ್ಕ್ಯಾನರ್‌ಗಳ ಪೂರೈಕೆ. (call-2)
4	ವಾಹನಗಳ ಹಳೆಯ ಸ್ಕ್ರ್ಯಾಪ್ ಸಾಮಾಗ್ರಿಗಳ ಖರೀದಿ
5	ವಿಶ್ವವಿದ್ಯಾಲಯದ ಮುದ್ರಣಾಲಯದಿಂದ ಜೆಲ್ಲಿ ಕಟಿಂಗ್ಸ್ ಮತ್ತು ತ್ಯಾಜ್ಯ ಕಾಗದಗಳ ವಿಲೇವಾರಿ
6	ಬೆಂಗಳೂರು ವಿಶ್ವವಿದ್ಯಾಲಯದ ಪ್ರೆಸ್‌ಗೆ ಕನ್ಸ್ಯುಮಬೈಲ್ಸ್‌ನ ಪೂರೈಕೆ
7	ಬೆಂಗಳೂರು ವಿಶ್ವವಿದ್ಯಾಲಯದ ಪರೀಕ್ಷಾ ಭವನಕ್ಕೆ ಲೇಖನ ಸಾಮಾಗ್ರಿಗಳ ಪೂರೈಕೆ

ಸಹಿ/–, ಕುಲಸಚಿವರು

CORRIGENDUM

The advertisement released in Deccan Herald and Prajavani dated 17-2-2021 of **A.J. NANDA KUMAR S/o A.C. Jayawantharaj**, with respect to dispose of the schedule property and negotiated terms of sale with M/s. S.D.M. Ventures, Bengaluru and propose to conclude the sale transaction. In the Schedule Property, situated at Byrathi Village, New Survey No. is wrongly published as 44 instead of 144. Please read the same accordingly.

A.J. Nanda Kumar
Sd/- **PRAKASH T. HEBBAR,** Advocate
Hebbar Law Firm
No. SF-17, 2nd Floor,
Hameed Shah Complex, Cubbonpet Main Road, Bengaluru-560 002.

ನೈರುತ್ಯ ರೈಲ್ವೆ

E-TENDER NOTICE No. Y/E.29/2020-21/13
Dated: 11.02.2021

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಸಂ.	ಕಾಮಗಾರಿಗಯ ವಿವರ	ಅಂದಾಜು ಮೌಲ್ಯ
1.	ಹಿರಿಯ ಸೆಕ್ಷನ್ ಇಂಜಿನೀಯರ್, ಪಾತ್ ವೇ / ಟಿಟಿಆರ್: ಗ್ಯಾಂಗ್ ಟೂಲ್ ಕಮ್ ರೆಸ್ಟ್ ರೂಮ ಒದಗಿಸುವುದು ಹಾಗೂ ಸಬ್‌ಮರ್ಸಿಬಲ್ ಪಂಪ್ ಒದಗಿಸುವುದು–ವಿದ್ಯುತ್ ವ್ಯವಸ್ಥೆ–11 ಸಂಖ್ಯೆಗಳು	Rs. 17,72,595/-
2.	ಮೈಸೂರು ವಿಭಾಗದ ಅಶೋಕಪುರಂ ಡಿಪೋದ ಸ್ಟಾಫ್ ಕ್ವಾರ್ಟರ್ಸ್‌ಗಳ ರೀವೈರಿಂಗ್	Rs. 1,09,90,024.60/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08–03–2021, 11:00 ಗಂಟೆಯವರೆಗೆ**

ಮಾಹಿತಿಗಾಗಿ **www.ireps.gov.in** ಗೆ ಲಾಗಾನ್ ಆಗಿ

ವಿಭಾಗೀಯ ರೈಲ್ವೆ ವ್ಯವಸ್ಥಾಪಕರು (ವಿದ್ಯುತ್), ಮೈಸೂರು

PUB/266/AASP/PRB/SWR/2020-21

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಮುಂದೂಡಿಕೆ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 16–4/2020–21 ದಿನಾಂಕ: 16.02.2021

(ರಸ್ತೆ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ: **18.02.2021 ರಿಂದ 26.02.2021ರ ಸಂಜೆ 4.00 ಗಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. **(1)** ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **19.02.2021 (ಸಂಜೆ 3.00 ಗಂಟೆಗೆ ಕಛೇರಿ ವೇಳೆಯಲ್ಲಿ) (2)** ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **26.02.2021 (ಸಂಜೆ 4.00 ಗಂಟೆಯವರೆಗೆ). (3)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **01.03.2021 ಬೆಳಿಗ್ಗೆ 11.00 ಗಂಟೆಗೆ. (4)** ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಮಂಜುನಾಥ ಎಲ್.ಎನ್, ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 333/ಎಂ.ಸಿ.ಎ/2020–21

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

150 YEARS OF CELEBRATING THE MAHATMA

ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ, ಬೆಂಗಳೂರು
(ಸಂಸ್ಕೃತಿ ಸಚಿವಾಲಯ ಭಾರತ ಸರಕಾರ)
ಮಾಣಿಕ್ಯವೇಲು ಮ್ಯಾನ್‌ಷನ್, ನಂ.49,
ಅರಮನೆ ರಸ್ತೆ, ಬೆಂಗಳೂರು–52
ದೂರವಾಣಿ: 080–22342338, ಟೆಲಿಫ್ಯಾಕ್ಸ್: 080–22201027
ಇಮೇಲ್ : ngma.bengaluru@gmail.com
ಸಂ.ಎನ್‌ಜಿಎಂಎ/ಬಿಎಲ್‌ಆರ್/176/2019–20 ದಿನಾಂಕ: 28.01.2021

ಪ್ರಕಟಣೆ

ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ, ಇವರು ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ / ವರ್ಷದ ಅವಧಿಗೆ, ಇನ್ನೂ 6 ತಿಂಗಳಿಗೆ ವಿಸ್ತರಿಸಬಹುದು ಅಥವಾ ಸಾಮಾನ್ಯ ನೇಮಕಾತಿಯಾಗುವವರೆಗೆ, ಮುಂಚಿತವಾಗಿ ಅನ್ವಯಿಸುವ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಹುದ್ದೆಗಳು, ಅರ್ಹತಾ ಅವಶ್ಯಕತೆಗಳು ಮತ್ತು ನಿಬಂಧನೆಗಳು ಈ ಕೆಳಕಂಡಂತಿವೆ.

ಎ. ಆಡಳಿತಾಧಿಕಾರಿ ಯಾನೆ ಹಣಕಾಸು ನಿಬಂಧಕರು (1 ಹುದ್ದೆ)
ಬಿ. ಲೆಕ್ಕಪತ್ರಾಧಿಕಾರಿ (1 ಹುದ್ದೆ)
ಸಿ. ಭದ್ರತಾ ಅಧಿಕಾರಿ (1 ಹುದ್ದೆ)

ಹುದ್ದೆಯ ವಿವರ, ಇತ್ಯಾದಿ ವಿವರಗಳು

ರಾ.ಆ.ಕ.ಸಂ.ಜಾಲತಾಣ http://ngmaindia.gov.in/ngma_bangaluru_vacancies.asp ಇಲ್ಲಿ ಲಭ್ಯವಿರುತ್ತದೆ.

ಅರ್ಹ ಅಭ್ಯರ್ಥಿಗಳು ಪ್ರಕಟಗೊಂಡ 21 ದಿನಗಳ ಒಳಗಾಗಿ ತಾವು ನಿರ್ದೇಶಕರು ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ, #49, ಮಾನಿಕ್ಯವೇಲು ಮ್ಯಾನ್‌ಷನ್, ಅರಮನೆ ರಸ್ತೆ, ಬೆಂಗಳೂರು – 560052 ಇಲ್ಲಿಗೆ ಅರ್ಜಿ ಸಲ್ಲಿಸಬಹುದು.

ಸಹಿ/– ನಿರ್ದೇಶಕರು,
ರಾ.ಅ.ಕ.ಸಂ. ಬೆಂಗಳೂರು

DAVP-09110/11/0003/2021

3M ಇಂಡಿಯಾ ಲಿಮಿಟೆಡ್

ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L31300KA1987PLC013543
ನೋಂದಾಯಿತ ಕಛೇರಿ: ಪ್ಲಾಟ್ ಸಂ.ಗಳು 48–51, ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು–560 100
ದೂರವಾಣಿ: 080–22231414, ಫ್ಯಾಕ್ಸ್: 080–2223 1450
ಈಮೇಲ್: investorhelpdesk.in@mmm.com, ವೆಬ್‌ಸೈಟ್: www.3m.com/in

ಅಂಚೆ ಮತದಾನದ ಸೂಚನೆ

ಕಂಪನಿಗಳ ಅಧಿನಿಯಮ, 2013ರ ('ಅಧಿನಿಯಮ') ಕಲಮು 110ರ ಪ್ರಾವಿಧಾನಗಳನ್ನು ಮತ್ತು ಅನ್ವಯವಾಗುವ ಇತರ ಯಾವುದೇ ಪ್ರಾವಿಧಾನಗಳನ್ನು, ಕಾಲಕಾಲಕ್ಕೆ ತಿದ್ದಿದಂತಹ ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿ, 2014 ('ನಿಯಮಾವಳಿ'), ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸಬೇಕಾದ ಅಗತ್ಯತೆಗಳು) ನಿಬಂಧನೆಗಳು, 2015 ('ಲಿಸ್ಟಿಂಗ್ ಬಾಧ್ಯತೆಗಳು'), ಸೆಕ್ರೇಟೇರಿಯಲ್ ಸ್ಟಾಂಡರ್ಡ್ಸ್ 2 (SS-2) ಮತ್ತು ಅನ್ವಯವಾಗುವಂತಹ ಇತರೆ ಕಾನೂನುಗಳು ಮತ್ತು ವಿಧಾಯಕಗಳು (ಸದ್ಯದಲ್ಲಿ ಚಾಲ್ತಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಮರು–ಅಧಿನಿಯಮನಗಳೂ ಸೇರುತ್ತವೆ) ಜೊತೆಗೆ ಓದಿಕೊಂಡ ಪ್ರಕಾರ, ಕಂಪನಿಯು 2021 ಫೆಬ್ರವರಿ 10ನೇ ದಿನಾಂಕದ ಅಂಚೆ ಮತದಾನ ಸೂಚನೆಯಲ್ಲಿ ಹೇಳಿರುವಂತಹ ನಿರ್ಣಯಗಳ ಮೇಲೆ, ಅಂಚೆ ಮತದಾನದ (ಇ–ವೋಟಿಂಗ್) ಮೂಲಕ, ಕಂಪನಿಯ ಸದಸ್ಯರ ಅನುಮೋದನೆಯನ್ನು ಕೋರುತ್ತಿದೆ ಎಂಬುದಾಗಿ ಈ ಮೂಲಕ ಸೂಚನೆಯನ್ನು ಕೊಡಲಾಗುತ್ತಿದೆ.

ಎಲ್ಲ ಸದಸ್ಯರಿಗೂ ಈ ಮೂಲಕ ತಿಳಿಸುವುದೇನೆಂದರೆ:

1. ಸಂಬಂಧಪಟ್ಟ ಅಧಿನಿಯಮದ ಪ್ರಾವಿಧಾನಗಳು ಮತ್ತು ನಿಯಮಾವಳಿ ಅನ್ವಯ ಮತ್ತು ಪ್ರಸ್ತುತ ಕೋವಿಡ್–19 ಸಾಂಕ್ರಾಮಿಕದಿಂದ ಉದ್ಭವಿಸಿರುವ ಅಸಾಧಾರಣ ಸನ್ನಿವೇಶಗಳನ್ನು ಮತ್ತು ಸಾಮಾಜಿಕ ಅಂತರವೇ ಅಲ್ಲದೆ ಚಲನವಲನಗಳ ಮೇಲೆ ವಿಧಿಸಿರುವ ನಿರ್ಬಂಧಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (MCA) ತನ್ನ ಸಂ. 14/2020 ದಿನಾಂಕ 8 ಏಪ್ರಿಲ್ 2020, ಸುತ್ತೋಲೆ ಸಂ. 17/2020 ದಿನಾಂಕ 13 ಏಪ್ರಿಲ್ 2020 ಸುತ್ತೋಲೆಗಳನ್ನು ಸುತ್ತೋಲೆ ಸಂ. 33/2020 ದಿನಾಂಕ 28 ಸೆಪ್ಟೆಂಬರ್ 2020 ಮತ್ತು ಸುತ್ತೋಲೆ ಸಂ. 33/2020 ದಿನಾಂಕ 31 ಡಿಸೆಂಬರ್ 2020ರ ಜೊತೆ ಓದಿಕೊಂಡಂತೆ (ಒಟ್ಟಾಗಿ 'ಎಂಸಿಎ ಸುತ್ತೋಲೆಗಳು' ಎಂದು ಉಲ್ಲೇಖಿಸಲಾಗುತ್ತದೆ) ಕಂಪನಿಗಳು ಕಂಪನಿಗಳ ಅಧಿನಿಯಮದ ಪ್ರಾವಿಧಾನಗಳ ಮತ್ತು ಅವುಗಳ ಅಡಿಯಲ್ಲಿ ಮಾಡಿರುವ ನಿಯಮಗಳ ಅನ್ವಯ ಇ–ಮತದಾನದ ಮೂಲಕ ತಮ್ಮ ಸರ್ವಸದಸ್ಯರ ಸಭೆಗಳನ್ನು ಸೇರಿಸಲು/ಅಂಚೆ ಮತದಾನ ಪ್ರಕ್ರಿಯೆಯನ್ನು ನಡೆಸಲು ಅನುಮತಿಯನ್ನು ನೀಡಿವೆ. ಕಂಪನಿಗಳು ಅಂಚೆ ಮತದಾನದ ಮೂಲಕ ಯಾವುದೇ ವ್ಯವಹಾರ(ಗಳನ್ನು) ನಡೆಸುವಾಗ 2021 ಜೂನ್ 30 ಅಥವಾ ಮುಂದಿನ ಆದೇಶಗಳವರೆಗೆ, ಇವೆರಡರಲ್ಲಿ ಯಾವುದು ಮುಂಚಿತವೋ ಅಲ್ಲಿಯವರೆಗೆ, ಇ–ಮತದಾನ ಸೌಲಭ್ಯವನ್ನು ಅವಶ್ಯವಾಗಿ ಒದಗಿಸಬೇಕು ಎಂದು ಎಂಸಿಎ ಸ್ಪಷ್ಟಪಡಿಸಿದೆ; ನಿಯಮಾವಳಿಯ ನಿಯಮ 20ರಲ್ಲಿ ಹೇಳಿರುವಂತಹ ಅಗತ್ಯತೆಗಳ ಜೊತೆಗೆ ಎಂಸಿಎ ಸುತ್ತೋಲೆಗಳಲ್ಲಿ ಒದಗಿಸಿರುವ ಚೌಕಟ್ಟು, ಅವಶ್ಯವಾದ ಬದಲಾವಣೆಗಳೊಂದಿಗೆ ಅನ್ವಯವಾಗುತ್ತವೆ.
2. ಯಾವೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿ ಯಾ ಡಿಪಾಸಿಟರಿ ಪಾರ್ಟಿಸಿಪೆಂಟರು ಯಾ ಕಂಪನಿಯ ರಿಜಿಸ್ಟ್ರಾರ್ ಹಾಗೂ ಶೇರು ವರ್ಗಾವಣೆ ಏಜೆಂಟರಾದ ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಕೆಫಿನ್) ನೊಂದಿಗೆ ನೋಂದಾಯಿಸಿಕೊಂಡಿರುವರೋ ಮತ್ತು ಶೇರುಗಳ ಪಾವತಿಸಿದ ಮೌಲ್ಯವನ್ನು ಮತ್ತು ಸದಸ್ಯರ ಮತದಾನದ ಹಕ್ಕುಗಳನ್ನು ನಿರ್ಧರಿಸಲು ಅಂತಿಮ ದಿನವಾದ 2021 ಫೆಬ್ರವರಿ 12ರಂದು ಯಾವ ಸದಸ್ಯರ ಹೆಸರುಗಳು ಸದಸ್ಯರ ರಿಜಿಸ್ಟರ್/ಫಲಾನುಭವಿ ಯಜಮಾನರು/ನ್ಯಾಷನಲ್ ಸೆಕ್ಯುರಿಟಿಸ್ ಡಿಪಾಸಿಟರಿ ಲಿಮಿಟೆಡ್ (NSDL) ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (CDSL) ದಾಖಲೆಗಳಲ್ಲಿ ಇರುವುದೋ ಅಂತಹವರಿಗೆ ಕಂಪನಿಯು ಅಂಚೆ ಮತದಾನ ಸೂಚನೆಯನ್ನು ಜೊತೆಗೆ ಇ–ಮತದಾನ ಸೂಚನೆಗಳನ್ನು 2021 ಫೆಬ್ರವರಿ 17, ರಂದು ಇ–ಮೇಲ್ ಮೂಲಕ ಮಾತ್ರವೇ ಕಳುಹಿಸಿದೆ.
3. ಮೇಲೆ ಹೇಳಿರುವಂತಹ ದಾಖಲೆಗಳು ಕಂಪನಿಯ ವೆಬ್‌ಸೈಟ್ https://www.3mindia.in/3M/en_IN/company-in/about-3m/financial-facts-local/, ಕೆಫಿನ್ ವೆಬ್‌ಸೈಟ್ https://evoting.kfintech.com/ ಮತ್ತು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.nseindia.com ಗಳಲ್ಲಿಯೂ ಲಭ್ಯವಿವೆ. ಯಾರು ಅಂತಿಮ ದಿನಾಂಕದಂದು ಸದಸ್ಯರಾಗಿಲ್ಲವೋ ಅಂತಹವರು ಈ ಸೂಚನೆಯನ್ನು ಮಾಹಿತಿಗಾಗಿ ಮಾತ್ರವೇ ಎಂದು ತಿಳಿಯಬೇಕು. ಮತ್ತೂ, ಎಂಸಿಎ ಸುತ್ತೋಲೆಗಳ ಪ್ರಕಾರ ಈ ಅಂಚೆ ಮತದಾನಕ್ಕೆ, ಸದಸ್ಯರಿಗೆ ಅಂಚೆ ಮತದಾನದ ಸೂಚನೆ ಮತ್ತು ಅಂಚೆ ಮತದಾನದ ನಮೂನೆಗಳ ಭೌತಿಕ ಪ್ರತಿ ಮತ್ತು ಪ್ರೀ–ಪೇಯ್ಡ್ ಬಿಸಿನೆಸ್ ರಿಪ್ಲೈ ಲಕೋಟೆ ಗಳನ್ನು ಕಳುಹಿಸಿಲ್ಲ.
4. ಯಾವ ಸದಸ್ಯರು ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸಿಲ್ಲವೋ ಮತ್ತು ಆದಕಾರಣ ಅಂಚೆ ಮತದಾನದ ಸೂಚನೆ ಮತ್ತು ಇ–ಮತದಾನದ ಸೂಚನೆಗಳನ್ನು ಅವರಿಗೆ ಕಳುಹಿಸಲಾಗಿಲ್ಲವೋ ಅಂತಹವರು ತಮ್ಮ ಇ–ಮೇಲ್ ವಿಳಾಸ ಮತ್ತು ಮೊಬೈಲ್ ನಂಬರುಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಶೇರು ವರ್ಗಾವಣೆ ಏಜೆಂಟರಾದ ಕೆಫಿನ್ ನೊಂದಿಗೆ ತಾತ್ಕಾಲಿಕವಾಗಿ ನೋಂದಾಯಿಸಿಕೊಳ್ಳಬಹುದು. ಇದಕ್ಕಾಗಿ ಅವರು https://ris.kfintech.com/clientservices/postalballot ಮೇಲೆ ಕ್ಲಿಕ್ಕಿಸಿದರೆ ಸಾಕು. ಸದಸ್ಯರು ದಯವಿಟ್ಟು ಮಾರ್ಗದರ್ಶನಗಳನ್ನು ಅನುಸರಿಸುತ್ತ ಇ–ಮೇಲ್ ವಿಳಾಸ ಮತ್ತು ಮೊಬೈಲ್ ನಂಬರುಗಳನ್ನು ದಾಖಲಿಸಿ ಸೂಚನೆಯ ಸಾಫ್ಟ್ ಪ್ರತಿ ಮತ್ತು ಇ–ಮತದಾನದ ಬಗೆಗಿನ ಸೂಚನೆಗಳು ಜೊತೆಗೆ ಯೂಸರ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು ಪಡೆಯಬೇಕೆಂದು ವಿನಂತಿಸಿಕೊಳ್ಳುತ್ತೇವೆ. ಏನಾದರೂ ಪ್ರಶ್ನೆಗಳಿದ್ದರೆ ಈ ವಿಳಾಸಕ್ಕೆ ಬರೆಯಬಹುದು: einward.ris@kfintach.com.
5. ಕಂಪನಿಗಳ ಅಧಿನಿಯಮ, 2013ರ ಕಲಮು 108 ಮತ್ತು ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿ, 2014 ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ನಿಬಂಧನೆಗಳು, 2015ತ ನಿಬಂಧನೆ 44 ಅನ್ವಯ ಕಂಪನಿಯ ಸದಸ್ಯರಿಗೆ ಇ–ಮತದಾನದ ಸೌಲಭ್ಯವನ್ನು ಒದಗಿಸಲು ಕಂಪನಿಯು ಹರ್ಷಿಸುತ್ತಿದೆ. ಇ–ಮತದಾನ ಸೌಲಭ್ಯ ಒದಗಿಸಲು ಕಂಪನಿಯು ಕೆಫಿನ್ ಕಂಪನಿಯನ್ನು ನೇಮಕಮಾಡಿಕೊಂಡಿದೆ ಮತ್ತು ಅಂಚೆ ಮತದಾನ ಪ್ರಕ್ರಿಯೆಯನ್ನು ನ್ಯಾಯಯುತವಾಗಿ ಹಾಗೂ ಪಾರದರ್ಶಕವಾಗಿ ನಡೆಸುವ ಸಲುವಾಗಿ ಶ್ರೀ ವಿಜಯಕೃಷ್ಣ ಕೆ.ಟಿ., ಕಂಪನಿ ಸೆಕ್ರೆಟರಿ, ಇವರನ್ನು ಸೂಕ್ಷ್ಮ ಪರಿಶೀಲಕರನ್ನಾಗಿ ನೇಮಿಸಿಕೊಂಡಿದೆ.
6. ಸದಸ್ಯರು ಇ–ಮತದಾನ ಸೌಲಭ್ಯದ ಮೂಲಕ ತಮ್ಮ ಮತದಾನದ ಹಕ್ಕುಗಳನ್ನು ಚಲಾಯಿಸಬಹುದು. ಇ–ಮತದಾನದ ಪ್ರಕ್ರಿಯೆಯ ವಿವರಗಳನ್ನು ಅಂಚೆ ಮತದಾನದ ಸೂಚನೆಯಲ್ಲಿ ನೀಡಲಾಗಿದೆ. ಮತದಾನವು ಇ–ಮತದಾನದ ಮೂಲಕ ಮಂಗಳವಾರ, 2021 ಫೆಬ್ರವರಿ 23ರಂದು ಬೆಳಗ್ಗೆ 09.00ಕ್ಕೆ (ಭಾ.ಕಾ.) ಪ್ರಾರಂಭವಾಗಿ ಬುಧವಾರ, 2021 ಫೆಬ್ರವರಿ 24ರಂದು ಸಂಜೆ 05.00ಕ್ಕೆ (ಭಾ.ಕಾ.) ಮುಕ್ತಾಯಗೊಳ್ಳುತ್ತದೆ. ಸದಸ್ಯರು ಈ ಅವಧಿಯಲ್ಲೇ ತಮ್ಮ ಮತಗಳನ್ನು ಚಲಾಯಿಸಬೇಕೆಂದು ಕೋರುತ್ತೇವೆ. ಮೇಲೆ ಹೇಳಿದ ದಿನಾಂಕ ಮತ್ತು ಸಮಯದ ನಂತರ ಕೆಫಿನ್ ಇ–ಮತದಾನ ಸೌಲಭ್ಯವನ್ನು ಸ್ಥಗಿತಗೊಳಿಸುತ್ತದೆ. ಬಳಿಕ ಸದಸ್ಯರು ಮತ ಚಲಾಯಿಸಲು ಸಾಧ್ಯವಿಲ್ಲ. ಸದಸ್ಯರು ಒಮ್ಮೆ ಮತವನ್ನು ದೃಢಪಡಿಸಿದ ನಂತರ ಮತ್ತೆ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
7. ಅಂಚೆ ಮತದಾನದ ಫಲಿತಾಂಶಗಳನ್ನು ಶುಕ್ರವಾರ, 2021 ಮಾರ್ಚ್ 26ರಂದು ಅಥವಾ ಅದಕ್ಕೆ ಮೊದಲೇ ಪ್ರಕಟಿಸಲಾಗುವುದು. ಅಗತ್ಯವಿರುವ ಬಹುಮತದೊಂದಿಗೆ ನಿರ್ಣಯವು ಅಂಗೀಕಾರವಾದರೆ ಅದು, ಕಂಪನಿಯು ಇ–ಮತದಾನಕ್ಕಾಗಿ ನಿಗದಿಪಡಿಸಿರುವ ಕೊನೆಯ ದಿನಾಂಕ ಎಂದರೆ ಬುಧವಾರ, 2021 ಮಾರ್ಚ್ 24ರಂದು ಅಂಗೀಕಾರವಾಗಿದೆ ಎಂದು ಪರಿಗಣಿಸಲಾಗುವುದು. ಅಂಚೆ ಮತದಾನದ ಫಲಿತಾಂಶಗಳು ಮತ್ತು ಸೂಕ್ಷ್ಮ ಪರಿಶೀಲಕರ ವರದಿಗಳನ್ನು ಕಂಪನಿಯ ವೆಬ್‌ಸೈಟ್ https://www.3mindia.in/3M/en_IN/company-in/about-3m/financial-facts-local/ ಮತ್ತು ಕೆಫಿನ್ ವೆಬ್‌ಸೈಟ್ https://evoting.kfintech.com/ ಗಳಲ್ಲಿ ಹಾಕಲಾಗುವುದು. ಫಲಿತಾಂಶಗಳನ್ನು ಕಂಪನಿಯ ಇಕ್ವಿಟಿ ಶೇರುಗಳು ಲಿಸ್ಟ್ ಆಗಿರುವ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ಗಳಿಗೂ ತಿಳಿಸಲಾಗುವುದು.
8. ಏನಾದರೂ ಸಂದೇಹಗಳಿದ್ದರೆ https://evoting.karvy.com ನ ಡೌನ್‌ಲೋಡ್ ವಿಭಾಗದಲ್ಲಿರುವ 'ಶೇರುದಾರರ ಸಾಮಾನ್ಯ ಪ್ರಶ್ನೆಗಳು' (FAQ) ಮತ್ತು ಶೇರುದಾರರಿಗಾಗಿ ಇ–ವೋಟಿಂಗ್ ಬಳಕೆದಾರರ ಕೈಪಿಡಿಗಳನ್ನು ನೋಡಬಹುದು ಅಥವಾ ಕೆಳಗೆ ಹೆಸರಿಸಿರುವ ಕಂಪನಿಯ/ಅದರ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರ ಅಧಿಕಾರಿಯನ್ನು ಸಂಪರ್ಕಿಸಬಹುದು:

ವಿವರಗಳು	ಕೇಫಿನ್ ಟೆಕ್ನಾಲಾಜೀಸ್ ಪ್ರೈವೇಟ್ ಲಿಮಿಟೆಡ್	3M ಇಂಡಿಯಾ ಲಿಮಿಟೆಡ್
ವಿಳಾಸ	ಸೆಲೆನಿಯಮ್ ಟವರ್, ಬಿ, ಪ್ಲಾಟ್ 31–32, ಗಾಚಿಬೌಲಿ, ಫೈನಾನ್ಸಿಯಲ್ ಡಿಸ್ಟ್ರಿಕ್ಟ್, ನಾನಕ್ರಮಗುಡ, ಹೈದರಬಾದ್ - 500 032	ಪ್ಲಾಟ್ ಸಂ.ಗಳು 48–51, ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು–560 100
ಹೆಸರು ಮತ್ತು ಹುದ್ದೆ	ಶ್ರೀ ರಾಜೀವ್ ಕುಮಾರ್ ಡೆಪ್ಯೂಟಿ ಮ್ಯಾನೇಜರ್–ಕಾರ್ಪೊರೇಟ್ ರಿಜಿಸ್ಟ್ರಿ	ಶ್ರೀ ವಿ. ಶ್ರೀನಿವಾಸನ್ ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್
ದೂರವಾಣಿ	040-6716 1524	080-22231414
ಇ–ಮೇಲ್	rajeev.kr@kfintech.com	investorhelpdesk.in@mmm.com

ಸ್ಥಳ: ಬೆಂಗಳೂರು
ದಿನಾಂಕ: ಫೆಬ್ರವರಿ 17, 2021

3M ಇಂಡಿಯಾ ಲಿಮಿಟೆಡ್‌ನ ಪರವಾಗಿ
ವಿ. ಶ್ರೀನಿವಾಸನ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್

ರಾಜರಾಜೇಶ್ವರಿ ನಗರದಲ್ಲಿರುವ ಕೆಂಚೇನಹಳ್ಳಿ ಕೆರೆ ಸುತ್ತ ರಾಶಿ ರಾಶಿ ತ್ಯಾಜ್ಯ (ಎಡಚಿತ್ರ), ಒಳಚರಂಡಿ ಕೊಳಚೆ, ಜಲಕಳೆ ತುಂಬಿಕೊಂಡಿರುವ ಕೆರೆಯ ದುಃಸ್ಥಿತಿ

ರಾಜರಾಜೇಶ್ವರಿ ನಗರ: ಶತಮಾನದ ಇತಿಹಾಸ ಇರುವ ಕೆರೆ ಬಗ್ಗೆ ರಾಜಕಾರಣಿ, ಅಧಿಕಾರಿಗಳ ನಿರ್ಲಕ್ಷ್ಯ

ಕೆಂಚೇನಹಳ್ಳಿ ಕೆರೆ ಇದೀಗ ಕೊಳಚೆ ತಾಣ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜರಾಜೇಶ್ವರಿ ನಗರದಲ್ಲಿ ಒಂದು ಶತಮಾನಕ್ಕೂ ಹಿಂದೆ ನಿರ್ಮಾಣವಾಗಿರುವ ಕೆಂಚೇನಹಳ್ಳಿ ಕೆರೆ ಇಂದು ಕೊಳಚೆ, ಕಟ್ಟಡ ತ್ಯಾಜ್ಯ ತುಂಬಿಕೊಂಡಿದೆ. ಒಂದು ಕಾಲದಲ್ಲಿ ಕುಡಿಯಲು ನೀರು ಕೊಡುತ್ತಿದ್ದ ಕೆರೆ ಇದೀಗ ಒಳಚರಂಡಿ ನೀರಿನ ತಾಣವಾಗಿದೆ.

ಕೆಂಚೇನಹಳ್ಳಿ ಕೆರೆ ಸುತ್ತಲೂ ರಾಜರಾಜೇಶ್ವರಿ ದೇವಸ್ಥಾನ ಹಾಗೂ ಹಲವು ಖಾಸಗಿ ಬಡಾವಣೆಗಳಿವೆ. ಸ್ಥಳೀಯರಿಗೆ ಪರಿಸರಯುಕ್ತ ಪ್ರದೇಶವಾಗಬೇಕಿದ್ದ ಕೆರೆ, ಕಟ್ಟಡ ತ್ಯಾಜ್ಯ ಸೇರಿದಂತೆ ಎಲ್ಲ ರೀತಿಯ ಕೊಳಕಿನ ಗುಂಡಿಯಾಗಿದೆ. ಕೊಳಕಿನಿಂದ ದುರ್ವಾಸನೆ ಬೀರುತ್ತಿದ್ದು, ಹಂದಿ ಹಾಗೂ ಸೊಳ್ಳೆಗಳ ಕಾಟ ಅತಿಯಾಗಿದೆ ಎಂದು ಸ್ಥಳೀಯರು ದೂರುತ್ತಾರೆ.

‘ಕೆರೆಯನ್ನು ಸ್ವಚ್ಛಗೊಳಿಸಿ, ಕೊಳಚೆ ನೀರು ಬರದಂತೆ ತಡೆದು ಜನರಿಗೆ ನಡಿಗೆ ಪಥ ಮಾಡಿದರೆ ಅತ್ಯಂತ ಪರಿಸರಯುಕ್ತ ಪ್ರದೇಶವಾಗುತ್ತದೆ. ಮಳೆ ನೀರು ನಿಲ್ಲುವಂತೆ ಮಾಡಿದರೆ ಅಂತರ್ಜಲ ಪುನಶ್ಚೇತನಗೊಳ್ಳುತ್ತದೆ. ಸರ್ಕಾರ ಕೆರೆಗಳನ್ನು ಉಳಿಸಿಕೊಳ್ಳಲು ಹಲವು ಯೋಜನೆಗಳನ್ನು ಮಾಡುತ್ತಿದೆ. ಇಂತಹ ಪ್ರಮುಖ ಕೆರೆಯನ್ನು ಉಳಿಸಿಕೊಳ್ಳುವತ್ತ ಸ್ಥಳೀಯ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಹೆಚ್ಚಿನ ಆಸಕ್ತಿ ವಹಿಸಬೇಕು’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶ್ರೀನಿವಾಸಗೌಡ ಅಭಿಪ್ರಾಯಪಟ್ಟರು.



ಕೆಂಚೇನಹಳ್ಳಿ ಕೆರೆ ಕೊಳಚೆಯಿಂದ ತುಂಬಿಹೋಗಿದ್ದು, ಅದನ್ನು ಅಭಿವೃದ್ಧಿ ಪಡಿಸಬೇಕು. ಪರಿಸರ ಉಳಿಸುವ ನಿಟ್ಟಿನಲ್ಲಿ ಎಲ್ಲರೂ ಶ್ರಮಿಸಬೇಕಿದೆ

ಶ್ರೀನಿವಾಸಗೌಡ
ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ರಾಜರಾಜೇಶ್ವರಿ ದೇವಸ್ಥಾನದ ಹಿಂಭಾಗವೇ ಕೆಂಚೇನಹಳ್ಳಿ ಕೆರೆ ಇದ್ದು, ಇದನ್ನು ಅಭಿವೃದ್ಧಿ ಪಡಿಸಿದರೆ ಪ್ರವಾಸಿ ತಾಣವೇ ಆಗಲಿದೆ

ಟಿ. ತಿಮ್ಮೇಗೌಡ
ಐಎಎಸ್ ನಿವೃತ್ತ ಅಧಿಕಾರಿ

ನಾವು ಚಿಕ್ಕವಯಸ್ಸಿನಲ್ಲಿ ಕೆಂಚೇನಹಳ್ಳಿ ಕೆರೆಯಲ್ಲಿ ಈಜಾಡುತ್ತಿದ್ದೆವು. ಆದರೆ ಇದೀಗ ಅದರತ್ತ ಹೋಗಲೂ ಅಸಹ್ಯವಾಗುವ ಸ್ಥಿತಿಯಲ್ಲಿದೆ

ಪಟ್ಟಣಗೆರೆ ಕೆ. ಜಯಣ್ಣ
ಸ್ಥಳೀಯ ಮುಖಂಡ

‘ಕೆರೆಯ ಹೂಳು ತೆಗೆದು ಹೆಚ್ಚಿನ ಮಳೆ ನೀರನ್ನು ನಿಲ್ಲಿಸಬೇಕಿದೆ. ಪರಿಸರ ರಕ್ಷಣೆಯ ಜೊತೆಗೆ, ಸ್ಥಳೀಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅಭಿವೃದ್ಧಿ ಮಾಡಬೇಕಿದೆ’ ಎಂದು ನಿವೃತ್ತ ಐಎಎಸ್ ಅಧಿಕಾರಿ ಟಿ. ತಿಮ್ಮೇಗೌಡ ಹೇಳಿದರು.

ಅಧಿಕಾರಿಗಳ ನಿರ್ಲಕ್ಷ್ಯ: ‘ಪಟ್ಟಣಗೆರೆ ಹಾಗೂ ಕೆಂಚೇನಹಳ್ಳಿಗೆ ಸೇರಿರುವ ಕೆಂಚೇನಹಳ್ಳಿ ಕೆರೆಯಲ್ಲಿ ನಾವು ಚಿಕ್ಕ ವಯಸ್ಸಿನಲ್ಲಿ ಈಜಾಡಿ, ಆಟವಾಡುತ್ತಿದ್ದೆವು. ಹಲಗೆವಡೇರಹಳ್ಳಿ ಕೆರೆ ತುಂಬಿದ ನಂತರ ಈ ಕೆರೆ ತುಂಬುತ್ತಿತ್ತು. ಇದೀಗ ಎಲ್ಲ ಒಳಚರಂಡಿ ನೀರು ಬರುತ್ತಿದೆ. ಕೊಳಕು ತುಂಬಿಕೊಂಡಿದೆ. ಬೆಂಗಳೂರಿನಲ್ಲಿ ಎಲ್ಲ ಕೆರೆಗಳ ಅಭಿವೃದ್ಧಿ ಆಗುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ, ಎಷ್ಟು ಹೇಳಿದರೂ ಬಿಬಿಎಂಪಿ ಅಧಿಕಾರಿಗಳು ಈ ಕೆರೆಯತ್ತ ಸುಳಿದೇ ಇಲ್ಲ. ಎಲ್ಲರೂ ನಿರ್ಲಕ್ಷ್ಯ ತಳೆದಿದ್ದಾರೆ’ ಎಂದು ಸ್ಥಳೀಯ ಮುಖಂಡ ಪಟ್ಟಣಗೆರೆ ಜಯಣ್ಣ ದೂರಿದರು.

ಶೇ 1ರಷ್ಟು ಒತ್ತುವರಿ: ರಾಜರಾಜೇಶ್ವರಿ ದೇವಸ್ಥಾನದ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಇರುವ ಕೆಂಚೇನಹಳ್ಳಿ ಕೆರೆ 1903ರಲ್ಲಿ ನಿರ್ಮಾಣವಾಗಿದೆ. ಕೆಂಚೇನಹಳ್ಳಿ ಸರ್ವೆ ನಂ.33ರಲ್ಲಿ 3 ಎಕರೆ 39 ಗುಂಟೆ ಹಾಗೂ ಪಟ್ಟಣಗೆರೆ ಸರ್ವೆ ನಂ.43ರಲ್ಲಿ 31 ಗುಂಟೆ ಸೇರಿದಂತೆ ಒಟ್ಟು 4 ಎಕರೆ 30 ಗುಂಟೆ ವಿಸ್ತೀರ್ಣದಲ್ಲಿದೆ. ಶೇ 1ರಷ್ಟು ಅಂದರೆ 2 ಗುಂಟೆ ಒತ್ತುವರಿಯಾಗಿದೆ ಎಂದು ಅರಣ್ಯ ಇಲಾಖೆಯ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ) 2016ರಲ್ಲೇ ವರದಿ ನೀಡಿದೆ.

ಸುದ್ದಿ 2 ನಿಮಿಷ

ಪ್ರಯಾಣ ನಿರ್ಬಂಧ ಪ್ರಶ್ನಿಸಿದ್ದ ಬಿ.ಆರ್.ಶೆಟ್ಟಿ ಅರ್ಜಿ ವಜಾ

ಬೆಂಗಳೂರು: ‘ಈ ದೇಶದ ಪ್ರತಿ ಪ್ರಜೆಗೂ ಎಲ್ಲಿಗೆ ಬೇಕಾದರೂ ಪ್ರಯಾಣಿಸುವ ಹಕ್ಕಿದೆ. ಅದೇ ರೀತಿ ಸಾರ್ವಜನಿಕ ಹಣ ಪಡೆದ ಬಳಿಕ ಅದನ್ನು ಮರುಪಾವತಿಸುವುದು ಪವಿತ್ರ ಕರ್ತವ್ಯ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಪ್ರಯಾಣ ನಿರ್ಬಂಧಿಸಿ ಪಂಜಾಬ್ ನ್ಯಾಷನಲ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ ಹೊರಡಿಸಿರುವ ಲುಕ್‌ಔಟ್ ಸುತ್ತೋಲೆ ಪ್ರಶ್ನಿಸಿ ಉದ್ಯಮಿ ಬಿ.ಆರ್.ಶೆಟ್ಟಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಅವರಿದ್ದ ಪೀಠ ವಜಾಗೊಳಿಸಿತು.

‘₹2,800 ಕೋಟಿ ಮರುಪಾವತಿಸಲು ಬಿ.ಆರ್. ಶೆಟ್ಟಿ ಹೊಣೆಗಾರರು ಎಂದು ಬ್ಯಾಂಕ್‌ಗಳು ಹೇಳುತ್ತಿವೆ. ಈ ಹಣ ದೇಶ ಮತ್ತು ಠೇವಣಿದಾರರದು. ಅದನ್ನು ವಿದೇಶದಲ್ಲಿ ವ್ಯವಹಾರಕ್ಕೆ ಬಳಸಲಾಗಿದೆ ಎಂಬ ಅಂಶವನ್ನು ಕಡೆಗಣಿಸಲಾಗದು’ ಎಂದು ಪೀಠ ಹೇಳಿತು.

2020ರ ಫೆಬ್ರುವರಿಯಲ್ಲಿ ಶೆಟ್ಟಿ ಭಾರತಕ್ಕೆ ಬಂದಿದ್ದರು. ನವೆಂಬರ್ 14ರಂದು ಅಬುದಾಬಿಗೆ ಪ್ರಯಾಣಿಸಬೇಕಿತ್ತು. ಆದರೆ, ವಿಮಾನ ಹತ್ತಲು ವಲಸೆ ಅಧಿಕಾರಿಗಳು ಅನುಮತಿ ನಿರಾಕರಿಸಿದ್ದರು.

‘ಶೆಟ್ಟಿ ಅವರು ಸಾಲಕ್ಕೆ ಜಾಮೀನುದಾರರು ಅಷ್ಟೇ. ಪ್ರಯಾಣ ಮಾಡುವುದು ಅವರ ಮೂಲಭೂತ ಹಕ್ಕು. ಯಾವುದೇ ಸೂಚನೆ ಇಲ್ಲದೆ ಲುಕ್‌ಔಟ್ ಸುತ್ತೋಲೆ ಹೊರಡಿಸುವುದು ಕಾನೂನುಬಾಹಿರ ಮತ್ತು ಸಂವಿಧಾನದ 14, 19 ಮತ್ತು 21ನೇ ವಿಧಿಯ ಉಲ್ಲಂಘನೆ’ ಎಂದು ಶೆಟ್ಟಿ ಪರ ವಕೀಲರು ವಾದಿಸಿದರು.

‘ಜಾಮೀನುದಾರ ಆದರೂ ಸಾಲ ಮರುಪಾವತಿಸಲು ಅವರು ಸಮಾನ ಜವಾಬ್ದಾರರು’ ಎಂದು ಪೀಠ ಅಭಿಪ್ರಾಯಪಟ್ಟಿತು.

ಐಐಎಫ್‌ಟಿಯಿಂದ ಕಾರ್ಯಾಗಾರ

ಬೆಂಗಳೂರು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿಯು (ಐಐಎಫ್‌ಟಿ) ಸ್ಪರ್ಶ ಟ್ರಸ್ಟ್‌ನ ದೀನ–ದಲಿತ ವಿದ್ಯಾರ್ಥಿಗಳ ಸಬಲೀಕರಣಕ್ಕಾಗಿ ಇತ್ತೀಚೆಗೆ ಕಾರ್ಯಾಗಾರ ಹಮ್ಮಿಕೊಂಡಿತ್ತು.

ಟ್ರಸ್ಟ್‌ನ ಬೋಧಕ ವರ್ಗ ಮತ್ತು ಸ್ವಯಂ ಸೇವಕರ ಸಹಾಯದದಿಂದ ಈ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಟ್ರಸ್ಟ್‌ನ 70 ವಿದ್ಯಾರ್ಥಿಗಳಿಗೆ ವಾಲ್ ಹ್ಯಾಂಗಿಂಗ್‌ಗಳನ್ನು ತಯಾರಿಸಲು ಸ್ಕ್ರೀನ್ ಪ್ರಿಂಟಿಂಗ್ ಮತ್ತು ಸ್ಟೆನ್ಸಿಲ್ ಪ್ರಿಂಟಿಂಗ್ ಕುರಿತು ತರಬೇತಿ ನೀಡಲಾಯಿತು. ಇದರಿಂದ ವಿದ್ಯಾರ್ಥಿಗಳು ಸ್ವ ಉದ್ಯೋಗ ಕೈಗೊಳ್ಳಲು ಸಾಧ್ಯವಾಗಲಿದೆ.

ಐಐಎಫ್‌ಟಿಯ ಸಹಾಯಕ ಪ್ರಾಧ್ಯಾಪಕಿ ಶ್ರೀಲಕ್ಷ್ಮಿ ನೇತೃತ್ವದಲ್ಲಿ ಸಂಸ್ಥೆಯ ಸಿಬ್ಬಂದಿ ವಿದ್ಯಾರ್ಥಿಗಳಿಗೆ ಈ ತರಬೇತಿ ನೀಡಿದರು.

ಹೊಸ ಅನ್ವೇಷಣೆಗಳ ಮೂಲಕ ಸಾಮಾಜಿಕ ಪ್ರಗತಿ ಸಾಧಿಸುವ ಉದ್ದೇಶದಿಂದ ಬಿ. ವೇದಗಿರಿಯವರು 2001ರಲ್ಲಿ ಈ ಐಐಎಫ್‌ಟಿ ಸ್ಥಾಪಿಸಿದ್ದರು. ಸಂಸ್ಥೆಯು ವಸ್ತ್ರವಿನ್ಯಾಸ ಮತ್ತು ಫ್ಯಾಷನ್ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವುದಲ್ಲದೆ, ಅಂದಿನಿಂದಲೂ ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ.

ಕೆಸಿಆರ್ ಜನ್ಮದಿನಕ್ಕೆ ಯಲ್ಲಮ್ಮ ದೇವಿಗೆ 2.5 ಕೆ.ಜಿ ಚಿನ್ನದ ಸೀರೆ

ಹೈದರಾಬಾದ್(ಪಿಟಿಐ): ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರ 68ನೇ ಜನ್ಮ ದಿನಾಚರಣೆಯಂದು ಬುಧವಾರ ಯಲ್ಲಮ್ಮ ದೇವಿಗೆ 2.5 ಕೆ.ಜಿ ಚಿನ್ನದ ಸೀರೆ ಅರ್ಪಿಸಲಾಯಿತು.

ಕೆಸಿಆರ್ ಅವರ ಇಬ್ಬರು ಅಭಿಮಾನಿಗಳು ಹೈದರಾಬಾದ್‌ನ ಬಾಲ್ಕಂಪೇಟೆಯ ದೇವಸ್ಥಾನದಲ್ಲಿ ಯಲ್ಲಮ್ಮ ದೇವಿಗೆ 2.5 ಕೆ.ಜಿ ಚಿನ್ನದಿಂದ ತಯಾರಿಸಿದ ಸೀರೆಯನ್ನು ಅರ್ಪಿಸಿದರು.

ರಾಜ್ಯ ಪಶುಸಂಗೋಪನಾ ಸಚಿವ ಟಿ.ಶ್ರೀನಿವಾಸ್ ಯಾದವ್ ಅವರು ಸೀರೆಯನ್ನು ದೇವಾಲಯದ ಅಧಿಕಾರಿಗಳಿಗೆ ಹಸ್ತಾಂತರಿಸಿದರು.

ಜನ್ಮ ದಿನಾಚರಣೆ ಅಂಗವಾಗಿ ಬೃಹತ್ ಸಸಿ ನೆಡುವ ಕಾರ್ಯಕ್ರಮ ಹಾಗೂ ರಕ್ತದಾನ ಶಿಬಿರಗಳು ನಡೆದವು.

ರಾವ್ ಅವರ ಆಪ್ತ ಸಂಬಂಧಿ ಟಿಆರ್‌ಎಸ್ ಸಂಸದ ಜೆ.ಸಂತೋಷ್ ಕುಮಾರ್ ಅವರು ಕೈಗೊಂಡಿರುವ ‘ಗ್ರೀನ್ ಇಂಡಿಯಾ ಚಾಲೆಂಜ್’ ಅಂಗವಾಗಿ ‘ಕೋಟಿ ವೃಕ್ಷಾರ್ಚನ‘ (ಒಂದು ಕೋಟಿ ಸಸಿಗಳನ್ನು ನೆಡುವುದು) ಭಾಗವಾಗಿ ಗಿಡ ನೆಡುವ ಕಾರ್ಯಕ್ರಮ ನಡೆಸಲಾಯಿತು. ಸಂತೋಷ್ ಕುಮಾರ್ ಅವರ ಕೋರಿಕೆಯ ಮೇರೆಗೆ ರಾವ್ ಅವರೇ 'ರುದ್ರಾಕ್ಷ' ಸಸಿ ನೆಟ್ಟಿದ್ದಾರೆ. ರಾಜ್ಯದಲ್ಲಿ ಒಂದು ಕೋಟಿಗೂ ಹೆಚ್ಚು ಸಸಿಗಳನ್ನು ನಡೆಲಾಗಿದೆ ಎಂದು ಸಂತೋಷ್ ಕುಮಾರ್ ತಿಳಿಸಿದ್ದಾರೆ.

ಮಾಧ್ಯಮ ಕಾರ್ಯಾಗಾರದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳ ಅನಿಸಿಕೆ

ಕೋವಿಡ್ ಲಸಿಕೆ ಅಭಿಯಾನಕ್ಕೆ ‘ವದಂತಿ’ಗಳೇ ಅಡ್ಡಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕೋವಿಡ್ ಲಸಿಕೆ ಪಡೆಯಲು ಆರೋಗ್ಯ ಕಾರ್ಯಕರ್ತರು ಹಿಂದೇಟು ಹಾಕಲು ವದಂತಿಗಳೇ ಕಾರಣ. ಲಸಿಕೆ ಕುರಿತಂತೆ ವಿಶ್ವಾಸ ಮೂಡಿಸಲು ಮಾಧ್ಯಮದವರು ಪಾರದರ್ಶಕವಾಗಿ, ಸರಿಯಾದ ಸುದ್ದಿಯನ್ನು ಜನರಿಗೆ ತಲುಪಿಸಿಸಬೇಕು. ಆಗ ಮಾತ್ರ ಈ ಅಭಿಯಾನ ಯಶಸ್ಸು ಕಾಣಲು ಸಾಧ್ಯ’ ಎಂದು ಕೋವಿಡ್ ಲಸಿಕೆ ಅಭಿಯಾನದ ನಿರ್ದೇಶಕಿ ಡಾ. ಅರುಂಧತಿ ಚಂದ್ರಶೇಖರ್ ಹೇಳಿದರು.

ಆರೋಗ್ಯ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದಲ್ಲಿ ಕೋವಿಡ್ ಲಸಿಕೆ ಅಭಿಯಾನದ ಕುರಿತು ಬುಧವಾರ ನಡೆದ ರಾಜ್ಯಮಟ್ಟದ ಮಾಧ್ಯಮ ಕಾರ್ಯಾಗಾರದಲ್ಲಿ ಮಾತಾನಾಡಿದ ಅವರು, ‘ಕೋವಿಡ್ ಲಸಿಕಾ ಅಭಿಯಾನ ಆರಂಭವಾಗಿ ಒಂದು ತಿಂಗಳಾಗಿದೆ. ಆರಂಭದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದರೂ ನಂತರದ ದಿನಗಳಲ್ಲಿ ಲಸಿಕೆ ಹಾಕಿಸಿಕೊಳ್ಳಲು ಬರುವವರ ಪ್ರಮಾಣ ಕಡಿಮೆಯಾಯಿತು. ಈ ಹಂತದಲ್ಲಿ ಶೇ 80ರಿಂದ 90ರಲ್ಲಿ ಇರಬೇಕಿತ್ತು. ಆದರೆ, ಈ ಪ್ರಮಾಣ ಶೇ 50ರಷ್ಟು ಮಾತ್ರವಿದೆ’ ಎಂದರು.

ಕಾರ್ಯಾಗಾರದಲ್ಲಿ ಡಾ.ಕೆ.ವಿ. ತ್ರಿಲೋಕಚಂದ್ರ, ಡಾ. ಅರುಂಧತಿ ಚಂದ್ರಶೇಖರ್, ಡಾ. ರಜನಿ ಇದ್ದರು

ಲಸಿಕೆ: ಹಿಂಜರಿಕೆಗೆ ಕಾರಣಗಳೇನು?

- ಲಸಿಕೆ ಸುರಕ್ಷಿತವಿಲ್ಲ ಎನ್ನುವ ಭಾವನೆ, ನಾನಾ ವದಂತಿ
- ಮಹಿಳೆಯರಲ್ಲಿ ಲಸಿಕೆ ಪಡೆದರೆ ಗರ್ಭಧಾರಣೆಗೆ ಕಷ್ಟವಾಗಬಹುದೆಂಬ ಆತಂಕ
- ಮದ್ಯ ಸೇವಿಸುವವರಿಗೆ ಮುಂದೆ ಕಷ್ಟ ಆಗಬಹುದೆಂಬ ಭೀತಿ
- ವೈದ್ಯಕೀಯ ಹಾಗೂ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ಲಸಿಕೆ ಪಡೆದರೆ, ತೊಂದರೆಯಾಗಿ ಪರೀಕ್ಷೆ ತಪ್ಪಬಹುದೆಂಬ ಭಯ
- ಕೆಲವರಿಗೆ ಎರಡನೇ ಡೋಸ್ ತಪ್ಪಬಹುದೆಂಬ ಸಂದೇಹ

‘ಯಾವ ಕಾರಣಕ್ಕೆ ಈ ರೀತಿ ಹಿಂಜರಿಯುತ್ತಿದ್ದಾರೆ ಎಂಬುದರ ಕುರಿತು ಸಾಕಷ್ಟು ಸಭೆಗಳನ್ನು ನಡೆಸಲಾಗಿದೆ. ಕೋವಿಡ್ ಹೆಚ್ಚು ಇದ್ದ ಸಮಯದಲ್ಲಿ ಲಸಿಕೆ ಯಾವಾಗ ಬರಬಹುದು ಎಂದು ಜನ ಅಂದುಕೊಳ್ಳುತ್ತಿದ್ದರು. ಲಸಿಕೆ ಬಂದ ನಂತರ ಪಡೆದುಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದ ಅವರು, ‘ಮಾಧ್ಯಮದವರು ನಕಾರಾತ್ಮಕ ಸುದ್ದಿಗಳಿಗೆ ಆದ್ಯತೆ ನೀಡದೆ, ಆರೋಗ್ಯ ಇಲಾಖೆ ನೀಡುವ ಸುದ್ದಿಗೆ ಪ್ರಾಮುಖ್ಯತೆ ನೀಡಬೇಕು’ ಎಂದು ಮನವಿ ಮಾಡಿದರು.

ಆರೋಗ್ಯ ಇಲಾಖೆಯ ಆಯುಕ್ತ ಡಾ. ಕೆ.ವಿ. ತ್ರಿಲೋಕಚಂದ್ರ ಮಾತನಾಡಿ, ‘ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ಹಲವು ವಂದಂತಿಗಳು ಹರಡುತ್ತಿದ್ದು, ಇದರ ಪ್ರಾಮುಖ್ಯತೆ ಹಾಗೂ ಸುರಕ್ಷತೆಯ ಬಗ್ಗೆ ಮಾಧ್ಯಮದವರು ಜನರಿಗೆ ಅರಿವು ಮೂಡಿಸಬೇಕು’ ಎಂದು ಮನವಿ ಮಾಡಿದರು.

‘ಮೊದಲ ಲಸಿಕಾ ಅಭಿಯಾನಕ್ಕೆ ಫೆ. 20ರಂದು ಕೊನೆ ದಿನ. ಅಂದು ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆ ಸಭೆ ನಡೆಯಲಿದೆ’ ಎಂದೂ ಹೇಳಿದರು.

ಲಸಿಕೆ ಸಂಬಂಧ ಇರುವ ಊಹಾಪೋಹಗಳು, ಯಾರಿಗೆ ಲಸಿಕೆ ನೀಡಲಾಗುತ್ತದೆ, ಯಾರಿಗೆ ಲಸಿಕೆ ಸುರಕ್ಷಿತ ಮುಂತಾದ ವಿಷಯಗಳ ಕುರಿತು ಸಂವಾದ ನಡೆಯಿತು.

ಲಸಿಕಾ ವಿಭಾಗದ ಉಪನಿರ್ದೇಶಕಿ ಡಾ. ರಜನಿ ಸ್ವಾಗತಿಸಿದರು. ಆರೋಗ್ಯ ಇಲಾಖೆ ನಿರ್ದೇಶಕ ಓಂ ಪ್ರಕಾಶ ಪಾಟೀಲ, ತಾಂತ್ರಿಕ ಸಲಹಾ ಸಮಿಯ ಸದಸ್ಯ ಡಾ. ರವಿ, ಡಾ. ಸುದರ್ಶನ್ ಇದ್ದರು.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ



‘ತಂಬಾಕು ಉತ್ಪನ್ನ ಮಾರಾಟಕ್ಕೆ ಪರವಾನಗಿ ಕಡ್ಡಾಯವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳಿಗೆ ಅಥವಾ ಅಪ್ರಾಪ್ತರಿಗೆ ತಂಬಾಕು ಉತ್ಪನ್ನಗಳು ಕೈಗೆಟುಕದಂತೆ ಮಾಡಲು ಕರ್ನಾಟಕದಲ್ಲಿ ತಂಬಾಕು ಮಾರಾಟಕ್ಕೆ ಮಾರಾಟಗಾರರ ಪರವಾನಗಿ ಕಡ್ಡಾಯ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಬೇಕು ಎಂದು ತಂಬಾಕು ಮುಕ್ತ ಕರ್ನಾಟಕ ಒಕ್ಕೂಟ ಒತ್ತಾಯಿಸಿದೆ.

‘ದೇಶದಲ್ಲಿ ಶೇ 14.6ಕ್ಕೂ ಅಧಿಕ ಅಪ್ರಾಪ್ತರು ಬೇರೆ ಬೇರೆ ವಿಧದಲ್ಲಿ ತಂಬಾಕು ಬಳಸುತ್ತಿರುವುದು ಕಂಡು ಬಂದಿದೆ. ಸಿಗರೇಟ್, ಬೀಡಿ, ಗುಟ್ಕಾ ಸೇರಿದಂತೆ ಎಲ್ಲ ಬಗೆಯ ತಂಬಾಕು ಉತ್ಪನ್ನಗಳು ರಾಜ್ಯದ ಮೂಲೆ ಮೂಲೆಗಳಲ್ಲಿ ಬೇಕಾಬಿಟ್ಟಿ ದೊರೆಯುತ್ತಿರುವುದೇ ಮುಖ್ಯ ಕಾರಣ’ ಎಂದು ಕ್ಯಾನ್ಸರ್ ಚಿಕಿತ್ಸಾ ತಜ್ಞ ಡಾ.ರಮೇಶ್ ಬಿಳಿಮಗ್ಗ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಚಿಲ್ಲರೆ ಮಾರಾಟ, ಗೂಡಂಗಡಿ, ಕಾಫಿ, ಟೀ ಸೆಂಟರ್‌ಗಳಲ್ಲಿ ತಂಬಾಕು ಉತ್ಪನ್ನಗಳು ಸಿಗುತ್ತಿರುವುದನ್ನು ತಡೆದರೆ ಬಳಕೆಯೂ ಕಡಿಮೆಯಾಗುತ್ತದೆ. ಶಾಲೆಗಳ ಸುತ್ತಮುತ್ತ, ಸಾರ್ವಜನಿಕ ಸ್ಥಳಗಳಲ್ಲಿ ಸುಲಭವಾಗಿ ಮಕ್ಕಳಿಗೆ, ಯುವಕರಿಗೆ ತಂಬಾಕು ಉತ್ಪನ್ನಗಳು ಸಿಗುವುದೂ ತಪ್ಪಲಿದೆ’ ಎಂದರು.

ಈ ಕುರಿತು ಆರೋಗ್ಯ ಮತ್ತು ಶಿಕ್ಷಣ ತಜ್ಞರು, ಪೋಷಕರು, ವಿವಿಧ ಶಾಲೆಗಳ ವಿದ್ಯಾರ್ಥಿಗಳು ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಅಲ್ಲದೇ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್ ಅವರಿಗೆ ಮೂರು ಸಾವಿರಕ್ಕೂ ಹೆಚ್ಚು ಪತ್ರ ಬರೆಯುವ ಮೂಲಕ ಆಗ್ರಹಿಸಲಾಗಿದೆ ಎಂದೂ ಅವರು ತಿಳಿಸಿದರು.

ಅನಧಿಕೃತ ಕೇಬಲ್ ತೆರವಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತವಾಗಿ ವಿದ್ಯುತ್ ಕಂಬ, ಮರಗಳು ಮತ್ತು ಕಟ್ಟಡಗಳ ಮೇಲ್ಭಾಗ ಹಾಗೂ ಪಾದಚಾರಿ ಮಾರ್ಗಗಳಲ್ಲಿ ಅನಧಿಕೃತವಾಗಿ ಅಳವಡಿಸಿರುವ ಒಎಫ್‌ಸಿ ಕೇಬಲ್‌ಗಳನ್ನು ತೆರವುಗೊಳಿಸಬೇಕು ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥಪ್ರಸಾದ್ ತಿಳಿಸಿದರು.

‘ಅನಧಿಕೃತ ಟಿ.ವಿ ಕೇಬಲ್ ಮತ್ತು ಇಂಟರ್‌ನೆಟ್ ಕೇಬಲ್‌ಗಳನ್ನು ಕೂಡಲೇ ಗುರುತಿಸಬೇಕು’ ಎಂದು ಎಲ್ಲಾ ವಲಯದ ಮುಖ್ಯ ಎಂಜಿನಿಯರ್‌ಗಳಿಗೆ ಸೂಚನೆ ನೀಡಿದರು.

‘ಕೇಬಲ್ ಅಳವಡಿಸಲು ಅನುಮತಿ ಪಡೆದಿದ್ದರೆ ಅದರ ಪತ್ರ ಪರಿಶೀಲಿಸಿ ನಿಯಮಾನುಸಾರ ಕೇಬಲ್‌ಗಳನ್ನು ಅಳವಡಿಸಿಕೊಳ್ಳಲು ಸಂಬಂಧಪಟ್ಟ ಸಂಸ್ಥೆಗಳಿಗೆ ಸೂಚನೆ ನೀಡಬೇಕು. ಕೇಬಲ್ ಅಳವಡಿಸಲು ಪಾಲಿಕೆಯಿಂದ ಅನುಮತಿ ಪಡೆಯದಿದ್ದರೆ ಯಾವುದೇ ಮುಲಾಜಿಲ್ಲದೆ ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದರು.

ಅಧಿಕಾರಿಗಳ ಜತೆ ಸಭೆ ನಡೆಸಿದ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥಪ್ರಸಾದ್

‘ಪಾದಚಾರಿ ಮಾರ್ಗದಲ್ಲಿ ಎಲ್ಲೆಂದರಲ್ಲಿ ಅನಧಿಕೃತವಾಗಿ ಒಎಫ್‌ಸಿ ಕೇಬಲ್‌ಗಳನ್ನು ಅಳವಡಿಸಲಾಗಿದೆ. ಇದರಿಂದ ಪಾದಚಾರಿಗಳು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಪಾದಚಾರಿ ಮಾರ್ಗಗಳಲ್ಲಿ ಕೇಬಲ್‌ಗಳಿದ್ದರೆ ಕೂಡಲೆ ತೆರವುಗೊಳಿಸಬೇಕು’ ಎಂದು ಸೂಚನೆ ನೀಡಿದರು.

‘ಹೈ ಟೆನ್ಷನ್ ಲೈನ್ ಕೆಳಗೆ ಅನಧಿಕೃತವಾಗಿ ಕಟ್ಟಡ ಅಥವಾ ಶೆಡ್‌ಗಳನ್ನು ನಿರ್ಮಿಸಿಕೊಂಡಿದ್ದಾರೆ. ಈ ಸಂಬಂಧ ಅನಧಿಕೃತವಾಗಿ ಕಟ್ಟಡ ನಿರ್ಮಿಸಿಕೊಂಡವರಿಗೆ ಬೆಸ್ಕಾಂನಿಂದ ನೋಟಿಸ್ ನೀಡಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬೇಕು. 15 ದಿನಗಳಲ್ಲಿ ಸ್ವಯಂ ತೆರವುಗೊಳಿಸಲು ಸೂಚನೆ ನೀಡಬೇಕು. ತೆರವಾಗದಿದ್ದರೆ ಪೊಲೀಸ್ ಭದ್ರತೆಯೊಂದಿಗೆ ಕಟ್ಟಡ ತೆರವುಗೊಳಿಸಿ ಅದರ ವೆಚ್ಚವನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಬೇಕು’ ತಿಳಿಸಿದರು.

‘ಸ್ಮಾರ್ಟ್ ಸಿಟಿ’ ಕಾಮಗಾರಿ

ನಗರದ ಬ್ರಿಗೇಡ್ ರಸ್ತೆಯಲ್ಲಿ ‘ಸ್ಮಾರ್ಟ್ ಸಿಟಿ’ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಸಾರ್ವಜನಿಕರು ಪಾದಚಾರಿ ಮಾರ್ಗವಿಲ್ಲದೆ ಕಿರಿದಾದ ರಸ್ತೆಯಲ್ಲೇ ವಾಹನಗಳ ಮಧ್ಯೆ ನಡೆಯುತ್ತಿರುವ ದೃಶ್ಯ ಕಂಡುಬಂತು –ಪ್ರಜಾವಾಣಿ ಚಿತ್ರ

ಫಾಸ್ಟ್ಯಾಗ್ ಕಡ್ಡಾಯ: ಪ್ರತಿಭಟನೆ ತೀವ್ರ

ಪ್ರಜಾವಾಣಿ ವಾರ್ತೆ

ಮಂಗಳೂರು: ಫಾಸ್ಟ್ಯಾಗ್ ಕಡ್ಡಾಯ ಮಾಡಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸುತ್ತಿರುವ ಸ್ಥಳೀಯರು, ಪ್ರತಿಭಟನೆ ತೀವ್ರಗೊಳಿಸಲು ನಿರ್ಧರಿಸಿದ್ದಾರೆ. ಉಡುಪಿ ಜಿಲ್ಲೆಯ ಹೆಜಮಾಡಿ ಟೋಲ್‌ಗೇಟ್ ಬಳಿ ಬುಧವಾರ ಪ್ರತಿಭಟನೆ ನಡೆದಿದೆ.

ಹೆಜಮಾಡಿ, ಪಡುಬಿದ್ರಿ, ಮೂಲ್ಕಿ ಭಾಗದ ಜನರಿಗೆ ಟೋಲ್ ವಿನಾಯಿತಿ ನೀಡುವಂತೆ ನಾಗರಿಕ ಸಮಿತಿ ಸದಸ್ಯರು ಒತ್ತಾಯಿಸಿದರು. ಆದರೆ, ಟೋಲ್ ವಿನಾಯಿತಿ ಸಾಧ್ಯವಿಲ್ಲ ಎಂದು ಟೋಲ್ ಗೇಟ್ ಸಿಬ್ಬಂದಿ ತಿಳಿಸಿದ್ದು, ಫಾಸ್ಟ್ಯಾಗ್ ಇಲ್ಲದ ವಾಹನಗಳಿಗೆ ದುಪ್ಪಟ್ಟು ಶುಲ್ಕ ವಿಧಿಸಲಾಯಿತು.

ಸಾಸ್ತಾನ ಟೋಲ್‌ಗೇಟ್‌ಗೆ ಸಂಬಂಧಿಸಿದಂತೆ 22ರಂದು ಜಿಲ್ಲಾಧಿಕಾರಿ, ಸಚಿವರ ನೇತೃತ್ವದಲ್ಲಿ ಸಭೆ ನಡೆಯಲಿದ್ದು, ಅಲ್ಲಿ ಕೈಗೊಳ್ಳುವ ನಿರ್ಧಾರದಂತೆ ಮುಂದಿನ ಹೋರಾಟ ರೂಪಿಸಲಾಗುವುದು. ಅಲ್ಲಿಯವರೆಗೂ ಶಾಂತಿಯುತ ಹೋರಾಟ ನಡೆಸಲಾಗುವುದು ಎಂದು ಹೋರಾಟ ಸಮಿತಿ ಅಧ್ಯಕ್ಷ ಶ್ಯಾಮಸುಂದರ್ ನಾಯರಿ ತಿಳಿಸಿದ್ದಾರೆ.

ಮಾರುತಿನಗರ ಕ್ರಿಕೆಟರ್ಸ್ ಚಾಂಪಿಯನ್

ಯಲಹಂಕ: ಸಾಯಿ ಸ್ಪೋರ್ಟ್ಸ್ ಆ್ಯಂಡ್ ಕಲ್ಚರಲ್ ಅಸೋಸಿಯೇಷನ್ ಆಶ್ರಯದಲ್ಲಿ ಶ್ರೀರಾಮಪುರ ಮೈದಾನದಲ್ಲಿ ಆಯೋಜಿಸಿದ್ದ ಶ್ರೀರಾಮಪುರ ಕಪ್-2021 ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮಾರುತಿನಗರ ಕ್ರಿಕೆಟರ್ಸ್ ತಂಡದ ಆಟಗಾರರು ಚಾಂಪಿಯನ್ ಆಗಿ ಹೊರಹೊಮ್ಮಿದರು.

ಪ್ರಥಮ ಸ್ಥಾನ ಗಳಿಸಿದ ಮಾರುತಿನಗರ ಕ್ರಿಕೆಟರ್ಸ್ ತಂಡದ ಆಟಗಾರರಿಗೆ ₹55,500 ನಗದು ಮತ್ತು ಟ್ರೋಫಿ ಹಾಗೂ ದ್ವಿತೀಯ ಸ್ಥಾನ ಗಳಿಸಿದ ಸಾಯಿ ಸ್ಪೋರ್ಟ್ಸ್ ಕ್ಲಬ್ ತಂಡದ ಆಟಗಾರರಿಗೆ ₹33,500 ನಗದು ಮತ್ತು ಟ್ರೋಫಿ ವಿತರಿಸಲಾಯಿತು.

ಮಾರುತಿನಗರ ಕ್ರಿಕೆಟರ್ಸ್ ತಂಡದ ಮಧು ಪಂದ್ಯ ಶ್ರೇಷ್ಠ ಹಾಗೂ ಸಾಯಿ ಸ್ಪೋರ್ಟ್ಸ್ ಕ್ಲಬ್ ತಂಡದ ಇಮಾದ್ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದರು. ಅಸೋಸಿಯೇಷನ್ ಅಧ್ಯಕ್ಷ ಯುವರಾಜ್ ಗೌಡ, ಸದಸ್ಯ ಸತೀಶ್ ಮತ್ತಿತರರು ಹಾಜರಿದ್ದರು.

ಪಂದ್ಯಾವಳಿಯಲ್ಲಿ ಪ್ರಥಮಸ್ಥಾನ ಗಳಿಸಿದ ಮಾರುತಿನಗರ ಕ್ರಿಕೆಟರ್ಸ್ ತಂಡದ ಆಟಗಾರರಿಗೆ ಬಹುಮಾನ ವಿತರಿಸಲಾಯಿತು

534 ಹುದ್ದೆಗಳು ಪಾಲಿಕೆಯಲ್ಲಿ ವಿಲೀನ

ಬೆಂಗಳೂರು: ಬಿಬಿಎಂಪಿಗೆ 2007ರಲ್ಲಿ ಸೇರ್ಪಡೆಯಾಗಿದ್ದ 110 ಗ್ರಾಮಗಳಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಿ ಮತ್ತು ಡಿ ಗುಂಪುಗಳ ನೌಕರರ ಅತಂತ್ರ ಸ್ಥಿತಿಗೆ 14 ವರ್ಷಗಳ ಬಳಿಕ ಮುಕ್ತಿ ಸಿಕ್ಕಿದೆ.

ಅಧಿಕೃತವಾಗಿ ಬಿಬಿಎಂಪಿಗೆ ಸೇರ್ಪಡೆಗೊಳ್ಳಬೇಕಿದ್ದ 560 ಸಿಬ್ಬಂದಿಗಳಲ್ಲಿ 534 ಮಂದಿಯನ್ನು ಪಾಲಿಕೆ ತೆಕ್ಕೆಗೆ ಸೇರ್ಪಡೆಗೊಳಿಸಲಾಗಿದೆ. ಇವರಲ್ಲಿ ದ್ವಿತೀಯ ದರ್ಜೆ ಸಹಾಯಕರು, ಪ್ಲಂಬರ್, ಅಂಗನವಾಡಿ ಸಹಾಯಕಿ, ಎಲೆಕ್ಟ್ರಿಶಿಯನ್‌ಗಳು, ಜಲಗಾರರು, ಪಂಪ್ ಆಪರೇಟರ್, ಮೆಕ್ಯಾನಿಕ್. ಪೌರಕಾರ್ಮಿಕರು, ಕಚೇರಿಯಲ್ಲಿ ಕಸ ಗುಡಿಸುವವರು, ಕರವಸೂಲಿಗಾರರು, ಕಂಪ್ಯೂಟರ್ ನಿರ್ವಾಹಕರು, ಟೈಪಿಸ್ಟ್, ಕಚೇರಿ ಸಹಾಯಕರು ಸೇರಿದ್ದಾರೆ.

ಈ ಸಿಬ್ಬಂದಿಯ ವಿಲೀನದ ಕುರಿತು ಪಾಲಿಕೆ ಆಯುಕ್ತ ಎನ್.ಮಂಜುನಾಥಪ್ರಸಾದ್ ಅವರು 2020ರ ನ. 27ರಂದು ಮಂಡಿಸಿದ್ದ ನಿರ್ಣಯವನ್ನು ಆಡಳಿತಾಧಿಕಾರಿ ಗೌರವ ಗುಪ್ತ ಅನುಮೋದಿಸಿದ್ದಾರೆ. ಈ ಹುದ್ದೆಗಳು ಬಿಬಿಎಂಪಿಯಲ್ಲಿ ಇಲ್ಲದೇ ಇದ್ದರೆ ತತ್ಸಮಾನ ಹುದ್ದೆಗಳಿಗೆ ಅವರನ್ನು ನಿಯೋಜಿಸುವಂತೆ ಸೂಚಿಸಲಾಗಿದೆ. ಬಿಬಿಎಂಪಿಯಲ್ಲಿ ವಿಲೀನವಾಗಲು ಬಯಸದವರು ಮಾತ್ರ ಇಲಾಖೆಗೆ ಮರಳಬಹುದೂ ಎಂದೂ ತಿಳಿಸಲಾಗಿದೆ

ಒಟ್ಟು 560 ಮಂದಿ ನೌಕರರು ಬಿಬಿಎಂಪಿಗೆ ಸೇರ್ಪಡೆಯಾಗಬೇಕಿತ್ತು. ಅವರಲ್ಲಿ ಬೊಮ್ಮನಹಳ್ಳಿ ವಲಯದ ನಾಲ್ವರು ನೌಕರರನ್ನು ಕ್ರಮಸಂಖ್ಯೆ ವ್ಯತ್ಯಾಸದ ಕಾರಣಕ್ಕೆ ಸೇರ್ಪಡೆಗೊಳಿಸಲಾಗಿಲ್ಲ. ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಅವರ ಸೂಚನೆ ಮೇರೆಗೆ 22 ಮಂದಿಯ ಸರ್ಪಡೆಯನ್ನು ಕೈಬಿಡಲಾಗಿದೆ. ಈಗ ಸೇರ್ಪಡೆಯಾಗಿರುವವರಲ್ಲಿ ಬಹುತೇಕರು 10 ವರ್ಷಗಳಿಂದ ಬಿಬಿಎಂಪಿಗಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಅವರ ಸೇರ್ಪಡೆ ಪ್ರಕ್ರಿಯೆ ಅಧಿಕೃತವಾಗಿ ಪೂರ್ಣಗೊಳ್ಳದ ಕಾರಣ ಕೆಲವು ಸವಲತ್ತುಗಳನ್ನು ಪಡೆಯಲು ಸಮಸ್ಯೆ ಎದುರಾಗುತ್ತಿತ್ತು. ಸೇರ್ಪಡೆಗೊಂಡವರಲ್ಲಿ ಸಿ ವೃಂದದ 7 ಸಿಬ್ಬಂದಿಯ ಹಾಗೂ ಡಿ ವೃಂದದ 27 ಸಿಬ್ಬಂದಿಯ ಹೆಸರು ಮತ್ತು ವಿಳಾಸಗಳನ್ನು ಇನ್ನೊಮ್ಮೆ ತಾಳೆ ಮಾಡುವಂತೆ ಸೂಚಿಸಲಾಗಿದೆ. ಸಿ ವೃಂದದ ಪಟ್ಟಿಯಲ್ಲಿ ಎಸಿಬಿ ವಿಚಾರಣೆ ಬಳಿಕ ವಜಾಗೊಂಡ, ಅನಧಿಕೃತ ಗೈರುಹಾಜರಾದ ಅಥವಾ ಮರಣಹೊಂದಿದ ನಾಲ್ವರು ಸಿಬ್ಬಂದಿ ಇದ್ದಾರೆ. ಡಿ ವೃಂದದ ಪಟ್ಟಿಯಲ್ಲಿ ಅನಧಿಕೃತ ಗೈರು, ಸೇವಾ ನಿವೃತ್ತಿ ಅಥವಾ ಮರಣ ಹೊಂದಿದ 23 ಮಂದಿಯೂ ಸೇರಿದ್ದಾರೆ.

‘ಬಿಬಿಎಂಪಿ ಕಾಯ್ದೆ 2020’ರ ಸೆಕ್ಷನ್ 298ರಲ್ಲಿ ನಗರದ ಪರಂಪರೆ ಸಂರಕ್ಷಣೆ ವಿಚಾರ ಪ್ರಸ್ತಾಪ

ಪರಂಪರೆ ಸಂರಕ್ಷಣೆ– ಎಚ್ಚರಿಕೆಯ ಹೆಜ್ಜೆ ಅಗತ್ಯ

• ಪ್ರವೀಣ್ ಕುಮಾರ್ ಪಿ.ವಿ

ಬಿಬಿಎಂಪಿ ಕಾಯ್ದೆ ಬಡಕಲು ಬಿಂಬ? 6

ಬೆಂಗಳೂರು: ನಾಡಪ್ರಭು ಕೆಂಪೇಗೌಡರು ಹಾಕಿಕೊಟ್ಟ ಭದ್ರ ಬುನಾದಿಯ ಮೇಲೆ ತಲೆ ಎತ್ತಿದ ನಗರ ಬೆಂಗಳೂರು. ಹಲವಾರು ಕೋಟೆ ಕೊತ್ತಲಗಳು, ಅರಮನೆಗಳು, ಈ ನಗರದ ಪಾರಂಪರಿಕ ಹಿರಿಮೆಯನ್ನು ಈಗಲೂ ಸಾರುತ್ತಿವೆ. ನೆಲದ ಪರಂಪರೆಯ ತಳಹದಿಯ ಮೇಲೆ ಭವಿಷ್ಯದ ನಗರವನ್ನು ಕಟ್ಟುವುದಕ್ಕೆ ಕಾಯ್ದೆಯ ಬಲವೂ ಬೇಕು.

ಇನ್ನೊಂದೆಡೆ, ‘ಸಾವಿರ ಕೆರೆಗಳ ಬೀಡು’ ಎಂದು ಹೆಸರಾಗಿದ್ದ ಈ ನಗರದ ಅನೇಕ ಐತಿಹಾಸಿಕ ಕೆರೆಗಳು ಹೇಳಹೆಸರಿಲ್ಲದಂತಾಗಿವೆ. ಶತಮಾನಗಳಷ್ಟು ಹಳೆಯ ದೇಗುಲಗಳ ಆಸುಪಾಸಿನಲ್ಲಿದ್ದ ಶಾಸನಗಳೂ ಕಣ್ಮರೆಯಾಗಿವೆ. ಇತಿಹಾಸದ ಹೆಜ್ಜೆ ಗುರುತುಗಳನ್ನು, ಕುರುಹುಗಳನ್ನು ಕಳೆದುಕೊಳ್ಳುವುದಕ್ಕೆ ಕಾಯ್ದೆಯ ಬಲವಿಲ್ಲದಿರುವುದೂ ಕಾರಣ. ಇದನ್ನು ಮನಗಂಡು ‘ಬಿಬಿಎಂಪಿ ಕಾಯ್ದೆ 2020’ಯ ಸೆಕ್ಷನ್ 298 ರಲ್ಲಿ ನಗರದ ಪರಂಪರೆ ಸಂರಕ್ಷಣೆ ವಿಚಾರವನ್ನೂ ಪ್ರಸ್ತಾಪಿಸಲಾಗಿದೆ.

ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಪರಂಪರೆ ಸಂರಕ್ಷಣೆ ಸಮಿತಿ ರಚನೆ, ಇಂತಹ ಕಟ್ಟಡಗಳ ಅಥವಾ ಪ್ರಾಂತಗಳ ಪಟ್ಟಿ ತಯಾರಿಸುವುದು, ಅವುಗಳಿಗೆ ಶ್ರೇಣಿ ನೀಡುವ ಹಾಗೂ ಪ್ರೋತ್ಸಾಹಧನ ನೀಡುವಂತಹ ಅಂಶಗಳನ್ನು ಕಾಯ್ದೆಯಲ್ಲಿ ಅಡಕಗೊಳಿಸಲಾಗಿದೆ. ಇದನ್ನು ನಗರ ಯೋಜನಾ ತಜ್ಞರು ಸ್ವಾಗತಿಸಿದ್ದಾರೆ. ಅದರ ಜೊತೆಗೇ, ಪರಂಪರೆ ರಕ್ಷಣೆಗೆ ಇನ್ನಷ್ಟು ಅಂಶಗಳನ್ನು ಸೇರಿಸುವ ಅಗತ್ಯವೂ ಇದೆ ಎನ್ನುವುದು ಅವರ ಅಭಿಪ್ರಾಯ.

‘ಬಿಬಿಎಂಪಿ ಕಾಯ್ದೆಯಲ್ಲಿ ಪರಂಪರೆ ಎಲ್ಲೆಗಳಲ್ಲಿರುವ ಪಟ್ಟಿ ಮಾಡಿದ ಖಾಸಗಿ ಕಟ್ಟಡಗಳ ಮರು ನಿರ್ಮಾಣಕ್ಕಾಗಿ ಮುಖ್ಯ ಆಯುಕ್ತರ ಅಧ್ಯಕ್ಷತೆಯ ಪರಂಪರೆ ಸಂರಕ್ಷಣಾ ತಾಂತ್ರಿಕ ಸಮಿತಿಯ ಅನುಮೋದನೆ ಪಡೆಯಬೇಕು ಎಂದಷ್ಟೇ ಗೊತ್ತುಪಡಿಸಲಾಗಿದೆ. ಈ ಬಗ್ಗೆ ವಿಶೇಷ ಕಟ್ಟಡ ಬೈಲಾಗಳನ್ನು ನೇರವಾಗಿ ಬಿಬಿಎಂಪಿ ಕಾಯ್ದೆಯಲ್ಲಿಯೇ ವಿವರವಾಗಿ ಅಳವಡಿಸಿಕೊಳ್ಳುವುದು, ಪರಿಣಾಮಕಾರಿ ನಿರ್ವಹಣೆಗೆ ಅವಶ್ಯಕ’ ಎಂದು ಅಭಿಪ್ರಾಯಪಡುತ್ತಾರೆ ಸೆಂಟರ್ ಫಾರ್ ಅರ್ಬನ್ ಗವರ್ನನ್ಸ್ ಸ್ಟಡೀಸ್ ಆ್ಯಂಡ್ ಪಾಲಿಸಿ ರಿಸರ್ಚ್ ಸಂಸ್ಥೆಯ ನಿರ್ದೇಶಕ ಸಿ.ಆರ್.ರವೀಂದ್ರ.

‘ನಗರ ಪರಂಪರೆಗೆ ಸಂಬಂಧಿಸಿದಂತೆ ನಿಬಂಧನೆಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಬಿಬಿಎಂಪಿಯನ್ನು ಪರಂಪರೆ ಸಂರಕ್ಷಣಾ ನಿಯಂತ್ರಕ ಪ್ರಾಧಿಕಾರವೆಂದು ಘೋಷಿಸಿಕೊಳ್ಳುವುದು ಸೂಕ್ತ. ಪರಂಪರೆ ಸಂರಕ್ಷಣಾ ಸಮಿತಿಯು ತನ್ನ ತೀರ್ಮಾನಗಳನ್ನು ಅಥವಾ ಸಲಹೆ, ಸೂಚನೆ, ಶಿಫಾರಸ್ಸುಗಳನ್ನು ದಾಖಲಿಸುವ ಪೂರ್ವದಲ್ಲಿ ಬಿಬಿಎಂಪಿ ಕೌನ್ಸಿಲ್‌ನಿಂದ/ ಸ್ಥಾಯಿ ಸಮಿತಿಯಿಂದ ಅನುಮೋದನೆಯನ್ನು (ಪರಂಪರೆ ಸಂರಕ್ಷಣಾ ನಿಯಂತ್ರಕ ಪ್ರಾಧಿಕಾರ) ಪಡೆಯತಕ್ಕದ್ದು ಎಂಬ ಅಂಶವನ್ನು ಸೇರಿಸಬೇಕು’ ಎಂದು ಅವರು ಸಲಹೆ ನೀಡಿದರು.

‘ಪರಂಪರೆ ಸಂರಕ್ಷಣೆ ಸಮಿತಿಯು ತನ್ನ ಶಿಫಾರಸ್ಸನ್ನು ಪಾರಂಪರಿಕ ಸ್ಥಳಗಳ ಆವರಣಗಳ ಕಟ್ಟಡ ನಿರ್ಮಾಣ ನಕ್ಷೆಯನ್ನು ಮಂಜೂರು ಮಾಡುವ ಪೂರ್ವದಲ್ಲಿ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರಗಳನ್ನು ಎಷ್ಟು ಪ್ರಮಾಣದಲ್ಲಿ ನೀಡಬಹುದು ಎಂಬ ಸೂಚನೆಗಳನ್ನು ಪಾಲಿಕೆಯ ನಗರ ಯೋಜನೆ ವಿಭಾಗದ ಅಧಿಕಾರಿಗಳಿಗೆ ನೀಡಬೇಕು. ಪಾರಂಪರಿಕ ಸ್ಥಳಗಳ ಆವರಣದಲ್ಲಿ ಅಭಿವೃದ್ಧಿ ಹಕ್ಕು ಪ್ರಮಾಣದ ಪತ್ರಗಳನ್ನು ಉಪಯೋಗಿಸಲು ಅನುಮತಿ ನೀಡಬಹುದೇ ಅಥವಾ ಎಷ್ಟರ ಮಟ್ಟಿಗೆ ನೀಡಬಹುದು ಎಂಬುದನ್ನು ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ಇದು ಭವಿಷ್ಯದಲ್ಲಿ ಕೆಲವು ಸಮಸ್ಯೆಗಳಿಗೆ ಕಾರಣವಾಗಲಿದೆ’ ಎಂದು ವಿವರಿಸಿದರು.

‘ನಗರಾಭಿವೃದ್ಧಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬೆಂಗಳೂರು ನಗರದ ಪರಂಪರೆಯ ನಿಯಂತ್ರಣಕ್ಕೆ ಸಂಬಂಧಿಸಿದ ಅಂಶಗಳು 1961ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ (ಕೆಟಿಸಿಪಿ) ಕಾಯ್ದೆ ಮತ್ತು 1976ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಾಯ್ದೆಗಳಲ್ಲೂ ಸಂಯೋಜಿಸಲಾಗಿದ್ದು, ಇವುಗಳು ಇನ್ನೂ ಜಾರಿಯಲ್ಲಿವೆ. ಬಿಡಿಎ ಕಾಯ್ದೆಯ ಸೆಕ್ಷನ್ 51ರಡಿ ‘ಬೆಂಗಳೂರು ಅರ್ಬನ್ ಆರ್ಟ್ ಕಮಿಷನ್’ ಅನ್ನು ಪುನರ್ರಚಿಸಿ 2020ರ ಬಿಬಿಎಂಪಿ ಕಾಯ್ದೆಯಲ್ಲೂ ಇದಕ್ಕೆ ಸಂಬಂಧಿಸಿ ನೇರ ಉಪವಿಧಿಗಳನ್ನು ಕಲ್ಪಿಸಿಕೊಳ್ಳುವುದು ಸಮಂಜಸ. ಇಲ್ಲದಿದ್ದರೆ ಇವುಗಳಿಂದ ಬಿಕ್ಕಟ್ಟು ಸೃಷ್ಟಿಯಾಗುವ ಸಾಧ್ಯತೆ ಇದೆ’ ಎಂದು ವಿಶ್ಲೇಷಿಸುತ್ತಾರೆ ಸಂಸ್ಥೆಯ ಮತ್ತೊಬ್ಬ ನಿರ್ದೇಶಕ ಪಿ.ಜಿ. ಶೆಣೈ.

‘ಬೆಂಗಳೂರು ಅರ್ಬನ್ ಆರ್ಟ್ ಕಮಿಷನ್ ಮತ್ತು ಬೆಂಗಳೂರು ಪರಂಪರೆ ಸಂರಕ್ಷಣಾ ಸಮಿತಿಯು ಕೇಂದ್ರ ಸರ್ಕಾರದ ಪ್ರಾಚೀನ ಸ್ಮಾರಕಗಳ ಮತ್ತು ಪ್ರಾಚ್ಯ ತಾಣಗಳ ಮತ್ತು ಕುರುಹುಗಳ (ತಿದ್ದುಪಡಿ ಮತ್ತು ಊರ್ಜಿತಗೊಳಿಸುವಿಕೆ) ಕಾಯ್ದೆ –2010’ರ ಅಡಿಯಲ್ಲಿ ರಚಿಸುವ ನಿಯಮಾವಳಿಗಳಿಗೆ ಮತ್ತು ಕೇಂದ್ರ ಸರ್ಕಾರವು ಕಾಲ ಕಾಲಕ್ಕೆ ನೀಡುವ ಮಾರ್ಗಸೂಚಿಗಳಿಗೆ ಬದ್ಧವಾಗಿರಬೇಕಾಗಿರುತ್ತದೆ. ಬಿಬಿಎಂಪಿ ಕಾಯ್ದೆಯಲ್ಲಿ ‘ಪಾರಂಪರಿಕ ಕಟ್ಟಡ’ ‘ಪರಂಪರೆ ವಲಯ’ ಮತ್ತು ‘ಪರಂಪರೆ ಪ್ರಾಂತ’ ಎಂಬ ಪದಗಳನ್ನು ವಿವರಣೆಗಳೊಂದಿಗೆ ವ್ಯಾಖ್ಯಾನಿಸಬೇಕು. ಪರಂಪರೆ ಪ್ರಾಂತವನ್ನು ಬಿಬಿಎಂಪಿ ಅಧಿಸೂಚಿಸಿದ ಪ್ರದೇಶವೆಂದು ಘೋಷಿಸಬೇಕು. ಐತಿಹಾಸಿಕ ಪ್ರಾಮುಖ್ಯತೆ ಇರುವ ಖಾಸಗಿ ಕಟ್ಟಡಗಳು ಎಲ್ಲಿ ನೆಲೆಗೊಂಡಿವೆ ಎಂಬುದನ್ನು ಮತ್ತು ಈ ಕಟ್ಟಡಗಳ ವಿನ್ಯಾಸಗಳನ್ನು ಕಾಯ್ದುಕೊಳ್ಳಲು ಅವು ಬಿಬಿಎಂಪಿ ಪರಂಪರೆ ಸಂರಕ್ಷಣೆ ಸಮಿತಿಯ ನಿಯಂತ್ರಣಕ್ಕೆ ಒಳಪಟ್ಟಿರುತ್ತವೆ ಎಂದು ನಿರ್ಬಂಧಗಳನ್ನು ಈ ಅಧಿಸೂಚನೆಯಲ್ಲಿ ಅಳವಡಿಸಬೇಕು. ಇಂತಹ ಅಧಿಸೂಚನೆಗಳನ್ನು ಹೊರಡಿಸಲು ಅನುಸರಿಸಬೇಕಾದ ವಿಧಾನಗಳನ್ನು ರೀತಿ ರಿವಾಜುಗಳನ್ನು ಪರಂಪರೆ ಸಂರಕ್ಷಣೆ ಕುರಿತ ಬೈಲಾಗಳಲ್ಲಿ ಸರಿಯಾಗಿ ನಿರೂಪಿಸಬೇಕು’ ಎಂದು ಅವರು ಸಲಹೆ ನೀಡಿದರು.

ಪರಂಪರೆ ರಕ್ಷಣೆ–ಬಿಬಿಎಂಪಿಯ ಹೊಣೆಗಳು

ಪಾರಂಪರಿಕ ಕಟ್ಟೆ, ತಾಣ, ಐತಿಹಾಸಿಕ ವಾಸ್ತುಶಿಲ್ಪದ, ಸಾಂಸ್ಕೃತಿಕ, ಪ್ರಾಕೃತಿಕ ಅಥವಾ ಜೀವಪರಿಸರೀಯ ಮಹತ್ವ ಹೊಂದಿದ ಅಥವಾ ನಿಸರ್ಗ ರಮಣೀಯ ಸೌಂದರ್ಯವಿರುವ ಪ್ರದೇಶಗಳಿಗೆ ಹೊಸ ಅಭಿವೃದ್ಧಿಯಿಂದ ವ್ಯತಿರಿಕ್ತ ಪರಿಣಾಮ ಉಂಟಾಗದಂತೆ ಕಾಪಾಡುವುದು

- ನಗರದ ಭೂದೃಶ್ಯವೂ ಸೇರಿದಂತೆ ನಗರ ವಿನ್ಯಾಸ ಮತ್ತು ಕಟ್ಟಡ ನಿರ್ಮಾಣದ ವೇಳೆ ವೈಶಿಷ್ಟ್ಯದ ಮೂಲ ಅಂಶ ವೃದ್ಧಿಸುವುದು
- ಪಾರಂಪರಿಕ ಪ್ರಾಂತ ಅಥವಾ ಕಟ್ಟಡಗಳೆಂದು ಗುರುತಿಸಿರುವ ಕಟ್ಟಡಗಳ ನೆಲಸಮಗೊಳಿಸುವಿಕೆ, ಮಾರ್ಪಾಡು ಮಾಡುವಿಕೆ, ವಿಸ್ತರಣೆ, ಮರುನಿರ್ಮಾಣ, ರಕ್ಷಣೆಗೆ ಮಾರ್ಗಸೂಚಿ ನೀಡುವುದು

‘ಪರಂಪರೆ–ವೆಬ್‌ಸೈಟ್‌ನಲ್ಲೇ ಸಿಗಲಿ ವಿವರ’

‘ಪರಂಪರೆ ಸಂರಕ್ಷಣೆ ಸಮಿತಿಯ ಎಲ್ಲ ಚಟುವಟಿಕೆಗಳನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಸಮಿತಿಯ ಶಿಫಾರಸ್ಸಿನ ಮೇಲೆ ಬಿಬಿಎಂಪಿ ಪಟ್ಟಿಮಾಡಬೇಕಾಗಿರುವ ಪಾರಂಪರಿಕ ಕಟ್ಟಡಗಳು ಮತ್ತು ಸ್ಥಳಾವರಣಗಳ ಪಟ್ಟಿಯ ಜೊತೆಗೆ ಜಿಐಎಸ್ ತಂತ್ರಾಂಶ ಬಳಸಿ ವಲಯವಾರು ನಕ್ಷೆಯನ್ನು ಅಧಿಸೂಚನೆಗಳಿಗೆ ಜೋಡಿಸಸುವ ಕುರಿತು ಉಪವಿಧಿಗಳನ್ನು ಕಲ್ಪಿಸಬೇಕು. ನಾಗರಿಕರು ನಗರದ ಪರಂಪರೆಯ ಸಂರಕ್ಷಣೆಯ ನಿಟ್ಟಿನಲ್ಲಿ ತಮ್ಮ ಹೊಣೆ ಮತ್ತು ಪಾತ್ರವನ್ನು ಅರ್ಥಮಾಡಿಕೊಂಡು ಸ್ಪಂದಿಸಲು ಇಂತಹ ಪಾರದರ್ಶಕ ಪ್ರಕ್ರಿಯೆಗಳು ನೆರವಾಗುತ್ತದೆ’ ಎನ್ನುತ್ತಾರೆ ಪಿ.ಜಿ.ಶೆಣೈ.

ಪ್ರತಿಭಟನೆ

ಪರಿಸರ ಕಾರ್ಯಕರ್ತೆ ದಿಶಾ ರವಿ ಬಂಧನ ವಿರೋಧಿಸಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಬೆಂಗಳೂರು ನಗರ ಕಾಂಗ್ರೆಸ್ ಪ್ರಚಾರ ಸಮಿತಿಯ ಸದಸ್ಯರು ಮೇಣದ ಬತ್ತಿ ಹಚ್ಚುವ ಮೂಲಕ ಕಾಂಗ್ರೆಸ್ ಭವನದ ಗಾಂಧಿ ಪ್ರತಿಮೆ ಬಳಿ ಬುಧವಾರ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಮುಖಂಡರಾದ ಎಸ್.ಮನೋಹರ್, ಎ.ಆನಂದ್, ಶೇಖರ್, ಆದಿತ್ಯ, ಪ್ರಕಾಶ್ ಚಂದ್ರಶೇಖರ್, ಉಮೇಶ್, ಶಶಿಭೂಷಣ್, ವೆಂಕಟೇಶ್ ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು

ಪ್ರಜಾವಾಣಿ ಚಿತ್ರ

ಪಿಇಎಸ್ ವಿಶ್ವವಿದ್ಯಾಲಯ: ಹಡಗುಗಳ ಮೇಲೆ ನಿಗಾ ಇಡಲು ಉಪಗ್ರಹ ಸಹಾಯಕ

ಆರ್–ಸ್ಯಾಟ್ ಉಪಗ್ರಹ ಉಡಾವಣೆಗೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪಿಇಎಸ್ ವಿಶ್ವವಿದ್ಯಾಲಯವು ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಸಹಯೋಗದಲ್ಲಿ ಆರ್-ಸ್ಯಾಟ್ ಉಪಗ್ರಹ ಸಿದ್ಧಪಡಿಸಿದ್ದು, ಇದು ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿ ಇದೇ 28ಕ್ಕೆ ಉಡಾವಣೆಯಾಗಲಿದೆ.

ಇಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎಂ.ಆರ್. ದೊರೆಸ್ವಾಮಿ ಮಾತನಾಡಿ, ‘2016ರಲ್ಲಿ ಪಿ-ಸ್ಯಾಟ್ ಉಪಗ್ರಹ ರೂಪಿಸಿ, ಇಸ್ರೊಗೆ ಹಸ್ತಾಂತರ ಮಾಡಿದ್ದೇವು. ಇದರ ಯಶಸ್ಸಿನಿಂದ ಡಿಆರ್‌ಡಿಒ ಅವರು ಉಪಗ್ರಹ ರೂಪಿಸಿಕೊಡುವಂತೆ ಮನವಿ ಮಾಡಿದ್ದರು. ನಮ್ಮಲ್ಲಿನ ವಿಜ್ಞಾನಿ ಡಾ. ಶಾಂಬಶಿವ ರಾವ್ ಮಾರ್ಗದರ್ಶನದಲ್ಲಿ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸೇರಿ ಮೂರು ವರ್ಷದ ಅವಧಿಯಲ್ಲಿ ಈ ಉಪಗ್ರಹವನ್ನು ವಿನ್ಯಾಸ ಮಾಡಿದ್ದಾರೆ.



ಆರ್–ಸ್ಯಾಟ್ ಉಪಗ್ರಹದ ಬಗ್ಗೆ ವಿದ್ಯಾರ್ಥಿಗಳು ಮಾಹಿತಿ ನೀಡಿದರು. ಪ್ರೊ. ಎಂ.ಆರ್. ದೊರೆಸ್ವಾಮಿ, ವಿಶ್ವವಿದ್ಯಾಲಯದ ಕುಲಪತಿ ಡಾ. ಸೂರ್ಯಪ್ರಸಾದ್ ಜೆ. ಹಾಗೂ ಡಾ. ಸಾಂಬಶಿವ ರಾವ್ ಇದ್ದರು

ಇದನ್ನು ಡಿಆರ್‌ಡಿಒಗೆ ಹಸ್ತಾಂತರ ಮಾಡಲಾಗುತ್ತದೆ. ಸಮುದ್ರ ಪ್ರದೇಶದಲ್ಲಿ ನಡೆಯುವ ಚಟುವಟಿಕೆಗಳು ಹಾಗೂ ಹಡಗುಗಳ ಚಲನೆಯ ಮೇಲೆ ಇದು ನಿಗಾ ಇಡಲಿದೆ’ ಎಂದು ತಿಳಿಸಿದರು.

‘ಮೈಕ್ರೊ ಉಪಗ್ರಹವಾಗಿರುವ ಆರ್-ಸ್ಯಾಟ್ 15 ಕೆ.ಜಿ. ತೂಕವಿದ್ದು, 45 ವಾಟ್ ಸೌರಶಕ್ತಿ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಸಮುದ್ರದಲ್ಲಿ ಸಾಗುವ ನೌಕೆಗಳ ಮೇಲೆ ಈ ಉಪಗ್ರಹ ನಿಗಾ ಇರಿಸಲಿದೆ. ನೌಕೆಗಳಲ್ಲಿರುವ ‘ಸ್ವಯಂ ಪತ್ತೆ ಸಾಧನ’ದ ತರಂಗ ಗ್ರಹಿಸಿ ಕೇಂದ್ರಕ್ಕೆ ರವಾನಿಸುತ್ತದೆ. ಇದಕ್ಕ ಡಿಆರ್‌ಡಿಒ ₹ 2.2 ಕೋಟಿ ಧನಸಹಾಯ ನೀಡಿದೆ’ ಎಂದು ವಿವರಿಸಿದರು.

2 ವರ್ಷ ಆಯಸ್ಸು: ವಿಜ್ಞಾನಿ ಡಾ. ಸಾಂಬಶಿವ ರಾವ್ ಮಾತನಾಡಿ, ‘ವಿಶ್ವವಿದ್ಯಾಲಯದ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಸಂಶೋಧನಾ ಕೇಂದ್ರದಲ್ಲಿಯೇ ಇದನ್ನು ವಿನ್ಯಾಸ ಮಾಡಲಾಗಿದೆ. ಈ ಉಪಗ್ರಹದ ಪ್ರಾಯೋಗಿಕ ಪರೀಕ್ಷೆಗಳು ನಡೆದಿದ್ದು, ಉತ್ತಮ ಫಲಿತಾಂಶ ದೊರೆತಿದೆ. ಉಡಾವಣೆಗೆ ಸಕಲ ರೀತಿಯಲ್ಲಿಯೂ ಸಜ್ಜಾಗಿದೆ. ಇದರ ಆಯಸ್ಸು ಕನಿಷ್ಠ ಎರಡು ವರ್ಷ ಎಂದು ಲೆಕ್ಕ ಹಾಕಲಾಗಿದೆ. ಸಮುದ್ರ ಪ್ರದೇಶಗಳಲ್ಲಿ ನಡೆಯುವ ಕಾನೂನುಬಾಹಿರ ಚಟುವಟಿಕೆಗಳನ್ನು ಪತ್ತೆ ಮಾಡಲು ಇದು ಸಹಕಾರಿ’ ಎಂದು ತಿಳಿಸಿದರು.

‘ಪ್ರತಿ ಹಡಗಿನ ಚಲನವಲನದ ಮಾಹಿತಿಯನ್ನು ಒದಗಿಸಲಿದೆ. ಸೋಲಾರ್ ಫಲಕಗಳು, ಬ್ಯಾಟರಿ, ಆಂಟೇನಾ ಸೇರಿದಂತೆ ವಿವಿಧ ಉಪಕರಣಗಳನ್ನು ಒಳಗೊಂಡಿದೆ. ಉಡಾವಣೆಯಾದ ಒಂದೂವರೆ ಗಂಟೆಯಲ್ಲಿ ಉಪಗ್ರಹವು ಕಕ್ಷೆ ಸೇರಲಿದೆ. ಒಂದು ದಿನದ ಬಳಿಕ ಕಾರ್ಯಾಚರಣೆಯನ್ನು ಪ್ರಾರಂಭಿಸಲಿದೆ’ ಎಂದು ಹೇಳಿದರು.

ಉಪಗ್ರಹ ಸಿದ್ಧಗೊಳಿಸಿದ ತಂಡ

- ಡಾ. ಶಾಂಬಶಿವ ರಾವ್
- ಡಾ.ಜಿ. ನಾಗೇಂದ್ರ ರಾವ್
- ಡಾ.ಎಸ್.ವಿ. ವೇಣುಗೋಪಾಲ್
- ಡಾ.ವಿ. ಕೇಶವ್ ರಾಜು
- ಪ್ರೊ.ಸಿ. ಬಂಗಾರ ರಾಜು
- ಪ್ರೊ.ಎಸ್. ನಾಗಭೂಷಣಮ್
- ಪ್ರೊ. ಮಹೇಂದ್ರ ನಾಯಕ್
- ಪ್ರೊ. ಪ್ರಿಯಾಂಕಾ ಅಗರ್ವಾಲ್
- ಯೋಗೇಶ್ ಎಂ.
- ಪರ್ವೇಜ್ ಮಹಮ್ಮದ್
- ಕಾವ್ಯಶ್ರೀ
- ಅಜಿತ್ ಕುಮಾರ್
- ಮಹಾಂತೇಶ್
- ಅಬ್ದುಲ್
- ಅಭಿರಾಮಿ

ಮೌಲ್ಯಾಧಾರಿತ ಕಲಾಪಕ್ಕಾಗಿ ಆತ್ಮಾವಲೋಕನ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಮಂಡಲ ಕಲಾಪದಲ್ಲಿ ಸಂಸದೀಯ ಮೌಲ್ಯಗಳ ಕುಸಿತ ತಡೆಯುವ ಉದ್ದೇಶದಿಂದ ಕಾಮನ್‌ವೆಲ್ತ್ ಸಂಸದೀಯ ಸಂಘದ ಸಹಭಾಗಿತ್ವದಲ್ಲಿ ಇದೇ 24ರಂದು ಆತ್ಮಾವಲೋಕನ ಸಭೆ ಆಯೋಜಿಸಲಾಗಿದೆ ಎಂದು ವಿಧಾನಸಭೆಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಅವರು, ‘ವಿಧಾನ ಮಂಡಲದ ಕಲಾಪದಲ್ಲಿ ಅರ್ಥಪೂರ್ಣ ಚರ್ಚೆ ನಡೆಯಬೇಕು ಎಂಬುದು ಸಭೆಯ ಮುಖ್ಯ ಉದ್ದೇಶ.

ವಿಶ್ವೇಶ್ವರ ಹೆಗಡೆ ಕಾಗೇರಿ

ವಿಧಾನಸಭೆಯ ಮಾಜಿ ಅಧ್ಯಕ್ಷರುಗಳು, ವಿಧಾನ ಪರಿಷತ್‌ನ ಮಾಜಿ ಸಭಾಪತಿಗಳು, ಪತ್ರಕರ್ತರು, ಬರಹಗಾರರು, ಚಿಂತಕರು ಸೇರಿದಂತೆ ಹಲವು ಗಣ್ಯರಿಗೆ ಆಹ್ವಾನ ನೀಡಲಾಗುವುದು’ ಎಂದರು.

ಇತ್ತೀಚಿನ ದಿನಗಳಲ್ಲಿ ವಿಧಾನಮಂಡಲ ಕಲಾಪದಲ್ಲಿ ಸಂಸದೀಯ ಮೌಲ್ಯಗಳ ಕುಸಿತ ಕಂಡುಬರುತ್ತಿದೆ. ಗಲಾಟೆ, ಗದ್ದಲ, ಧರಣಿ ಮತ್ತಿತರ ಕಾರಣಗಳಿಗಾಗಿ ಅಧಿವೇಶನ ಮೊಟಕುಗೊಳಿಸುತ್ತಿರುವುದು ಹೆಚ್ಚುತ್ತಿದೆ. ಮುಂದೆ ಅಂತಹ ಘಟನೆಗಳು ಮರುಕಳಿಸದಂತೆ ತಡೆಯುವ ದೃಷ್ಟಿಯಿಂದ ಆತ್ಮಾವಲೋಕನ ಸಭೆ ಆಯೋಜಿಸಲಾಗಿದೆ. ಈ ಸಭೆಯಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳನ್ನು ಅಳವಡಿಸಿಕೊಂಡು ಮುಂದಿನ ದಿನಗಳಲ್ಲಿ ಕಲಾಪದಲ್ಲಿ ಸುಧಾರಣೆ ತರಲಾಗುವುದು ಎಂದು ತಿಳಿಸಿದರು.

‘ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ನಾನು ಚರ್ಚಿಸಿ ಈ ಸಭೆ ಆಯೋಜಿಸಿದ್ದೇವೆ. ಮಾಜಿ ಸ್ಪೀಕರ್‌ಗಳಾದ ಕೆ.ಆರ್. ಪೇಟೆ ಕೃಷ್ಣ, ಕಾಗೋಡು ತಿಮ್ಮಪ್ಪ, ಮಾಜಿ ಸಭಾಪತಿಗಳಾದ ಡಿ.ಎಚ್. ಶಂಕರಮೂರ್ತಿ, ಬಿ.ಎಲ್. ಶಂಕರ್, ವಿ.ಆರ್. ಸುದರ್ಶನ್, ಹೈಕೋರ್ಟ್ ನ್ಯಾಯಮೂರ್ತಿ ಫಣೀಂದ್ರ, ನಿವೃತ್ತ ನ್ಯಾಯಮೂರ್ತಿಗಳಾದ ಎ.ಜೆ. ಸದಾಶಿವ, ಎನ್. ಕುಮಾರ್, ಹಿರಿಯ ರಾಜಕಾರಣಿಗಳಾದ ಎಂ.ಸಿ. ನಾಣಯ್ಯ, ಪಿ.ಜಿ.ಆರ್. ಸಿಂಧ್ಯ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದು ವಿಧಾನಸಭೆಯ ಅಧ್ಯಕ್ಷ ಕಾಗೇರಿ ತಿಳಿಸಿದರು.

‘ಜೈವಿಕ ತಂತ್ರಜ್ಞಾನ: ಆತ್ಮನಿರ್ಭರ ಭಾರತ ನಿರ್ಮಾಣ’

ಬೊಮ್ಮನಹಳ್ಳಿ: ‘ಜೈವಿಕ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿದ್ದಲ್ಲಿ ಆತ್ಮನಿರ್ಭರ್ ಭಾರತವನ್ನು ಕಟ್ಟಲು ಸಾಧ್ಯ. ಎಲ್ಲ ಕ್ಷೇತ್ರಗಳಲ್ಲಿ ಸ್ವಾವಲಂಬನೆ ಸಾಧಿಸುವ ಅವಕಾಶಗಳಿದ್ದು, ಈ ದಿಸೆಯಲ್ಲಿ ವಿದ್ಯಾರ್ಥಿಗಳನ್ನು ಅಧ್ಯಾಪಕರು ಸಜ್ಜುಗೊಳಿಸಬೇಕು’ ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಮಾಜಿ ನಿರ್ದೇಶಕ ಡಾ. ಮನ್‌ಪ್ರೀತ್ ಸಿಂಗ್ ಮನ್ನಾ ಹೇಳಿದರು.

ಬೊಮ್ಮನಹಳ್ಳಿಯ ಆಕ್ಸ್‌ಫರ್ಡ್ ಎಂಜಿನಿಯರಿಂಗ್ ಕಾಲೇಜಿನ ಜೈವಿಕ ತಂತ್ರಜ್ಞಾನ ವಿಭಾಗವು ‘ಜೈವಿಕ ಆವಿಷ್ಕಾರಗಳ ಸಾಧ್ಯತೆ ಮತ್ತು ಉದ್ಯಮಶೀಲತೆ, ಪೇಟೆಂಟಿನ ಅವಕಾಶಗಳು ಹಾಗೂ ಉದ್ಯೋಗ ಸೃಷ್ಟಿ’ ಕುರಿತು ಹಮ್ಮಿಕೊಂಡಿದ್ದ ವರ್ಚುವಲ್ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ತಿಂಗಳವರೆಗೆ ನಡೆಯುವ ಕಾರ್ಯಗಾರದಲ್ಲಿ ದೇಶದ ಪ್ರತಿಷ್ಠಿತ ಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳ ವಿಜ್ಞಾನಿಗಳು, ಸಂಶೋಧಕರು, ಪ್ರಾಧ್ಯಾಪಕರು ಭಾಗಿಯಾಗಲಿದ್ದಾರೆ. ವಿಶ್ವೇಶ್ವರಯ್ಯ ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾಲಯದ ಕುಲಸಚಿವ ಡಾ.ಬಿ.ಇ. ರಂಗಸ್ವಾಮಿ ಉಪನ್ಯಾಸ ನೀಡಿದರು. ಆಕ್ಸ್‌ಫರ್ಡ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್.ಎಲ್.ವಿ.ಎಲ್. ನರಸಿಂಹರಾಜು ಅಧ್ಯಕ್ಷತೆ ವಹಿಸಿದ್ದರು. ಜೈವಿಕ ತಂತ್ರಜ್ಞಾನ ವಿಭಾಗದ ಡೀನ್ ಡಾ.ಬಿ.ಕೆ.ಮಂಜುನಾಥ್ ಇದ್ದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪುತ್ರಿ ಐಶ್ವರ್ಯಾ ಹಾಗೂ ಕಾಫಿ ಡೇ ಸಂಸ್ಥಾಪಕ ದಿವಂಗತ ಸಿದ್ಧಾರ್ಥ ಪುತ್ರ ಅಮರ್ತ್ಯ ವಿವಾಹ ಆರತಕ್ಷತೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಮೊದಲಾದವರು ಪಾಲ್ಗೊಂಡಿದ್ದರು

ಶಿವಕುಮಾರ್ ಪುತ್ರಿ ಆರತಕ್ಷತೆ ರಾಜಕೀಯ ನಾಯಕರು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪುತ್ರಿ ಐಶ್ವರ್ಯಾ ಹಾಗೂ ಕಾಫಿ ಡೇ ಸಂಸ್ಥಾಪಕ ದಿವಂಗತ ಸಿದ್ಧಾರ್ಥ ಪುತ್ರ ಅಮರ್ತ್ಯ ಅವರ ವಿವಾಹ ಆರತಕ್ಷತೆ ಬುಧವಾರ ನಡೆದಿದ್ದು, ಪ್ರಮುಖ ರಾಜಕೀಯ ನಾಯಕರು ಭಾಗಿಯಾಗಿದ್ದರು.

ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಕೆ.ಸಿ. ವೇಣುಗೋಪಾಲ್, ಕಮಲನಾಥ್, ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಪಾಲ್ಗೊಂಡು ಶುಭ ಹಾರೈಸಿದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಜಲಸಂಪನ್ಮೂಲ ಸಚಿವ ರಮೇಶ ಜಾರಕಿಹೊಳಿ ಭಾಗವಹಿಸಿದ್ದರು.

ದೇವನಹಳ್ಳಿ ಬಳಿಯ ರೆಸಾರ್ಟ್‌ನಲ್ಲಿ ಆರತಕ್ಷತೆ ನಡೆದಿದ್ದು, ಆಹ್ವಾನಿತರಿಗೆ ಮಾತ್ರ ಪ್ರವೇಶ ಇತ್ತು

ಮದ್ಯ ಸೇವಿಸಿ ವಾಹನ ಚಾಲನೆ: ಶೀಘ್ರವೇ ತಪಾಸಣೆ ಶುರು- ರವಿಕಾಂತೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಎಲ್ಲ ರೀತಿಯ ಸುರಕ್ಷತಾ ಕ್ರಮಗಳನ್ನು ಪಾಲಿಸಿಕೊಂಡು ಸಂಚಾರ ಪೊಲೀಸರು ಶೀಘ್ರವೇ ತಪಾಸಣೆ ಆರಂಭಿಸಲಿದ್ದಾರೆ’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ತಿಳಿಸಿದ್ದಾರೆ.

ರವಿಕಾಂತೇಗೌಡ

‘ಕಳೆದ ಮಾರ್ಚ್‌ನಿಂದ ಕೊರೊನಾ ಸೋಂಕು ವ್ಯಾಪಕವಾಗಿ ಹರಡುವುದನ್ನು ತಪ್ಪಿಸುವ ಸಲುವಾಗಿ ಮದ್ಯ ಕುಡಿದು ವಾಹನ ಚಲಾಯಿಸುವವರ ತಪಾಸಣೆ ಹಾಗೂ ಪ್ರಕರಣ ದಾಖಲಿಸುವುದನ್ನು ನಿಲ್ಲಿಸಲಾಗಿತ್ತು. ಈಗ ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ಸಂಖ್ಯೆ ಹೆಚ್ಚಾಗಿ, ಅಪಘಾತ ಹಾಗೂ ಸಾವು ಸಂಭವಿಸುತ್ತಿರುವ ಪ್ರಕರಣಗಳೂ ಹೆಚ್ಚಾಗಿರುವುದರಿಂದ ಇಲಾಖೆ ಈ ನಿರ್ಧಾರ ಕೈಗೊಂಡಿದೆ’ ಎಂದು ತಿಳಿಸಿದ್ದಾರೆ.

‘ಇನ್ನು ಮುಂದೆ ಸಂಚಾರ ಪೊಲೀಸರು ಸ್ಯಾನಿಟೈಸ್ ಮಾಡಲಾದ ಆಲ್ಕೋಮೀಟರ್‌ಗಳನ್ನು ಬಳಸಬೇಕು. ಒಬ್ಬರಿಗೆ ಉಪಯೋಗಿಸಿದ ಆಲ್ಕೋಮೀಟರ್ ಉಪಕರಣವನ್ನು ಜಿಪ್ ಲಾಕ್ ಕವರ್‌ನಲ್ಲಿ ಪ್ರತ್ಯೇಕವಾಗಿ ಇಡಲಾಗುವುದು. ಒಬ್ಬರ ತಪಾಸಣೆಗೆ ಉಪಕರಣವನ್ನು ಒಂದು ಬಾರಿ ಮಾತ್ರ ಹಾಗೂ ಚಾಲಕರು ಹಾಗೂ ಸವಾರರಿಗೆ ಪ್ರತ್ಯೇಕ ಸ್ಟ್ರಾ ಬಳಸಲಾಗುವುದು’.

‘ತಪಾಸಣೆ ಮಾಡುವ ಪ್ರತಿ ಸಿಬ್ಬಂದಿ ಕಡ್ಡಾಯವಾಗಿ ಕೈಗವಸು, ಮಾಸ್ಕ್, ಮುಖಗವಸು ಬಳಸುವ ಜೊತೆಗೆ ತಪಾಸಣೆ ಬಳಿಕ ಸ್ಯಾನಿಟೈಸ್ ಮಾಡಬೇಕು. ಬಳಸಿದ ಉಪಕರಣವನ್ನು ಸ್ಯಾನಿಟೈಸ್ ಮಾಡಿ, ಕನಿಷ್ಠ 3 ದಿನಗಳವರೆಗೆ ಬಳಸದಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕೊರೊನಾ ಸುರಕ್ಷತಾ ಕ್ರಮಗಳನ್ನು ಪಾಲಿಸಿಕೊಂಡು ಶೀಘ್ರವೇ ತಪಾಸಣೆ ಆರಂಭಿಸಲಾಗುವುದು’ ಎಂದೂ ತಿಳಿಸಿದ್ದಾರೆ.

ಮಾವು ಬೆಳೆಗಾರರು ಮತ್ತು ರಫ್ತುದಾರರ ಸಮಾವೇಶ

ಬೆಳೆಗಾರರ ಸಂಘ ಸ್ಥಾಪಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬು ಬೆಳೆಗಾರರ ಮಾದರಿಯಲ್ಲಿ ಮಾವು ಬೆಳೆಗಾರರೂ ಸಂಘಟಿತರಾಗಬೇಕು. ಉತ್ಪನ್ನವನ್ನು ಸಂಸ್ಕರಿಸಿ, ಶೇಖರಿಸಿಡುವ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಬೆಳೆಗಾರರ ಸಂಘ ಸ್ಥಾಪಿಸಬೇಕು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸಲಹೆ ನೀಡಿದರು.

ನಗರದಲ್ಲಿ ಬುಧವಾರ ನಡೆದ ಮಾವು ಬೆಳೆಗಾರರು ಮತ್ತು ರಫ್ತುದಾರರ ಸಮಾವೇಶದಲ್ಲಿ ಮಾತನಾಡಿದ ಅವರು, ‘ಉತ್ತರ ಕರ್ನಾಟಕದಲ್ಲಿ ಕಬ್ಬು ಬೆಳೆಗಾರರು ಸಂಘ ಸ್ಥಾಪಿಸಿಕೊಂಡು ಕಬ್ಬನ್ನು ಸಂಸ್ಕರಿಸಿ, ಶೇಖರಿಸಿಡುವ ಕೆಲಸ ಮಾಡುತ್ತಿದ್ದಾರೆ. ಅದೇ ಮಾದರಿಯನ್ನು ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ಮಾವು ಬೆಳೆಗಾರರೂ ಅನುಸರಿಸಿದರೆ ಅನುಕೂಲವಾಗುತ್ತದೆ’ ಎಂದರು.

ಬುಧವಾರ ನಡೆದ ಮಾವು ಬೆಳೆಗಾರರು ಮತ್ತು ರಫ್ತುದಾರರ ಸಮಾವೇಶವನ್ನು ಸಚಿವರಾದ ಡಾ.ಕೆ. ಸುಧಾಕರ್ ಮತ್ತು ಆರ್. ಶಂಕರ್ ಉದ್ಘಾಟಿಸಿದರು. ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ಮಂಡಳಿ ಅಧ್ಯಕ್ಷ ಕೆ.ವಿ. ನಾಗರಾಜ್ ಮತ್ತು ತೋಟಗಾರಿಕೆ ಇಲಾಖೆ ನಿರ್ದೇಶಕಿ ಫೌಜಿಯಾ ತರನ್ನುಮ್ ಉಪಸ್ಥಿತರಿದ್ದರು

ರಾಜ್ಯದಲ್ಲಿ 1.67 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಮಾವು ಬೆಳೆಯಲಾಗುತ್ತಿದೆ. ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳಲ್ಲೇ ವಾರ್ಷಿಕ 14 ಲಕ್ಷ ಟನ್ ಮಾವು ಬೆಳೆಯಲಾಗುತ್ತಿದೆ. ಇಷ್ಟು ದೊಡ್ಡ ಪ್ರಮಾಣದ ಬೆಳೆಯನ್ನು ಸಂಸ್ಕರಿಸಿ, ಶೇಖರಿಸಿ ಇಡಲು ಮೂಲಸೌಕರ್ಯ ಅಭಿವೃದ್ಧಿಪಡಿಸಬೇಕಿದೆ. ಅದಕ್ಕೆ ಪೂರಕವಾಗಿ ರೈತರು ಸಂಘಟಿತರಾಗಬೇಕು ಎಂದು ಹೇಳಿದರು.

ಕೃಷಿಕರು ಇಳುವರಿಯನ್ನೇ ಗಮನದಲ್ಲಿರಿಸಿಕೊಂಡು ರಾಸಾಯನಿಕಗಳ ಬಳಕೆ ಹೆಚ್ಚಿಸಬಾರದು. ಆರೋಗ್ಯದ ದೃಷ್ಟಿಯಿಂದ ಸಾವಯವ ಕೃಷಿಯತ್ತ ಗಮನಹರಿಸಬೇಕು. ಕೃಷಿ ಉತ್ಪನ್ನಗಳನ್ನು ಸಾಗಿಸಲು ಕೇಂದ್ರ ಸರ್ಕಾರ ಆರಂಭಿಸಿರುವ ಕಿಸಾನ್ ರೈಲು ಸೌಲಭ್ಯವನ್ನು ಬಳಸಿಕೊಳ್ಳಬೇಕು ಎಂದರು.

ತೋಟಗಾರಿಕಾ ಸಚಿವ ಆರ್. ಶಂಕರ್, ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ಮಂಡಳಿ ಅಧ್ಯಕ್ಷ ಕೆ.ವಿ. ನಾಗರಾಜ್, ತೋಟಗಾರಿಕೆ ಇಲಾಖೆ ನಿರ್ದೇಶಕಿ ಫೌಜಿಯಾ ತರನ್ನುಮ್ ಉಪಸ್ಥಿತರಿದ್ದರು.

ಒಂದು ತಿಂಗಳು ಸಂಗೀತ ಪ್ರೇಮಿಗಳಿಗೆ ರಸದೌತಣ

ವರ್ಚುವಲ್ ಮಾದರಿಯಲ್ಲಿ ರಾಮನವಮಿ ಸಂಗೀತೋತ್ಸವ

ಬೆಂಗಳೂರು: ಶ್ರೀ ರಾಮ ಸೇವಾ ಮಂಡಳಿಯು ಏ.13ರಿಂದ ಮೇ 13ರವರೆಗೆ 83ನೇಯ ಶ್ರೀರಾಮನವಮಿ ಅಂತರರಾಷ್ಟ್ರೀಯ ಸಂಗೀತೋತ್ಸವವನ್ನು ಹಮ್ಮಿಕೊಂಡಿದೆ. ಕೋವಿಡ್ ಕಾರಣ ಈ ಬಾರಿ ಸಂಗೀತೋತ್ಸವವು ವರ್ಚುವಲ್ ಮಾದರಿಯಲ್ಲಿ ನಡೆಯಲಿದೆ.

ಚಾಮರಾಜಪೇಟೆಯ ಹಳೆ ಕೋಟೆ ಶಾಲಾ ಮೈದಾನದಲ್ಲಿ ಸಂಗೀತೋತ್ಸವ ನಡೆಯಲಿದ್ದು, ಸೀಮಿತ ಸದಸ್ಯರಿಗೆ ಮಾತ್ರ ಅಲ್ಲಿ ಅವಕಾಶ ಇರುತ್ತದೆ. ಉಳಿದವರು ಆನ್‌ಲೈನ್ ವೇದಿಕೆಯಲ್ಲಿ ನೇರ ಪ್ರಸಾರವನ್ನು ವೀಕ್ಷಿಸಬಹುದಾಗಿದೆ. ಮಂಡಳಿಯ 2020ನೇ ಸಾಲಿನ ‘ರಾಮಗಾನ ಕಲಾಚಾರ್ಯ ಪ್ರಶಸ್ತಿ’ಯನ್ನು ಕಲಾವಿದರಾದ ರಂಜನಿ ಮತ್ತು ಗಾಯತ್ರಿ ಸಹೋದರಿಯರು ಹಾಗೂ ಮಲ್ಲಾಡಿ ಸಹೋದರರಿಗೆ ನೀಡುತ್ತಿದೆ. ಎಸ್.ವಿ. ನಾರಾಯಣಸ್ವಾಮಿ ರಾಯರ ನೆನಪಿನಲ್ಲಿ ಸ್ಥಾಪಿಸಲಾದ ‘ಎಸ್.ವಿ. ನಾರಾಯಣಸ್ವಾಮಿ ಗ್ಲೋಬಲ್ ಅವಾರ್ಡ್ ಫಾರ್ ಮ್ಯೂಸಿಕ್ ಪ್ರಶಸ್ತಿ’ಯನ್ನು ಕೌಶಿಕಿ ಚಕ್ರಭರ್ತಿ ಅವರಿಗೆ ನೀಡಿ, ಸನ್ಮಾನಿಸಲಾಗುತ್ತದೆ.

ರಾಮೋತ್ಸವದ ವಿಶೇಷ ಚಪ್ಪರದ ಗುದ್ದಲಿ ಪೂಜೆಯು ಇದೇ 22ರಂದು ಬೆಳಿಗ್ಗೆ 10.45ಕ್ಕೆ ಕೋಟೆ ಪ್ರೌಢಶಾಲೆ ಆವರಣದಲ್ಲಿ ನಡೆಯಲಿದೆ. ಸಂಗೀತೋತ್ಸವದಲ್ಲಿ ವಿಜಯ ಪ್ರಕಾಶ್, ಎಂ.ಎಸ್. ಶೀಲಾ, ಸಿಕ್ಕಿಲ್ ಗುರುಚರಣ್, ವಿಶ್ವ ಮೋಹನ್ ಭಟ್, ಪ್ರವೀಣ್ ಗೋಡ್ಖಿಂಡಿ, ಮ್ಯಾಂಡೋಲಿನ್ ಯು. ರಾಜೇಶ್, ಮಲ್ಲಾಡಿ ಸಹೋದರರು, ನಿರುಪಮಾ ರಾಜೇಂದ್ರ ಸೇರಿದಂತೆ ಹಲವು ಕಲಾವಿದರು ಕಾರ್ಯಕ್ರಮ ನೀಡಲಿದ್ದಾರೆ ಎಂದು ಮಂಡಳಿಯ ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಎಸ್.ಎನ್. ವರದರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾಸ್ ಬುಕ್ಕಿಂಗ್ ಮಾಡಲು: www.ramanavamitickets.com

ಆನ್‌ಲೈನ್ ಟಿಕೆಟ್ ಖರೀದಿಗೆ: www.shaale.com/watch/ramanavami

ಪಂಚಮಸಾಲಿ ಮೀಸಲಾತಿ ವಿರೋಧಿಗಳು ಕಾನೂನು ಹೋರಾಟ ನಡೆಸಲಿ: ಬಸವ ಜಯಮೃತ್ಯುಂಜಯ ಶ್ರೀ

ಮೀಸಲಾತಿ ಹೋರಾಟ ಹತ್ತಿಕ್ಕುವ ಪ್ರಯತ್ನ: ಆರೋಪ

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಎಲ್ಲರೊಂದಿಗೆ ಪ್ರೀತಿಯಿಂದ ಬೆರೆಯುವ, ಎಲ್ಲರಿಗೂ ಒಳಿತು ಮಾಡುತ್ತಿರುವ ರೈತ, ಕೂಲಿ ಕಾರ್ಮಿಕ, ದುಡಿಯುವವರೇ ತುಂಬಿರುವ ಪಂಚಮಸಾಲಿ ಸಮಾಜವು ಮೀಸಲಾತಿಗಾಗಿ ಹಮ್ಮಿಕೊಂಡಿರುವ ಹೋರಾಟವನ್ನು ಹತ್ತಿಕ್ಕುವ ಯತ್ನ ನಡೆಯುತ್ತಿದೆ' ಎಂದು ಕೂಡಲಸಂಗಮದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಆರೋಪಿಸಿದರು.

ಇಲ್ಲಿನ ಬಸವಣ್ಣದೇವರಮಠದಲ್ಲಿ ತಂಗಿದ್ದ ಹೋರಾಟ ಸಮಿತಿಯವರು ಬುಧವಾರ ಸಂಜೆ ಬೆಂಗಳೂರು ಕಡೆಗೆ ಪಾದಯಾತ್ರೆ ಮುಂದುವರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸ್ವಾಮೀಜಿ, 'ಮುಗ್ಧ ಹಿಂದುಳಿದ ಶೋಷಿತ ಸಮುದಾಯಗಳನ್ನು ಪರಸ್ಪರ ಎತ್ತಿಕಟ್ಟುವ ರಾಜಕೀಯ ಪ್ರೇರಿತ ಶಕ್ತಿಗಳು ನಮ್ಮ ಹೋರಾಟವನ್ನು ವಿರೋಧಿಸುತ್ತಿವೆ' ಎಂದು ಬೇಸರ ವ್ಯಕ್ತಪಡಿಸಿದರು.

'ಹಿಂದುಳಿದ ಸಮುದಾಯಗಳು ಹೋರಾಟ ಮಾಡಿದಾಗ ನಮ್ಮ ಸಮುದಾಯದವರು ಅವರಿಗೆ ಆಶ್ರಯ ಕೊಟ್ಟು, ಅವರ ಅಭಿವೃದ್ಧಿ ಬಯಸಿದ್ದರು. ಸಂವಿಧಾನದ ಚೌಕಟ್ಟಿನಲ್ಲಿ ಎಲ್ಲರಿಗೂ ಮೀಸಲಾತಿ ಕೇಳುವ ಹಕ್ಕಿದೆ. ನಾವು ಮಕ್ಕಳ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಮೀಸಲಾತಿ ಕೇಳುತ್ತಿದ್ದೇವೆಯೇ ಹೊರತು, ರಾಜಕೀಯ ಮೀಸಲಾತಿಯನ್ನಲ್ಲ. ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ನೀಡಬಾರದು ಎನ್ನುವ ಹಕ್ಕು ಯಾರಿಗೂ ಇಲ್ಲ. ನಮಗೆ ಮೀಸಲಾತಿ ನೀಡುವುದನ್ನು ವಿರೋಧಿಸುವವರು ಬೇಕಿದ್ದರೆ ಕಾನೂನಾತ್ಮಕ ಹೋರಾಟ ನಡೆಸಲಿ' ಎಂದರು.

'ನಮ್ಮ ಮನವಿಯನ್ನು ಮುಖ್ಯಮಂತ್ರಿಗಳು ಹಿಂದುಳಿದ ವರ್ಗಗಳ ಆಯೋಗಕ್ಕೆ ಕಳುಹಿಸಿದ್ದಾರೆ. ವರದಿ ನೀಡಲು ಕಾಲಾವಕಾಶ ಬೇಕು ಎಂದು ಆಯೋಗದ ಅಧ್ಯಕ್ಷರು ಹೇಳಿದ್ದಾರೆ. ಸಚಿವರಾದ ಸಿ.ಸಿ. ಪಾಟೀಲ, ಮುರುಗೇಶ ನಿರಾಣಿ ಅವರು ಮುಖ್ಯಮಂತ್ರಿಯವರ ಜೊತೆ ಈ ಬಗ್ಗೆ ಮಾತುಕತೆ ನಡೆಸುತ್ತಿದ್ದಾರೆ. ಗೃಹ ಸಚಿವ ಬಸವರಾಜ ಬೊಮ್ಮಾಯಿಯವರು ನಮ್ಮೊಂದಿಗೆ ಮಾತನಾಡಿದ್ದು, ಕಾನೂನಿನ ಅಡಿಯಲ್ಲಿ 'ಇದಕ್ಕೊಂದು ತಾರ್ಕಿಕ ಅಂತ್ಯ ನೀಡುವ ಭರವಸೆ ನೀಡಿದ್ದಾರೆ' ಎಂದರು.

'ಮುಖ್ಯಮಂತ್ರಿಯವರು ತಮ್ಮ ಪರ ಮಾಧ್ಯಮದ ಬಳಿ ಪಂಚಮಸಾಲಿಗಳಿಗೆ ಮೀಸಲಾತಿ ನೀಡುವ ಬಗ್ಗೆ ಇದೇ 21ರ ಒಳಗೆ ಸ್ಪಷ್ಟ ಆದೇಶ ಹೊರಡಿಸಬೇಕು. ಇಲ್ಲದಿದ್ದರೆ ವಿಧಾನಸೌಧಕ್ಕೆ ಪಾದಯಾತ್ರೆಯಲ್ಲಿ ತೆರಳಿ ಹೋರಾಟ ಮುಂದುವರಿಸುತ್ತೇವೆ' ಎಂದರು.

ಬಸವಣ್ಣದೇವರ ಮಠದ ಸಿದ್ಧಲಿಂಗಸ್ವಾಮೀಜಿ ಪಾದಯಾತ್ರೆಯಲ್ಲಿದ್ದವರನ್ನು ಬೀಳ್ಕೊಟ್ಟರು. ವಚನಾನಂದ ಸ್ವಾಮೀಜಿ, ಸಮುದಾಯದ ಮುಖಂಡ ಮೈಲಾರಪ್ಪ ಲೋಕೇಶ್ ಇದ್ದರು.

ಹಿಂದುಳಿದ ವರ್ಗಗಳ ಆಯೋಗಕ್ಕೆ ಪತ್ರ

ಬೆಂಗಳೂರು: 'ಪ್ರವರ್ಗ 2ಎ'ಗೆ ಸೇರಿಸಿ ಮೀಸಲಾತಿ ನೀಡುವಂತೆ ಪಂಚಮಸಾಲಿ ಸಮುದಾಯ ಹೋರಾಟ ನಡೆಸುತ್ತಿರುವ ಬೆನ್ನಲ್ಲೆ, ಮುಖ್ಯಮಂತ್ರಿ ಯಡಿಯೂರಪ್ಪ ಟಿಪ್ಪಣಿಯೊಂದಿಗೆ ಈ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿ ವರದಿ ಸಲ್ಲಿಸುವಂತೆ ಹಿಂದುಳಿದ ವರ್ಗಗಳ ಆಯೋಗಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಪತ್ರ ಬರೆದಿದ್ದಾರೆ.

ಮೀಸಲಾತಿಗೆ ಆಗ್ರಹಿಸಿ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಪಂಚಮಸಾಲಿ ಸಮುದಾಯದಿಂದ ಹೋರಾಟ ನಡೆಯುತ್ತಿದ್ದು, ಇದೇ 21ರಂದು ಅರಮನೆ ಮೈದಾನದಲ್ಲಿ ಬೃಹತ್ ಸಮಾವೇಶ ನಡೆಸಲು ಸಿದ್ಧತೆ ನಡೆದಿದೆ.

'ನಮ್ಮ ಜನಾಂಗ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಔದ್ಯೋಗಿಕವಾಗಿ ಹಿಂದುಳಿದಿದೆ. ಸಮಾಜದ ಏಳಿಗೆಗೆ ಮೀಸಲಾತಿಯೇ ಮುಖ್ಯವಾಗಿರುವುದರಿಂದ, ಹಿಂದುಳಿದ ವರ್ಗ 2-ಎ ಮೀಸಲಾತಿಗೆ ಸೇರಿಸಿ' ಎಂದು ಆಗ್ರಹಿಸಿ ಪಂಚಮಸಾಲಿ ಸಮುದಾಯದ ಪ್ರಮುಖರು ಹಿಂದುಳಿದ ವರ್ಗಗಳ ಆಯೋಗಕ್ಕೆ ಮನವಿ ಸಲ್ಲಿಸಿದ್ದಾರೆ.

'ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ 1995ರಡಿಯಲ್ಲಿ ರಾಜ್ಯದ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆ ನಡೆಸಬೇಕು. ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ನಾಗರಿಕರ ವರ್ಗಗಳನ್ನು ಗುರುತಿಸಲು ಸಮಗ್ರ ಅಧ್ಯಯನ ಮಾಡಿ ವರದಿ ಸಲ್ಲಿಸಬೇಕು ಎಂದು ಮುಖ್ಯಮಂತ್ರಿ ಟಿಪ್ಪಣಿಯಲ್ಲಿ ಸೂಚಿಸಿದ್ದಾರೆ.

ಪಾದಯಾತ್ರೆ ಮುಂದುವರಿಸಿರುವ ಬಸವ ಜಯಮೃತ್ಯುಂಜಯ ಸ್ವಾಮೀಜಿ, ವಚನಾನಂದ ಸ್ವಾಮೀಜಿ ಹಾಗೂ ಹೋರಾಟ ಸಮಿತಿಯವರನ್ನು ಬಸವಣ್ಣದೇವರ ಮಠದ ಸಿದ್ಧಲಿಂಗ ಸ್ವಾಮೀಜಿಯವರು ನೆಲಮಂಗಲದಲ್ಲಿ ಬುಧವಾರ ಬೀಳ್ಕೊಟ್ಟರು.

ಸುದ್ದಿ 2 ನಿಮಿಷ

ಉನ್ನತ ಶಿಕ್ಷಣಕ್ಕೆ ಅನುದಾನ ಹೆಚ್ಚಿಸಲು ಕೋರಿಕೆ: ಸಚಿವ

ಕೆ.ಆರ್.ನಗರ (ಮೈಸೂರು): ಬಜೆಟ್‌ನಲ್ಲಿ ಉನ್ನತ ಶಿಕ್ಷಣಕ್ಕೆ ಶೇ 2ರಷ್ಟು ಅನುದಾನವಿದ್ದು, ಅದನ್ನು ಶೇ 3.5ಕ್ಕೆ ಹೆಚ್ಚಿಸುವಂತೆ ಕೋರಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಬುಧವಾರ ಇಲ್ಲಿ ತಿಳಿಸಿದರು.



'ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರು ಎಂಬ ಪರಿಕಲ್ಪನೆಯೇ ಇರಬಾರದು. ಎಲ್ಲರೂ ಕಾಯಂ ಉದ್ಯೋಗಿಗಳಾಗಬೇಕು. ಈ ಮೂಲಕ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು. ಹೊಸದಾಗಿ ಎಂಟು ಸಾವಿರ ಹುದ್ದೆ ಸೃಷ್ಟಿಸಲು ಕೋರಲಾಗುವುದು' ಎಂದರು.

'ಹಂತ ಹಂತವಾಗಿ ಆಡಳಿತದಲ್ಲಿ ಸುಧಾರಣೆ ತರಲು ಯೋಜನೆ ರೂಪಿಸಿದ್ದೇವೆ. ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಆರ್ಥಿಕ, ಶೈಕ್ಷಣಿಕ ಸ್ವಾಯತ್ತೆ ಸಿಗಬೇಕು. ಈ ಮೂಲಕ ಶಿಕ್ಷಣ ಸಂಸ್ಥೆಗಳೇ ಎಲ್ಲವನ್ನೂ ನಿರ್ವಹಣೆ ಮಾಡಬೇಕು' ಎಂದು ಹೇಳಿದರು.

ಶಿವಮೊಗ್ಗದಲ್ಲಿ ರಾಜ್ಯದ ಮೊದಲ 'ರೈತ ಮಹಾಪಂಚಾಯತ್'

ಶಿವಮೊಗ್ಗ: ವಿವಾದಿತ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಆಗ್ರಹಿಸಿ ರೈತರು ನಡೆಸುತ್ತಿರುವ ಹೋರಾಟ ದಿನೇ ದಿನೇ ತೀವ್ರಗೊಳ್ಳುತ್ತಿದ್ದು, ಮುಖ್ಯಮಂತ್ರಿ ತವರು ಜಿಲ್ಲೆ ಶಿವಮೊಗ್ಗದಲ್ಲಿ ಮಾರ್ಚ್ 3ರಂದು ರಾಜ್ಯದ ಮೊದಲ 'ರೈತ ಮಹಾಪಂಚಾಯತ್' ನಡೆಸಲು ರೈತ ಮುಖಂಡರು ನಿರ್ಧರಿಸಿದ್ದಾರೆ.

'ನಗರದಲ್ಲಿ ನಡೆದ ಸಂಕಲ್ಪ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿದ್ದು, ದಿನಾಂಕ ಅಂತಿಮಗೊಂಡಿಲ್ಲ. ದೆಹಲಿಯಲ್ಲಿ ರೈತ ಹೋರಾಟ ಮುನ್ನಡೆಸುತ್ತಿರುವ ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರಾದ ಡಾ.ದರ್ಶನ್ ಪಾಲ್, ಬಲ್‌ಬೀರ್ ಸಿಂಗ್ ರಾಜೆವಾಲ್ ಮತ್ತು ಬಿಕೆಯು ಮುಖ್ಯಸ್ಥ ರಾಕೇಶ್ ಟಿಕಾಯತ್ ಅವರನ್ನು ಆಹ್ವಾನಿಸಲು ತೀರ್ಮಾನಿಸಲಾಗಿದೆ. ರಾಜ್ಯ ರೈತ ಸಂಘದ ಮುಖಂಡರಾದ ಕೋಡಿಹಳ್ಳಿ ಚಂದ್ರಶೇಖರ್, ಬಡಗಲಪುರ ನಾಗೇಂದ್ರ ಸೇರಿ ವಿವಿಧ ರೈತ ಮುಖಂಡರು, ದಲಿತ ಮುಖಂಡರು, ಎಡಪಕ್ಷಗಳ ಮುಖಂಡರು, ಕಾರ್ಮಿಕ ಮುಖಂಡರು, ಮಹಿಳಾ ಮುಖಂಡರು ಪಾಲ್ಗೊಳ್ಳಲಿದ್ದಾರೆ' ಎಂದು ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಎಚ್.ಆರ್. ಬಸವರಾಜಪ್ಪ ತಿಳಿಸಿದ್ದಾರೆ.

'₹ 4,636 ಕೋಟಿ ವೆಚ್ಚದಲ್ಲಿ ಐಟಿಐ ಉನ್ನತೀಕರಣ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ರಾಜ್ಯದ ಕೈಗಾರಿಕಾ ತರಬೇತಿ ಕೇಂದ್ರಗಳನ್ನು (ಐಟಿಐ) ಟಾಟಾ ಟೆಕ್ನಾಲಜಿ ಸಂಸ್ಥೆಯ ಸಹಯೋಗದಲ್ಲಿ ₹ 4,636 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ನಗರದಲ್ಲಿ ಅವರು ಬುಧವಾರ ಸುದ್ದಿಗಾರರ ಜತೆ ಮಾತನಾಡಿದರು.

'ಐಟಿಐಗಳನ್ನೂ ಉನ್ನತೀಕರಿಸುವ ಮೂಲಕ ಯುವಜನರಿಗೆ ಹೆಚ್ಚಿನ ಕೌಶಲ ಒದಗಿಸಲಾಗುತ್ತಿದೆ. ಸರ್ಕಾರದ 2020-21ರ ಕೈಗಾರಿಕಾ ನೀತಿಯಿಂದ ಹೆಚ್ಚಿನ ಉದ್ಯೋಗ ಸೃಷ್ಟಿಸುವ ಕೈಗಾರಿಕೆಗಳಿಗೆ ವಿಶೇಷ ಪ್ರೋತ್ಸಾಹ ದೊರಕಲಿದೆ. ಉದ್ಯೋಗ ಸೃಷ್ಟಿಗೆ ಒತ್ತು ನೀಡಲಾಗುತ್ತಿದೆ. ರಸ್ತೆ, ನೀರು ಪೂರೈಕೆ, ವಿದ್ಯುತ್ ಮತ್ತಿತರ ಸೌಲಭ್ಯಗಳನ್ನು ತ್ವರಿತಗತಿಯಲ್ಲಿ ಒದಗಿಸಲಾಗುತ್ತಿದೆ. ಬಂಡವಾಳ ಹೂಡಿಕೆಗೆ ಉತ್ತೇಜನ ನೀಡಲಾಗುತ್ತಿದೆ. ಪ್ರಸ್ತುತ ಕೈಗಾರಿಕಾ ಹೂಡಿಕೆಯಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ' ಎಂದರು.

ಒಳಮೀಸಲಾತಿ: ಮಾ.25ರಿಂದ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಹರಿಹರ: ಅಸ್ಪೃಶ್ಯ ಸಮಾಜದ ಸಂವಿಧಾನಿಕ ಹಕ್ಕು ಹಾಗೂ ನ್ಯಾಯ ಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯಂತೆ ಒಳಮೀಸಲಾತಿಗೆ ಆಗ್ರಹಿಸಿ ಮಾರ್ಚ್ 25ರಿಂದ ಹರಿಹರ ದಿಂದ ಬೆಂಗಳೂರಿಗೆ ಪಾದಯಾತ್ರೆ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಹಿರಿಯೂರು ಕೋಡಿಹಳ್ಳಿ ಆದಿಜಾಂಬವ ಪೀಠದ ಷಡಕ್ಷರ ಮುನಿ ದೇಶಿಕೇಂದ್ರ ಸ್ವಾಮೀಜಿ ಘೋಷಿಸಿದರು.

ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿ ಬಳಿಯ ಪ್ರೊ.ಬಿ. ಕೃಷ್ಣಪ್ಪ ಸ್ಮಾರಕ ಭವನ ಮೈತ್ರಿ ವನದಲ್ಲಿ ಬುಧವಾರ ಅಸ್ಪೃಶ್ಯ ಸಮುದಾಯಗಳ ಮಠಾಧೀಶರ ಒಕ್ಕೂಟದಿಂದ ನಡೆದ ಪಾದಯಾತ್ರೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಷಡಕ್ಷರ ಮುನಿ ದೇಶಿಕೇಂದ್ರ ಸ್ವಾಮೀಜಿ

ಅಸ್ಪೃಶ್ಯ ಸಮಾಜಗಳಿಗೆ ಜನಸಂಖ್ಯೆಗನುಗುಣವಾಗಿ ಒಳಮೀಸಲಾತಿ ಪಡೆಯುವ ಅಂತಿಮ ಹೋರಾಟವಾಗಿದೆ. ಸಮುದಾಯದ ಎಲ್ಲ ಮಠಾಧೀಶರು, ಜನಪ್ರತಿನಿಧಿಗಳು, ಮುಖಂಡರು, ಚಿಂತಕರು ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಮರೆತು ಹೋರಾಟದಲ್ಲಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ಪಾದಯಾತ್ರೆ ಹರಿಹರದಿಂದ ಆರಂಭವಾಗಿ ಏ. 21ಕ್ಕೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಸಮಾರೋಪ ಕಾರ್ಯಕ್ರಮ ಹಾಗೂ ಜಾಗೃತಿ ಸಮಾವೇಶದೊಂದಿಗೆ ಪೂರ್ಣಗೊಳ್ಳಲಿದೆ. ಹೋರಾಟದ ಸಿದ್ಧತೆಗಾಗಿ ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಜಾಗೃತಿ ಸಭೆಗಳನ್ನು ನಡೆಸಲಾಗುವುದು ಎಂದು ತಿಳಿಸಿದರು.

ಐಮಂಗಲದ ಮಹಾ ಶಿವಶರಣ ಹರಳಯ್ಯ ಗುರುಪೀಠದ ಬಸವ ಹರಳಯ್ಯ ಸ್ವಾಮೀಜಿ ಮಾತನಾಡಿ, 'ಕಳೆದ ಎರಡು ದಶಕಗಳಿಂದ ಅಸಂಘಟಿತ ಹೋರಾಟದಲ್ಲಿ ಸಮಯ ವ್ಯರ್ಥವಾಗಿದೆ. ಜನಸಂಖ್ಯೆ ಆಧಾರದಲ್ಲಿ ಮೀಸಲಾತಿ ಜಾರಿಯಾಗುವರೆಗೂ ಹೋರಾಟ ನಿರಂತರವಾಗಿರುತ್ತದೆ. ಸಮಾಜದ ನಿರ್ಣಯವನ್ನು ಪ್ರತಿ ಮನೆಗೂ ತಲುಪಿಸುವುದು ಮುಖಂಡರ ಕರ್ತವ್ಯ' ಎಂದರು.

ಮಹಿಳೆ ಮೇಲೆ ಅತ್ಯಾಚಾರ, ಕೊಲೆ; ಐವರ ಬಂಧನ

ಮೈಸೂರು: ನಗರದ ಕೆ.ಟಿ.ಸ್ಟ್ರೀಟ್‌ನಲ್ಲಿ ಸೋಮವಾರ ತಡರಾತ್ರಿ ನಡೆದ 50 ವರ್ಷದ ಮಹಿಳೆಯೊಬ್ಬರ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಭಿಕ್ಷೆ ಬೇಡಿ ಜೀವನ ಸಾಗಿಸುತ್ತ, ರಸ್ತೆ ಬದಿಯಲ್ಲೇ ಮಲಗುತ್ತಿದ್ದ ಮಹಿಳೆಗೆ ಆರೋಪಿಗಳು ಮದ್ಯ ಕುಡಿಸಿ. ನಂತರ, ಸಾಮೂಹಿಕವಾಗಿ ಅತ್ಯಾಚಾರ ಎಸಗಿದ್ದಾರೆ. ಈ ವೇಳೆ ಆಘಾತಕ್ಕೆ ಒಳಗಾದ ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮಹಿಳೆಯ ಗುರುತು ಪತ್ತೆಯಾಗಿಲ್ಲ. ಐವರು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಡಿಸಿಪಿ ಡಾ.ಎ.ಎನ್.ಪ್ರಕಾಶ್‌ಗೌಡ ತಿಳಿಸಿದರು.

ಪ್ರವಾಸೋದ್ಯಮ ಅಭಿವೃದ್ಧಿಗೆ ಸಾರಿಗೆ ಇಲಾಖೆ ಸಹಭಾಗಿತ್ವ

ಬೆಂಗಳೂರು: ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವಾಹನಗಳಿಗೆ ಹೈ ಸ್ಪೀಡ್ ಡೀಸೆಲ್ ಪೂರೈಕೆ, ತೆರೆದ ಚಾವಣಿಯ ಅನುಪಯುಕ್ತ ಬಸ್‌ಗಳನ್ನು ಒದಗಿಸುವುದು, ಬಸ್ ನಿಲುಗಡೆಗೆ ಸ್ಥಳಾವಕಾಶ ಕಲ್ಪಿಸುವುದು ಸೇರಿದಂತೆ ಪ್ರವಾಸೋದ್ಯಮ ಅಭಿವೃದ್ಧಿಗೆ ಅಗತ್ಯವಿರುವ ಸಹಕಾರ ನೀಡುವಂತೆ ರಾಜ್ಯದ ಎಲ್ಲ ಸಾರಿಗೆ ನಿಗಮಗಳಿಗೆ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಸೂಚನೆ ನೀಡಿದರು.

ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸಾರಿಗೆ ನಿಗಮಗಳು ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ನಿಗಮಗಳು ಸಮನ್ವಯದಿಂದ ಕಾರ್ಯ-ನಿರ್ವಹಿಸುವುದಕ್ಕೆ ಪೂರಕವಾಗಿ ಬುಧವಾರ ವಿಕಾಸಸೌಧದಲ್ಲಿ ಉನ್ನತ ಮಟ್ಟದ ಸಭೆ ನಡೆಸಿದ ಸಾರಿಗೆ ಸಚಿವರೂ ಆಗಿರುವ ಸವದಿ, ಈ ಸಂಬಂಧ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆಗಳನ್ನು ನೀಡಿದರು.

ಪೀಣ್ಯದಲ್ಲಿರುವ ಸಾರಿಗೆ ಇಲಾಖೆಯ ಜಮೀನಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಬೇಕೆಂಬ ಕೋರಿಕೆ ಕುರಿತು ಸ್ಥಳ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವಂತೆ ಸಚಿವರು ನಿರ್ದೇಶನ ನೀಡಿದರು. ಅನುಪಯುಕ್ತವಾಗಿ ನಿಂತಿರುವ ತೆರೆದ ಚಾವಣಿಯ ಬಸ್‌ಗಳನ್ನು ವಾರದೊಳಗೆ ಕಡಿಮೆ ದರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ಹಸ್ತಾಂತರಿಸುವಂತೆಯೂ ಸೂಚಿಸಿದರು ಎಂದು ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಶ್ರುತಿ ತಿಳಿಸಿದ್ದಾರೆ.

ನಿಗಮದ ವಾಹನಗಳಿಗೂ ಹೈಸ್ಪೀಡ್ ಡೀಸೆಲ್ ಒದಗಿಸಲು ಸಚಿವರು ಸೂಚಿಸಿದ್ದಾರೆ. ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವಾಹನಗಳಿಗೆ ತೆರಿಗೆಯಲ್ಲಿ ರಿಯಾಯಿತಿ ನೀಡಬೇಕೆಂಬ ಬೇಡಿಕೆ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದು ಹೇಳಿದ್ದಾರೆ.

26ಕ್ಕೆ ಶರತ್ ಬಚ್ಚೇಗೌಡ ಕಾಂಗ್ರೆಸ್ ತೆಕ್ಕೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದ ಬಿ.ಎನ್. ಬಚ್ಚೇಗೌಡ ಪುತ್ರ, ಹೊಸಕೋಟೆ ಕ್ಷೇತ್ರದ ಪಕ್ಷೇತರ ಶಾಸಕ ಶರತ್ ಬಚ್ಚೇಗೌಡ ಇದೇ 26ರಂದು ಕಾಂಗ್ರೆಸ್ ಸೇರಲಿದ್ದಾರೆ.

ಶರತ್ ಬಚ್ಚೇಗೌಡ

ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಶರತ್ ಅವರನ್ನು ಪಕ್ಷಕ್ಕೆ ಬರಮಾಡಿಕೊಳ್ಳಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಖಚಿತಪಡಿಸಿವೆ.

ಶರತ್ ಅವರು ಕಾಂಗ್ರೆಸ್ ಸೇರ್ಪಡೆ ವಿಚಾರ ಕೆಲವು ತಿಂಗಳುಗಳಿಂದ ಚರ್ಚೆಗೆ ಗ್ರಾಸವಾಗಿತ್ತು. ರಾಜ್ಯ ಕಾಂಗ್ರೆಸ್ ನಾಯಕರ ಜೊತೆ ಹಲವು ಸುತ್ತಿನ ಚರ್ಚೆಯ ಬಳಿಕ ಇದೀಗ ಸೇರ್ಪಡೆ ದಿನ ನಿಗದಿಯಾಗಿದೆ.

2018ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಶರತ್ ಬಚ್ಚೇಗೌಡ, ಹಿಂದೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಎಂ.ಟಿ.ಬಿ ನಾಗರಾಜ್ ವಿರುದ್ಧ ಸೋಲು ಕಂಡಿದ್ದರು. ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಸಚಿವರಾಗಿದ್ದ ಎಂ.ಟಿ.ಬಿ ನಾಗರಾಜ್, ಬಳಿಕ ನಡೆದ ರಾಜಕೀಯ ಬೆಳವಣಿಗೆಯಲ್ಲಿ, ಶಾಸಕ ಮತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಬಿಜೆಪಿ ಸೇರಿದ್ದರು.

ಹೊಸಕೋಟೆ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಎಂ.ಟಿ.ಬಿ ನಾಗರಾಜ್, ಬಿಜೆಪಿಯಿಂದ ಟಿಕೆಟ್ ಸಿಗದ ಕಾರಣಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಶರತ್ ಬಚ್ಚೇಗೌಡ ವಿರುದ್ಧ ಪರಾಭವಗೊಂಡಿದ್ದರು.

ಕಾಂಗ್ರೆಸ್ ಸೇರಿದ ಬಳಿಕ, ಮಾರ್ಚ್ ಮೊದಲ ವಾರದಲ್ಲಿ ಹೊಸಕೋಟೆಯಲ್ಲಿ ಕಾಂಗ್ರೆಸ್ ಪಕ್ಷದ ಬೃಹತ್ ಸಮಾವೇಶ ನಡೆಸಿ ತಮ್ಮ ಶಕ್ತಿ ಪ್ರದರ್ಶನಕ್ಕೆ ಶರತ್ ನಿರ್ಧರಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯ

NAAC Accredited with 'A' GRADE

ಜ್ಞಾನಭಾರತಿ, ಬೆಂಗಳೂರು – 560056

ಸಂಖ್ಯೆ: ಎಸಿಎ.4/ಸ್ನಾ.ಪ./2020–2021 ದಿನಾಂಕ: 17.02.2021

ಅಧಿಸೂಚನೆ

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ: 16.02.2021

ಬೆಂಗಳೂರು ವಿಶ್ವವಿದ್ಯಾಲಯ ದಿನಾಂಕ 06.11.2020, 23.11.2020 ಮತ್ತು 04.12.2020 ಸಮಸಂಖ್ಯೆ 2020–21ನೇ ಸ್ನಾತಕೋತ್ತರ ಪದವಿ ಪ್ರವೇಶಾತಿಯ ಅಧಿಸೂಚನೆಯನ್ನು ಮುಂದುವರೆಸಿ ಆಫ್‌–ಲೈನ್ (ಮುಖಾ–ಮುಖಿ) ಪ್ರವೇಶ ಪ್ರಕ್ರಿಯೆಯ ದಿನಾಂಕಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಿದೆ.

ಪ್ರವೇಶ ಪ್ರಕ್ರಿಯೆಯ ದಿನಾಂಕಗಳು	
ಅ) ಕಲಾ, ವಿಜ್ಞಾನ ಮತ್ತು ಶಿಕ್ಷಣ ವಿಭಾಗಗಳಿಗೆ ಪ್ರವೇಶ ಪ್ರಕ್ರಿಯೆ ದಿನಾಂಕಗಳು	22 ಮತ್ತು 24 ಫೆಬ್ರವರಿ 2021 ರಂದು ಜ್ಞಾನಭಾರತಿ ಆವರಣದಲ್ಲಿರುವ ಸಂಬಂಧಪಟ್ಟ ವಿಭಾಗಗಳಲ್ಲಿ ನಡೆಯಲಿದೆ.
1) ಇತಿಹಾಸ ವಿಭಾಗಕ್ಕೆ ಪ್ರವೇಶ ಪ್ರಕ್ರಿಯೆ ದಿನಾಂಕ	22 ಮತ್ತು 24 ಫೆಬ್ರವರಿ 2021 ರಂದು ಎಚ್. ಎನ್. ಆಡಿಟೋರಿಯಂ (Lounge) ಜ್ಞಾನಭಾರತಿ ಆವರಣ.
2) ರಾಜ್ಯಶಾಸ್ತ್ರ ವಿಭಾಗಕ್ಕೆ ಪ್ರವೇಶ ಪ್ರಕ್ರಿಯೆ ದಿನಾಂಕ	22 ಮತ್ತು 24 ಫೆಬ್ರವರಿ 2021 ರಂದು ಎಚ್. ಎನ್. ಆಡಿಟೋರಿಯಂ (Back Entrance) ಜ್ಞಾನಭಾರತಿ ಆವರಣ.
3) ಅರ್ಥಶಾಸ್ತ್ರ ವಿಭಾಗಕ್ಕೆ ಪ್ರವೇಶ ಪ್ರಕ್ರಿಯೆ ದಿನಾಂಕ	22 ಮತ್ತು 24 ಫೆಬ್ರವರಿ 2021 ರಂದು ಎಚ್. ಎನ್. ಆಡಿಟೋರಿಯಂ (Main Entrance) ಜ್ಞಾನಭಾರತಿ ಆವರಣ.
ಆ) ರಸಾಯನ ಶಾಸ್ತ್ರ ಮತ್ತು ಜೈವಿಕ ರಸಾಯನ ಶಾಸ್ತ್ರ ವಿಭಾಗಕ್ಕೆ ಪ್ರವೇಶ ಪ್ರಕ್ರಿಯೆ ದಿನಾಂಕ	22 ಮತ್ತು 24 ಫೆಬ್ರವರಿ 2021 ರಂದು ಪ್ರೊ. ಕೆ. ವೆಂಕಟಗಿರಿ ಗೌಡ ಮೆಮೋರಿಯಲ್ ಹಾಲ್, ಜ್ಞಾನಭಾರತಿ ಆವರಣ.
ಇ) ವಾಣಿಜ್ಯ ವಿಭಾಗಕ್ಕೆ ಪ್ರವೇಶ ಪ್ರಕ್ರಿಯೆ ದಿನಾಂಕ	22 ಮತ್ತು 23 ಫೆಬ್ರವರಿ 2021 ರಂದು ಡಾ. ಎಂ. ಎಸ್. ತಿಮ್ಮಪ್ಪ ಹಾಲ್ (Psychology Building), ಜ್ಞಾನಭಾರತಿ ಆವರಣ.

ಸಹಿ/–, ಕುಲಸಚಿವರು

ಬೆಂಗಳೂರು ವಿಶ್ವವಿದ್ಯಾಲಯ

ಪರೀಕ್ಷಾ ಭವನ, ಜ್ಞಾನಭಾರತಿ, ಬೆಂಗಳೂರು–560 056.

ಸಂಖ್ಯೆ:ಇಎಕ್ಸ್–II/ಪಿಹೆಚ್.ಡಿ/2ನೇ ಕೌನ್ಸಿಲಿಂಗ್/2021 ದಿನಾಂಕ: 17-02-2021

ಅಧಿಸೂಚನೆ

2ನೇ ಸುತ್ತಿನ ಪಿಹೆಚ್.ಡಿ ಸೀಟುಗಳ ಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ: 17-02-2021

2019ರಲ್ಲಿ ಪಿಹೆಚ್.ಡಿ ನೋಂದಣಿಗಾಗಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿರುವ ಮಾರ್ಗದರ್ಶಕರುಗಳ ಬಳಿ ಬಾಕಿ ಉಳಿದಿರುವ ಸೀಟುಗಳಿಗಾಗಿ, 2ನೇ ಸುತ್ತಿನ ಹಂಚಿಕೆ ಪ್ರಕ್ರಿಯೆಯು (2nd Round Ph.D Counselling) ದಿನಾಂಕ: 23–02–2021 ರಂದು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳಲ್ಲಿ ಬೆಳಿಗ್ಗೆ 9:30 ಗಂಟೆಗೆ ನಡೆಸಲಾಗುವುದೆಂದು ತಿಳಿಸಲಾಗಿದೆ ಹಾಗೂ ಬಾಕಿ ಉಳಿದಿರುವ ಸೀಟುಗಳ ವಿವರಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.bangaloreuniversity.ac.in ನಲ್ಲಿ ನೋಡಬಹುದು.

ಮೊದಲನೇ ಸುತ್ತಿನ ಪ್ರವೇಶ ಪ್ರಕ್ರಿಯೆಯಲ್ಲಿ ಭಾಗವಹಿಸದ ಹಾಗೂ ಹಂಚಿಕೆಯಾಗದ ಅರ್ಜಿದಾರರು 2ನೇ ಸುತ್ತಿನ ಪ್ರವೇಶ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

ಸಹಿ/–, ಕುಲಸಚಿವರು (ಮೌಲ್ಯಮಾಪನ)

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)

ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069.

ದೂರವಾಣಿ: +91–80–22977666/276/216/217/433 ಟೆಲಿ–ಫ್ಯಾಕ್ಸ್:080–26534625/477

ಇ–ಮೇಲ್: director@jayadevacardiology.com/sjicrprojectengineer@gmail.com

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಎಸ್‌ಜೆಐಸಿಆರ್) ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಸಾಮಗ್ರಿಗಳನ್ನು ಸರಬರಾಜು ಮಾಡಲು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ವಿವರಗಳು
1	ಎಸ್‌ಜೆಐಸಿ&ಆರ್/ಟಿಎಸ್/79/ 2020–21 ದಿನಾಂಕ: 17.02.2021	ಇಂಟ್ರಾ ವ್ಯಾಸ್ಕ್ಯುಲರ್ ಲಿಥೋಟ್ರಿಪ್ಸಿ (ಐವಿಎಲ್)ನ ಸರಬರಾಜು – 1 No.
2	ಎಸ್‌ಜೆಐಸಿ&ಆರ್/ಟಿಎಸ್/80/ 2020–21 ದಿನಾಂಕ:	ಎಸ್‌ಜೆಐಸಿಆರ್ – ಇನ್ಫೋಸಿಸ್ ಫೌಂಡೇಶನ್, 11ಕೆವಿ ಉಪಕೇಂದ್ರ, ಎಸ್‌ಜೆಐಸಿಆರ್ ಬೆಂಗಳೂರಿನ ಆವರಣದಲ್ಲಿ ಹೆಚ್‌ಟಿ ವಿದ್ಯುತ್ ಸರಬರಾಜು ಒದಗಿಸಲು ಹೆಚ್‌ಟಿ ಪ್ಯಾನೆಲ್, ವಿಸಿಬಿ 3 ಪ್ಯಾನೆಲ್‌ನ್ನು ಸರಬರಾಜು ಮಾಡುವುದು, ಸ್ಥಾಪಿಸುವುದು, ಪರೀಕ್ಷಿಸುವುದು ಹಾಗೂ ಕಾಯಾಚರಣೆಗೊಳಿಸುವುದು.

1. ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು https://eproc.karnataka.gov.in ವೆಬ್‌ಸೈಟ್‌ನಿಂದ ದಿನಾಂಕ : 19–02–2021 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : 05–03–2021ರ ಸಂಜೆ 4.00 ಗಂಟೆಯವರೆಗೆ.
2. ಪ್ರಿ–ಬಿಡ್ ಮೀಟಿಂಗ್ ದಿನಾಂಕ : 27–02–2021ರ ಬೆಳಿಗ್ಗೆ 11–30 ಗಂಟೆಗೆ.
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 06–03–2021ರ ಸಂಜೆ 4–00 ಗಂಟೆಗೆ.
4. ಇ.ಎಂ.ಡಿ. : ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಿರುವಂತೆ.
5. ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: www.jayadevacardiology.com ನ್ನು ನೋಡಬಹುದು.
6. ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ/ಪೂರ್ಣವಾಗಿ ಒಪ್ಪಿಕೊಳ್ಳುವ/ತಿರಸ್ಕರಿಸುವ/ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.

ಸಹಿ/–
ಮುಖ್ಯ ಆಡಳಿತಾಧಿಕಾರಿಗಳು.

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.

Email:itstaff_ulb_channarayapatna@yahoo.co.in, Phone:08176-255411

ನಂ,ಮುನಿಸಿ(3)ಕಂ,ಶಾ:ಸಿಆರ್01:2020–21 ದಿನಾಂಕ:–15–02–2021

–: ಇ–ಪ್ರಕ್ಯೂರ್‌ಮೆಂಟ್ ಹರಾಜು ಇಸ್ತಿಹಾರ್ ಪ್ರಕಟಣೆ :–

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಚನ್ನರಾಯಪಟ್ಟಣ ಪುರಸಭೆಯ ಕೆಳಕಂಡ ಬಾಬುಗಳನ್ನು 2021–22ನೇ ಸಾಲಿಗೆ ದಿನಾಂಕ:01–04–2021 ರಿಂದ 31–03–2022ರವರೆಗಿನ ಆಯಾ ಬಾಬ್ತುಗಳ ಮುಂದೆ ನಮೂದಿಸಿರುವ ದಿನಾಂಕದಂದು ಇ–ಪ್ರಕ್ಯೂರ್‌ಮೆಂಟ್ ಮೂಲಕ ಹರಾಜು ಮೂಲಕ ವಿಲೇ ಮಾಡಲಾಗುವುದು. (ಪುರಸಭೆಯ ಸಾಮಾನ್ಯ ಸಭೆಯ ದಿನಾಂಕ:09–02–2021ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.18ರ ತೀರ್ಮಾನದಂತೆ) ಇಚ್ಛೆ ಉಳ್ಳವರು ದಿನಾಂಕ:26–02–2021 ರಂದು ನಡೆಯುವ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿ ಇ–ಪ್ರಕ್ಯೂರ್‌ಮೆಂಟ್ ಹರಾಜು ಷರತ್ತುಗೊಳಪಟ್ಟು ಬಾಬ್ತುಗಳನ್ನು ರೂಢಿಸಿಕೊಳ್ಳಬಹುದಾಗಿರುತ್ತದೆ. ಇ–ಪ್ರಕ್ಯೂರ್‌ಮೆಂಟ್ ಹರಾಜಿನ ಷರತ್ತುಗಳನ್ನು ಇನ್ನತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಂದಾಯ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ. ಕ್ರಸಂ:1)ಬಾಬುಗಳ ವಿವರ: ವಾರದ ಸಂತೆ ಸುಂಕ ಹರಾಜಿನ ದಿನಾಂಕ: 26–02–2021 ವೇಳೆ: ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 14.30 ರವರೆಗೆ ಠೇವಣಿ ಮಾಡಬೇಕಾದ ಮೊಬಲಗು: 1,99,650/– 2)ಡೈಲಿ ಸಂತೆ ಸುಂಕ ಹರಾಜಿನ ದಿನಾಂಕ: 26–02–2021 ವೇಳೆ: ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 14.30 ರವರೆಗೆ ಠೇವಣಿ ಮಾಡಬೇಕಾದ ಮೊಬಲಗು: 1,99,650/– ಸೂಚನೆ:– 1.ಬಾರಾಮಾರ್ಗ ಹೋಗತಕ್ಕವುಗಳಿಗೆ ಸುಂಕ ವಸೂಲಿ ಮಾಡತಕ್ಕದ್ದು, ಬಾರಾಮಾರ್ಗ ಹೋಗತಕ್ಕ ಮತ್ತು ಬರತಕ್ಕವುಗಳ ಮುನಿಸಿಪಲ್ ಬೌಂಡರಿಯಲ್ಲಿ ಬಿ.ಎಂ ರಸ್ತೆ, ಮೈಸೂರು ರಸ್ತೆ, ಬಾಗೂರು ರಸ್ತೆ ಬಾಜುವಿನಲ್ಲಿ 30 ನಿಮಿಷಗಳ ಕಾಲ ನಿಲ್ಲುವ ಅವಕಾಶವಿರುತ್ತದೆ. ಇವುಗಳ ಮೇಲೆ ಸುಂಕ ವಸೂಲಿ ಮಾಡತಕ್ಕದ್ದಲ್ಲ. 2.ಗೊಬ್ಬರ ಗೋಡು ಏರತಕ್ಕ ಗಾಡಿಗಳ ಮೇಲೆ ಸುಂಕ ವಸೂಲಿ ಮಾಡತಕ್ಕದ್ದಲ್ಲ. 3.ಅಂತಿಮ ಬಿಡ್ ಮೊಬಲಗಿಗೆ ಜಿಎಸ್‌ಟಿ ಅನ್ವಯವಾಗುತ್ತದೆ.

ಸಹಿ/– (ಶ್ರೀ ಹೆಚ್.ಎನ್ ನವೀನ್) ಅಧ್ಯಕ್ಷರು, ಪುರಸಭೆ, ಚನ್ನರಾಯಪಟ್ಟಣ | ಸಹಿ/– (ಶ್ರೀ ಯೋಗೇಶ್) ಉಪಾಧ್ಯಕ್ಷರು, ಪುರಸಭೆ, ಚನ್ನರಾಯಪಟ್ಟಣ | ಸಹಿ/– (ಶ್ರೀಮತಿ ಕೆ.ಎನ್ ಬನಶಂಕರಿ) ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ಚನ್ನರಾಯಪಟ್ಟಣ | ಸಹಿ/– (ಶ್ರೀ ಎಂ.ಕುಮಾರ್) ಮುಖ್ಯಾಧಿಕಾರಿ, ಪುರಸಭೆ, ಚನ್ನರಾಯಪಟ್ಟಣ

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/634/2020–21

ಕೋವಿಡ್ 19 ಗಾಳಿಸುದ್ದಿ ಹರಡಬೇಡಿ, ಅವಾಸ್ತವಿಕಂದ ವರ್ತಿಸಿ, ಸೋಂಕನ್ನು ದೂರವಿಡಿ ಸೋಂಕಿತರನ್ನಲ್ಲ

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ

ಆಕಾಶವಾಣಿ ರಸ್ತೆ, ಸಿ.ಕೆ.ಪುರ, ಚಿತ್ರದುರ್ಗ – 577 201

ದೂರವಾಣಿ ಸಂ: 08194–222984 । e-mail: cuda.cta@rediffmail.com

ಸಂ. ಚಿನಪ್ರಾ/ಸಕಾಅ/ಟೆಂಡರ್/2020–21 ದಿನಾಂಕ:30.01.2021

ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1&2ರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.)

ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ 1) ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಉದ್ಯಾನವನಗಳಲ್ಲಿ ಹಾಗೂ ಅವಶ್ಯಕತೆ ಇರುವ ಕಡೆಗಳಲ್ಲಿ ಬೆಂಚ್‌ಗಳನ್ನು ಸರಬಾರಾಜು ಮಾಡಿ ಅಳವಡಿಸುವ ಕಾಮಗಾರಿ. ಅಂದಾಜು ಮೊತ್ತ: ರೂ. 15.41 ಲಕ್ಷಗಳು, ಇ.ಎಂ.ಡಿ ಮೊತ್ತ: ರೂ. 38,525/–, 2) ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ದವಳಗಿರಿ ಬಡಾವಣೆಯ ಡಬಲ್ ರಸ್ತೆಯಲ್ಲಿ ಹೈಮಾಸ್ಟ್ ದೀಪಗಳನ್ನು ಅಳವಡಿಸುವ ಕಾಮಗಾರಿ. ಅಂದಾಜು ಮೊತ್ತ: ರೂ. 9.16 ಲಕ್ಷಗಳು, ಇ.ಎಂ.ಡಿ ಮೊತ್ತ: ರೂ. 22,900/–, 3) ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಉದ್ಯಾನವನಗಳಿಗೆ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸುವ ಕಾಮಗಾರಿ. ಅಂದಾಜು ಮೊತ್ತ: ರೂ. 50.00 ಲಕ್ಷಗಳು, ಇ.ಎಂ.ಡಿ ಮೊತ್ತ: ರೂ. 1,00,000/–, ಕಾಮಗಾರಿಗಳನ್ನು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 03.03.2021 ಸಂಜೆ 5:30 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ: 04.03.2021 ಸಂಜೆ 5:30 ಗಂಟೆಗೆ. (ತಾಂತ್ರಿಕ ಬಿಡ್ ಕ್ರ.ಸಂ. 3ಕ್ಕೆ ಮಾತ್ರ) ಮತ್ತು ಟೆಂಡರ್ ತೆರೆಯುವ ದಿನಾಂಕ: 05.03.2021 ಸಂಜೆ 5:30 ಗಂಟೆಗೆ (ಆರ್ಥಿಕ ಬಿಡ್) ಹೆಚ್ಚಿನ ವಿವರಗಳಿಗಾಗಿ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ವಿಚಾರಿಸಬಹುದು. 1) CUDA/2020-21/OW/Work_Indent 49, 2) CUDA/2020-21/OW/Work_Indent 50, 3) CUDA/2020-21/OW/Work_ Indent 51, ಜಿ.ಎಸ್.ಟಿ ಮೊತ್ತ ಪ್ರತ್ಯೇಕವಾಗಿ ಪಾವತಿಸಲಾಗುವುದು.

ಸಹಿ/– ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ

ವಾಸಾಸಂಇ/ಚಿತ್ರದುರ್ಗ/ಜಿಎ/763/2020–21

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು–560083 ದೂ: 080–29755405 ಇ–ಮೇಲ್: dcfbnp83@gmail.com

ಸಂಖ್ಯೆ: ಎ3/ಟೆಂಡರ್/ಸಿಆರ್–31/2020–21 ದಿನಾಂಕ : 12.02.2021

ಸಂಕ್ಷಿಪ್ತ ಅಲ್ಪಾವದಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2021–22ನೇ ಸಾಲಿನಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಕಳ್ಳಬೇಟೆ ತಡೆ ಶಿಬಿರದಲ್ಲಿ ಕಾರ್ಯ ನಿರ್ವಹಿಸುವ ನೌಕರರುಗಳಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಂಬಂದ 2ನೇ ಬಾರಿ, ಅಧಿಕೃತ ಮಾರಾಟಗಾರರಿಂದ / ಅರ್ಹ ಗುತ್ತಿಗೆದಾರರಿಂದ (Authorized Distributor / Eligible forest contractors) ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Scheme: I. 2406-02-110 Wildlife Preservation-0-54-Nature Conservation, Wildlife habitat Management and Man animal conflict measures-139- Major Works. II. 2406-02-110-0-47- CSS IDWH (Central). III. 2406-02-110-0-23-CSS-Project Elephant (Plan).

ಹೆಚ್ಚಿನ ವಿವರಗಳಿಗಾಗಿ ಇ–ಪ್ರೋಕ್ಯೂರಮೆಂಟ್ ವೆಬ್‌ಸೈಟ್ https://eproc.karnataka.gov.in ಗೆ ಭೇಟಿ ನೀಡಿ.

ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ
ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು

DIPR/DDU/2842/G.FMC/2020-21

ಕೋವಿಡ್‌-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ

ದೂರವಾಣಿ: 08338–275101 ಇಮೇಲ್: ee.rdws.ckd@gmail.com

ಸಂಖ್ಯೆ: ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾ:ಕೆಡಬ್ಲ್ಯೂ1&2:
ಟೆಂಡರ್:2020–21/27/2127 ದಿನಾಂಕ: 10–02–2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೆಡಬ್ಲ್ಯೂ–3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.

ಇಂಡೆಂಟ್ ನಂ: 28835, 28835, 28725, 28723, 28706, 28836, 28667, 28710, 28710, 28732, 28765, 28684, 28770, 28752, 28702, 28753, 28729, 2881, 28760, 28281, 28888, 28757, 28774, 28716, 28741, 28904, 28735, 28758, 28772, 28734, 28772, 28730, 28755, 28763.

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (Viz., Http://eproc.karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಚೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

01) ಟೆಂಡರ್ ಪೂರ್ವಭಾವಿ ಸಭೆ: 22–02–2021 ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ.&ನೈ ವಿಭಾಗ ಚಿಕ್ಕೋಡಿ ಕಚೇರಿಯಲ್ಲಿ.
02) ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರ್ಮ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 25–02–2021 ಸಾಯಂಕಾಲ 4:00 ಘಂಟೆವರೆಗೆ.
03) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 26–02–2021 ಸಂಜೆ 4:30 ಘಂಟೆ ನಂತರ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ.&ನೈ ವಿಭಾಗ, ಚಿಕ್ಕೋಡಿ.

"ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ"

(ಕರ್ನಾಟಕ ಸರಕಾರದ ಒಂದು ಉದ್ದಿಮೆ)

ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ ಕೃಭಾಜನಿನಿ, ಆಬದಂಕಾ ವಿಭಾಗ, ಹುನಗುಂದ ದೂರವಾಣಿ: 08351 261110.

ಸಂ: ಕೃ.ಭಾಜನಿನಿ/ಎಆರ್‌ಬಿಸಿ–ವಿ/ಟಿಎನ್‌ಡಿ/ಪಿಡಬ್ಲ್ಯೂ/2020–21/1709 ದಿನಾಂಕ:15.02.2021

ಸಂಕ್ಷಿಪ್ತ ಟೆಂಡರ್ ಪ್ರಕಟಣೆ – 2ನೇ ಕರೆ
(ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ ನಿ., ಬೆಂಗಳೂರು/ಆಲಮಟ್ಟಿ ಇವರ ಪರವಾಗಿ, ಈ ವಿಭಾದಡಿಯ ಕಾಲುವೆಗಳ ನಿರ್ವಹಣೆಗೆ ಸಂಬಂಧಿಸಿದಂತೆ "2020–21ನೇ ಸಾಲಿನ ಅನುಮೋದಿತ ಕಾರ್ಯಕ್ರಮಗಳಡಿಯಲ್ಲಿನ" ಅಂದಾಜು ಮೊತ್ತ ರೂ. 50.21 ಲಕ್ಷಗಳ Procurement of Spares for Vertical Turbine Pump at 1st Stage Head works of Ramthal (Marol) L.I.S ಕಾಮಗಾರಿಗೆ ಸಂಬಂಧಿಸಿದಂತೆ ದ್ವಿ–ಲಕೋಟೆ ಮಾದರಿಯಲ್ಲಿ ಶೇಕಡಾವಾರು ಆಧಾರದ ಮೇಲೆ CEIG approved Class-1 Electrical Contractor OR Reputed Manufacturer of Spares of VT Pumps OR Authorized dealer of Pump Manufacturer OR Authorized VT Pumps Service Agency ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿನಾಂಕ: 17.02.2021 ರಿಂದ 26.02.2021 ರ ಸಂಜೆ 5.00 ಗಂಟೆ ವರೆಗೆ ಟೆಂಡರ್ ಬಿಡ್ಡನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದ್ದು, ತಾಂತ್ರಿಕ ಬಿಡ್ಡನ್ನು ದಿನಾಂಕ: 01.03.2021 ರಂದು ಹಾಗೂ ಹಣಕಾಸು ಬಿಡ್ಡನ್ನು ದಿನಾಂಕ: 03.03.2021 ರಂದು ತೆರೆಯಲಾಗುವುದು. ವಿವರವಾದ ಟೆಂಡರ್ ಪ್ರಕಟಣೆ, ಇ.ಎಂ.ಡಿ., ಕಾಮಗಾರಿಗಳ ವಿವರಗಳನ್ನು www.eprocurement.kar.nic.in website ಮೂಲಕ ಅಥವಾ ಈ ಕೆಳಗಿನ ವಿಭಾಗ ಕಚೇರಿಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಕೃಭಾಜನಿನಿ. ಆಬದಂಕಾ ವಿಭಾಗ, ಹುನಗುಂದ.

DIPR/BGK/RO-NO-512/MCA/2020-21

ಯಶಸ್ಸು ನಿಮ್ಮದಾಗಬೇಕೆ? ಈ ತಪ್ಪುಗಳನ್ನು ಮಾಡದಿರಿ

ಸಾಂದರ್ಭಿಕ ಚಿತ್ರ

- ದೀರ್ಘಾವಧಿ ಓದಿನ ನಡುವೆ ವಿರಾಮ ಪಡೆಯಿರಿ
- ಕೊನೆಯ ನಿಮಿಷದ ತಯಾರಿ ತಪ್ಪಿಸಿ, ಒತ್ತಡ ಮುಕ್ತರಾಗಿರಿ
- ಕಠಿಣ ವಿಷಯದ ಅಧ್ಯಯನ ಮುಂದೂಡಬೇಡಿ
- ಅತೀ ಹೆಚ್ಚು ಅಥವಾ ಕಡಿಮೆ ನಿದ್ರೆ ಮಾಡಬೇಡಿ
- ಮೊಬೈಲ್, ಸಾಮಾಜಿಕ ಮಾಧ್ಯಮಗಳ ಮೋಹಕ್ಕೆ ಸಿಲುಕದಿರಿ
- ಅಧ್ಯಯನಕ್ಕಾಗಿ ಬೇರೆಯವರ ಮೇಲೆ ಅವಲಂಬಿತರಾಗದಿರಿ
- ನಿಮ್ಮ ತಪ್ಪು ಮರೆಮಾಚಲು ರಕ್ಷಣಾತಂತ್ರ ಬಳಸದಿರಿ
- ಅನಗತ್ಯ ಅಧ್ಯಯನ ಸಾಮಗ್ರಿಗಳನ್ನು ಖರೀದಿಸದಿರಿ
- ಹಲವಾರು ಪರೀಕ್ಷೆಗಳಿಗೆ ಹಾಜರಾಗದೇ ಆದ್ಯತೆ ಪರಿಗಣಿಸಿ

ಚನ್ನಬಸಪ್ಪ ರೊಟ್ಟಿ

ಇತ್ತೀಚೆಗೆ ಬಹುತೇಕ ಸರ್ಕಾರಿ ಉದ್ಯೋಗಗಳ ನೇಮಕಾತಿಯು ಸ್ಪರ್ಧಾತ್ಮಕ ಪರೀಕ್ಷೆ ಆಧರಿಸಿ ನಡೆಯುತ್ತದೆ. ಆದರೆ, ಸ್ಪರ್ಧಾತ್ಮಕ ಪರೀಕ್ಷೆ ಬರೆಯುವವರಲ್ಲಿ ಕೆಲವರು ಮಾತ್ರ ಯಶಸ್ಸು ಸಾಧಿಸಿದರೆ ಹಲವರು ವಿಫಲರಾಗುತ್ತಾರೆ. ಈ ವೈಫಲ್ಯಕ್ಕೆ ಕಾರಣಗಳೇನು ಎಂದು ಅರಿತರೆ ಯಶಸ್ಸು ಕಟ್ಟಿಟ್ಟ ಬುತ್ತಿ.

ಸಾಮಾನ್ಯವಾಗಿ ಎಲ್ಲ ಸ್ಪರ್ಧಾರ್ಥಿಗಳು ಮಾಡುವ ತಪ್ಪುಗಳೆಂದರೆ…

- **ಪ್ರಕಟಣೆ ಹೊರಬಿದ್ದ ನಂತರ ತಯಾರಿ:** ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ನಿರಂತರ ಅಧ್ಯಯನ ಅಗತ್ಯ. ಬಹುತೇಕ ಸ್ಪರ್ಧಾರ್ಥಿಗಳು 'ಬೆಂಕಿ ಬಿದ್ದಾಗ ಬಾವಿ ತೋಡಿದರು' ಎಂಬಂತೆ ನೇಮಕಾತಿ ಪ್ರಕಟಣೆಯ ನಂತರ ಅಧ್ಯಯನದಲ್ಲಿ ತೊಡಗುತ್ತಾರೆ. ಇದರಿಂದ ಪರಿಪೂರ್ಣ ಅಧ್ಯಯನ ಸಾಧ್ಯವಾಗುವುದಿಲ್ಲ.
- **ಪಠ್ಯಕ್ರಮ ಪರಿಶೀಲಿಸದೇ ಇರುವುದು:** ಪ್ರತಿ ಪರೀಕ್ಷೆಗೂ ನಿಗದಿತ ಪಠ್ಯಕ್ರಮ ಇದ್ದೇ ಇರುತ್ತದೆ. ಆದರೆ, ಬಹುತೇಕ ಸ್ಪರ್ಧಾರ್ಥಿಗಳು ಪಠ್ಯಕ್ರಮ ಅರಿಯದೆ ತಮಗೆ ತಿಳಿದುದನ್ನು ತಿಳಿದಂತೆ ಓದುವುದರಿಂದ ಹಿನ್ನಡೆ ಅನುಭವಿಸುತ್ತಾರೆ.

> ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೇಗೆ ತಯಾರಿ ನಡೆಸಬೇಕು ಎಂಬುದರ ಜೊತೆಗೆ ಏನನ್ನು ಮಾಡಬಾರದು ಎಂಬುದು ಕೂಡ ಮುಖ್ಯ. ವೈಫಲ್ಯಕ್ಕೆ ಕಾರಣ ಅರಿತರೆ ಯಶಸ್ಸು ನಿಶ್ಚಿತ.

ಉದಾಹರಣೆಗೆ: ಕೆಎಎಸ್, ಪಿಎಸ್ಐ ಮತ್ತು ಎಫ್‌ಡಿಎ ಪಠ್ಯಕ್ರಮದಲ್ಲಿ ಸಾಮಾನ್ಯ ಅಂಶಗಳು ಇದ್ದರೂ ಪ್ರಶ್ನೆಪತ್ರಿಕೆ ತಯಾರಿಕೆಯಲ್ಲಿ ಬಹಳ ವ್ಯತ್ಯಾಸಗಳಿವೆ. ಪಿಎಸ್ಐ / ಎಫ್‌ಡಿಎ ಮಟ್ಟದ ತಯಾರಿ ಮಾಡಿಕೊಂಡವರು ಕೆಎಎಸ್ ಪರೀಕ್ಷೆಯಲ್ಲಿ ಪಾಸಾಗುವುದು ಅಸಾಧ್ಯದ ಮಾತು.

- **ತಪ್ಪಾದ ಅಧ್ಯಯನ ಸಾಮಗ್ರಿಗಳ ಆಯ್ಕೆ:** ಒಳ್ಳೆಯ ಪುಸ್ತಕ ಹಾಗೂ ವೆಬ್ ರೆಫರೆನ್ಸ್ ಆಯ್ಕೆ ಮಾಡುವಲ್ಲಿ ತಪ್ಪು ಮಾಡಿದರೆ ಓದು, ಸಮಯ ವ್ಯರ್ಥವಾಗುತ್ತದೆ. ಈ ನಿಟ್ಟಿನಲ್ಲಿ ಪರೀಕ್ಷೆ ಪಾಸಾದವರು ಅಥವಾ ತಜ್ಞರ ಮಾರ್ಗದರ್ಶನ ಅಗತ್ಯ.
- **ಮೂಲ ಆಕರಗಳ ನಿರ್ಲಕ್ಷ್ಯ:** ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 5 ರಿಂದ 12ನೇ ತರಗತಿವರೆಗಿನ ರಾಜ್ಯ ಪಠ್ಯಕ್ರಮ, ಎನ್‌ಸಿಇಆರ್‌ಟಿ ಪುಸ್ತಕಗಳು ಮೂಲ ಆಕರಗಳಾಗಿರುತ್ತವೆ. ಈ ಪುಸ್ತಕಗಳನ್ನು ಬಿಟ್ಟು ಬೇರೆ ಪುಸ್ತಕ ಓದುವುದು ಸರಿಯಾದ ಕ್ರಮವಲ್ಲ.
- **ಪ್ರಶ್ನೆ ಭಂಡಾರ, ಮಾದರಿ ಪ್ರಶ್ನೆಪತ್ರಿಕೆಗಳ ಕಡೆಗಣನೆ:** ಆಯಾ ಪರೀಕ್ಷೆಗಳ ಹಿಂದಿನ ಪ್ರಶ್ನೆಪತ್ರಿಕೆಗಳ ವಿಶ್ಲೇಷಣೆ ಪರೀಕ್ಷೆಗಳ ಒಳನೋಟ ಒದಗಿಸಿದರೆ, ಮಾದರಿ ಪ್ರಶ್ನೆಪತ್ರಿಕೆಗಳು ಮುನ್ನೋಟ ಒದಗಿಸುತ್ತವೆ. ಇದರಿಂದ ಯಾವ ವಿಷಯದಲ್ಲಿ ಯಾವ ಪ್ರಶ್ನೆಗಳನ್ನು ಕೇಳಿದ್ದಾರೆ, ಯಾವ ಪ್ರಶ್ನೆ ಕೇಳಬಹುದು ಎಂದು ಊಹಿಸಬಹುದು.
- **ಬರೆಯದೇ ಓದುವುದು:** ಕೆಲವು ಸ್ಪರ್ಧಾತ್ಮಕ ಪರೀಕ್ಷೆಗಳು ಬರವಣಿಗೆ ಆಧಾರಿತವಾಗಿರುತ್ತವೆ. ಉದಾಹರಣೆಗೆ: ಕೆಎಎಸ್ ಮುಖ್ಯ ಪರೀಕ್ಷೆ, ಪಿಎಸ್ಐ ಪ್ರಥಮ ಪತ್ರಿಕೆಯಲ್ಲಿ ಪ್ರಬಂಧ ಮಾದರಿ ಉತ್ತರ ಬರೆಯಬೇಕಾಗುತ್ತದೆ. ಈ ನಿಟ್ಟಿನಲ್ಲಿ ಶುದ್ಧ, ವೇಗವಾದ ಬರವಣಿಗೆಯನ್ನು ರೂಢಿಸಿಕೊಳ್ಳಬೇಕು.
- **ಸ್ವಸಾಮರ್ಥ್ಯ ಪರಾಮರ್ಶಿಸದೇ ಇರುವುದು:** ಎಸ್‌ಡಿಎ ಪರೀಕ್ಷೆ ಪಾಸು ಮಾಡುವ ಸಾಮರ್ಥ್ಯ ಇಲ್ಲದ ವ್ಯಕ್ತಿ ಕೆಎಎಸ್ ಪಾಸಾಗುತ್ತೇನೆ ಎಂದು ಭಾವಿಸಿ, ತಯಾರಿಯಲ್ಲಿ ತೊಡಗುತ್ತಾರೆ. ಇದರಿಂದ ವೇಳೆ, ಶ್ರಮದ ಅಪವ್ಯಯಕ್ಕೆ ಕಾರಣವಾಗುತ್ತದೆ.
- **ದಿನಪತ್ರಿಕೆಗಳ ಓದಿನಲ್ಲಿ ನಿರ್ಲಕ್ಷ್ಯ:** ಕೆಲವರು ಆಕರ ಗ್ರಂಥಗಳ ಓದಿಗೆ ನೀಡುವ ಆದ್ಯತೆಯನ್ನು ದಿನಪತ್ರಿಕೆ ಓದಿಗೆ ನೀಡುವುದಿಲ್ಲ. ದಿನಪತ್ರಿಕೆಗಳಲ್ಲಿನ ಪ್ರಚಲಿತ ವಿದ್ಯಮಾನಗಳ ವರದಿ, ಅಂಕಿ-ಅಂಶಗಳು, ಸಂಪಾದಕೀಯ, ಲೇಖನಗಳು ಪರೀಕ್ಷೆಗೆ ಉಪಯುಕ್ತವಾಗಿವೆ. ಇದನ್ನು ಕಡೆಗಣಿಸಿದರೆ ಪ್ರಚಲಿತ ವಿದ್ಯಮಾನ, ಸಾಮಾನ್ಯ ಅಧ್ಯಯನ ವಿಷಯಗಳಲ್ಲಿ ಹಿನ್ನಡೆಯಾಗುತ್ತದೆ.
- **ಐಚ್ಛಿಕ ವಿಷಯ ಆಯ್ಕೆಯಲ್ಲಿ ಎಡವಟ್ಟು:** ರಾಜ್ಯ ಅಥವಾ ಕೇಂದ್ರ ಲೋಕಸೇವಾ ಆಯೋಗದ ಮುಖ್ಯ ಪರೀಕ್ಷೆಗಳಲ್ಲಿ ತಮ್ಮ ಆಸಕ್ತಿ, ಆಕರ, ಅಧ್ಯಯನ ಆಧರಿಸಿ ಐಚ್ಛಿಕ ವಿಷಯಗಳ ಆಯ್ಕೆ ಮಾಡಿಕೊಳ್ಳದೇ, ತಪ್ಪು ವಿಷಯಗಳನ್ನು ಆಯ್ದುಕೊಂಡರೆ ನಿರೀಕ್ಷಿತ ಅಂಕಗಳಿಕೆ ಅಸಾಧ್ಯ.
- **ಸಮಯ ನಿರ್ವಹಣೆಯ ಕಡೆಗಣನೆ:** ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಯೋಜನಾಬದ್ಧವಾಗಿರಬೇಕು. ಆಳ ಅಧ್ಯಯನ, ನೋಟ್ಸ್ ತಯಾರಿ, ಪುನರ್‌ಮನನಕ್ಕೆ ಸಮರ್ಪಕ ವೇಳೆ ನೀಡಬೇಕು. ಇಲ್ಲದಿದ್ದರೆ, ಇಡೀ ಓದು ವ್ಯರ್ಥವಾಗುತ್ತದೆ.
- **ಒತ್ತಡ ನಿರ್ವಹಣೆಯಲ್ಲಿ ವೈಫಲ್ಯ:** ಪರೀಕ್ಷಾ ಸಮಯದಲ್ಲಿ ಉಂಟಾಗುವ ಒತ್ತಡ ನಿರ್ವಹಿಸುವಲ್ಲಿ ಬಹುತೇಕರು ವಿಫಲರಾಗುತ್ತಾರೆ. ಇದರಿಂದ ಪ್ರತಿಭಾವಂತರು ಅವಕಾಶ ವಂಚಿತರಾಗುತ್ತಾರೆ.

(ಲೇಖಕರು: ನಿರ್ದೇಶಕರು, ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಪ್ರಬಂಧ ಬರಹ, ಭಾಷಾಂತರಕ್ಕೆ ಸಿದ್ಧತೆ ಹೇಗೆ?



ಸಾಂದರ್ಭಿಕ ಚಿತ್ರ

ಪಿಎಸ್ಐ ಪರೀಕ್ಷೆ

ವೈ.ವಿ. ಗಾಯತ್ರಿ

ಪಿಎಸ್ಐ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ-1 ರ್‍ಯಾಂಕಿಂಗ್ ಪತ್ರಿಕೆಯಾಗಿದ್ದು, ಸಾಮಾನ್ಯ ಜ್ಞಾನ ಪ್ರಶ್ನೆಪತ್ರಿಕೆ-2 ರಲ್ಲಿ ಸಾಮಾನ್ಯವಾಗಿ ಅಭ್ಯರ್ಥಿಗಳು ಉತ್ತಮ ಅಂಕಗಳನ್ನು ಪಡೆಯುತ್ತಾರೆ. ಆದರೆ ಪ್ರಶ್ನೆ ಪತ್ರಿಕೆ 1ರ 50 ಅಂಕಗಳು ಅಭ್ಯರ್ಥಿಯ ಯಶಸ್ಸನ್ನು ಖಚಿತಪಡಿಸುತ್ತವೆ. ಹಾಗಾಗಿ ಪ್ರಶ್ನೆಪತ್ರಿಕೆ 1ರ ತಯಾರಿ ಅತಿ ಮುಖ್ಯವಾಗಿದೆ.

ಪತ್ರಿಕೆ-1ರಲ್ಲಿನ ಮೂರು ವಿಭಾಗಗಳು ಹೀಗಿವೆ: ಪ್ರಬಂಧ ಬರವಣಿಗೆ- 600 ಪದಗಳಲ್ಲಿ– 20 ಅಂಕಗಳು; ಭಾಷಾಂತರ–ಕನ್ನಡದಿಂದ ಇಂಗ್ಲಿಷ್‌ಗೆ–10 ಅಂಕಗಳು; ಇಂಗ್ಲಿಷ್‌ನಿಂದ ಕನ್ನಡಕ್ಕೆ–10 ಅಂಕಗಳು; ಸಂಕ್ಷಿಪ್ತ ಬರವಣಿಗೆ–10 ಅಂಕಗಳು.

ಪ್ರಬಂಧ

ಪ್ರಬಂಧದ ವಿಷಯ ಸಾಮಾನ್ಯವಾಗಿ ಪ್ರಚಲಿತ ಘಟನೆಗಳನ್ನು ಒಳಗೊಂಡಿರುತ್ತದೆ. ಅಂದರೆ ರಾಜಕೀಯ, ಸಾಮಾಜಿಕ, ಆರ್ಥಿಕ, ವಿವಾದ ಮತ್ತು ಸಾಮಾನ್ಯ ವಿಷಯಕ್ಕೆ ಸಂಬಂಧಿಸಿದಂತೆ ಇರುತ್ತದೆ. ಪ್ರಂಬಂಧಗಳ ಮಾಹಿತಿ ಕ್ರೋಢೀಕರಣಕ್ಕೆ ಪತ್ರಿಕೆಗಳ ಸಂಪಾದಕೀಯವನ್ನು ಓದಿ. ಮಾರುಕಟ್ಟೆಯಲ್ಲಿ ದೊರೆಯುವ ಪ್ರಬಂಧ ಪುಸ್ತಕಗಳಲ್ಲಿರುವ ಮಾಹಿತಿ ಪರೀಕ್ಷಾ ಸಮಯಕ್ಕೆ ಅಪ್‌ಡೇಟ್ ಆಗಿರುವುದಿಲ್ಲ. ಪ್ರಬಂಧ ಬರವಣಿಗೆಯಲ್ಲಿ ಕೆಳಗಿನ ವಿವರಗಳನ್ನು ಗಮನಿಸಿ, ತಯಾರಿ ನಡೆಸಿ.

- ಒಟ್ಟು ಪ್ಯಾರಾಗಳ ಸಂಖ್ಯೆ ಗರಿಷ್ಠ 6ಕ್ಕೆ ಸೀಮಿತವಾಗಿರಲಿ.
- ಬರೆದ ಪುಟ ಸ್ಫುಟವಾಗಿದ್ದು ಚಿತ್ತುಕಾಟು ಇಲ್ಲದಂತಿರಲಿ.
- ಈ ವಿಭಾಗದಲ್ಲಿ ಕೆಲವು ಆಯ್ಕೆಗಳಿರುತ್ತವೆ. ಪ್ರಶ್ನೆ ಆಯ್ಕೆ ಮಾಡುವಾಗ ವಿವಾದಾತ್ಮಕವಲ್ಲದ ವಿಷಯವನ್ನು ಆರಿಸಿಕೊಳ್ಳಿ.
- ಪೀಠಿಕೆ, ಒಕ್ಕಣೆ, ಉಪಸಂಹಾರ.. ಎಂದೆಲ್ಲಾ ಸೂಚಿಸಲು ಮರೆಯಬೇಡಿ.
- ಪೀಠಿಕೆ ಮೂರ್‍ನಾಲ್ಕು ಸಾಲುಗಳಿಗೆ ಸೀಮಿತವಾಗಿರಲಿ.
- ಒಕ್ಕಣೆ ನಿರೂಪಿಸುವಾಗ ವಿಷಯವನ್ನು ಕ್ರಮಬದ್ಧವಾಗಿ ಜೋಡಿಸಿ ರಚಿಸಿ.
- ಉಪಸಂಹಾರವೂ ಕೂಡ ಮೂರ್‍ನಾಲ್ಕು ಸಾಲು ಮೀರದಿರಲಿ.
- ಮೊದಲು ಅಥವಾ ಕೊನೆ ನಕಾರಾತ್ಮಕವಾಗಿ ಮಾಡದಿರಿ.
- ದತ್ತಾಂಶ ನಮೂದಿಸುವಾಗ ನಿಖರತೆಯನ್ನು ಖಾತ್ರಿಪಡಿಸಿಕೊಳ್ಳಿ.
- ವಿಷಯ ಪ್ರಬಲವಾಗಿ, ಪ್ರಬುದ್ಧವಾಗಿ, ಆಸಕ್ತಿ ಮತ್ತು ಮಾಹಿತಿ ಒಳಗೊಂಡಿದೆ ಎನಿಸಿ, ಗರಿಷ್ಠ ಅಂಕ ನೀಡುವಂತಿರಲಿ.

ಸಂಕ್ಷಿಪ್ತ ಬರವಣಿಗೆ

- ಈ ವಿಭಾಗದಲ್ಲಿ ಕೊಟ್ಟಿರುವ ಮೂಲ ವಾಕ್ಯವೃಂದವನ್ನು ಸರಿಯಾಗಿ ಅರ್ಥೈಸಿಕೊಳ್ಳಿ.
- ಮುಖ್ಯ ಎನಿಸುವ ಸಾಲುಗಳನ್ನು ಗುರುತು ಮಾಡಿಕೊಳ್ಳಿ.
- ಮೂಲದಲ್ಲಿ ಇರುವ ಪದಗಳ ಸಂಖ್ಯೆಯ 1/3ರಷ್ಟು ಪದಗಳಿಗೆ ನಿಮ್ಮ ನಿರೂಪಣೆಯನ್ನು ಮಿತಿಯಾಗಿಸಿ, ವಾಕ್ಯವೃಂದದಲ್ಲಿನ ಪ್ರತಿ ಪದವನ್ನೂ ಎಣಿಸಿ, ಅದರ 1/3ರಷ್ಟಕ್ಕೆ ನಿರೂಪಿಸಿ.
- ಸಾಧ್ಯವಾದಷ್ಟು ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ. ನೆನಪಿರಲಿ, ಮೂಲ ಅರ್ಥಕ್ಕೆ ಧಕ್ಕೆ ಬರುವಂತಿರಬಾರದು.
- ಶೀರ್ಷಿಕೆ ಬರೆಯಲು ಮರೆಯದಿರಿ.
- ಶೀರ್ಷಿಕೆ ಗರಿಷ್ಠ 3 ಪದಗಳು ಮಾತ್ರ ಇರಲಿ.
- ಅದಕ್ಕೆಂದೇ ಕೊಟ್ಟಿರುವ ವಿಶೇಷ ಉತ್ತರ ಪತ್ರಿಕೆಯನ್ನು ಬಳಸುವುದನ್ನು ಅಭ್ಯಸಿಸಿ. ಈ ನಮೂನೆಯ ಹಾಳೆಗಳು ಪುಸ್ತಕ ಮಳಿಗೆಯಲ್ಲಿ ಲಭ್ಯ.
- ವಾಕ್ಯವೃಂದವನ್ನು ಇಡಿಯಾಗಿ ಓದಿಕೊಳ್ಳಿ, ಸಾಲು ಅಥವಾ ಕೆಲವು ಸಾಲುಗಳು ಎಂದೆಲ್ಲಾ ವಿಭಜಿಸಬಾರದು.
- ಯಾವ ಕಾರಣಕ್ಕೂ ಮಧ್ಯದಲ್ಲಿ ಚೌಕಗಳನ್ನು ಬಿಡಬೇಡಿ ಅಥವಾ ಚಿತ್ತುಕಾಟು ಮಾಡಬೇಡಿ.
- ವಿರಾಮ ಚಿಹ್ನೆಗಳನ್ನು ಅರ್ಥಪೂರ್ಣವಾಗಿ ಬಳಸಿ.

ಭಾಷಾಂತರ

ಈ ವಿಭಾಗದಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ವಿಷಯವನ್ನು ನೀಡಿರುತ್ತಾರೆ. ಭಾಷಾಂತರಕ್ಕೆ ಕೆಳಗಿನ ವಿವರಗಳನ್ನು ಗಮನಿಸಿ, ತಯಾರಿ ನಡೆಸಿ.

- ಓದುವಾಗ ಸಂಪೂರ್ಣ ಅರ್ಥ ಗ್ರಹಿಸಿ.
- ಮುಖ್ಯ ಪದಗಳ ಅನುವಾದಿತ ಪದಗಳನ್ನು ಬರೆದಿಟ್ಟುಕೊಳ್ಳಿ.
- ವ್ಯಾಕರಣದ ಬಗ್ಗೆ ಹೆಚ್ಚಿನ ಗಮನ ವಹಿಸಿ, ಬಹಳ ಆಡಂಬರದ ಭಾಷೆಯನ್ನು ನಿಮ್ಮಿಂದ ನಿರೀಕ್ಷಿಸುವುದಿಲ್ಲ, ಆದರೆ ತಪ್ಪಿಲ್ಲದಂತೆ ಬರೆಯಬೇಕು.
- ಇಲ್ಲಿ ಪದಶಃ ಅರ್ಥ ಮುಖ್ಯವಲ್ಲ, ಭಾವಾರ್ಥಕ್ಕೆ ಧಕ್ಕೆ ಬರದಂತೆ ಮಂಡಿಸಬೇಕು.
- ಗಾದೆ ಮಾತುಗಳು, ನಾಣ್ಣುಡಿಗಳು ಮುಂತಾದ ಭಾಷಾ ವೈಶಿಷ್ಟ್ಯಗಳಿದ್ದಲ್ಲಿ, ಪದಶಃ ಅನುವಾದ ಮಾಡದಿರಿ, ಅರ್ಥದ ತರ್ಜುಮೆ ಮಾಡದಿದ್ದಲ್ಲಿ ಇಡೀ ವಿಷಯದ ಭಾವಾರ್ಥವೇ ಅನರ್ಥವಾಗಿಬಿಡುತ್ತದೆ. ಹೀಗಾಗಿ ಗಮನವಿರಲಿ.
- ಯಾವುದೇ ನಿರ್ದಿಷ್ಟ ನಾಮಪದಗಳನ್ನು ಬಳಸಿದ್ದರೆ, ಅನುವಾದಿಸಬಾರದು. ಉದಾಹರಣೆ: ಯಾವುದೊ ಸಂಸ್ಥೆಯ ಅಥವಾ ಅಂಗಡಿ ಮುಂಗಟ್ಟಿನ ಹೆಸರು ಇತ್ಯಾದಿ.
- ಭಾಷಾಂತರ ಒಂದು ವಾಕ್ಯದಿಂದ ಮುಂದಿನ ವಾಕ್ಯಕ್ಕೆ ಮಾಡಬೇಕು, ಇಡೀ ವಿಷಯವನ್ನು ಒಟ್ಟಾಗಿ ಅನುವಾದಿಸಬಾರದು.

ಎಲ್ಲಾ ವಿಭಾಗಗಳಿಗೂ ಬರವಣಿಗೆ ಸ್ಪಷ್ಟ ಮತ್ತು ಸ್ಫುಟವಾಗಿರುವುದು ಮುಖ್ಯ. ಸಮಯ ನಿರ್ವಹಣೆ ಅತೀ ಮುಖ್ಯ. ಪ್ರತಿ ವಿಭಾಗಕ್ಕೆ ಎಷ್ಟು ಸಮಯ ಮೀಸಲಿಡಬೇಕೆಂಬುದು ವ್ಯಕ್ತಿಗತ ಸಾಮರ್ಥ್ಯಕ್ಕೆ ಸಂಬಂಧಿಸಿದ್ದು, ಸಾಧಾರಣವಾಗಿ ಪ್ರಶ್ನೆ ಪತ್ರಿಕೆ ಅವಗಾಹನೆ ಮತ್ತು ಉತ್ತರಗಳ ಸ್ಥೂಲ ರೂಪುರೇಷೆ-10 ನಿಮಿಷಗಳು; ಪ್ರಬಂಧ-30 ನಿಮಿಷಗಳು; ಸಂಕ್ಷಿಪ್ತ ಬರವಣಿಗೆ- 15 ನಿಮಿಷಗಳು; ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರ-15 ನಿಮಿಷಗಳು; ಕನ್ನಡದಿಂದ ಇಂಗ್ಲಿಷ್‌ಗೆ ಭಾಷಾಂತರ-15 ನಿಮಿಷಗಳು; ಪುನರ್‌ಪರಿಶೀಲನೆಗೆ 5 ನಿಮಿಷಗಳು; ಒಟ್ಟು ನಿಗದಿ ಪಡಿಸಿದ ಸಮಯ-90 ನಿಮಿಷಗಳಲ್ಲಿ ಪ್ರಶ್ನೆ ಪತ್ರಿಕೆ 1ನ್ನು ಪೂರ್ಣಗೊಳಿಸುವುದಕ್ಕೆ ತಯಾರಿ ನಡೆಸಬಹುದು. ಅಭ್ಯಾಸಕ್ಕೆ ಹಳೆಯ ಹಾಗೂ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸಿ.

(ಲೇಖಕಿ: ನಿರ್ದೇಶಕರು, ಜ್ಞಾನಗಂಗೋತ್ರಿ ಸ್ಪರ್ಧಾತ್ಮಕ ತರಬೇತಿ ಪರೀಕ್ಷೆ ಕೇಂದ್ರ, ಬೆಂಗಳೂರು)

ಪ್ರಜಾವಾಣಿ ಉದ್ಯೋಗ ವಾರ್ತೆ

ಸಿಐಎಸ್‌ಎಫ್‌ನಲ್ಲಿ ಹೆಡ್ ಕಾನ್‌ಸ್ಟೆಬಲ್ ಹುದ್ದೆಗಳು

ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ನಲ್ಲಿ ಖಾಲಿ ಇರುವ ಹುದ್ದೆಗಳ ಅರ್ಜಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಅರ್ಜಿ ಸಲ್ಲಿಸಬಹುದು.

ಹುದ್ದೆ: ಹೆಡ್ ಕಾನ್‌ಸ್ಟೆಬಲ್

ಹುದ್ದೆಗಳ ಸಂಖ್ಯೆ: 2000

ಸ್ಥಳ: ಭಾರತದೆಲ್ಲೆಡೆ

ವಯೋಮಿತಿ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳಿಗೆ 50 ವರ್ಷ ಮೀರಿರಬಾರದು.

ಅರ್ಜಿ ಶುಲ್ಕ: ಇಲ್ಲ

ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆ, ಸಂದರ್ಶನ ಹಾಗೂ ಮೆರಿಟ್ ಆಧಾರದ ಮೇಲೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 15, 2021

ಹೆಚ್ಚಿನ ಮಾಹಿತಿಗೆ: http://www.davp.nic.in/WriteReadData/ADS/eng_19113_2_2021b.pdf

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿದ್ಯುತ್ ಪ್ರವಾಹ ಕಾಂತೀಯ ಪರಿಣಾಮಗಳು

ಭೌತಶಾಸ್ತ್ರ

ಎಸ್ಸೆಸ್ಸೆಲ್ಸಿ

ಅಧ್ಯಾಯ-13

ಕಾಂತಕ್ಷೇತ್ರ ಮತ್ತು ಕಾಂತೀಯ ರೇಖೆಗಳು

ಕಾಂತದ ಸುತ್ತಲೂ ಕಾಂತೀಯ ಬಲದ ಪ್ರಭಾವವಿರುವ ಪ್ರದೇಶವನ್ನು ಕಾಂತಕ್ಷೇತ್ರ ಎನ್ನುತ್ತಾರೆ.





ಕಾಂತಕ್ಷೇತ್ರವನ್ನು ಅದರ ದಿಕ್ಕಿನೊಂದಿಗೆ ತೋರಿಸುವ ರೇಖೆಗಳನ್ನು ಕಾಂತೀಯ ಬಲ ರೇಖೆಗಳು ಎಂದು ಕರೆಯುತ್ತಾರೆ.

ಕಾಂತಕ್ಷೇತ್ರವು ದಿಕ್ಕು ಮತ್ತು ಪರಿಣಾಮ ಎರಡನ್ನೂ ಹೊಂದಿದ್ದು, ಕಾಂತೀಯ ಬಲರೇಖೆಗಳ ಉತ್ತರ ಧ್ರುವದಲ್ಲಿ ಉತ್ಸರ್ಜಿತವಾಗಿ ದಕ್ಷಿಣ ಧ್ರುವದಲ್ಲಿ ವಿಲೀನಗೊಳ್ಳುತ್ತವೆ. ಕಾಂತೀಯ ಬಲರೇಖೆಗಳು ಆವೃತ ಜಾಲಗಳಾಗಿವೆ. ಕಾಂತಕ್ಷೇತ್ರದ ಸಾಪೇಕ್ಷ ಶಕ್ತಿಯು ಕಾಂತೀಯ ಬಲ ರೇಖೆಗಳ ದಟ್ಟಣೆಯ ಮೇಲೆ ಅವಲಂಬಿತವಾಗಿದ್ದು, ಒಂದನ್ನೊಂದು ಎಂದಿಗೂ ಛೇದಿಸುವುದಿಲ್ಲ.

ವಿದ್ಯುತ್ ಪ್ರವಾಹವಿರುವ ವಾಹಕದಿಂದ ಕಾಂತಕ್ಷೇತ್ರ

ವಿದ್ಯುತ್ ಪ್ರವಾಹವಿರುವ ವಾಹಕವು ತನ್ನ ಸುತ್ತಲೂ ಕಾಂತಕ್ಷೇತ್ರವನ್ನು ಉಂಟು ಮಾಡುತ್ತದೆ. ಮತ್ತು ಕಾಂತಕ್ಷೇತ್ರದ ಬಲರೇಖೆಗಳ ದಿಕ್ಕು ವಿದ್ಯುತ್ ಪ್ರವಾಹದ ದಿಕ್ಕಿನ ಮೇಲೆ ಅವಲಂಬಿತವಾಗಿರುತ್ತದೆ.

ಕಾಂತೀಯ ಕ್ಷೇತ್ರದ ಪ್ರಮಾಣವು ವಿದ್ಯುತ್ ಪ್ರವಾಹದ ಮೇಲೆ ಅವಲಂಬಿತವಾಗಿದ್ದು, ವಿದ್ಯುತ್ ಪ್ರವಾಹ ಹೆಚ್ಚಾದಂತೆ ಕಾಂತೀಯ ಕ್ಷೇತ್ರದ ಪ್ರಮಾಣವು ಹೆಚ್ಚಾಗುತ್ತದೆ. ಅಂತೆಯೇ ವಾಹಕದಿಂದ ದೂರ ಹೋದಂತೆಲ್ಲಾ ಕಾಂತಕ್ಷೇತ್ರವು ಕಡಿಮೆಯಾಗುತ್ತಾ ಹೋಗುತ್ತದೆ.

ಬಲಗೈ ಹೆಬ್ಬೆರಳ ನಿಯಮ



ಈ ನಿಯಮವು ವಿದ್ಯುತ್ ಪ್ರವಹಿಸುತ್ತಿರುವ ವಾಹಕಕ್ಕೆ ಸಂಬಂಧಿದಂತೆ ಕಾಂತಕ್ಷೇತ್ರದ ದಿಕ್ಕನ್ನು ಕಂಡು ಹಿಡಿಯುವ ಒಂದು ವಿಧಾನವಾಗಿದ್ದು ಇದರ ಪ್ರಕಾರ ಬಲಗೈನಲ್ಲಿ ವಿದ್ಯುತ್ ಪ್ರವಹಿಸುತ್ತಿರುವ ನೇರವಾದ ಒಂದು ವಾಹಕನವನ್ನು ಹಿಡಿದಿರುವಂತೆ ಊಹಿಸಿಕೊಂಡರೆ ಆಗ ಹೆಬ್ಬೆರಳು ವಿದ್ಯುತ್ ಪ್ರವಾಹದ ದಿಕ್ಕನ್ನು ಉಳಿದ ಬೆರಳುಗಳು ಕಾಂತಕ್ಷೇತ್ರದ ಕಾಂತೀಯ ಬಲರೇಖೆಗಳ ದಿಕ್ಕನ್ನು ಪ್ರತಿನಿಧಿಸುತ್ತದೆ.

ವೃತ್ತಾಕಾರದ ವಾಹಕ ಸುರುಳಿಯಲ್ಲಿನ

ವಿದ್ಯುತ್ ಪ್ರವಾಹದಿಂದ ಉಂಟಾದ ಕಾಂತಕ್ಷೇತ್ರ



- ವಿದ್ಯುತ್ ಪ್ರವಾಹವಿರುವ ಸುರುಳಿ ವಾಹಕದಲ್ಲಿನ ಪ್ರತಿಬಿಂದುವಿನಲ್ಲಿ ಅದರ ಸುತ್ತಲಿನ ಕಾಂತಕ್ಷೇತ್ರವನ್ನು ಪ್ರತಿನಿಧಿಸುವ ಏಕಕೇಂದ್ರೀಯ ವೃತ್ತಗಳು ತಂತಿಯಿಂದ ದೂರ ಸರಿದಂತೆಲ್ಲಾ ನಿರಂತರವಾಗಿ ದೊಡ್ಡದಾಗುತ್ತವೆ.
- ವೃತ್ತಾಕಾರದ ಸುರುಳಿಯ ಕೇಂದ್ರವನ್ನು ತಲುಪುತ್ತಿದ್ದಂತೆ ದೊಡ್ಡ ವೃತ್ತಗಳ ಕಮಾನಿನಂತಿರುವ ಕ್ಷೇತ್ರದ ಬಲರೇಖೆಗಳು ಸರಳ ರೇಖೆಯಂತೆ ಗೋಚರಿಸುತ್ತವೆ.
- ಬಲಗೈ ಹೆಬ್ಬೆರಳಿನ ನಿಯಮದ ಪ್ರಕಾರ ಬಲರೇಖೆಗಳ ದಿಕ್ಕನ್ನು ಪ್ರತಿ ಬಿಂದುವಿನಲ್ಲಿ ಪ್ರತಿನಿಧಿಸಬಹುದು.

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ರಸಾಯನಶಾಸ್ತ್ರ ವಿಭಾಗದ 'ಕೆಮಿಕಲ್ ರಿಯಾಕ್ಷನ್ ಅಂಡ್ ಇಕ್ವೇಷನ್ಸ್- ಟೈಪ್ಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಭೌತಶಾಸ್ತ್ರ

ಬೈಜಿಕ ಬಲ:

ನ್ಯೂಕ್ಲಿಯಸ್‌ನಲ್ಲಿ ಪ್ರೋಟಾನ್ ಮತ್ತು ನ್ಯೂಟ್ರಾನ್ (ನ್ಯೂಕ್ಲಿಯಾನು) ಗಳನ್ನು ಬಂಧಿಸಿರುವ ಆಕರ್ಷಣೀಯ ಬಲವನ್ನು ಬೈಜಿಕ ಬಲ ಎನ್ನುವರು.



ಬೈಜಿಕ ಬಲದ ವೈಶಿಷ್ಟ್ಯಗಳು:

- ರಾಶಿಗಳ ನಡುವಿನ ಗುರುತ್ವಾಕರ್ಷಣ ಬಲ ಅಥವಾ ವಿದ್ಯುದಾವೇಶಗಳ ನಡುವೆ ವರ್ತಿಸುವ ಕೊಲಂಬ್ ವಿಕರ್ಷಕ ಬಲಗಳಿಗಿಂತ 1000 ಪಟ್ಟು ಶಕ್ತಿಯುತವಾಗಿದೆ.
- ಬೈಜಿಕ ಬಲವು ಹತ್ತಿರ ವ್ಯಾಪ್ತಿಯ ಬಲವಾಗಿದ್ದು, ಎರಡು ನ್ಯೂಕ್ಲಿಯಾನುಗಳ ನಡುವಿನ ಅಂತರ 2 ಫರ್ಮಿ ಇದ್ದಾಗ ಮಾತ್ರ ಪ್ರಶಂಸನೀಯವಾಗಿದ್ದು, ಅಂತರ 4 ಫರ್ಮಿ ಅಥವಾ ಹೆಚ್ಚಾದಾಗ ಬೈಜಿಕ ಬಲವು ಶೂನ್ಯವಾಗುತ್ತಾ ಹೋಗುತ್ತದೆ.
- ಬೈಜಿಕ ಬಲವು ವಿದ್ಯುದಾವೇಶದ ಮೇಲೆ ಸ್ವತಂತ್ರವಾಗಿದ್ದು, ನ್ಯೂಟ್ರಾನ್-ನ್ಯೂಟ್ರಾನ್, ಪ್ರೋಟಾನ್-ಪ್ರೋಟಾನ್ ಮತ್ತು ಪ್ರೋಟಾನ್-ನ್ಯೂಟ್ರಾನ್ ನಡುವಿನ ಬೈಜಿಕ ಬಲವು ಅಂದಾಜು ಒಂದೇ ಆಗಿರುತ್ತದೆ.
- ಬೈಜಿಕ ಬಲವು ನ್ಯೂಕ್ಲಿಯಾನುಗಳ ಭ್ರಮಣೆಯ ಮೇಲೆ ಅವಲಂಬಿತವಾಗಿದ್ದು, ಸಮಾಂತರ ಭ್ರಮಣೆಯಿದ್ದಾಗ ಪ್ರಬಲವಾಗಿಯೂ ಸಮಾಂತರವಿಲ್ಲದಿದ್ದಾಗ ದುರ್ಬಲವಾಗಿಯೂ ವರ್ತಿಸುತ್ತದೆ.
- ಬೈಜಿಕ ಬಲಗಳು ವಿಕರ್ಷಣ ಮೂಲವನ್ನು ಹೊಂದಿದ್ದು, ಅವುಗಳ ನಡುವಿನ ದೂರ 2 ಫರ್ಮಿಗಿಂತ ಕಡಿಮೆಯಾದಾಗ ಬೈಜಿಕ ಬಲವು ವಿಕರ್ಷಿತವಾಗುತ್ತದೆ
- ಬೈಜಿಕ ಬಲವು ಪರಿಪೂರ್ಣತೆಯ ಬಲವಾಗಿದ್ದು, ತನ್ನ ಸುತ್ತಲಿನ ನಿರ್ದಿಷ್ಟ ಸಂಖ್ಯೆಯ ನ್ಯೂಕ್ಲಿಯಾನುಗಳ ಮೇಲೆ ಮಾತ್ರ ವರ್ತಿಸುತ್ತದೆ.

ವಿಕಿರಣ ಪಟುತ್ವ:

ಎ.ಎಚ್.ಬೆಕ್ವೆರಲ್ ವಿಕಿರಣಪಟುತ್ವವನ್ನು ಸಂಯುಕ್ತ ವಸ್ತುಗಳ ಮೇಲೆ ದೃಗ್ಗೋಚರ ಬೆಳಕು ಬಿದ್ದಾಗ ಉಂಟಾಗುವ ಪ್ರತಿದೀಪ್ತಿ ಮತ್ತು ಅನುದೀಪ್ತಿಗಳಗಳನ್ನು ಅಭ್ಯಸಿಸುವಾಗ ಕಂಡುಹಿಡಿದರು.

ಸಂಯುಕ್ತ ವಸ್ತುವು ಕಪ್ಪುಹಾಳೆ ಮತ್ತು ಬೆಳ್ಳಿಯ ಮೂಲಕ ತೂರಿಕೊಂಡು ಹೋಗುವ ಸಾಮರ್ಥ್ಯ ಹೊಂದಿದೆ. ವಿಕಿರಣ ಪಟುತ್ವವು ಒಂದು ಬೈಜಿಕ ಪ್ರಕ್ರಿಯೆಯಾಗಿದ್ದು ಅಸ್ಥಿರ

ನ್ಯೂಕ್ಲಿಯಸ್‌ಗಳು (ಮುಂದುವರಿದ ಭಾಗ)

ದ್ವಿತೀಯ ಪಿಯುಸಿ

ನ್ಯೂಕ್ಲಿಯಸ್ ಕ್ಷಯಿಸುತ್ತಾ ಹೋಗುತ್ತದೆ. ನಿಸರ್ಗದಲ್ಲಿ ಮೂರು ರೀತಿಯ ವಿಕಿರಣಪಟು ಕ್ಷಯಿಕೆಗಳಿವೆ.

α -ಕ್ಷಯಿಕೆ

β -ಕ್ಷಯಿಕೆ

γ -ಕ್ಷಯಿಕೆ

1) ಆಲ್ಫಾ α ಕ್ಷಯಿಕೆ: $^{4}_{2}He$

ಇಲ್ಲಿ ಹೀಲಿಯಂ $^{4}_{2}He$ ಹೊರಸೂಸಲ್ಪಡುತ್ತದೆ.

ಉದಾ: ಯುರೇನಿಯಂ , $^{238}_{92}U$. $^{4}_{2}He$ ನ್ಯೂಕ್ಲಿಯಸ್ ಅನ್ನು ಹೊರಸೂಸುವುದರೊಂದಿಗೆ $^{234}_{90}$ Th ಆಗುತ್ತದೆ.

$$^{238}_{98}U \rightarrow {}^{234}_{90}Th + {}^{4}_{2}He$$

ಇಲ್ಲಿ ಉತ್ಪನ್ನ ನ್ಯೂಕ್ಲಿಯಸ್‌ಗಳ ಒಟ್ಟು ರಾಶಿಯು ಮೂಲ ನ್ಯೂಕ್ಲಿಯಸ್ಸಿನ ರಾಶಿಗಿಂತ ಕಡಿಮೆ ಇದ್ದಾಗ ಮಾತ್ರ ಸ್ವಯಂ ಕ್ಷಯಿಕೆ ಸಾಧ್ಯ ಎಂಬುದನ್ನು ಐನ್‌ಸ್ಟೈನರ ರಾಶಿ-ಶಕ್ತಿ ಸಂಬಂಧ ಮತ್ತು ಶಕ್ತಿ ಸಂರಕ್ಷಣೆಯ ನಿಯಮ ಪ್ರತಿಪಾದಿಸುತ್ತದೆ. ಸಾಮಾನ್ಯವಾಗಿ α– ಕ್ಷಯಿಸುವಿಕೆಯಲ್ಲಿ

$$^{A}_{Z}X \rightarrow {}^{A-4}_{Z-2}Y + {}^{4}_{2}He$$

ವಿಘಟನ ಶಕ್ತಿ ಅಥವಾ ಬೈಜಿಕ ಕ್ರಿಯೆಯಲ್ಲಿನ ಬೆಲೆಯು ಆರಂಭಿಕ ರಾಶಿ ಶಕ್ತಿ ಮತ್ತು ಕ್ಷಯಿಕ ಉತ್ಪನ್ನಗಳ ಒಟ್ಟು ರಾಶಿ ಶಕ್ತಿಗಳ ನಡುವಿನ ವ್ಯತ್ಯಾಸವಾಗಿದ್ದರೆ a - ಕ್ಷಯಿಕೆ

$$Q = (m_X - m_Y - m_{He})^{C^2}$$

ಇಲ್ಲಿ m_X ಮತ್ತು m_Y ಗಳು m_{He} ಕ್ರಮವಾಗಿ ಆರಂಭಿಕ, ಕ್ಷಯಿಕೆ, ಆಲ್ಫಾ ಕಣಗಳ ರಾಶಿಯಾಗಿದೆ.

ಬೀಟಾ β– ಕ್ಷಯಿಕೆ:

ಬೀಟಾ ಕ್ಷಯಿಕೆಯಲ್ಲಿ ಒಂದು ನ್ಯೂಕ್ಲಿಯಸ್ ಸ್ವಯಂ ಪ್ರೇರಿತವಾಗಿ ಒಂದು ಎಲೆಕ್ಟ್ರಾನ್ (B^- ಕ್ಷಯಿಕೆ) ಅಥವಾ ಒಂದು ಪೊಸಿಟ್ರಾನ್ (β^+ ಕ್ಷಯಿಕೆ) ವಿಸರ್ಜಿಸುತ್ತದೆ.

ಉದಾಹರಣೆ:

β^- ಕ್ಷಯಿಕೆ: $^{32}_{15}P \rightarrow {}^{32}_{16}S + e^- + \bar{v}$ (ಆ್ಯಂಟಿ ನ್ಯೂಟ್ರಿನೋ)

β^+ ಕ್ಷಯಿಕೆ: $^{22}_{11}Na \rightarrow {}^{22}_{10}Ne + e^+ + v$ (ನ್ಯೂಟ್ರಿನೋ)

ಇಲ್ಲಿ ವಿಸರ್ಜಿಸುವ ನ್ಯೂಟ್ರಿನೊಗಳು ತಟಸ್ಥ ಕಣಗಳಾಗಿದ್ದು ಅವುಗಳ ರಾಶಿಯು ಅತ್ಯಂತ ಕಡಿಮೆಯಾಗಿರುತ್ತದೆ. ಇವು ಯಾವುದೇ ವಸ್ತುವಿನ ಮೂಲಕ ತೂರಿಕೊಂಡು ಹೋಗುತ್ತದೆ.

ಸಾಮಾನ್ಯವಾಗಿ β^- ಕ್ಷಯಿಕೆಯಲ್ಲಿ ರಾಶಿ ಸಂಖ್ಯೆ A ಬದಲಾಗದೆ β^- ಕ್ಷಯಿಕೆಯಲ್ಲಿ Z ಸಂಖ್ಯೆ 1 ರಷ್ಟು ಹೆಚ್ಚಾಗಿಯೂ β^+ ಕ್ಷಯಿಕೆಯಲ್ಲಿ Z ಸಂಖ್ಯೆ 1 ರಷ್ಟು ಕಡಿಮೆಯಾಗುತ್ತದೆ.

β^- ಕ್ಷಯಿಕೆ ಹಿಂದಿರುವ ಪ್ರಕ್ರಿಯೆ ನ್ಯೂಟ್ರಾನ್ ಮತ್ತು ಪ್ರೋಟಾನ್‌ಗಳ ನಡುವಿನ ಪರಿವರ್ತನೆಯಾಗಿದ್ದು,

β^- ಕ್ಷಯಿಕೆಯಲ್ಲಿ $n \rightarrow p + e^- \bar{v}$

β^+ ಕ್ಷಯಿಕೆಯಲ್ಲಿ $p \rightarrow n + e^+ + v$



ಗಾಮಾ(γ) ಕ್ಷಯಿಕೆ:

ಭೂ ಸ್ಥಿತಿ ಮತ್ತು ಉದ್ರೇಕಿತ ಮಟ್ಟಗಳಂತೆ ಸಹ ವಿವಿಕ್ತ ಶಕ್ತಿಯ ಮಟ್ಟಗಳನ್ನು ಹೊಂದಿರುವ ನ್ಯೂಕ್ಲಿಯಸ್‌ನಲ್ಲಿ ಉದ್ರೇಕಿತ ಸ್ಥಿತಿಯಲ್ಲಿರುವ ಒಂದು ನ್ಯೂಕ್ಲಿಯಸ್ ಸ್ವಪ್ರೇರಣೆಯಿಂದ ಭೂಸ್ಥಿತಿ ಮಟ್ಟಕ್ಕೆ (ಅಥವಾ ಕಡಿಮೆ ಆಕ್ತಿಯ ಮಟ್ಟಕ್ಕೆ) ಕ್ಷಯಿಸಿದಾಗ, ಒಂದು ಫೋಟಾನು ವಿಸರ್ಜಿತವಾಗುತ್ತದೆ. ಮತ್ತು ಅದರ ಶಕ್ತಿಯು ಆ ಎರಡು ಶಕ್ತಿ ಮಟ್ಟಗಳ ನಡುವಿನ ವ್ಯತ್ಯಾಸಕ್ಕೆ ಸಮನಾಗಿರುತ್ತದೆ. ಇದನ್ನು ಗಾಮಾ-ಕ್ಷಯಿಕೆ ಎನ್ನುವರು .

ಉದಾ:

$$^{60}_{27}C \rightarrow {}^{60}_{28}Ni + \beta^- + \gamma\,(1.17MeV) + \gamma\,(1.33MeV$$

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಎಲೆಕ್ಟ್ರಿಕ್ ಚಾರ್ಜಸ್ ಅಂಡ್ ಫೀಲ್ಡ್ಸ್–4' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಸಮಾಜ, ಪೋಷಕರು ಮತ್ತು ಶಿಕ್ಷಕರು ಹೇಳಿದ್ದನ್ನು ಅನುಸರಿಸುವುದು ಅತ್ಯಂತ ಸುಲಭ ಮತ್ತು ಸುರಕ್ಷಿತ ಮಾರ್ಗ. ಆದರೆ ಅದು ಬದುಕುವ ರೀತಿಯಲ್ಲ. ಸತ್ಯ ಏನೆಂಬುದನ್ನು ಖುದ್ದು ಕಂಡುಕೊಳ್ಳುವುದೇ ನಿಜವಾದ ಬದುಕು.
-ಜಿಡ್ಡು ಕೃಷ್ಣಮೂರ್ತಿ

ಭಿನ್ನ ಧ್ವನಿಗೆ ಅಸಹನೆ ಪ್ರಜಾಪ್ರಭುತ್ವಕ್ಕೆ ಒಗ್ಗದ ಪ್ರವೃತ್ತಿ

ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಚಳವಳಿ ನಡೆಸುತ್ತಿರುವ ರೈತರಿಗೆ ಅವರ ಬಗ್ಗೆ ಸಹಾನುಭೂತಿ ಉಳ್ಳವರು ಹೇಗೆ ಬೆಂಬಲ ಸೂಚಿಸಬಹುದು ಎಂಬುದನ್ನು ವಿವರಿಸುವ ಕಡತವನ್ನು (ಟೂಲ್‌ಕಿಟ್) ಸಿದ್ಧಪಡಿಸಿದ ಆರೋಪದಲ್ಲಿ ಬೆಂಗಳೂರಿನ ಪರಿಸರ ಕಾರ್ಯಕರ್ತೆ 21 ವರ್ಷ ವಯಸ್ಸಿನ ದಿಶಾ ರವಿ ಅವರನ್ನು ದೆಹಲಿ ಪೊಲೀಸರು ಬಂಧಿಸಿದ ಪ್ರಕರಣವು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಇದೇ ಪ್ರಕರಣದಲ್ಲಿ, ಮುಂಬೈನ ವಕೀಲೆ ಮತ್ತು ಪರಿಸರ ಕಾರ್ಯಕರ್ತೆ ನಿಕಿತಾ ಜೇಕಬ್ ಮತ್ತು ಪುಣೆಯ ಎಂಜಿನಿಯರ್ ಶಾಂತನು ಮುಲುಕ್ ವಿರುದ್ಧ ಪೊಲೀಸರು ವಾರಂಟ್ ಪಡೆದುಕೊಂಡಿದ್ದಾರೆ. ದಿಶಾ ಬಂಧನ ಮತ್ತು ನಂತರದ ಪ್ರಕ್ರಿಯೆಯಲ್ಲಿ ಪೊಲೀಸರು ನಿಯಮಗಳನ್ನು ಪಾಲಿಸಿಲ್ಲ ಎಂದು ಹಲವು ವಕೀಲರು ಮತ್ತು ಸಾಮಾಜಿಕ ಕಾರ್ಯಕರ್ತರು ದೂರಿದ್ದಾರೆ. ಒಂದು ರಾಜ್ಯದ ಪೊಲೀಸರು ಬೇರೊಂದು ರಾಜ್ಯಕ್ಕೆ ಹೋಗಿ ವ್ಯಕ್ತಿಯನ್ನು ಬಂಧಿಸುವಾಗ ಪಾಲಿಸಬೇಕಾದ ನಿಯಮ ಏನು ಎಂಬುದು ಸ್ಪಷ್ಟವಾಗಿದೆ. ಬಂಧಿತ ವ್ಯಕ್ತಿಯನ್ನು ಅತ್ಯಂತ ಹತ್ತಿರದಲ್ಲಿರುವ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿ, ಪ್ರಯಾಣದ ಅನುಮತಿ ಪಡೆದುಕೊಳ್ಳಬೇಕು ಎಂದು 2019ರಲ್ಲಿ ದೆಹಲಿ ಹೈಕೋರ್ಟ್ ಆದೇಶ ನೀಡಿದೆ. ಬಂಧಿತ ವ್ಯಕ್ತಿಯನ್ನು ಹೇಗೆ ನಡೆಸಿಕೊಳ್ಳಬೇಕು ಎಂಬುದರ ಕುರಿತು ಸುಪ್ರೀಂ ಕೋರ್ಟ್ ಮಾರ್ಗಸೂಚಿಯೂ ಇದೆ. ಆದರೆ, ಶನಿವಾರ ರಾತ್ರಿ ಬಂಧಿಸಲಾದ ದಿಶಾ ಅವರನ್ನು ಭಾನುವಾರ ದೆಹಲಿಯಲ್ಲಿ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಯಿತು. ಮ್ಯಾಜಿಸ್ಟ್ರೇಟ್ ಅವರು ದಿಶಾ ಅವರನ್ನು ಐದು ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿದರು. ಈ ಸಂದರ್ಭದಲ್ಲಿ ದಿಶಾ ಪರವಾಗಿ ವಾದಿಸಲು ವಕೀಲರೇ ಇರಲಿಲ್ಲ ಎಂದು ಒಂದು ವರ್ಗ ಹೇಳುತ್ತಿದೆ. ಆದರೆ, ತಾವು ಅಗತ್ಯ ನಿಯಮಗಳನ್ನು ಪಾಲಿಸಿರುವುದಾಗಿ ದೆಹಲಿ ಪೊಲೀಸರು ಹೇಳಿಕೊಂಡಿದ್ದಾರೆ. ನಿಯಮ ಪಾಲನೆ ಆಗದೇ ಇರುವುದು ನಿಜವೇ ಹೌದಾದರೆ, ಅದು ಸಹಜ ನ್ಯಾಯ ತತ್ವಕ್ಕೆ ವಿರುದ್ಧವಾದುದು.

ಪರಿಸರ ಕಾರ್ಯಕರ್ತೆ ದಿಶಾ ರವಿ ಬಂಧನ ಪ್ರಕರಣವು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ

ರೈತರ ಪ್ರತಿಭಟನೆ ಮತ್ತು ಅದಕ್ಕೆ ಸಂಬಂಧಿಸಿ ನಡೆದ ವಿದ್ಯಮಾನಗಳನ್ನು ಕೇಂದ್ರ ಸರ್ಕಾರವು ಅಸಹಿಷ್ಣುತೆಯಿಂದ ನೋಡಿದೆ ಎಂದು ಹೇಳಲು ಪುರಾವೆಗಳಿವೆ. ಪ್ರತಿಭಟನೆ ನಡೆಸುವವರನ್ನು 'ಆಂದೋಲನಜೀವಿ'ಗಳೆಂದು ಪ್ರಧಾನಿ ನರೇಂದ್ರ ಮೋದಿ ಅವರೇ ಹಂಗಿಸಿದ್ದಾರೆ. ರೈತರ ಚಳವಳಿಪರ ದನಿ ಎತ್ತಿದವರ ಮೇಲೆ ಅಧಿಕಾರಸ್ಥರು ಮುಗಿಬಿದ್ದಿದ್ದಾರೆ. ಭಿನ್ನದನಿ, ಭಿನ್ನಮತ, ಅಸಮಾಧಾನ ವ್ಯಕ್ತಪಡಿಸುವುದು ಆಳುವ ವರ್ಗದ ಸಿಟ್ಟಿಗೆ ಗುರಿಯಾಗುತ್ತಿದೆ. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124 ಎ ಅಡಿಯಲ್ಲಿ ದೇಶದ್ರೋಹ ಪ್ರಕರಣಗಳನ್ನು ದಾಖಲಿಸುತ್ತಿರುವುದು ಈಚಿನ ದಿನಗಳಲ್ಲಿ ಹೆಚ್ಚಳವಾಗಲು ಇದು ಕಾರಣವಾಗಿರಬಹುದು. 'ಡಿಜಿಟಲ್ ಇಂಡಿಯಾ' ಎಂಬುದು ಮೋದಿ ನೇತೃತ್ವದ ಸರ್ಕಾರದ ಮಹತ್ವಾಕಾಂಕ್ಷಿ ಕಾರ್ಯಕ್ರಮ. ಆದರೆ, ಡಿಜಿಟಲ್ ಇಂಡಿಯಾವು ಹಣದ ವಹಿವಾಟು ಮತ್ತು ಇ-ಕಾಮರ್ಸ್‌ಗೆ ಸೀಮಿತವಾಗಿರಬೇಕು ಎಂದು ಸರ್ಕಾರವು ಭಾವಿಸಿದಂತಿದೆ. ಜನರು ಅಂತರ್ಜಾಲವನ್ನು ತಮ್ಮೆಲ್ಲ ಚಟುವಟಿಕೆಗಳಿಗೂ ಒಗ್ಗಿಸಿಕೊಳ್ಳಲು ಯತ್ನಿಸುತ್ತಿರುವುದು ಸರ್ಕಾರಕ್ಕೆ ಪಥ್ಯವಾಗುತ್ತಿಲ್ಲ ಎಂಬುದನ್ನು ಟೂಲ್‌ಕಿಟ್ ಪ್ರಕರಣವು ತೋರಿಸುತ್ತಿದೆ. ಚಳವಳಿ, ಪ್ರತಿಭಟನೆಗಳಿಗೆ ಬೆಂಬಲ ಒಗ್ಗೂಡಿಸಲು ಅಂತರ್ಜಾಲದ ಬಳಕೆ ಜಗತ್ತಿನಾದ್ಯಂತ ಆಗುತ್ತಿದೆ. ಆಂದೋಲನ ಹೇಗೆ ನಡೆಸಬೇಕು ಎಂಬುದನ್ನು ಜನರಿಗೆ ತಿಳಿಸಲು ಟೂಲ್‌ಕಿಟ್ ತಯಾರಿಸುವುದು ಸಹಜ ಮತ್ತು ಸಾಮಾನ್ಯ ಕಾರ್ಯತಂತ್ರ. ಸರ್ಕಾರದ ನೀತಿಯ ವಿರುದ್ಧದ ಪ್ರತಿಭಟನೆಯನ್ನು ದೇಶದ್ರೋಹವೆಂದು ಪರಿಗಣಿಸಬಾರದು ಎಂದು ಸುಪ್ರೀಂ ಕೋರ್ಟ್ ಹಲವು ಬಾರಿ ಹೇಳಿದೆ. ಸಾರ್ವಜನಿಕರ ಅವಗಾಹನೆಗೆ ಲಭ್ಯವಿರುವ ಟೂಲ್‌ಕಿಟ್‌ನಲ್ಲಿ ದೇಶದ್ರೋಹದ ಅಂಶಗಳು ಕಾಣುತ್ತಿಲ್ಲ ಎಂದು ನ್ಯಾಯಶಾಸ್ತ್ರಜ್ಞ, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ದೀಪಕ್ ಗುಪ್ತ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾಗಿ ವರದಿಯಾಗಿದೆ. ಪೊಲೀಸರು ಹೊರಿಸಿರುವ ಗಂಭೀರ ಆರೋಪಗಳೆಲ್ಲವೂ ನಿಜವೇ ಎಂಬುದು ತನಿಖೆಯಿಂದಷ್ಟೇ ಗೊತ್ತಾಗಬೇಕಿದೆ. ಅದರಲ್ಲೂ ಮುಖ್ಯವಾಗಿ, ಈ ಟೂಲ್‌ಕಿಟ್ ಯಾವುದಾದರೂ ಪಿತೂರಿಯ ಭಾಗವೇ ಎಂಬುದನ್ನು ವಿಸ್ತೃತ ತನಿಖೆ ಮಾತ್ರ ಬಹಿರಂಗಪಡಿಸಬಲ್ಲದು. ಈ ಪ್ರಕರಣವನ್ನು ಇಡೀ ವಿಶ್ವ ಗಮನಿಸುತ್ತಿದೆ. ಹಾಗಾಗಿ, ಪೊಲೀಸರು ಕೂಡ ರಾಗ-ದ್ವೇಷಗಳಿಗೆ ಒಳಗಾಗದೆ, ಒತ್ತಡಗಳಿಗೆ ಮಣಿಯದೆ ವೃತ್ತಿಪರವಾಗಿ ತಮ್ಮ ಕರ್ತವ್ಯ ನಿಭಾಯಿಸುವ ಗುರುತರ ಹೊಣೆ ಹೊತ್ತಿದ್ದಾರೆ.

ದಿನದ ಟ್ವೀಟ್

ದೊಡ್ಡ ಗೆಲುವು

ಪ್ರಿಯಾ ರಮಣಿ ಅವರನ್ನು ಖುಲಾಸೆಗೊಳಿಸಲಾಗಿದೆ. ಲೈಂಗಿಕ ದೌರ್ಜನ್ಯಗಳ ಬಗ್ಗೆ ಮಾತನಾಡಲು ಮಹಿಳೆಯರು ಹಿಂಜರಿಯುವಂತಹ ಸಮಾಜದ ಮೇಲೆ ಈ ಪ್ರಕರಣವು ಆಳವಾದ ಪರಿಣಾಮ ಬೀರುತ್ತದೆ. #ಮೀ ಟೂ ಆಂದೋಲನಕ್ಕೆ ಸಿಕ್ಕ ದೊಡ್ಡ ಗೆಲುವು. ಇದೊಂದು ಮೈಲಿಗಲ್ಲು...

(ತಮ್ಮ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಮಾಡಿದ್ದ ಪ್ರಿಯಾ ರಮಣಿ ಅವರ ವಿರುದ್ಧ ಕೇಂದ್ರದ ಮಾಜಿ ಸಚಿವ ಎಂ.ಜೆ.ಅಕ್ಬರ್ ಅವರು ಹೂಡಿದ್ದ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದ ದೆಹಲಿ ಕೋರ್ಟ್ ತೀರ್ಪಿಗೆ ಪ್ರತಿಕ್ರಿಯೆ)

ಶೀಲಾ ಭಟ್, ಪತ್ರಕರ್ತೆ

25 ವರ್ಷಗಳ ಹಿಂದೆ

ಭಾನುವಾರ, 18-2-1996

- **ಚಲನಚಿತ್ರ ವಾಣಿಜ್ಯ ಮಂಡಳಿ ಹೋಳು?**

ಬೆಂಗಳೂರು, ಫೆ. 17– ರಾಜ್ಯದಲ್ಲಿ ಪರಭಾಷಾ ಚಲನಚಿತ್ರಗಳ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಸರ್ಕಾರ ಮತ್ತು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಕೈಗೊಂಡಿರುವ 'ಏಕಪಕ್ಷೀಯ' ತೀರ್ಮಾನದಿಂದ ಸಿಡಿದೆದ್ದಿರುವ ಪ್ರದರ್ಶಕರು ಮತ್ತು ವಿತರಕರು ಮಂಡಳಿಯಿಂದ 'ಬೇಸತ್ತು' ಹೊರಬರುವ ಪ್ರಕ್ರಿಯೆ ಆರಂಭವಾಗಿದ್ದು, ಇದರ ಪರಿಣಾಮವಾಗಿ ಐದು ದಶಕಗಳ ಹಿನ್ನೆಲೆಯ ಮಂಡಳಿ ಅಕ್ಷರಶಃ ಎರಡಾಗಿ ಹೋಳಾಗುವ ಘಟ್ಟಕ್ಕೆ ಬಂದಿದೆ.

- **ಬಿಜೆಪಿಯಿಂದ ಆಳ್ವ ಹೊರಕ್ಕೆ; ಶಾಸಕ ಸ್ಥಾನಕ್ಕೆ ರಾಜೀನಾಮೆ– ದಳಕ್ಕೆ ಅರ್ಜಿ**

ಬೆಂಗಳೂರು, ಫೆ. 17– ಡಾ. ಜೀವರಾಜ ಆಳ್ವ ಅವರು ಭಾರತೀಯ ಜನತಾ ಪಕ್ಷಕ್ಕೆ ಮತ್ತು ವಿಧಾನಸಭೆಯ ಸದಸ್ಯತ್ವಕ್ಕೆ ಇಂದು ರಾಜೀನಾಮೆ ನೀಡಿದರು.

ಬಹುದಿನಗಳ ವದಂತಿಯಂತೆ ಅವರು ಕೊನೆಗೂ ಈ ನಿರ್ಧಾರಕ್ಕೆ ಬಂದಿರುವುದು ಮತ್ತು ಮರಳಿ ಜನತಾದಳ ಸೇರಲು ನಿರ್ಧರಿಸಿರುವುದರ ಹಿಂದೆ ದೊಡ್ಡ ರಾಜಕೀಯ ತಂತ್ರ ಅಡಗಿದ್ದರೂ ಅವರ ಈ ತೀರ್ಮಾನ ಬಿಜೆಪಿಗೆ ಅನಿರೀಕ್ಷಿತವೇನಲ್ಲ.

ರಾಜ್ಯಸಭೆ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ತನ್ನ ಅಭ್ಯರ್ಥಿಯ ಗೆಲುವಿಗೆ ಅಗತ್ಯವಾದ 5 ಮತಗಳಿಗಾಗಿ ಒಂದೊಂದಕ್ಕೂ ಹೆಣಗುತ್ತಿರುವಾಗ, ಸಮಯ ನೋಡಿ 'ರಾಜಕೀಯ ಟೈಂ ಬಾಂಬ್' ಸಿಡಿಸಿದ ಡಾ. ಆಳ್ವ ಅವರ ನಿಲುವನ್ನು 'ಅನುಕೂಲ ಸಿಂಧು ರಾಜಕಾರಣ' ಎಂದು ರಾಜಕೀಯ ಪಂಡಿತರು ವಿಶ್ಲೇಷಿಸುತ್ತಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 18-2-1971

- **ನಗರಕ್ಕೆ ಕಾವೇರಿ ನೀರು ಸರಬರಾಜು ಯೋಜನೆ ಕಾರ್ಯಗಳ ಪೂರೈಕೆ**

ಬೆಂಗಳೂರು, ಫೆ. 17– 1973ರ ಅಂತ್ಯದ ವೇಳೆಗೆ ಕಾವೇರಿಯಿಂದ ಬೆಂಗಳೂರಿಗೆ ನೀರು ಸರಬರಾಜು ಮಾಡುವ ಯೋಜನೆಯ ಎಲ್ಲ ಕಾರ್ಯಗಳನ್ನೂ ಮುಗಿಸಲಾಗುವುದೆಂದು ಜಲಮಂಡಳಿಯ ಅಧ್ಯಕ್ಷ ಶ್ರೀ ಐ.ಎಂ. ಮುಗ್ಧಂ ಅವರು ಇಂದು ಇಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

- **ಚಿಲ್ಲರೆಯ ಚಿಂತೆ**

ಮುಂಬೈ, ಫೆ. 17– ಈಗ ದೇಶದಲ್ಲಿ ಚಿಲ್ಲರೆ ಹಣಕ್ಕೆ ಬರಗಾಲ. ಮುಂಬಯಿಯಲ್ಲಂತೂ ಎಲ್ಲರ ಗಂಟಲಲ್ಲೂ ಒಂದೇ ಸ್ವರ 'ಚಿಲ್ಲರೆ ಇಲ್ಲ ಸ್ವಾಮಿ'. ಟ್ಯಾಕ್ಸಿ, ಬಸ್ಸು, ಹೋಟೆಲು, ಮಾರುಕಟ್ಟೆ, ಅಂಗಡಿಗಳು, ಕೊನೆಗೆ ಕ್ಷೌರಿಕನ ಬಳಿ ಕೂಡ ಚಿಲ್ಲರೆ ಇಲ್ಲ. ಮತ್ತೆ ಶ್ರೀಸಾಮಾನ್ಯನಲ್ಲಿ ಹೇಗೆ ಬಂದೀತು?

'ನಿಗದಿಯಾದ ಹಣ ಕೊಡಿ', 'ಚಿಲ್ಲರೆ ಕೇಳಬೇಡಿ' ಎಂಬಂಥ ಬೋರ್ಡ್‌ಗಳು ಎಲ್ಲೆಲ್ಲೂ ಕಾಣಿಸಿಕೊಂಡಿವೆ. ಟ್ಯಾಕ್ಸಿ ಹಿಡಿಯಬೇಕಾದರೆ, ಚಿಲ್ಲರೆ ಇದೆ ಎಂಬುದನ್ನು ಸ್ಪಷ್ಟಪಡಿಸಿಕೊಂಡೇ ಟ್ಯಾಕ್ಸಿವಾಲಾ ಒಳಬಿಡುತ್ತಾನೆ. ಟ್ಯಾಕ್ಸಿ ಮೀಟರು 80 ಪೈಸೆ ತೋರಿಸಿದರೆ, ಅವಸರದ ಮುಂಬಯಿವಾಲಾ ಉದಾರತನದಿಂದ 'ಹೋಗಲಿ ಬಿಡಿ' ಎಂದು ರೂಪಾಯಿ ಕೊಟ್ಟು ಹೊರ ಓಡುತ್ತಾನೆ.

'ನಮ್ಮ ಅರ್ಥಸಚಿವರು ಏನು ಚಿಲ್ಲರೆ ಜನ ಅಲ್ಲ ಗೊತ್ತಾಯಿತೇ? ಹಾಗೆಂದು ನಿಮಗೆ ತಿಳಿಯಲು ಈ ಏರ್ಪಾಡು' ಎನ್ನುತ್ತಾ ವ್ಯಂಗ್ಯವಾಡುತ್ತಾರೆ ಸಾರ್ವಜನಿಕರು.

ಅಡಿಗರ ಜನ್ಮದಿನದ ನೆಪದಲ್ಲಿ ಕಾವ್ಯ ಮತ್ತು ಪ್ರಜಾಪ್ರಭುತ್ವ ಕುರಿತ ಟಿಪ್ಪಣಿಗಳು

ಕವಿ ಪ್ರಭುತ್ವದ ಪಕ್ಷಪಾತಿ ಆಗಬಲ್ಲನೇ?

ಪಡಸಾಲೆ

ರಘುನಾಥ ಚ.ಹ.

ವೈದ್ಯ, ವಿಜ್ಞಾನಿ, ಚಿತ್ರಕಾರ, ಜಲಗಾರ, ಸಂಗೀತಗಾರ ಹೀಗೆ ಬೇರೆ ಬೇರೆ ವರ್ಗಗಳ ಸಾಧಕರು ಸಮಾಜಕ್ಕೆ ಗಣನೀಯ ಕೊಡುಗೆ ನೀಡುತ್ತಿದ್ದರೂ ಕನ್ನಡಿಗರ ಮೊದಲ ಗೌರವವು ಸಾಹಿತಿಗಳಿಗೆ ಸಂದಿರುವ ಉದಾಹರಣೆಗಳೇ ಹೆಚ್ಚು. ಏಕೆ ಹೀಗೆ? ಇದಕ್ಕೆ ಉತ್ತರವಾಗಿ ಕನ್ನಡ ಕಾವ್ಯ ಪರಂಪರೆಯನ್ನು ಗಮನಿಸಬೇಕು.

ಜನಸಮೂಹಕ್ಕೆ ಅಗತ್ಯವಾದ ವಿವೇಕವನ್ನು ರೂಪಿಸುವಲ್ಲಿ ಸಾಹಿತ್ಯಲೋಕವೇ ಮುಂಚೂಣಿಯಲ್ಲಿದೆ. ವ್ಯಕ್ತಿಗೆ ಅಗತ್ಯವಾದ ಆತ್ಮಗೌರವ ಮತ್ತು ವಿವೇಕವನ್ನು ಕಟ್ಟಿಕೊಡುವ ಕವಿ, ತನ್ನ ಕಾವ್ಯದ ಮೂಲಕ ತಾನು ಬದುಕುತ್ತಿರುವ ಸಮಾಜದ ತವಕ ತಲ್ಲಣಗಳಿಗೆ ಕನ್ನಡಿಯೂ ಆಗುತ್ತಾನೆ. ಸಮಕಾಲೀನ ಸಂಕಟಗಳನ್ನು ಎದುರಿಸಲು ಸಹೃದಯರಿಗೆ ಅಗತ್ಯವಾದ ವೈಚಾರಿಕ ದ್ರವ್ಯವನ್ನು ತನ್ನ ಮಾತು-ಕೃತಿಗಳ ಮೂಲಕ ನೀಡುತ್ತಾನೆ. ಪ್ರಭುತ್ವದ ವಿಮರ್ಶಕನಾಗಿರುವ ಮೂಲಕ ಸಮಾಜದ ಹಿತಕ್ಕೆ ಕಾರಣನಾಗುತ್ತಾನೆ. ಭಾಷೆಯ ಸೌಂದರ್ಯ ಹಾಗೂ ಜೀವಶಕ್ತಿ ಹೆಚ್ಚಿಸುತ್ತಾನೆ. ಈ ಎಲ್ಲ ಕಾರಣಗಳೂ ಕನ್ನಡಿಗರ ಕವಿ-ಕಾವ್ಯ ಪಕ್ಷಪಾತಕ್ಕೆ ಕಾರಣವಿರಬಹುದು.

ಕನ್ನಡ ಕಾವ್ಯಪರಂಪರೆಯ ಆದರ್ಶಗಳು ಕೇವಲ ಬಾಯಿಮಾತಿನವಲ್ಲ. ಅವುಗಳನ್ನು ಆಚರಣೆಯಲ್ಲೂ ನೋಡಬಹುದು. ಕೆಲವು ಉದಾಹರಣೆಗಳ ಮೂಲಕ ಆ ಮಾದರಿಯನ್ನು ಸ್ಪಷ್ಟಪಡಿಸಿಕೊಳ್ಳಬಹುದು.

ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದ ಸಂದರ್ಭ. ಒಂದು ವಿಚಿತ್ರ ದೂರು ಮುಖ್ಯಮಂತ್ರಿಗಳ ಕಚೇರಿಯನ್ನು ತಲುಪಿತು. 'ಪ್ರಾರ್ಥನೆ' ಎನ್ನುವ ಕವಿತೆಯಲ್ಲಿ ಅಶ್ಲೀಲತೆಯಿದ್ದು, ಆ ಪದ್ಯ ಬರೆದ ಕವಿಯ ವಿರುದ್ಧ ಕ್ರಮ ಕೈಗೊಳ್ಳಬೇಕು ಎನ್ನುವ ದೂರದು. ಮುಖ್ಯಮಂತ್ರಿಗಳ ಕಚೇರಿಯಿಂದ ಕವಿಗೆ ಪತ್ರ ರವಾನೆಯಾಯಿತು. 'ನಿಮ್ಮ ಪ್ರಾರ್ಥನೆ ಎಂಬ ಕವನದ ಬಗ್ಗೆ ಮುಖ್ಯಮಂತ್ರಿಗಳು ಅವರಿಗೆ ಅನುಕೂಲವಾದ ದಿನ ಮತ್ತು ಸಮಯದಲ್ಲಿ ಚರ್ಚಿಸಲು ಬಯಸುತ್ತಾರೆ' ಎನ್ನುವುದು ಪತ್ರದ ಸಾರಾಂಶ. ಆ ಪತ್ರಕ್ಕೆ ಕವಿ ಬರೆದ ಮಾರೋಲೆಯಲ್ಲಿ, 'ಚರ್ಚೆಗೆ ಅವರಿಗೆ ಅನುಕೂಲವಾದ ದಿನ ಮತ್ತು ಸಮಯವೇ ಏಕಾಗಬೇಕು? ನನಗೂ ಅನುಕೂಲವಾದ ದಿನ ಮತ್ತು ಸಮಯ ಇರಬಹುದಲ್ಲವೇ?' ಎಂದು ಪ್ರಶ್ನಿಸಿದರು. 'ಇಬ್ಬರಿಗೂ ಅನುಕೂಲವಾದ ದಿನ ಮತ್ತು ವೇಳೆಯಲ್ಲಿ ಭೇಟಿಯಾಗಲು ಬಯಸುತ್ತಾರೆ' ಎನ್ನುವ ಮತ್ತೊಂದು ಪತ್ರ ಮುಖ್ಯಮಂತ್ರಿಗಳ ಕಚೇರಿಯಿಂದ ಬಂತು. ಆದರೆ, ಆ ಭೇಟಿಗೆ ಸಮಯ ಕೂಡಿ ಬರಲೇ ಇಲ್ಲ.

ಇನ್ನೊಂದು ಘಟನೆ, ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದ್ದು. ಪ್ರಖ್ಯಾತ ಕವಿಯೊಬ್ಬರು ಜೀವನೋಪಾಯಕ್ಕೆ ತೊಂದರೆ ಎದುರಿಸುತ್ತಿರುವ ಸುದ್ದಿ ಅರಸರನ್ನು ತಲುಪಿತು. ಕವಿಯೊಂದಿಗೆ ಮಾತನಾಡಿದ ಅವರು, 'ಜನರ ಹಣವನ್ನು ಜನರ ಕವಿಗೆ ದೊರೆಯುವಂತೆ ಮಾಡೋಣ' ಎಂದಾಗ, ಮುಖ್ಯಮಂತ್ರಿಯ ಹೃದಯವಂತಿಕೆಯನ್ನು ಕವಿ ಮೆಚ್ಚಿಕೊಂಡರೇ ಹೊರತು, ಸರ್ಕಾರದ ನೆರವು ಪಡೆಯಲಿಲ್ಲ.

ಆಳುವವರ ಕಣ್ಣಿಗೆ ಹೇಗಾದರೂ ಬೀಳಲಿಕ್ಕೆ ತುದಿಗಾಲಲ್ಲಿ ನಿಂತವರೇ ಬಹುಸಂಖ್ಯೆಯಲ್ಲಿರುವ ಸಂದರ್ಭದಲ್ಲಿ, ಮುಖ್ಯಮಂತ್ರಿಗಳೇ ಭೇಟಿಯಾಗಲು ಬಯಸಿದಾಗ ವ್ಯಕ್ತಿಯೊಬ್ಬ ತನ್ನ ಅನುಕೂಲದ ವೇಳೆಯ ಬಗ್ಗೆ ಮಾತನಾಡುವುದು ಏನನ್ನು ಹೇಳುತ್ತದೆ ಎನ್ನುವುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಮುಖ್ಯಮಂತ್ರಿಗಳು ತಾವಾಗಿಯೇ ನೆರವು ನೀಡಲು ಮುಂದಾದಾಗ ಅದನ್ನು ಒಲ್ಲೆ ಎನ್ನುವುದೂ ಸುಲಭವಲ್ಲ. ಈ ಸ್ವಾಭಿಮಾನ ಹಾಗೂ ದಿಟ್ಟತನದ ಪ್ರದರ್ಶನ ಅಸಲು ಕವಿಗಷ್ಟೇ ಸಾಧ್ಯ.

ಪ್ರಭುತ್ವದ ವಿಮರ್ಶೆ ಕನ್ನಡ ಕಾವ್ಯದ ಆರಂಭದಿಂದಲೂ ಇರುವಂತಹದ್ದೇ. ಆಶ್ರಯ ನೀಡಿದ ಅರಸನನ್ನು ಕಾವ್ಯನಾಯಕನಾಗಿ ಚಿತ್ರಿಸಿದರೂ, 'ಕರ್ಣರಸಾಯನಮಲ್ತೆ ಭಾರತಂ' ಎನ್ನಲು ಪಂಪ ಹಿಂಜರಿಯಲಿಲ್ಲ. ಕುಮಾರವ್ಯಾಸನ ಕಣ್ಣಿಗೆ 'ಅರಸು ರಾಕ್ಷಸ'. ರಾಜಕೀಯ ಪ್ರಭುತ್ವಕ್ಕೆ ಪರ್ಯಾಯವಾಗಿ ಸಾಂಸ್ಕೃತಿಕ ಮಂತ್ರಿಮಂಡಲವನ್ನು ಪ್ರತಿಪಾದಿಸಿದವರು ಕುವೆಂಪು. ಈ ಪರಂಪರೆಯ ಭಾಗವಾದ ಕವಿ, 1975ರಲ್ಲಿ ತುರ್ತು ಪರಿಸ್ಥಿತಿ ಹೇರಿಕೆಯಾದಾಗ ಸರ್ಕಾರದ ವಿರುದ್ಧ ಧ್ವನಿ ಎತ್ತದಿರುವುದು ಸಾಧ್ಯವೇ? ತುರ್ತು ಪರಿಸ್ಥಿತಿಗೆ ಪ್ರತಿಕ್ರಿಯೆಯಾದ, 'ನಿನ್ನ ಗದ್ದೆಗೆ ನೀರು ತರುವ ನಾಲೆಗಳೆಲ್ಲ ಬಂದು/ ಬೇಕಾದದ್ದು ಬೆಳೆದುಕೋ ಬಂಧು' ಎನ್ನುವ ಮಾತು ಈ ಹೊತ್ತಿಗೂ ಅನ್ವಯಿಸುವಂತಹದ್ದು. ಕೇಂದ್ರ ಸರ್ಕಾರದ ಹೊಸ ಕೃಷಿ ಕಾಯ್ದೆಗಳು ರೈತರ ಹಿತಾಸಕ್ತಿಗೆ ಮಾರಕ ಎಂದು ಲಕ್ಷ ಲಕ್ಷ ರೈತರು ದೆಹಲಿಯ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿರುವಾಗ, ರೈತರ ದಾರಿಗೆ ಅಡ್ಡವಾಗಿ ಮೊಳೆಗಳನ್ನು ಹೊಡೆಯುವ ಸರ್ಕಾರ 'ತಾನು ರೈತಪರ' ಎಂದು ಹೇಳಿಕೊಳ್ಳುತ್ತದೆ. ತುರ್ತು ಪರಿಸ್ಥಿತಿಯಂಥ ದಮನಕಾರಿ ಸಂದರ್ಭವನ್ನೂ ದೇಶ ಮತ್ತು ಜನಹಿತದ ಹೆಸರಿನಲ್ಲಿ ಸಮರ್ಥಿಸಿಕೊಳ್ಳುವ ಸೋಗಲಾಡಿತನವೇ ಪ್ರಸ್ತುತ ರೈತರ ಪ್ರತಿಭಟನೆ ಸಂದರ್ಭದಲ್ಲಿ ಸರ್ಕಾರ ಅನುಸರಿಸುತ್ತಿರುವ ದಮನಕಾರಿ ನೀತಿಯಲ್ಲೂ ಇದೆ. 'ನಾಲೆಗಳನ್ನು ಬಂದು ಮಾಡಿ, ಬೇಕಾದ್ದನ್ನು ಬೆಳೆದುಕೊ' ಎನ್ನುವ ಮಾತು ಇಂದಿನ ಸರ್ಕಾರಕ್ಕೂ ಅನ್ವಯಿಸುವಂತಹದ್ದು.



ದೊಡ್ಡ ದೊಡ್ಡ ಮಾತಿನ ಬಲೂನುಗಳು ಉಬ್ಬಿದಾಗಲೆಲ್ಲ ನಿಜದ ಸೂಜಿಮೊನೆ ತಾಗಿಸುವ ಕವಿ, ತನ್ನ ಕಾಲದ ಸಂಕಟಗಳಿಗೆ ರೂಪಕಗಳನ್ನು ಸೃಷ್ಟಿಸುತ್ತಾನೆ; ಕಾವ್ಯ ಸಾಕ್ಷಿಪ್ರಜ್ಞೆಯಾಗುತ್ತದೆ. 'ಇಂದು ನಮ್ಮೀ ನಾಡು' ಕವಿತೆ ನೆನಪಿಸಿಕೊಳ್ಳಿ. 'ಇತ್ತುಗಳ ಧ್ವಜವ ಹಿಡಿದೆತ್ತಿ ನಿಲ್ಲು ಮಗು, ಇದೆಯ ಹೃದಯದ್ರಾವ ಬೇಡ ನಿನಗೆ' ಎಂದು ಕವಿ ಯುವಪೀಳಿಗೆಯನ್ನು ಮಾತಿನಲ್ಲೇ ಚುಚ್ಚುತ್ತಾನೆ. 'ಇತ್ತು'ಗಳ ಧ್ವಜವ ನಿಲ್ಲಿಸುವ ಆಟ ಯಾವ ಬಗೆಯದು? ಬೇರು ಸತ್ತ ಮರವನ್ನು ಹಿಡಿದೆತ್ತಿ ನಿಲ್ಲಿಸುವ, ಕೋಗಿಲೆಯ ಕೊಂದು ಗುಂಜಾರವದ ಹಾಡುಹಲಗೆ ಹಚ್ಚುವ, ಕೋದಂಡ ಕಮಂಡಲಗಳ ನೆಲ ಇದೆಂದು ಬೀಗುತ್ತ ವರ್ತಮಾನದ ಸಂಕಟಗಳ ಬಗ್ಗೆ ತಲೆಕೆಡಿಸಿಕೊಳ್ಳದ ಆಟವದು. ಆ ಆಟ ಈಗಲೂ ಚಾಲ್ತಿಯಲ್ಲಿರುವಂತಹದ್ದು.

ರೈತರು, ದಲಿತರು, ಹೆಣ್ಣುಮಕ್ಕಳ ಸಂಕಟಗಳ ಬಗ್ಗೆ ನಾವು ಕುರುಡು, ಕಿವುಡು. ಬಡತನದ ಬಗೆಗಿನ ಮಾತುಗಳು ನಮಗೆ ಬೇಡ. ಅಲ್ಪಸಂಖ್ಯಾತರ ಕಾಳಜಿ ಬಗ್ಗೆ ಯೋಚಿಸುವ ಅಗತ್ಯ ನಮಗಿಲ್ಲ. ಹಾಗಾದರೆ ನಮಗೆ ಬೇಕಾದುದೇನು? ಮಾಡುತ್ತಿರುವುದೇನು? 'ಇತ್ತುಗಳ ಧ್ವಜವ ಹಿಡಿದೆತ್ತಿ ನಿಲ್ಲಿಸುವ' ಆಟವಲ್ಲದೆ ಬೇರೇನಲ್ಲ. ದೇಶಪ್ರೇಮಿಗಳಾದವರು ಸಂಕಟ-ಸಂಕಷ್ಟಗಳ ಬಗ್ಗೆ ಮಾತನಾಡುವುದೀಗ ಸಲ್ಲ. ಈ ವೈರುಧ್ಯವನ್ನು ಅರ್ಥ ಮಾಡಿಕೊಳ್ಳಲು, 'ಇಂದು ನಮ್ಮೀ ನಾಡು' ಕವಿತೆಯನ್ನು ಮತ್ತೆಮತ್ತೆ ಓದಬೇಕು. ಆ ಕವಿತೆಯ ಕವಿಯೇ– 'ನಾವೆಲ್ಲರು ಒಂದೆ ಜಾತಿ, ಒಂದೆ ಮತ, ಒಂದೆ ಕುಲ;/ ನಾವು ಮನುಜರು; ನರರ ನಡುವಿನಡ್ಡ ಗೋಡೆಗಳನು/ ಕುಟ್ಟಿ ಕೆಡಹುವೆವು' ಎಂದು ಸಮತೆಯ ಸಾಲುಗಳನ್ನು ಉದ್ಗರಿಸಿದ್ದು.

ಹೀಗೆ, ತನ್ನ ಸಮಾಜಕ್ಕೆ ಆತ್ಮಗೌರವದ ಮಾದರಿಯನ್ನು, ವಿವೇಕ-ವಿಮರ್ಶೆ-ವೈಖರಿಗಳ ಕಾವ್ಯವನ್ನು ಕಟ್ಟಿಕೊಟ್ಟ ಕವಿಯನ್ನಲ್ಲದೆ ಮತ್ತ್ಯಾರನ್ನು ಪ್ರಜಾಪ್ರಭುತ್ವವಾದಿ ಕವಿ ಎನ್ನುವುದು? ನಿಜ ಅರ್ಥದಲ್ಲಿ ಕವಿಯೊಬ್ಬ ಪ್ರಜಾಪ್ರಭುತ್ವ ವಿರೋಧಿಯಾಗಿರುವುದು ಸಾಧ್ಯವಿಲ್ಲ. ಒಂದು ವೇಳೆ, ಹಾಗಿರುವುದು ಸಾಧ್ಯವಾದರೆ ಆ ಬರಹಗಾರ ಕವಿಯೆನ್ನುವುದೇ ಸುಳ್ಳು. ಗೋಪಾಲಕೃಷ್ಣ ಅಡಿಗರು (1918, ಫೆ.18–1992, ನ.4) 'ಪ್ರಜಾಪ್ರಭುತ್ವ ವಿರೋಧಿ ಕವಿ' ಎಂದು ಕೆಲವರು ಮಾತನಾಡಿದಾಗಲೆಲ್ಲ ಮೇಲಿನ ಪ್ರಸಂಗಗಳು ನೆನಪಾಗುತ್ತವೆ. ಅಂಥ ಚರ್ಚೆಗಳ ಹಿನ್ನೆಲೆಯಲ್ಲಿ ಎರಡು ಸಾಧ್ಯತೆಗಳಿರಬೇಕು: ಒಂದು, ಪ್ರಜಾಪ್ರಭುತ್ವದ ವ್ಯಾಖ್ಯೆಗಳೇ ಬದಲಾಗಿರಬಹುದು. ಇಲ್ಲವೇ ಕಾವ್ಯದ ಪರಿಕಲ್ಪನೆಯೇ ಬದಲಾಗಿರಬೇಕು.

'ನೆಹರೂ ನಿವೃತ್ತರಾಗುವುದಿಲ್ಲ' ಕವಿತೆ ಬರೆದ ಅಡಿಗರು ಈಗ ಇದ್ದಿದ್ದರೆ, 'ಮೋದಿ ನಿವೃತ್ತರಾಗುವುದಿಲ್ಲ' ಎನ್ನುವ ಕವಿತೆ ಬರೆಯುತ್ತಿದ್ದರೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಅಡಿಗರು ಯಾರ ಜೊತೆ ತಮ್ಮನ್ನು ಗುರ್ತಿಸಿಕೊಂಡಿದ್ದರು ಎಂದು ಯೋಚಿಸುವಾಗ, ಅವರು ಯಾವುದರ ವಿರುದ್ಧವಿದ್ದರು ಎನ್ನುವುದನ್ನು ನಾವು ಮರೆಯುತ್ತೇವೆ. ಪ್ರಭುತ್ವದ ವಿರುದ್ಧವಿದ್ದ ಅವರು, ಈಗ ನೂರಾ ಮೂರರ ಅಜ್ಜನಾಗಿ ಬದುಕಿದ್ದಿದ್ದರೆ ಖಂಡಿತವಾಗಿಯೂ ಪ್ರಭುತ್ವದ ವಿರುದ್ಧವಾಗಿಯೇ ಇರುತ್ತಿದ್ದರು, ಬರೆಯುತ್ತಿದ್ದರು. ಕವಿ ಎಂದಿಗೂ ವಿರೋಧ ಪಕ್ಷವೇ.

ಚುರುಮುರಿ



ರೆವಿನ್ಯೂ ಐಡಿಯಾ

• ಸುಧೀಂದ್ರ

ಮುಂದಿನ ಆರ್ಥಿಕ ವರ್ಷದಲ್ಲಿ ವರಮಾನ ಹೆಚ್ಚಿಸುವ ಹೊಸ ಐಡಿಯಾಗಳಿಗಾಗಿ ಬಿಬಿಎಂಪಿ ಕಮಿಷನರ್ ತಮ್ಮ ಥಿಂಕ್‌ಟ್ಯಾಂಕ್ ಸದಸ್ಯರನ್ನು ಕರೆದಿದ್ದರು. 'ನಮ್ಮ ತಾತನ ಕಾಲದಲ್ಲಿ ಸೈಕಲ್‌ಗೂ ಕಾರ್ಪೊರೇಶನ್‌ನವ್ರು ಲೈಸೆನ್ಸ್ ಕೊಡ್ತಿದ್ರು, ಅದನ್ನು ರಿವೋಕ್ ಮಾಡೋಣ್ವಾ?' ಅಂದ್ರು ಟ್ರಾಫಿಕ್ ಮ್ಯಾನೇಜ್‌ಮೆಂಟ್ ಇನ್‌ಚಾರ್ಜ್ ಗುಂಡಣ್ಣ.

ಇದರಿಂದ ಖುಷಿಯಾದ ಎ.ಸಿ.ಪಿ. ರಂಗನಾಥ್, 'ಲೈಸೆನ್ಸ್ ಇಲ್ಲದ ಸೈಕಲ್‌ಗಳನ್ನು ಟೂ ವೀಲರ್‌ಗಳ ಜೊತೆನೇ ನಮ್ಮ ಟೈಗರ್‌ಗಳಲ್ಲಿ ದಬ್ಬಾಕೊಂಡು ಬರಬೋದು' ಎಂದರು. ಪಕ್ಕದಲ್ಲೇ ಇದ್ದ ಆರ್.ಟಿ.ಒ. 'ನಮ್ಮ ಬೆಂಗ್ಳೂರಲ್ಲಿ ಸೈಕಲ್ ಯಾರ್ರೀ ಓಡಿಸ್ತಾರೆ?' ಅಂದ್ರು.

'ಹಾಗಿದ್ರೆ ಟೂ-ವೀಲರ್‌ಗಳಿಗೇ...' ಅಂತ ಗುಂಡಣ್ಣನವರು ರಾಗ ಎಳೆದಾಗ, ಟ್ರಾನ್ಸ್‌ಪೋರ್ಟ್ ಕಮಿಷನರ್‌ಗೆ ರೇಗ್ಹೋಯ್ತು. 'ಈಗಾಗಲೇ ಆರ್.ಸಿ. ಫೀ, ಲೈಫ್‌ಟೈಮ್ ಟ್ಯಾಕ್ಸ್ ಹಾಕ್ತಿದೀವಿ. ಹೊಸತಾಗಿ ಏನಾದ್ರೂ ಹಾಕ್ಕೋದ್ರೆ, ಜನ ಟೋಲ್‌ಗಳಲ್ಲಿ ಮಾಡ್ತಿರೋ ಹಂಗೆ ದಂಗೆ ಏಳ್ತಾರೆ ಅಷ್ಟೆ' ಅನ್ನುತ್ತಾ ಜಾಯಿಂಟ್ ಕಮಿಷನರ್ ರೆವಿನ್ಯೂ ಕಡೆ ತಿರುಗಿದರು.

ಅದುವರೆಗೂ ಸುಮ್ಮನಿದ್ದ ಡೆಪ್ಯುಟಿ ಕಮಿಷನರ್‌ಗೆ ಒಂದು ಬ್ರಿಲಿಯಂಟ್ ಐಡಿಯಾ ಹೊಳೀತು. 'ಪಾರ್ಕಿಂಗ್ ಅನ್ನೋ ಬೋರ್ಡ್ ಇಲ್ಲದೆ ಇರೋ ಜಾಗವೆಲ್ಲವನ್ನೂ ನೋ ಪಾರ್ಕಿಂಗ್ ಝೋನ್ ಅಂತ ನಾವು ನೋಟಿಫೈ ಮಾಡಿಬಿಡೋಣ. ಆಗ ಇಡೀ ಬೆಂಗಳೂರಿನ ತೊಂಬತ್ತು ಭಾಗ ವೆಹಿಕಲ್‌ಗಳೆಲ್ಲಾ ನೋ ಪಾರ್ಕಿಂಗ್ ಝೋನ್‌ನೊಳಗೇ ಇರತ್ವೆ, ಏನಂತೀರಿ?' ಎಂದರು.

ತಕ್ಷಣವೇ ಚುರುಕಾದ ಅಸಿಸ್ಟೆಂಟ್ ಕಮಿಷನರ್ 'ಬೇಗ ಒಂದು ಲೀಗಲ್ ಒಪಿನಿಯನ್ ತಗೊಂಡು, ಡ್ರಾಫ್ಟ್ ರೆಸಲ್ಯೂಶನ್ ರೆಡಿ ಮಾಡ್ಬಿಡ್ತೀನಿ ಸರ್' ಅಂತ ಘೋಷಿಸಿದರು.

ಟ್ರಾಫಿಕ್ ಡಿ.ಸಿ.ಪಿ. 'ನಮ್ಮ ಟೈಗರ್‌ಗಳ ಸಂಖ್ಯೆಯನ್ನ ತಕ್ಷಣವೇ ಜಾಸ್ತಿ ಮಾಡ್ಕೊತೀವಿ' ಅಂದರು. ಲೆಕ್ಕ ಹಾಕ್ತಾ ಕೂತಿದ್ದ ಫೈನಾನ್ಸ್ ಅಡ್ವೈಸರ್, 'ಬಿಬಿಎಂಪಿ ಆದಾಯ ಮೂರು ಪಟ್ಟು ಹೆಚ್ಚಾಗಲಿದೆ' ಎನ್ನುತ್ತಾ ನಕ್ಕರು.

ಸಂಗತ

ಲೋಕಗುರು ಮತ್ತು ನಾಡಿನ ಆತ್ಮಬಲ

ನ್ಯಾಯದ ಪರ ನಿಲ್ಲುವುದಕ್ಕಿಂತ ಬೇರಾವ ಘನತೆ ಬೇಕು ಧರ್ಮಕ್ಕೂ ಧರ್ಮಗುರುವಿಗೂ?

• ದಾದಾಪೀರ್ ನವಿಲೇಹಾಳ್

ಜಾತಿಗಳು ಎಗ್ಗಿಲ್ಲದೆ ಪ್ರಚಾರ ಪಡೆಯುತ್ತಿರುವ ದಿನಗಳಿವು. ಒಂದು ಕಾಲಕ್ಕೆ ಸಾರ್ವಜನಿಕವಾಗಿ ತಮ್ಮ ಜಾತಿಯ ಹೆಸರು ಹೇಳಿಕೊಳ್ಳಲು ನಾಚುವ ವಾತಾವರಣವಿತ್ತು. ಈಗ ಅದು ಹೆಮ್ಮೆಯ, ಅಧಿಕಾರದ, ಮತ್ತೊಂದು ಜಾತಿಯ ವಿರುದ್ಧ ಸಂಘಟನೆಗೊಳ್ಳಬೇಕಾದ ಸಂಗತಿಯಾಗಿದೆ. ಜಾತಿಗೊಂದು ಪೀಠ, ಅದಕ್ಕೆ ಒಬ್ಬ ಪೀಠಾಧಿಕಾರಿ, ಅವರಿಗೊಂದು ವಿಲಾಸಿ ಕಾರು, ಸುತ್ತು ಹಾಕಲು ಅದೇ ಜಾತಿಯ ಒಂದಿಷ್ಟು ಮಂದಿ ಇದ್ದ ಮೇಲೆ ಇನ್ನೇನು ಬೇಕು?

ಜನರ ನೈತಿಕ ಶಕ್ತಿ ಕುಗ್ಗದಂತೆ, ಅವರ ಬದುಕು ಸಮಾಜದ ಸಹಜ ಸಂತೋಷವನ್ನು ಸವಿಯುವಂತೆ ಮಾಡಬಲ್ಲ ಚೇತೋಹಾರಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಕೆಲವು ಪೀಠಾಧಿಪತಿಗಳಿಗೆ ಸಮಯವಿಲ್ಲದಂತಹ ಸ್ಥಿತಿ ಉಂಟಾಗಿದೆ. ಹೀಗಿರುವಾಗ, ನಾವು ನಮ್ಮ ದೇಶದ ಆಧ್ಯಾತ್ಮಿಕ ಬೆರಗನ್ನು ಮರಳಿ ಪಡೆಯುವ ಹಂಬಲಕ್ಕಾಗಿ ಆಶಿಸಬೇಕಾಗಿದೆ.

ಜಾತಿಯ ಪೋಷಣೆಗಾಗಿ ಇರುವ ಮಠ ಮತ್ತು ಗುರುಗಳಿಂದ ಅಧ್ಯಾತ್ಮ ದೂರವಾದಂತಿದೆ. ಲೌಕಿಕದ, ಅದರಲ್ಲೂ ರಾಜಕೀಯ ಮೇಲಾಟಗಳ ಆಸಕ್ತಿ ಇದ್ದ ಕಡೆ ನಿಜ ಭಕ್ತಿಯನ್ನು, ಶುದ್ಧ ನಡೆ-ನುಡಿಯನ್ನು ನಿರೀಕ್ಷಿಸುವುದು ಕಷ್ಟ. ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಮಹತ್ತರ ಜವಾಬ್ದಾರಿ ಇರಬೇಕಾದ ಧಾರ್ಮಿಕ ಗುರುಗಳಲ್ಲಿ ಕೆಲವರು ಪಕ್ಷ ಮತ್ತು ರಾಜಕೀಯ ನಾಯಕರ ಆರಾಧಕರಾಗಿ ಅಸಮಾನತೆ ಮತ್ತು ಭ್ರಷ್ಟಾಚಾರದ ಕಾವಲಿಗೆ ನಿಂತಿರುವ ವಿಪರ್ಯಾಸವನ್ನು ಕಾಣುತ್ತಿದ್ದೇವೆ.

ಒಂದು ಜಾತಿಗೆ ಗುರುವಾದವರು ಆ ಜಾತಿಯ ಸಾಂಸ್ಕೃತಿಕ ಸಂಪತ್ತನ್ನು ಅದರ ಆಂತರಿಕ ಬಲದೊಂದಿಗೆ ಸ್ಥಿರೀಕರಿಸುವ ಕ್ರಿಯಾತ್ಮಕ ನಡೆಯನ್ನು ಪ್ರಕಟಿಸಬೇಕೆನ್ನುವುದು ಮತ್ತು ಆ ಮೂಲಕ ಅದೇ ಜಾತಿಯ ಗಡಿಗೆರೆಗಳನ್ನು ಮೀರಿ ಅದರ ಸಾಮಾಜಿಕ ಎತ್ತರವನ್ನು ಎಲ್ಲರೊಳಗೊಂದಾಗುವ ಮಾನವೀಯ ನೆಲೆಗೆ ತರುವುದು ಆ ಸ್ಥಾನದ ಆತ್ಯಂತಿಕ ನಿರೀಕ್ಷೆ.

ಧಾರ್ಮಿಕ ಗುರುಪದವಿಯಲ್ಲಿ ಇರುವವರಿಗೆ ವಾಸ್ತವವಾಗಿ ಸ್ವಾಮಿ ವಿವೇಕಾನಂದರು ಮತ್ತು ನಾರಾಯಣಗುರು ಅಂಥವರು ಮಾದರಿಯಾಗಬೇಕು. ವಿವೇಕಾನಂದರನ್ನು ವಿಭಿನ್ನ ರೀತಿಯಲ್ಲಿ ಕಂಡರಿಸಿರುವ ಪುಟ್ಟಣ್ಣ ಕಣಗಾಲರ 'ಪಡುವಾರಹಳ್ಳಿ ಪಾಂಡವರು' ಸಿನಿಮಾದ ಧರ್ಮಗುರುವಿನ ಪಾತ್ರವನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಜಾತಿ ಮತ್ತು ಧರ್ಮಗಳ ಆಂತರಿಕ ಮೂಲ ಬಲವಾದ ನೈತಿಕತೆಯೇ ನಾಪತ್ತೆಯಾಗಿರುವ ಈ ಹೊತ್ತಿನಲ್ಲಿ ಈ ಪಾತ್ರ ಮತ್ತೆ ಮತ್ತೆ ಕಾಡುತ್ತಿದೆ. ಹೆಣ್ಣನ್ನೂ ಸೇರಿದಂತೆ ಬಡವರನ್ನು ಇನ್ನಿಲ್ಲದಂತೆ ಶೋಷಿಸುವ ಸಾಹುಕಾರನನ್ನು ಕರೆಸಿ ನ್ಯಾಯದ ಹಾದಿಯನ್ನು ತೋರಿಸುವ, ಅದು ಸಾಧ್ಯವಾಗದಿದ್ದಾಗ 'ದುರ್ಜನ– ಸಜ್ಜನ ಸಂಗ್ರಾಮ'ದ ಸೂಚನೆ ಕೊಟ್ಟು, ಎಲ್ಲ ಕಾಲಕ್ಕೂ ಧರ್ಮವೇ ಅಂತಿಮವಾಗಿ ಗೆಲ್ಲುತ್ತದೆ ಎಂಬ ವಿಶ್ವಾಸ ತುಂಬುವ, ಇಡೀ ಹಳ್ಳಿ ಸಾಹುಕಾರನ ವಿರುದ್ಧ ಸಿಡಿದೆದ್ದಾಗ ದುಷ್ಟರಿಗೆ ಅಹಿಂಸಾರೂಪದ ಓಡಿಸುವ ಶಿಕ್ಷೆಯನ್ನು ವಿಧಿಸುವ, ಓಡಿಸುತ್ತಲೇ ಇರಬೇಕಾದ ನಿರಂತರ ವಿವೇಕವನ್ನು ತುಂಬುವ ಪಾತ್ರ ಅದು.

ನಮ್ಮ ಇಂದಿನ ಧಾರ್ಮಿಕ ವಾತಾವರಣ 'ಕುಲ ಕುಲವೆಂದು ಹೊಡೆದಾಡು'ವುದನ್ನು, 'ಇವನಾರವ ಇವನಾರವ' ಎಂದು ಗಟ್ಟಿಯಾಗಿ 'ಇವ ನಮ್ಮವ ಇವ ನಮ್ಮವ'ನೆಂದು ಗುಟ್ಟಾಗಿ ಹೇಳುವುದನ್ನು ಕಲಿಸುತ್ತಿರುವಂತಿದೆ. ಹಿಂದುಳಿದಿರುವ ಮಾನದಂಡದಿಂದಲೇ ಜಾತಿಗಳಿಗೆ ಗೌರವ ತರುವ ಭ್ರಮೆಯನ್ನು ಹುಟ್ಟಿಸಲಾಗುತ್ತಿದೆ. ಸಮಾವೇಶಗಳಿಂದ, ಪಾದಯಾತ್ರೆಗಳಿಂದ ಸೇರುವ ದೊಡ್ಡ ಸಂಖ್ಯೆಯ ಜನರೆದುರು ಆಳುವವರನ್ನೇ ಕರೆಸುವ, ಬದಲಿಸುವ ಠೇಂಕಾರದ ಮಾತುಗಳು ಬರುತ್ತವೆ. ಸಾಮಾಜಿಕ ಮೀಸಲಾತಿಯ ಹಂಗಿಲ್ಲದೆ ಓದಿ ಉದ್ಯಮಿಗಳಾಗುವಂತಹ ಅಥವಾ ಉದ್ಯೋಗ ಪಡೆಯುವಂತಹ ಸತ್ಪ್ರೇರಣೆ ನೀಡುವ ಜಾತಿವಿನಾಶದ ನೀತಿಬೋಧಕ ಗುರುಗಳು ಕಾಣುತ್ತಿಲ್ಲ.

ಕಳೆದ ಮೂರು ದಶಕಗಳಲ್ಲಿ ಆಗಿರುವ ಕೆಟ್ಟ ಬದಲಾವಣೆ ಇದು. ವಿದ್ಯಾರ್ಥಿ ಹೇಗಾದರೂ ಬರೆದಿರಲಿ ಅಧ್ಯಾಪಕ ಉತ್ತಮ ಅಂಕಗಳನ್ನು ಕೊಡಬೇಕು. ಇಲ್ಲದಿದ್ದರೆ ಆತ ದಲಿತ ವಿರೋಧಿಯೋ ಮೇಲ್ವರ್ಗದ ವಿರೋಧಿಯೋ ಆಗಿಬಿಡುತ್ತಾನೆ. ಶಾಸಕರು, ಮಂತ್ರಿಗಳು ತಮ್ಮ ಕ್ಷೇತ್ರದ ಯಾವುದೇ ಮದುವೆ, ಮರಣಗಳಿಗೆ ಗೈರುಹಾಜರಾದರೆ ಮುಗಿಯಿತು, ಅವರು ಆ ಜಾತಿಯವರ ವಿರೋಧಿ ಅಂತಲೇ ಹಣೆಪಟ್ಟಿ ಗ್ಯಾರಂಟಿ. ನಮ್ಮ ಇತಿಹಾಸದ ಯಾವ ಕಾಲದಲ್ಲೂ ಸಾರ್ವಜನಿಕ ಲಜ್ಜೆ ಬಿಟ್ಟು ಈ ಮಟ್ಟದಲ್ಲಿ ಆಳುವವರನ್ನು ಅವಲಂಬಿಸಿದ, ಆಧುನಿಕ ಗುಲಾಮಗಿರಿಯ ಉದಾಹರಣೆ ಸಿಗಲಾರದು.

ತರಗತಿಯೊಳಗಿನ ಗುರುವಿಗೆ ಸಾಧ್ಯವಾಗದ್ದು ಲೋಕಗುರುವಿಗೆ ಸಾಧ್ಯ. ತನಗೆ ದೊರೆತ ಅವಕಾಶವನ್ನು, ಜನಬೆಂಬಲವನ್ನು ಇಡೀ ನಾಡಿನ ಆತ್ಮಬಲವನ್ನಾಗಿಸುವ ದಿಕ್ಕಿನಲ್ಲಿ ಮುನ್ನಡೆಸುವ ಸಾಧ್ಯತೆಯನ್ನು ಮನಗಾಣಬೇಕು. ಸಮಾಜದ ಕ್ರೂರ ಮುಖಗಳಾದ ಅಸಮಾನತೆ, ಭ್ರಷ್ಟಾಚಾರ, ಶೋಷಣೆಗಳನ್ನು ಅದೇ ಜಾತಿಯ ಬಲದಿಂದ ತೊಡೆಯುವ ಬೌದ್ಧಿಕ ಶಕ್ತಿಗಳನ್ನು ರೂಪಿಸಬಹುದು.

ಸಜ್ಜನಿಕೆಯ, ನ್ಯಾಯದ, ಸಮಸಮಾಜದ ಪರ ನಿಲ್ಲುವುದಕ್ಕಿಂತ ಬೇರಾವ ಘನತೆ ಬೇಕು ಧರ್ಮಕ್ಕೂ ಧರ್ಮಗುರುವಿಗೂ? ತನಗೆ ನೆಲೆ ಕೊಟ್ಟ ಸ್ಥಾವರವನ್ನು ಜಂಗಮಗೊಳಿಸುವ ಅವಕಾಶವನ್ನು ಕಳೆದುಕೊಳ್ಳದೇ ಸಂವಾದದ ಪ್ರಜಾಸತ್ತೆಗೆ ಜೀವ ತುಂಬುತ್ತಾ ಲೋಕಗುರು ಲೋಕಮಾತೆಯ ಮಮತೆಯನ್ನು ತುಂಬಿಕೊಳ್ಳಬೇಕಾಗಿದೆ.

ವಾಚಕರ ವಾಣಿ

ಟೋಯಿಂಗ್ ಅಕ್ರಮಕ್ಕೆ ಬೀಳಲಿ ಬ್ರೇಕ್

ಬೆಂಗಳೂರಿನಲ್ಲಿ ಟೋಯಿಂಗ್ ಜಾಲದ ಕಿರಿಕಿರಿ ಮತ್ತು ಅಕ್ರಮಗಳ ಬಗೆಗಿನ ವರದಿ (ಪ್ರ.ವಾ., ಫೆ. 15) ಶ್ಲಾಘನೀಯ. ಎಷ್ಟೋ ಜನರ ಆಕ್ರೋಶ ಇಲ್ಲಿ ವ್ಯಕ್ತವಾಗಿದೆ. ನೋ ಪಾರ್ಕಿಂಗ್ ಜಾಗದಲ್ಲಿ ವಾಹನಗಳನ್ನು ನಿಲ್ಲಿಸುವವರಿಗೆ ಶಿಕ್ಷೆ ಆಗಲೇಬೇಕು ನಿಜ. ಆದರೆ ಕಲ್ಲುಗಳನ್ನು ಇಟ್ಟು, ಅದು ನೋ ಪಾರ್ಕಿಂಗ್ ಸೂಚನಾ ಫಲಕಕ್ಕೆ ಸಮ ಎಂದು ಹೇಳಿರುವುದು ಹಾಸ್ಯಾಸ್ಪದ ಮತ್ತು ಖಂಡನೀಯ.

ನೋ ಪಾರ್ಕಿಂಗ್ ನಿಯಮಗಳನ್ನು ಪಾಲಿಸದವರಿಗೆ ದಂಡ ವಿಧಿಸುವಾಗ, ಈ ಕಾರ್ಯದಲ್ಲಿ ಭಾಗಿಯಾಗುವ ಸಿಬ್ಬಂದಿಯೂ ಕೆಲ ನಿಯಮಗಳನ್ನು ಅನುಸರಿಸಬೇಕಲ್ಲವೇ? ಜತೆಗೆ ನಿಗದಿತ ಶುಲ್ಕ ಪಾವತಿಸಲು ಸಾಧ್ಯವಾಗದವರ ಬಳಿ ಅಕ್ರಮವಾಗಿ ಹಣ ಸ್ವೀಕರಿಸುವುದು ಸರ್ಕಾರಕ್ಕೆ ಮಾಡುವ ಮೋಸ. ಇದರಿಂದ ಸರ್ಕಾರದ ವರಮಾನಕ್ಕೂ ಹೊಡೆತ. ಈಗಲಾದರೂ ಇಂತಹ ಅಕ್ರಮಗಳಿಗೆ ಬ್ರೇಕ್ ಹಾಕಬೇಕು.

ಪ್ರದೀಪ್ ಸಿ.ಎಂ., ಬೆಂಗಳೂರು

ಆರ್ಥಿಕತೆಯ ಮೇಲೆ ಬರೆ

ಗೋಹತ್ಯೆ ನಿಷೇಧ ಕಾನೂನಿನ ಪರಿಣಾಮವು ಅದು ಜಾರಿಗೆ ಬಂದ ಕೆಲ ದಿನಗಳಲ್ಲಿಯೇ ಊಹಿಸಲೂ ಅಸಾಧ್ಯವಾದ ರೀತಿಯಲ್ಲಿ ರೈತರ ಆರ್ಥಿಕತೆಯ ಮೇಲೆ ಬರೆ ಎಳೆದಿದೆ. ನಷ್ಟದ ಕೃಷಿಯ ನಡುವೆಯೂ ದೇಶದ ಬಹುತೇಕ ಸಣ್ಣ ರೈತರು ಇಂದಿಗೂ ಉಸಿರಾಡುತ್ತಿದ್ದರೆ ಅದಕ್ಕೆ ಹಸುಗಳು ಕಾರಣ. ಹಸುಗಳ ದರ ಗಣನೀಯವಾಗಿ ಬಿದ್ದುಹೋಗಿದೆ. ಇದಲ್ಲದೆ, ಹಸುಗಳ ಮಾರಾಟವನ್ನು ವ್ಯವಸ್ಥಿತವಾಗಿ ಹತ್ತಿಕ್ಕಲಾಗುತ್ತಿದೆ. ಮೊದಲು ಗ್ರಾಮಲೆಕ್ಕಿಗನಿಂದ ಅನುಮತಿ, ಪಹಣಿಯ ಪ್ರತಿ, ದಾರಿಯುದ್ದಕ್ಕೂ ಪೊಲೀಸರಿಗೆ ಲಂಚ, ತಿರುಗಿ ಯಾರಿಗೆ ಮಾರಲಾಗಿದೆ ಎಂಬ ಮಾಹಿತಿಯನ್ನು ರೈತರು ನೀಡಬೇಕಾಗಿದೆ.

ಹೋರಿಗಳನ್ನು ಕೊಳ್ಳುವವರಿಲ್ಲದೆ ಹೊರೆ ತಗ್ಗಿಸಿಕೊಳ್ಳಲು ರಸ್ತೆಗಳಿಗೆ ಬಿಡಲಾಗುತ್ತಿದೆ. ಮೈಸೂರು ರಸ್ತೆಯಲ್ಲಿ ಹೋದವರಿಗೆ ಈ ಹೋರಿಗಳ ಟ್ರಾಫಿಕ್ ಅರಿವಿಗೆ ಬಂದಿರಬೇಕು. ಭಾನುವಾರ ಮೈಸೂರಿನ ಮುಡುಕುತೊರೆ ದನದ ಜಾತ್ರೆಯಲ್ಲಿ ರಾಸುಗಳನ್ನು ಮಾರಲು ಬಂದ ರೈತರು ಕಣ್ಣೀರು ಹಾಕುತ್ತಿದ್ದುದನ್ನು ಸ್ನೇಹಿತರು ಹಂಚಿಕೊಂಡರು. ಕರ್ನಾಟಕದ ಬಹುತೇಕ ರೈತರದ್ದು ಇದೇ ಅಳಲು. ಹೋರಾಟದ ಹಿನ್ನೆಲೆಯಿಂದ ಬಂದಿರುವ ಮುಖ್ಯಮಂತ್ರಿ, ಕಾಯ್ದೆ ಜಾರಿಗೆ ತರುವ ಮುನ್ನ ರೈತರ ಇಂತಹ ಸಂಕಷ್ಟಗಳನ್ನು ಪರಿಗಣಿಸದೇ ಹೋದದ್ದು ದುರದೃಷ್ಟಕರ.

ಶಾಂತರಾಜು ಎಸ್. ಮಳವಳ್ಳಿ, ಬೆಂಗಳೂರು

ಕಾರ್ಟೂನ್ ಕಲಿಸುವ ಪಾಠ

ಪರಿಚಿತರೊಬ್ಬರು ವಾಟ್ಸ್‌ಆ್ಯಪ್‌ನಲ್ಲಿ ಈಚೆಗೆ ಹಂಚಿಕೊಂಡ ಒಂದು ಕಾರ್ಟೂನ್ ಗಮನಸೆಳೆಯಿತು. ಅದರಲ್ಲಿ ಗಿಡಮರಗಳಿಲ್ಲದ ಬೀಳುಭೂಮಿಯೊಂದರಲ್ಲಿ ಆಕ್ಸಿಜನ್ ಸಿಲಿಂಡರನ್ನು ಬೆನ್ನಿಗೇರಿಸಿಕೊಂಡು ಉಸಿರಾಡುತ್ತಿರುವ ಚಿಕ್ಕ ಬಾಲಕನ ಚಿತ್ರವಿದೆ. ಅದರ ಪಕ್ಕದಲ್ಲಿ ಆ ಬಾಲಕನ ತಂದೆ ಹಣದ ಚೀಲವೊಂದನ್ನು ಅವನ ಕೈಗಿರಿಸುತ್ತಾ, 'ಮಗುವೆ, ನಿನ್ನ ಉಜ್ವಲ ಬದುಕಿಗಾಗಿ ನಾನು ಸಂಪಾದಿಸಿದ ಪೂರ್ತಿ ಹಣ ಇಲ್ಲಿದೆ, ತೆಗೆದುಕೋ' ಎಂದು ಹೇಳುತ್ತಿರುವ ಚಿತ್ರವಿದೆ! ಪ್ರಸ್ತುತ ಪರಿಸರದ ಮೇಲೆ ಮಾನವ ನಡೆಸುತ್ತಿರುವ ದೌರ್ಜನ್ಯದ ಫಲವಾಗಿ ಭವಿಷ್ಯದಲ್ಲಿ ಮನುಕುಲಕ್ಕೆ ಉಂಟಾಗುವ ಪರಿಣಾಮವನ್ನು ಇದಕ್ಕಿಂತ ಪರಿಣಾಮಕಾರಿಯಾಗಿ ಹೇಳಲು ಸಾಧ್ಯವಿಲ್ಲ ಎನ್ನುವಂತಿತ್ತು ಆ ಚಿತ್ರ.

ಇಂದು ನಾವು ಉಸಿರು ನೀಡುವ ಹಸಿರನ್ನು ಹರಣ ಮಾಡಿ, ವಾಯು-ಜಲ-ಮಣ್ಣುಗಳ ಗುಣಮಟ್ಟವನ್ನು ನಾಶ ಮಾಡಿ ಕೇವಲ ಹಣದ ಹಿಂದೆ ಹೋಗುತ್ತಿದ್ದೇವೆ. ನಮ್ಮ ಎಲ್ಲ ಯೋಜನೆಗಳೂ ಪರಿಸರ ವ್ಯವಸ್ಥೆಗೆ ಕೊಡಲಿಪೆಟ್ಟು ಕೊಡುತ್ತಿವೆ. ಆದರೂ ಅದನ್ನು ಗಮನಿಸದೆ ಕೇವಲ ಅದರಿಂದ ಬರುವ ಆದಾಯದ ಮೇಲೆ ಕಣ್ಣು ನೆಟ್ಟಿದ್ದೇವೆ. ಈಗಾಗಲೇ ಪ್ರಕೃತಿ ಪ್ರತಿಕ್ರಿಯೆ ಕೊಡಲು ಆರಂಭಿಸಿದೆ. ಈಗಲೂ ಎಚ್ಚೆತ್ತುಕೊಳ್ಳದಿದ್ದರೆ, ಕಾರ್ಟೂನ್‌ನಲ್ಲಿರುವ ಬಾಲಕನ ಸ್ಥಿತಿ ನಿಜವಾಗುತ್ತಾ ಸಾಗುವುದರಲ್ಲಿ ಅನುಮಾನವಿಲ್ಲ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಕಿಟ್ - ಗೇಟ್!

ಪ್ರಸ್ತುತ ಬಿಸಿ ಬಿಸಿ
ಚರ್ಚೆಯಲ್ಲಿರುವ ವಿಷಯಗಳೆರಡು
ಒಂದು ಟೂಲ್ 'ಕಿಟ್'
ಮತ್ತೊಂದು ಟೋಲ್ 'ಗೇಟ್'

ವಡ್ನಾಳ್ ರಮೇಶ
ಚನ್ನಗಿರಿ

ಶಿಕ್ಷಣ ಕ್ಷೇತ್ರದ ಪುನಶ್ಚೇತನಕ್ಕೆ ಒಳನೋಟ

ಒಡಿಶಾದ ಎರಡು ಹಿಂದುಳಿದ ಜಿಲ್ಲೆಗಳಲ್ಲಿ ಅಲ್ಲಿನ ಯುವಚೇತನಗಳು ನಡೆಸಿರುವ ಶಿಕ್ಷಣ ಕ್ರಾಂತಿ ಕುರಿತು ಗುರುರಾಜ್ ಎಸ್. ದಾವಣಗೆರೆ ಅವರು ಬರೆದಿರುವ ಲೇಖನ (ಪ್ರ.ವಾ., ಫೆ. 16) ಸಕಾಲಿಕವಾಗಿದೆ. ಕೋವಿಡ್ ಸಂದರ್ಭದಲ್ಲಿ ಹೆಚ್ಚು ಹಾನಿಗೆ ಒಳಗಾಗಿರುವ ಶಿಕ್ಷಣ ಕ್ಷೇತ್ರವನ್ನು ಪುನಶ್ಚೇತನಗೊಳಿಸುವಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಕೆಲವು ಒಳನೋಟಗಳನ್ನು ನೀಡುತ್ತದೆ. ಕರ್ನಾಟಕ ಸರ್ಕಾರ ಜಾರಿಗೆ ತಂದಿದ್ದ ವಿದ್ಯಾಗಮ ಯೋಜನೆಗೂ ಲೇಖಕರು ಪ್ರಸ್ತಾಪಿಸಿರುವ ಒಡಿಶಾದ ಯೋಜನೆಗೂ ಸಾಮ್ಯತೆ ಇದೆ. ಜೊತೆಗೆ ಕಾಲೇಜು ವಿದ್ಯಾರ್ಥಿಗಳನ್ನೇ ಶಿಕ್ಷಕರನ್ನಾಗಿ ಬಳಸಿಕೊಂಡ ಒಡಿಶಾದ ಮಾದರಿ ಒಂದು ಹೊಸ ಪ್ರಯೋಗ ಎನಿಸಿದರೂ ಇದು ಕೂಡ ಕೆಲವು ವರ್ಷಗಳ ಹಿಂದೆ ಕರ್ನಾಟಕ ಸರ್ಕಾರ ಜಾರಿಗೆ ತಂದಿದ್ದ ಯೋಜನೆಯನ್ನು ಜ್ಞಾಪಿಸುತ್ತದೆ. ಆ ಯೋಜನೆಯನ್ವಯ ಕಾಲೇಜು ವಿದ್ಯಾರ್ಥಿಗಳು, ನಿವೃತ್ತ ಅಧಿಕಾರಿಗಳು, ನಿವೃತ್ತ ಶಿಕ್ಷಕರು ತಮಗೆ ಹತ್ತಿರವಿರುವ ಶಾಲೆಗೆ ಪ್ರತೀ ಶನಿವಾರ ಹೋಗಿ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಹೇಳಿಕೊಡುವ ಅವಕಾಶ ಕಲ್ಪಿಸಲಾಗಿತ್ತು.

ಈ ಯೋಜನೆಯ ಅಡಿಯಲ್ಲಿ ನಾನು ಒಂದು ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಭಾಷೆ, ಸಾಹಿತ್ಯ, ನೈತಿಕ ಮೌಲ್ಯಗಳ ಕುರಿತು ಎರಡು ವರ್ಷ ತರಗತಿ ತೆಗೆದುಕೊಂಡಿದ್ದೆ. ಈ ಕೋವಿಡ್ ಸಂದರ್ಭದಲ್ಲಿ ರಾಜ್ಯ ಸರ್ಕಾರ ಇದೇ ಯೋಜನೆಯನ್ನು ಕೆಲವು ಮಾರ್ಪಾಟುಗಳೊಂದಿಗೆ ಜಾರಿಗೆ ತಂದಿದ್ದರೆ, ಹಳ್ಳಿಯ ಮಕ್ಕಳ ಶಿಕ್ಷಣ ಅಡೆತಡೆಯಿಲ್ಲದೆ ಮುಂದುವರಿಯುವ ಎಲ್ಲ ಸಾಧ್ಯತೆಯೂ ಇತ್ತು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

'ರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಬೇನಾಮಿಯಲ್ಲ'


ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ಉಡುಪಿ: ರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಬೇನಾಮಿ ಸಂಸ್ಥೆಯಲ್ಲ; ಅಧಿಕೃತವಾಗಿ ನೋಂದಣಿಯಾಗಿರುವ ಸಂಸ್ಥೆಯಾಗಿದೆ. ಸಂಸ್ಥೆಯ ವಿರುದ್ಧ ಆಧಾರ ರಹಿತ ಭ್ರಷ್ಟಾಚಾರ ಆರೋಪ ಮಾಡುವುದು ಸರಿಯಲ್ಲ ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಬುಧವಾರ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಸ್ವಾಮೀಜಿ, ವಿಶ್ವಹಿಂದೂ ಪರಿಷತ್ ಪುಂಡ ಪೋಕರಿಗಳ ಸಂಸ್ಥೆಯಲ್ಲ. ವಿಶ್ವ ಹಿಂದೂ ಪರಿಷತ್‌ಗೆ ರಾಮ ಮಂದಿರ ನಿರ್ಮಾಣಕ್ಕೆ ದೇಣಿಗೆ ಸಂಗ್ರಹದ ಜವಾಬ್ದಾರಿ ನೀಡಲಾಗಿದೆ. ಹಿರಿಯ ಮುಂದಾಳುಗಳ ನೇತೃತ್ವದಲ್ಲಿ ನಿಧಿ ಸಂಗ್ರಹ ಕಾರ್ಯ ನಡೆಯುತ್ತಿದೆ ಎಂದರು.

ಟ್ರಸ್ಟ್ ಬಗ್ಗೆ ಮತ್ತು ನಿಧಿ ಸಂಗ್ರಹದ ಬಗ್ಗೆ ಸಂಶಯಗಳಿದ್ದರೆ ಅವರು ಪರಿಶೀಲಿಸಿಕೊಳ್ಳಲಿ. ಆರೋಪ ಮಾಡುವುದು ಸರಿಯಲ್ಲ. ಆರೋಪಕ್ಕೆ ಪ್ರತ್ಯಾರೋಪಗಳು ಉತ್ತರವಾಗುತ್ತವೆ. ನಿಧಿ ಸಂಗ್ರಹದಲ್ಲಿ ಪಾರದರ್ಶಕತೆ ದೃಷ್ಟಿಯಿಂದ ಟ್ರಸ್ಟ್‌ನ ವ್ಯವಹಾರಗಳನ್ನು ಲೆಕ್ಕಪರಿಶೋಧನೆ ಮಾಡಿಸಲಾಗುತ್ತಿದೆ. ಇದಕ್ಕೆ ಸೂಕ್ತ ದಾಖಲೆಗಳು ಸಿಗುತ್ತವೆ. ಟ್ರಸ್ಟ್‌ನ ವ್ಯವಹಾರದಲ್ಲಿ ಮುಚ್ಚುಮರೆ ಇಲ್ಲ ಎಂದರು.

ಅಧಿಕೃತ ದೇಣಿಗೆ ಸಂಗ್ರಹಕ್ಕೆ ವಿರೋಧ ಇಲ್ಲ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರಸ್ವಾಮಿ

'ಮಂದಿರಕ್ಕಲ್ಲ, ಹಣ ದುರ್ಬಳಕೆಗೆ ವಿರೋಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಅಥವಾ ಅದಕ್ಕೆ ಅಧಿಕೃತವಾಗಿ ದೇಣಿಗೆ ಸಂಗ್ರಹಕ್ಕೆ ತಮ್ಮ ವಿರೋಧ ಇಲ್ಲ. ರಾಮ ಮಂದಿರ ನಿರ್ಮಾಣದ ಹೆಸರಿನಲ್ಲಿ ಹಣ ದುರ್ಬಳಕೆಗೆ ಮಾತ್ರ ವಿರೋಧವಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಜೆಡಿಎಸ್ ಪ್ರಧಾನ ಕಚೇರಿ ಜೆ.ಪಿ. ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೇಣಿಗೆ ಕೊಡದವರ ಮನೆಗಳಿಗೆ ಸ್ಟಿಕ್ಕರ್ ಅಂಟಿಸುತ್ತಿರುವುದನ್ನು ಸಂಬಂಧಿಸಿದವರು ಒಪ್ಪಿಕೊಂಡಿದ್ದಾರೆ. ದೇಣಿಗೆ ಕೊಡುವಂತೆ ಜನರನ್ನು ಪ್ರೇರೇಪಿಸಬೇಕೆಂಬ ಉದ್ದೇಶವಿದ್ದರೆ ಸಾರ್ವಜನಿಕ ಸ್ಥಳಗಳಲ್ಲಿ ಬ್ಯಾನರ್, ಫ್ಲೆಕ್ಸ್ ಅಳವಡಿಸಲಿ. ಮನೆ ಮನೆಗೆ ಸ್ಟಿಕ್ಕರ್ ಅಂಟಿಸುವುದೇಕೆ' ಎಂದು ಕೇಳಿದರು.

ಪೋಲಿ, ಪುಂಡರಲ್ಲಿ ವಿಶ್ವ ಹಿಂದೂ ಪರಿಷತ್ ಸದಸ್ಯರು ಎಂದು ಹೇಳಿಕೊಂಡು ಬೀದಿ, ಬೀದಿಗಳಲ್ಲಿ ರಾಮ ಮಂದಿರದ ಹೆಸರಿನಲ್ಲಿ ಹಣ ಸಂಗ್ರಹಿಸುತ್ತಿದ್ದಾರೆ? ಹೀಗೆ ಹಣ ವಸೂಲಿಗೆ ಸರ್ಕಾರದ ಅನುಮತಿ ಇದೆಯೇ? ಹಣ ಸಂಗ್ರಹಿಸುವ ವ್ಯಕ್ತಿಗಳಿಗೆ ವಿಶ್ವ ಹಿಂದೂ ಪರಿಷತ್ ಗುರುತಿನ ಚೀಟಿ ನೀಡಿದೆಯೇ? ಎಂದು ಪ್ರಶ್ನಿಸಿದರು.

'ಹಣ ದುರ್ಬಳಕೆ ಆಗದಂತೆ ತಡೆಯಿರಿ ಎಂದು ಕೇಳುವುದು ಅಪರಾಧವೆ? 1989ರಲ್ಲಿ ರಾಮ ಮಂದಿರದ ಹೆಸರಿನಲ್ಲಿ ಸಂಗ್ರಹಿಸಿದ ಹಣ, ಇಟ್ಟಿಗೆ, ಉಳಿಕೆ ಪ್ರಮಾಣ ಎಷ್ಟು? ಅದು ಏನಾಯಿತು? ಎಂಬ ಮಾಹಿತಿ ಈವರೆಗೂ ಹೊರಬಂದಿಲ್ಲ. ಮತ್ತೆ ಅದೇ ರೀತಿ ಆಗಬಾರದು ಎಂಬುದು ನನ್ನ ಉದ್ದೇಶ' ಎಂದರು.


ಕುಮಾರಸ್ವಾಮಿ

ಇತಿಹಾಸ ತಜ್ಞರ ಅಭಿಪ್ರಾಯ: 'ನಾಜಿ ಸಂಸ್ಥೆ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸಂಸ್ಥಾಪನೆ ಒಂದೇ ಎಂಬುದು ಇತಿಹಾಸ ತಜ್ಞರ ಅಭಿಪ್ರಾಯ. ಅದನ್ನೇ ಪ್ರಸ್ತಾಪಿಸಿದ್ದೇನೆ. ಅದನ್ನು ವೈಯಕ್ತಿಕವಾಗಿ ಉಲ್ಲೇಖಿಸಿಲ್ಲ. ಎರಡೂ ಸಂಘಟನೆಗಳ ಮೂಲ ಉದ್ದೇಶ ಒಂದೇ. ಇವರೇನು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರಾ' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

'₹ 250 ಕೋಟಿ ಮೊತ್ತದ ಜಾಬ್ ಕೋಡ್ ಹಗರಣದ ಆರೋಪ ಹೊತ್ತಿರುವ ಉಪ ಮುಖ್ಯಮಂತ್ರಿ ಸಿ.ಎನ್. ಅಶ್ವತ್ಥನಾರಾಯಣ ಅಂತವರಿಗೆ ನಮ್ಮ ಕುಟುಂಬದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಬೆಂಕಿ ಹಚ್ಚುವವರು ಅವರು. ಬೆಂಕಿ ಆರಿಸುವುದು ನಮ್ಮ ಸಂಸ್ಕೃತಿ' ಎಂದರು.

ಅಘೋಷಿತ ತುರ್ತು ಪರಿಸ್ಥಿತಿ: ದೇಶದಲ್ಲಿ ಈಗ ಅಘೋಷಿತ ತುರ್ತು ಪರಿಸ್ಥಿತಿ ಜಾರಿಯಲ್ಲಿದೆ. ಕೇಂದ್ರ ಸರ್ಕಾರದ ವಿರುದ್ಧ ಮಾತನಾಡಿದರೆ ದೇಶದ್ರೋಹಿಗಳು ಎಂಬುದಾಗಿ ಬಿಂಬಿಸುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಎಲ್ಲದಕ್ಕೂ ಅಂತಿಮ ಇದ್ದೇ ಇದೆ. ಪರ್ಯಾಯ ರಾಜಕೀಯ ಶಕ್ತಿ ಇಲ್ಲ ಎಂದು ಈಗ ಅನಿಸಬಹುದು. ಹಿಂದೆಯೂ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿ ಹೇರಿದಾಗಲೂ ಇದೇ ವಾತಾವರಣ ಇತ್ತು ಎಂದರು.

ಪರಿಸರ ಹೋರಾಟಗಾರ್ತಿ ದಿಶಾ ರವಿ ಬಂಧನ ಕುರಿತು ಪ್ರತಿಕ್ರಿಯಿಸಿದ ಕುಮಾರಸ್ವಾಮಿ, 'ಬಡವರ ಪರವಾಗಿ ಹೋರಾಟ ನಡೆಸುತ್ತಿದ್ದ ಹೆಣ್ಣು ಮಗಳು ದೇಶದ ವಿರುದ್ಧ ಮಾತನಾಡುತ್ತಾರಾ ಎಂಬ ಅನುಮಾನ ಇದೆ. ಟೂಲ್‌ಕಿಟ್ ನಂತಹ ಚಟುವಟಿಕೆಗಳನ್ನು ನಿಷೇಧಿಸುವ ಅಧಿಕಾರ ಕೇಂದ್ರ ಸರ್ಕಾರದ ಬಳಿ ಇರಲಿಲ್ಲವೆ' ಎಂದು ಕೇಳಿದರು.

ನಮ್ಮ ಪಕ್ಷದ ಹಲವಾರು ಮಂದಿ ದೇಣಿಗೆ ನೀಡಿದ್ದಾರೆ. ರಾಮ ಮಂದಿರ ನಿರ್ಮಾಣದ ಹೊಣೆ ಹೊತ್ತಿರುವ ಅಧಿಕೃತ ವ್ಯಕ್ತಿಗಳು ಅಥವಾ ಅವರ ಅಧಿಕೃತ ಪ್ರತಿನಿಧಿಗಳು ಸಂಪರ್ಕಿಸಿದರೆ ದೇಣಿಗೆ ನೀಡಲು ಸಿದ್ಧ

ಎಚ್.ಡಿ. ಕುಮಾರಸ್ವಾಮಿ

'ನನ್ನನ್ನೂ ಬೆದರಿಸಿದ್ದರು'

'ರಾಮ ಮಂದಿರ ನಿರ್ಮಾಣಕ್ಕೆ ದೇಣಿಗೆ ಕೇಳಿ ಕೆಲವು ದಿನಗಳ ಹಿಂದೆ ಮೂರು ಜನರು ನನ್ನ ಮನೆಗೂ ಬಂದಿದ್ದರು. ದೇಣಿಗೆ ಕೊಡುವುದಿಲ್ಲ ಎಂದಾಗ, ತಂಡದಲ್ಲಿದ್ದ ಮಹಿಳೆಯೊಬ್ಬರು ಬೆದರಿಕೆ ಹಾಕಿದ್ದರು. ರಾಮ ಮಂದಿರ ದೇಶದ ಪ್ರತೀಕ, ದೇಣಿಗೆ ಕೊಡುತ್ತೀರೋ? ಇಲ್ಲವೋ? ಎಂದು ಬೆದರಿಸಿದ್ದರು' ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸಿದ್ದರಾಮಯ್ಯ ವಿರುದ್ಧ ಕೋರ್ಟ್ ಕ್ರಮ: ಯಡಿಯೂರಪ್ಪ ಎಚ್ಚರಿಕೆ

ಶಿವಮೊಗ್ಗ: 'ರಾಮಮಂದಿರ ನಿರ್ಮಾಣ ಕುರಿತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೀಡಿರುವ ಹೇಳಿಕೆ ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧವಾಗಿದೆ. ಕೋರ್ಟ್ ಕ್ರಮ ಜರುಗಿಸುವ ಸಾಧ್ಯತೆ ಇದೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಎಚ್ಚರಿಸಿದರು.

ಮಾಚೇನಹಳ್ಳಿ ಕೈಗಾರಿಕಾ ಸಂಘದ ರಜತ ಮಹೋತ್ಸವ ಭವನಕ್ಕೆ ಬುಧವಾರ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

'ರಾಮಮಂದಿರ ಬೇರೆ ಕಡೆ ಕಟ್ಟಿದರೆ ದೇಣಿಗೆ ನೀಡುತ್ತೇನೆ ಎಂದು ಹಗುರವಾಗಿ ಟೀಕೆ ಮಾಡುತ್ತ ಅನಗತ್ಯ ಗೊಂದಲ ಸೃಷ್ಟಿಸುತ್ತಿದ್ದಾರೆ. ಇಂಥವರು ಮೌನವಾಗಿದ್ದರೆ ಅವರಿಗೂ ಕ್ಷೇಮ, ದೇಶಕ್ಕೂ ಕ್ಷೇಮ. ಹಿಂದೂ, ಮುಸ್ಲಿಂ, ಕ್ರೈಸ್ತರು ಸೇರಿದಂತೆ ಎಲ್ಲರೂ ಮಂದಿರ ನಿರ್ಮಾಣಕ್ಕೆ ಉದಾರವಾಗಿ ದೇಣಿಗೆ ನೀಡುತ್ತಿದ್ದಾರೆ. ಅದನ್ನು ಸಹಿಸದೇ ಕಲ್ಲು ಹಾಕುವ ಕೆಲಸ ಮಾಡುತ್ತಿದ್ದಾರೆ' ಎಂದು ಹರಿಹಾಯ್ದರು.

ಶಾಪದಿಂದಲೇ ಸರ್ಕಾರ ಪತನ: 'ರಾಮಮಂದಿರ ಕುರಿತು ಸಿದ್ದರಾಮಯ್ಯ ಹೇಳಿಕೆ ಮುಸ್ಲಿಮರನ್ನು ಓಲೈಸುವ ತಂತ್ರ ಅಷ್ಟೇ. ಹಿಂದೆ ಗೋಹತ್ಯೆ ಮಾಡಿದವರನ್ನು ಶಿಕ್ಷಿಸುವ ಬದಲು ಗೋ ರಕ್ಷಕರ ವಿರುದ್ಧ ಕ್ರಮ ಕೈಗೊಂಡ ಪರಿಣಾಮ ಆ ಶಾಪ ಸಿದ್ದರಾಮಯ್ಯ ಸರ್ಕಾರ ಪತನಗೊಳ್ಳಲು ಕಾರಣವಾಗಿತ್ತು' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ತಿರುಗೇಟು ನೀಡಿದರು.

ಸುದ್ದಿ 2 ನಿಮಿಷ

ಆಸ್ಟ್ರೇಲಿಯಾ ಲಿಬರಲ್ ಪಾರ್ಟಿ ರಾಜ್ಯ ಕಮಿಟಿಗೆ ಶಿಲ್ಪಾ ಹೆಗ್ಡೆ ಆಯ್ಕೆ

ಹಿರಿಯಡಕ (ಉಡುಪಿ ಜಿಲ್ಲೆ): ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ನೇತೃತ್ವದ ಲಿಬರಲ್ ಪಾರ್ಟಿಯಿಂದ ವಿಕ್ಟೋರಿಯ ರಾಜ್ಯ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಕನ್ನಡತಿ ಉಡುಪಿಯ ಪೆರ್ಡೂರಿನ ಶಿಲ್ಪಾ ಹೆಗ್ಡೆ ಆಯ್ಕೆಯಾಗಿದ್ದಾರೆ. ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳುವ ರಾಜ್ಯ ಕಮಿಟಿ ಇದಾಗಿದೆ.

ಪೆರ್ಡೂರಿನ ಮೋಹನದಾಸ್ ಹೆಗ್ಡೆ ಮತ್ತು ಶಶಿಕಲಾ ಹೆಗ್ಡೆ ದಂಪತಿಯ ಪುತ್ರಿಯಾಗಿರುವ ಶಿಲ್ಪಾ ಹೆಗ್ಡೆ, ಪೆರ್ಡೂರಿನಲ್ಲಿ ಹುಟ್ಟಿ ಬೆಳೆದಿದ್ದು, ನಿಟ್ಟೆಯಲ್ಲಿ ತಾಂತ್ರಿಕ ಶಿಕ್ಷಣವನ್ನು ಮುಗಿಸಿ, 2001 ರಿಂದ ಆಸ್ಟ್ರೇಲಿಯಾದಲ್ಲಿ ಸಾಫ್ಟ್‌ವೇರ್ ಕನ್ಸಲ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆ.

ಆಸ್ಟ್ರೇಲಿಯಾದ ಜನಪ್ರಿಯ 10 ಮಹಿಳಾ ರಾಜಕಾರಣಿಗಳಲ್ಲಿ 2 ನೇ ಸ್ಥಾನ ಪಡೆದಿರುವ ಶಿಲ್ಪಾ, 2013 ರಲ್ಲಿ ಆಸ್ಟ್ರೇಲಿಯಾ ಫೆಡರಲ್ ಚುನಾವಣೆಯಲ್ಲಿ ವಿಕ್ಟೋರಿಯಾದ ವಿಲ್ಸ್ ಕ್ಷೇತ್ರಕ್ಕೆ ಲಿಬರಲ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

'20 ವರ್ಷಗಳಿಂದ ಆಸ್ಟ್ರೇಲಿಯಾದ ಲಿಬರಲ್ ಪಾರ್ಟಿಯಲ್ಲಿ ಪತಿ ದಯಾನಂದ ಹೆಗ್ಡೆ ಹಾಗೂ ಮನೆಯವರ ಸಹಕಾರದಿಂದ ಸಕ್ರಿಯವಾಗಿದ್ದು, ಆಸ್ಟ್ರೇಲಿಯಾ ಆಡಳಿತ ಕಮಿಟಿಯಲ್ಲಿ ಸ್ಥಾನ ಪಡೆದದ್ದು ಸಂತೋಷ ತಂದಿದೆ' ಎಂದು ಶಿಲ್ಪಾ ಹೆಗ್ಡೆ ತಿಳಿಸಿದ್ದಾರೆ.

ಪಶು ಇಲಾಖೆಯಲ್ಲಿ ಶೇ 52ರಷ್ಟು ಹುದ್ದೆ ಖಾಲಿ: ಸಚಿವ ಚವಾಣ್

ಮೈಸೂರು: ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಲ್ಲಿ ಶೇ 52ರಷ್ಟು ಹುದ್ದೆಗಳು ಖಾಲಿ ಇವೆ ಎಂದು ಪಶುಸಂಗೋಪನಾ ಸಚಿವ ಪ್ರಭು ಚವಾಣ್ ಬುಧವಾರ ಇಲ್ಲಿ ತಿಳಿಸಿದರು.

'ಈ ವಿಚಾರವಾಗಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಜತೆ ಮಾತುಕತೆ ನಡೆಸಲಾಗಿದೆ. ಪ್ರತಿ ವರ್ಷ ಖಾಲಿ ಹುದ್ದೆ ಭರ್ತಿ ಮಾಡುವ ಪ್ರಯತ್ನ ನಡೆಸಲಾಗುವುದು' ಎಂದರು.

'ಪಶು ಸಂಜೀವಿನಿ ಯೋಜನೆಯಡಿ ಪಶು ಚಿಕಿತ್ಸಾ ಆಂಬುಲೆನ್ಸ್‌ಗಳನ್ನು 15 ಜಿಲ್ಲೆಗಳಿಗೆ ನೀಡಲಾಗಿದೆ. ಎಲ್ಲ ಜಿಲ್ಲೆಗಳಲ್ಲೂ ಪ್ರಾಣಿಗಳ ಚಿಕಿತ್ಸೆಗಾಗಿ ಹೈಟೆಕ್ ಪಾಲಿಕ್ಲಿನಿಕ್ ತೆರೆಯಲಾಗುವುದು' ಎಂದು ಹೇಳಿದರು.

ಪಿಇಎಸ್ ವಿಶ್ವವಿದ್ಯಾಲಯದಿಂದ ಸಂಶೋಧನೆ • ವಿವಿಧ ಯೋಜನೆಗಳಿಗೆ ₹ 1.56 ಕೋಟಿ ಧನಸಹಾಯ ನೀಡಿದ ವಿವಿ

ಕನ್ನಡದಲ್ಲಿ ಸರ್ಚ್ ಎಂಜಿನ್, ಗಣಪೆ ಕಾಯಿಯಿಂದ ಕ್ಯಾನ್ಸರ್ ಔಷಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೂಗಲ್ ಮಾದರಿಯಲ್ಲಿಯೇ ಕನ್ನಡದ ಸರ್ಚ್ ಎಂಜಿನ್ ಅಭಿವೃದ್ಧಿ, ಗಣಪೆ ಕಾಯಿಯಿಂದ ಕ್ಯಾನ್ಸರ್ ನಿರೋಧಕ ಔಷಧದ ಸಂಶೋಧನೆಯನ್ನು ಪಿಇಎಸ್ ವಿಶ್ವವಿದ್ಯಾಲಯವು ಕೈಗೆತ್ತಿಕೊಂಡಿದೆ.

ಬುಧವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಶ್ವವಿದ್ಯಾಲಯದ ಕುಲಸಚಿವ ಡಾ.ಕೆ.ಎಸ್. ಶ್ರೀಧರ್, 'ವಿಶ್ವವಿದ್ಯಾಲಯವು ಪಠ್ಯ ಶಿಕ್ಷಣದ ಜತೆಗೆ ಸಂಶೋಧನೆಗಳಿಗೆ ಕೂಡ ಉತ್ತೇಜನ ನೀಡುತ್ತಿದೆ. ವಿವಿಧ ಯೋಜನೆಗಳಿಗೆ ಕಳೆದ ವರ್ಷ ಒಟ್ಟು ₹ 1.56 ಕೋಟಿ ಧನಸಹಾಯ ನೀಡಲಾಗಿದೆ. ಬೇರೆ ಬೇರೆ ವಿಭಾಗಗಳ ಪ್ರಾಧ್ಯಾಪಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಸಂಶೋಧನೆಗಳನ್ನು ಕೈಗೊಂಡಿದ್ದಾರೆ. ಕನ್ನಡ ಭಾಷೆಯ ಸರ್ಚ್ ಎಂಜಿನ್ ಅಭಿವೃದ್ಧಿಗೆ ₹ 10 ಲಕ್ಷ ಆರ್ಥಿಕ ನೆರವು ನೀಡಲಾಗಿದೆ. ಇದನ್ನ ಗೂಗಲ್ ಮಾದರಿಯಲ್ಲಿಯೇ ವಿನ್ಯಾಸ ಮಾಡಲಾಗುತ್ತದೆ. ಇದು ಕನ್ನಡದ ಪದಗಳನ್ನು ಅರ್ಥ ಮಾಡಿಕೊಂಡು, ಸುಲಭವಾಗಿ ಹುಡುಕಲಿದೆ' ಎಂದು ತಿಳಿಸಿದರು.

'ಕಾಡುಗಳಲ್ಲಿ ಸಿಗುವ ಗಣಪೆ ಕಾಯಿಯು ಹಲವು ಔಷಧೀಯ ಗುಣಗಳನ್ನು ಹೊಂದಿದೆ ಎನ್ನುವುದು ಸಂಶೋಧನೆಗಳಿಂದ ದೃಢಪಟ್ಟಿದೆ. ಈ ಕಾಯಿಗಳನ್ನು ಬಳಸಿಕೊಂಡು ಜೈವಿಕ ತಂತ್ರಜ್ಞಾನದ ವಿಭಾಗವು ಹೆಚ್ಚಿನ ಸಂಶೋಧನೆ ನಡೆಸುತ್ತಿದ್ದು, ಕ್ಯಾನ್ಸರ್ ನಿರೋಧಕ ಗುಣಗಳು ಅವುಗಳಲ್ಲಿವೆ ಎನ್ನುವುದು ಖಚಿತಪಟ್ಟಿದೆ. ಹಾಗಾಗಿ, ಅವುಗಳಿಂದ ಕ್ಯಾನ್ಸರ್‌ಗೆ ಔಷಧವನ್ನು ಸಂಶೋಧಿಸಲಾಗುತ್ತಿದೆ. ಈ ಯೋಜನೆಗೆ ವಿಶ್ವವಿದ್ಯಾಲಯವು ₹ 13 ಲಕ್ಷ ಧನ ಸಹಾಯ ಮಾಡಿದೆ. ಗಾಳಿಯಲ್ಲಿನ ಮಲಿನಕಾರಕ ಕಣಗಳನ್ನು ಪತ್ತೆ ಮಾಡುವ ಸಾಧನದ ಅಭಿವೃದ್ಧಿಗೆ ₹ 33.56 ಲಕ್ಷ ನೆರವು ನೀಡಲಾಗಿದೆ. ಇದು ಪ್ರಾಜೆಕ್ಟ್ ಒಂದಕ್ಕೆ ನೀಡಿದ ಹೆಚ್ಚಿನ ಧನಸಹಾಯವಾಗಿದೆ. ಎಲ್ಲ ಪ್ರಾಜೆಕ್ಟ್‌ಗಳು ಎರಡು ವರ್ಷಗಳಲ್ಲಿ ಪೂರ್ಣಗೊಳ್ಳಲಿವೆ' ಎಂದು ವಿವರಿಸಿದರು.

6 ಮಂದಿಗೆ ₹ 55 ಲಕ್ಷ ಪ್ಯಾಕೇಜ್: 'ಕೋವಿಡ್ ಕಾಯಿಲೆಯು ಕ್ಯಾಂಪಸ್ ಸಂದರ್ಶನಕ್ಕೆ ಅಡ್ಡಿಯಾಗಲಿಲ್ಲ. ಆನ್‌ಲೈನ್ ಮೂಲಕ ಈ ಬಾರಿ ಕ್ಯಾಂಪಸ್ ಸಂದರ್ಶನ ನಡೆದ ಕಾರಣ ಹೆಚ್ಚಿನ ಕಂಪನಿಗಳು ಭಾಗವಹಿಸಿ, ವಿದ್ಯಾರ್ಥಿಗಳಿಗೆ ಉತ್ತಮ ಪ್ಯಾಕೇಜ್ ನೀಡಿವೆ. 6 ವಿದ್ಯಾರ್ಥಿಗಳಿಗೆ ಅಮೆರಿಕ ಮೂಲದ ಕಂಪನಿಯೊಂದು ತಲಾ ₹ 55 ಲಕ್ಷದ ಪ್ಯಾಕೇಜ್ ನೀಡಿದೆ. ಈ ವಿದ್ಯಾರ್ಥಿಗಳು ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ 8ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ವಿಶ್ವವಿದ್ಯಾಲಯದಲ್ಲಿ ಈವರೆಗೆ ನಡೆದ ಕ್ಯಾಂಪಸ್ ಸಂದರ್ಶನದಲ್ಲಿ ಇದು ಅತೀ ದೊಡ್ಡ ಪ್ಯಾಕೇಜ್ ಆಗಿದೆ. ಕಳೆದ ಬಾರಿ ಮೈಕ್ರೋಸಾಫ್ಟ್ ಕಂಪನಿಯು ಅಭ್ಯರ್ಥಿಯೊಬ್ಬರಿಗೆ ₹ 43.07 ಲಕ್ಷದ ಪ್ಯಾಕೇಜ್ ನೀಡಿತ್ತು' ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ. ಸೂರ್ಯಪ್ರಸಾದ್ ಜೆ. ತಿಳಿಸಿದರು.

'ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತಿದ್ದು, ಇದರಿಂದ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ವ್ಯಾಸಂಗಕ್ಕೂ ನೆರವಾಗಲಿದೆ. ಈ ಬಾರಿ 5,456 ವಿದ್ಯಾರ್ಥಿಗಳಿಗೆ ಒಟ್ಟು ₹ 5.38 ಕೋಟಿ ವಿದ್ಯಾರ್ಥಿ ವೇತನ ನೀಡಲಾಗಿದೆ. ಕೋವಿಡ್ ಕಾರಣ ಬೋಧನಾ ಶುಲ್ಕವನ್ನು ಶೇ 10ರಷ್ಟು ಕಡಿತ ಮಾಡಲಾಗದೆ' ಎಂದರು.

ವಿದ್ಯಾರ್ಥಿಗಳಿಗೆ ಆರೋಗ್ಯ ಕಾರ್ಡ್: ಪ್ರಸ್ತಾವ

'ಖಾಸಗಿ ಶಾಲೆಗಳು ವಿದ್ಯಾರ್ಥಿಗಳಿಗೆ ಒದಗಿಸುತ್ತಿರುವ ಎಲ್ಲ ಸೌಲಭ್ಯಗಳು ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೂ ದೊರೆಯಬೇಕು. ಹಾಗಾಗಿ, ರಾಜ್ಯದಲ್ಲಿನ 48 ಸಾವಿರ ಸರ್ಕಾರಿ ಶಾಲೆಗಳ ಮಕ್ಕಳಿಗೆ ಆರೋಗ್ಯ ಭಾಗ್ಯ ಕಲ್ಪಿಸುವ ನಿಟ್ಟಿನಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಡಿಜಿಟಲ್ ಆರೋಗ್ಯ ಕಾರ್ಡ್ ಒದಗಿಸಲು ಸರ್ಕಾರಕ್ಕೆ ಶಿಫಾರಸು ಮಾಡಿ, ಮುಂಬರುವ ಬಜೆಟ್‌ನಲ್ಲಿ ಘೋಷಿಸುವಂತೆ ಒತ್ತಾಯಿಸಲಾಗಿದೆ. ಅದೇ ರೀತಿ, ಶಾಲೆಗಳಲ್ಲಿ ಯೋಗ ಮತ್ತು ಧ್ಯಾನದ ಕಲಿಕೆ ಸೇರಿದಂತೆ ಸರ್ಕಾರಕ್ಕೆ ಹಣಕಾಸಿನ ಹೊರೆ ಇಲ್ಲದ ಕೆಲವು ಶಿಫಾರಸುಗಳನ್ನು ಮಾಡಿದ್ದೇನೆ' ಎಂದು ವಿಶ್ವವಿದ್ಯಾಲಯದ ಕುಲಾಧಿಪತಿ ಹಾಗೂ ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ ತಿಳಿಸಿದರು.


ಎಂ.ಆರ್. ದೊರೆಸ್ವಾಮಿ

'ಈಗಾಗಲೇ ಜನಪ್ರತಿನಿಧಿಗಳ ಜತೆಗೆ ಕೆಲ ಶಿಕ್ಷಣ ಸಂಸ್ಥೆಗಳು ಕೂಡ ಸರ್ಕಾರಿ ಶಾಲೆಗಳನ್ನು ದತ್ತು ಪಡೆದುಕೊಂಡು, ಅಭಿವೃದ್ಧಿಗೊಳಿಸುತ್ತಿವೆ. ಇದೇ ರೀತಿ, ಎಲ್ಲ ಎಂಜಿನಿಯರಿಂಗ್ ಕಾಲೇಜುಗಳೂ ಸರ್ಕಾರಿ ಶಾಲೆಗಳನ್ನು ದತ್ತು ಪಡೆಯಬೇಕು ಎಂದು ಶಿಫಾರಸು ಮಾಡಲಾಗಿದೆ. ಜ್ಞಾನಪೀಠ ಪುರಸ್ಕೃತ ಸಾಹಿತಿಗಳು ಓದಿದ ಪ್ರಾಥಮಿಕ ಶಾಲೆಗಳನ್ನು ಅಭಿವೃದ್ಧಿಪಡಿಸಲು ಕ್ರಿಯಾಯೋಜನೆ ರೂಪಿಸಲಾಗಿದ್ದು, ₹ 3.2 ಕೋಟಿ ವೆಚ್ಚವಾಗಲಿದೆ' ಎಂದು ಮಾಹಿತಿ ನೀಡಿದರು.

ಎಸ್.ಎಸ್. ಪಾಟೀಲ, ವಸುಮತಿಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ವಸುಮತಿ

ಪಾಟೀಲ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ'ಗೆ ಸಹಕಾರಿ, ಕೃಷಿ ಹಾಗೂ ಶಿಕ್ಷಣ ಕ್ಷೇತ್ರದ ಸಾಧಕ ಎಸ್.ಎಸ್. ಪಾಟೀಲ ಆಯ್ಕೆಯಾಗಿದ್ದಾರೆ.

'ಪದ್ಮಭೂಷಣ ಡಾ. ಬಿ.ಸರೋಜಾದೇವಿ ಸಾಹಿತ್ಯ ಪ್ರಶಸ್ತಿ'ಗೆ ಲೇಖಕಿ ವಸುಮತಿ ಉಡುಪ ಭಾಜನರಾಗಿದ್ದಾರೆ. ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ನೇತೃತ್ವದಲ್ಲಿ ಬುಧವಾರ ಈ ಆಯ್ಕೆಗಳು ನಡೆದಿವೆ.

ಈ ಪ್ರಶಸ್ತಿಗಳು ಕ್ರಮವಾಗಿ ₹ 25 ಸಾವಿರ ಹಾಗೂ ₹ 15 ಸಾವಿರ ನಗದು ಬಹುಮಾನವನ್ನು ಒಳಗೊಂಡಿವೆ ಎಂದು ಪರಿಷತ್ತಿನ ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್ ತಿಳಿಸಿದ್ದಾರೆ.

ಮೋದಿ, ಬಿಎಸ್‌ವೈಯಿಂದ ಲೂಟಿ- ಸುರ್ಜೇವಾಲ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿನೇ ದಿನೇ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆ ಏರಿಕೆಯಾಗುತ್ತಿದೆ. ತೈಲದ ಮೇಲಿನ ಸೆಸ್‌ನಿಂದ 2020-21ರ ಆರ್ಥಿಕ ವರ್ಷದಲ್ಲಿ ₹ 20 ಲಕ್ಷ ಕೋಟಿ ಸಂಗ್ರಹಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಈ ಉದ್ದೇಶದಿಂದ ಮೋದಿ ಸರ್ಕಾರ ಜನರ ಮೇಲೆ ಇನ್ನಷ್ಟು ಹೊರೆ ಹೊರಿಸುತ್ತಿದೆ' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಮಧ್ಯಮ ವರ್ಗಕ್ಕೆ ಹೊರೆಯಾಗುವ ರೀತಿ ಒಂಬತ್ತು ದಿನಗಳಿಂದ ನಿರಂತರ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯಾಗುತ್ತಲೇ ಸಾಗಿದೆ. ಮೋದಿಯವರ ಲೂಟಿ ಕೊನೆಯಾಗಬೇಕು. ಯಡಿಯೂರಪ್ಪನವರ ತೆರಿಗೆ ವಸೂಲಿಯೂ ಕೊನೆಯಾಗಬೇಕು' ಎಂದರು.

ರಣದೀಪ್ ಸಿಂಗ್ ಸುರ್ಜೇವಾಲ

'ಅಡುಗೆ ಅನಿಲ ದರ ₹ 770 ದಾಟುತ್ತಿದೆ. ಎರಡೂವರೆ ತಿಂಗಳಲ್ಲಿ ₹ 175 ಹೆಚ್ಚಾಗಿದೆ. ಎಲ್ಲ ಅಗತ್ಯ ವಸ್ತುಗಳ ದರ ಗಗನಕ್ಕೇರಿದೆ. ಜನ ಹೇಗೆ ಬದುಕಬೇಕು' ಎಂದು ಪ್ರಶ್ನಿಸಿದರು.

ತಮ್ಮ ಮನೆ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ, ಮಾಜಿ ಮೇಯರ್ ಸಂಪತ್‌ರಾಜ್ ವಿರುದ್ಧ ಮಾಡಿರುವ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಸುರ್ಜೇವಾಲ, 'ಈ ವಿಚಾರಗಳು ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡಬೇಕು. ಯಾರೇ ಆದರೂ ಬಹಿರಂಗವಾಗಿ ಮಾತನಾಡಬಾರದು. ಅದು ಅವರ ಮತ್ತು ಪಕ್ಷದ ಏಳಿಗೆಗೆ ಒಳ್ಳೆಯದಲ್ಲ' ಎಂದರು.

'ಮುಖ್ಯಮಂತ್ರಿ ವಿರುದ್ಧ ಅವರದ್ದೇ ಪಕ್ಷದ ಶಾಸಕ ಆರೋಪ ಮಾಡಿದರೆ ಬಿಜೆಪಿಯಂತೆ ನಮ್ಮ ಪಕ್ಷ ನೋಟಿಸ್ ನೀಡುವುದಿಲ್ಲ. ಶಾಸಕ ಹಗರಣ ಬಯಲಿಗೆ ಎಳೆದರೆ ಆ ಬಗ್ಗೆ ಮುಖ್ಯಮಂತ್ರಿಯನ್ನು ಪ್ರಶ್ನಿಸಬೇಕಿತ್ತು. ಅದರ ಬದಲು ಬಿಜೆಪಿ ವರಿಷ್ಠರು ಶಾಸಕರಿಗೆ ನೋಟಿಸ್ ನೀಡುತ್ತಿದ್ದಾರೆ' ಎಂದರು.

ಕೆಂಬಣ್ಣದ ಸೊಬಗು...

ಕೆಂಬಣ್ಣದ ಸೂರ್ಯೋದಯದ ಸೊಬಗಿನ ಬೆಳಕು ಹುಬ್ಬಳ್ಳಿಯ ನೃಪತುಂಗ ಬೆಟ್ಟದ ಮೇಲಿನಿಂದ ಕ್ಯಾಮೆರಾ ಕಣ್ಣಲ್ಲಿ ಸೆರೆಯಾಗಿದ್ದು ಹೀಗೆ

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಪ್ರಶ್ನೆಪತ್ರಿಕೆ ಸೋರಿಕೆ: ಆರೋಪಿ ಶಿವಲಿಂಗ ಪಾಟೀಲ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆಯ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿ ಬೆಳಗಾವಿಯ ಶಿವಲಿಂಗ ಪಾಟೀಲ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಆರೋಪಿಯನ್ನು ಬೆಳಗಾವಿ ಜಿಲ್ಲೆಯ ಗೋಕಾಕ್‌ನಲ್ಲಿ ಬಂಧಿಸಲಾಯಿತು. ಈತ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಕೋಚಿಂಗ್ ಸೆಂಟರ್ ನಡೆಸುತ್ತಿದ್ದ. ಒಂದು ವರ್ಷದ ಹಿಂದೆ ಸೆಂಟರ್ ಮುಚ್ಚಿದ್ದ. ಸದ್ಯ ಗೋಕಾಕ್ ಪಟ್ಟಣದಲ್ಲಿ ಪೀಠೋಪಕರಣ ಮಾರಾಟ ಮಳಿಗೆಯ ಮಾಲೀಕನಾಗಿದ್ದ. ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ನಂತರ ಹೊರರಾಜ್ಯಗಳಲ್ಲಿ ತಲೆಮರೆಸಿಕೊಂಡಿದ್ದ. ಆತನ ಮೊಬೈಲ್ ಕರೆಗಳ ಮಾಹಿತಿ ಬೆನ್ನತ್ತಿ ಬಂಧಿಸಲಾಗಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಶಿವಲಿಂಗ ಪಾಟೀಲ

'ಪ್ರಕರಣದ ಆರೋಪಿ ರಾಚಪ್ಪನನ್ನು ಈಗಾಗಲೇ ಸಿಸಿಬಿ ಬಂಧಿಸಿದೆ. ಆತನಿಂದ ಶಿವಲಿಂಗ ಪಾಟೀಲ ಪ್ರಶ್ನೆ ಪತ್ರಿಕೆ ತರಿಸಿಕೊಳ್ಳುತ್ತಿದ್ದ. ಅಭ್ಯರ್ಥಿಗಳನ್ನು ಸಂಪರ್ಕಿಸಿ, ಪ್ರಶ್ನೆಪತ್ರಿಕೆ ಪೂರೈಸಲು ಸಜ್ಜಾಗಿದ್ದ. ಆರೋಪಿಯನ್ನು ಬಂಧಿಸಿ, ವಿಚಾರಣೆ ಮುಂದುವರಿಸಿದ್ದೇವೆ' ಎಂದು ಸಿಸಿಬಿ ಜಂಟಿ ಕಮಿಷನರ್ ಸಂದೀಪ್ ಪಾಟೀಲ ತಿಳಿಸಿದರು.

'ಬಾಲಭವನ: ಕಾಯಂ ಸಿಬ್ಬಂದಿ ನೇಮಕಕ್ಕೆ ಪ್ರಸ್ತಾವ'

ಮಂಗಳೂರು: ರಾಜ್ಯದ 30 ಜಿಲ್ಲೆಗಳಲ್ಲಿರುವ ಬಾಲಭವನಗಳ ಚಟುವಟಿಕೆಗಳನ್ನು ಸಕ್ರಿಯಗೊಳಿಸಲು ಕಾಯಂ ಸಿಬ್ಬಂದಿ ನೇಮಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಬಾಲಭವನ ಸೊಸೈಟಿ ಅಧ್ಯಕ್ಷೆ ಚಿಕ್ಕಮ್ಮ ಬಸವರಾಜ್ ತಿಳಿಸಿದರು.

ಚಿಕ್ಕಮ್ಮ ಬಸವರಾಜ್

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಾಲಭವನಗಳಲ್ಲಿ ಸದ್ಯ ಕಾರ್ಯಕ್ರಮ ಸಹಾಯಕರು, ಸಂಯೋಜಕರಾಗಿ ತಲಾ ಇಬ್ಬರು ಸಿಬ್ಬಂದಿ ಇದ್ದು, ತಾತ್ಕಾಲಿಕ ಕೆಲಸ ಹಾಗೂ ಕಡಿಮೆ ವೇತನದಿಂದಾಗಿ ಬಹುತೇಕ ಸಿಬ್ಬಂದಿ ಕೆಲಸ ತೊರೆಯುತ್ತಿದ್ದಾರೆ. ಇದರಿಂದ ಸ್ಥಳೀಯ ಮಕ್ಕಳಿಗೆ ಗುಣಮಟ್ಟದ ಚಟುವಟಿಕೆಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ' ಎಂದರು.

ಈ ನಿಟ್ಟಿನಲ್ಲಿ ಗ್ರೂಪ್ ಡಿ ದರ್ಜೆಯ ಸರ್ಕಾರಿ ವೇತನದಂತೆ ಸಿಬ್ಬಂದಿಯ ಕಾಯಮಾತಿಗೆ ಪ್ರಸ್ತಾವ ಸಲ್ಲಿಸಲಾಗಿದೆ. 10 ಬಾಲಭವನಗಳಿಗೆ ಒಬ್ಬರಂತೆ ಮೂವರು ಅಧಿಕಾರಿಗಳನ್ನು ನಿಯೋಜಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು.

ಮನೆಗೆಲಸ ಮಾಡಿ ಓದು, ನ್ಯಾಯಾಧೀಶರಾಗಬೇಕೆಂಬ ಕನಸು

ಎಲ್‌ಎಲ್‌ಬಿ ಪೂರೈಸಿದ ತೃತೀಯ ಲಿಂಗಿ

ಪ್ರಜಾವಾಣಿ ವಾರ್ತೆ

ಮೈಸೂರು: 'ನೋವು, ನಿಂದನೆ, ಕಿರುಕುಳದಿಂದ ನೊಂದಿದ್ದೆ. ಸಾಧನೆ ಮಾಡಿ ತೋರಿಸಬೇಕೆಂಬ ಛಲ ಹುಟ್ಟಿತು. ಯಾವುದೇ ಕಾರಣಕ್ಕೂ ಭಿಕ್ಷಾಟನೆ ಮಾಡುವುದಾಗಲಿ, ಅಡ್ಡದಾರಿ ಹಿಡಿದು ಬದುಕು ಸಾಗಿಸಬಾರದೆಂದು ನಿಶ್ಚಯಿಸಿ ಓದಲು ನಿರ್ಧರಿಸಿದೆ. ಬೇರೆಯವರ ಮನೆಯಲ್ಲಿ ಕೆಲಸ ಮಾಡಿ ವಿದ್ಯಾಭ್ಯಾಸ ಪಡೆದೆ...'

–ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಮೂರು ವರ್ಷಗಳ ಎಲ್‌ಎಲ್‌ಬಿ ಕೋರ್ಸ್ ಪೂರೈಸಿರುವ ಮೈಸೂರಿನ ಜಯನಗರ ನಿವಾಸಿ, ತೃತೀಯ ಲಿಂಗಿ ಸಿ.ಶಶಿ ಅವರ ಮನದಾಳದ ಮಾತಿದು.

ಕೆಲ ವಿಷಯಗಳು ಬಾಕಿ ಇದ್ದು, ಕಾನೂನು ಪದವಿ ಪಡೆಯುವ ವಿಶ್ವಾಸದಲ್ಲಿದ್ದಾರೆ. ಅವರೀಗ ವಕೀಲರೊಬ್ಬರ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನ್ಯಾಯಾಧೀಶರಾಗಬೇಕೆಂಬ ಕನಸು ಹೊಂದಿದ್ದಾರೆ.

'ಹತ್ತನೇ ತರಗತಿ ಓದುವಾಗಲೇ ನನ್ನ ದೇಹದಲ್ಲಿ ವ್ಯತ್ಯಾಸ, ವರ್ತನೆಯಲ್ಲಿ ಬದಲಾವಣೆ ಕಾಣಿಸತೊಡಗಿತು. ಅಲ್ಲಿಯವರೆಗೆ ಶಶಿಕುಮಾರ್ ಆಗಿದ್ದ ನಾನು ಶಶಿ ಆದೆ. ನನ್ನ ವರ್ತನೆ ಕಂಡು ಸ್ನೇಹಿತರು, ಸಂಬಂಧಿಕರು ದೂರವಾಗತೊಡಗಿದರು. ತರಗತಿಯಲ್ಲಿ ನನ್ನ ಪಕ್ಕ ಕೂರುತ್ತಿರಲಿಲ್ಲ. ಹೀಯಾಳಿಸುವವರು, ನಿಂದನೆ ಮಾಡುವವರೇ ಹೆಚ್ಚಾದರು. ಹೀಗಾಗಿ, ಇವರ ಮಧ್ಯೆಯೇ ಬದುಕಿ ತೋರಿಸಬೇಕೆಂದು ನಿರ್ಧರಿಸಿದೆ' ಎಂದು ಶಶಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'2014ರಲ್ಲೇ ಪದವಿ ಪೂರೈಸಿದೆ. ಆಮೇಲೆ ಕೆಲ ವರ್ಷ ಕೆಲಸ ಮಾಡಿ ಎಲ್‌ಎಲ್‌ಬಿ ಕೋರ್ಸ್‌ಗೆ ಸೇರಿದೆ. ನನಗೆ ತಂದೆ, ತಾಯಿ, ಅಕ್ಕ, ತಮ್ಮ, ತಂಗಿ ಇದ್ದಾರೆ' ಎಂದರು.

'ತೃತೀಯ ಲಿಂಗಿಗಳು ಎಂದರೆ ಕೆಲವರಿಗೆ ತಪ್ಪು ಕಲ್ಪನೆಗಳಿವೆ. ಸಾಧನೆ ಮಾಡಿ ತೋರಿಸಲು ನಮಗೂ ನೂರಾರು ದಾರಿಗಳಿವೆ, ನಮಗೂ ಸಮಾಜ ಗೌರವ ಕೊಡಬೇಕು' ಎಂದು ನುಡಿದರು.

ಕೆಲಸ ನೀಡಿದ ವೈದ್ಯೆ: ಆಯುರ್ವೇದ ವೈದ್ಯೆಯಾಗಿರುವ ಡಾ.ಜೆ.ರಶ್ಮಿರಾಣಿ, ತಮ್ಮ ಕ್ಲಿನಿಕ್‌ನಲ್ಲಿ ಶಶಿ ಅವರಿಗೆ ಕೆಲಸ ನೀಡಿ, ವಿದ್ಯಾಭ್ಯಾಸಕ್ಕೂ ನೆರವಾಗಿದ್ದಾರೆ.

'ವಿದ್ಯಾಭ್ಯಾಸದ ಬಗ್ಗೆ ಒಲವು ಹೊಂದಿದ್ದ ಶಶಿಗೆ ಪೋಷಕರು ಸೇರಿದಂತೆ ಯಾರೂ ಸಹಾಯ ಮಾಡಲಿಲ್ಲ. ಈ ವಿಚಾರ ಗೊತ್ತಾಗಿ ನಾನೇ ಕೆಲಸ ನೀಡಿದೆ. ಈಗಲೂ ಸಂಜೆ ವೇಳೆ ಇಲ್ಲೇ ಕೆಲಸ ಮಾಡುತ್ತಾರೆ' ಎಂದು ಡಾ.ರಶ್ಮಿರಾಣಿ ಹೇಳಿದರು.

ಮುಖ್ಯಾಂಶಗಳು

- 10ನೇ ತರಗತಿ ಓದುವಾಗ ದೇಹದಲ್ಲಿ ವ್ಯತ್ಯಾಸ
- ಮೈಸೂರಿನ ಜಯನಗರ ನಿವಾಸಿ

ಎಲ್ಲರೂ ಕಾಮ ದೃಷ್ಟಿಯಲ್ಲಿ ನೋಡುತ್ತಾರೆಯೇ ಹೊರತು, ಸ್ನೇಹದಿಂದ ಸ್ವೀಕರಿಸಲ್ಲ. ಏಕೆ ಸಮಾಜ ಎಲ್ಲಾ ತೃತೀಯ ಲಿಂಗಿಗಳನ್ನು ಒಂದೇ ದೃಷ್ಟಿಯಲ್ಲಿ ನೋಡುತ್ತದೆ?

ಸಿ.ಶಶಿ, ಎಲ್‌ಎಲ್‌ಬಿ ಕೋರ್ಸ್ ಪೂರೈಸಿದ ತೃತೀಯ ಲಿಂಗಿ

ತೃತೀಯ ಲಿಂಗಿಗಳು ಮುಖ್ಯವಾಹಿನಿಯಲ್ಲಿದ್ದು ಸಾಧನೆ ಮಾಡಬಹುದು ಎಂಬುದಕ್ಕೆ ಶಶಿ ಉದಾಹರಣೆ. ಸಾಧನೆ ಮಾಡಲು ಲಿಂಗತ್ವ ವಿಚಾರ ಮುಖ್ಯವೇ ಅಲ್ಲ

ಪ್ರೊ.ಕೆ.ಬಿ.ವಾಸುದೇವ, ನಿರ್ದೇಶಕ, ಕಾನೂನು ಅಧ್ಯಯನ, ವಿದ್ಯಾವರ್ಧಕ ಕಾನೂನು ಕಾಲೇಜು

ಯಡತೊರೆ ಯೋಗಾನಂದೇಶ್ವರ ಮಠ: ಶಿಷ್ಯ ಸ್ವೀಕಾರ ಉತ್ಸವ

'ಶಿಕ್ಷಣ ನೀತಿಯಲ್ಲಿ ಮೌಲ್ಯಾಧಾರಿತ ಶಿಕ್ಷಣ'

ಪ್ರಜಾವಾಣಿ ವಾರ್ತೆ

ಸಾಲಿಗ್ರಾಮ (ಮೈಸೂರು): 'ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸಾಂಸ್ಕೃತಿಕ, ಧಾರ್ಮಿಕ ಮೌಲ್ಯಗಳ ಜತೆಗೆ ಮೌಲ್ಯಾಧಾರಿತ ಶಿಕ್ಷಣ ವ್ಯವಸ್ಥೆಯನ್ನು ಅಡಕಗೊಳಿಸಲಾಗಿದ್ದು, ನೂತನ ಶಿಕ್ಷಣ ನೀತಿ ಈ ವರ್ಷದಿಂದಲೇ ಜಾರಿಯಾಗುತ್ತಿದೆ' ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಸಾಲಿಗ್ರಾಮ ತಾಲ್ಲೂಕಿನ ಗಡಿಭಾಗದಲ್ಲಿ ಇರುವ ಜಪದಕಟ್ಟೆ ಕ್ಷೇತ್ರದಲ್ಲಿ ಬುಧವಾರ ಯಡತೊರೆ ಯೋಗಾನಂದೇಶ್ವರ ಸರಸ್ವತಿ ಮಠದ ಉತ್ತರಾಧಿಕಾರಿ ಶಿಷ್ಯ ಸ್ವೀಕಾರ ಮಹೋತ್ಸವದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಶಿಕ್ಷಣವನ್ನು ಉನ್ನತ ಉದ್ದೇಶ ಇಟ್ಟುಕೊಂಡು ಕಲಿಯಬೇಕು ಎಂಬುದು ನಮ್ಮ ಹಿರಿಯರ ಆಪೇಕ್ಷೆ. ಅವರ ಆಶಯಕ್ಕೆ ತಕ್ಕಂತೆಯೇ ಶಿಕ್ಷಣ ನೀತಿ ರೂಪುಗೊಂಡಿದೆ. ಕಿರಿಯ ಹಂತದಿಂದಲೇ ಸಾಮಾಜಿಕ ಹೊಣೆಗಾರಿಕೆಯನ್ನು ಕಲಿಸುವಂಥ ಉತ್ತಮ ಗುಣಮಟ್ಟದ ಶಿಕ್ಷಣ ಮಕ್ಕಳಿಗೆ ಸಿಗಲಿದೆ' ಎಂದರು.

ಸೌಂದರ್ಯ ಲಹರಿ ಪ್ರಭಾವ: ಶಂಕರಭಾರತೀ ಸ್ವಾಮೀಜಿ ನೇತೃತ್ವದಲ್ಲಿ ನಡೆಯುತ್ತಾ ಬಂದಿರುವ ಆದಿ ಶಂಕರರ 'ಸೌಂದರ್ಯ ಲಹರಿ ಪಾರಾಯಣ ನನ್ನ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ನನ್ನ ಮತ ಕ್ಷೇತ್ರ ಮಲ್ಲೇಶ್ವರದಲ್ಲೂ ಸೌಂದರ್ಯ ಲಹರಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು ಎಂದು ನುಡಿದರು.

ಉಪಮುಖ್ಯಮಂತ್ರಿ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಅವರು ಸ್ವಾಮೀಜಿಗಳ ಆಶೀರ್ವಾದ ಪಡೆದರು

ಶಿರಸಿ ಸೋಂದಾ ಮಠದ ಪೀಠಾಧೀಶ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಿ, 'ರಾಜ್ಯದಲ್ಲಿ ಇರುವ ಪ್ರಮುಖ ದೇವಾಲಯಗಳನ್ನು ಸರ್ಕಾರ ತನ್ನ ಹಿಡಿತಕ್ಕೆ ತೆಗೆದುಕೊಳ್ಳುವುದನ್ನು ನ್ಯಾಯಾಲಯ ವಿರೋಧಿಸಿ ತೀರ್ಪು ನೀಡಿದೆ. ಸರ್ಕಾರದ ಕ್ರಮವನ್ನು ನಾವೂ ವಿರೋಧಿಸುತ್ತೇವೆ. ಸಮಾಜದಲ್ಲಿ ಇರುವ ಚಿಂತಕರ ಸಲಹೆ ಪಡೆದು ಮುಂದಿನ ಕ್ರಮ ತೆಗೆದುಕೊಳ್ಳಬೇಕು. ರಾಜಕಾರಣಿಗಳ ಪೀಠಕ್ಕಿಂತ ಸಮಾಜವನ್ನು ತಿದ್ದುವ ಶ್ರೀಗಳ ಪೀಠ ಅಮೂಲ್ಯವಾದದ್ದು' ಎಂದರು.

'ಭಾಸ್ಕರ ಶರ್ಮಾ ಅವರಿಗೆ ಸನ್ಯಾಸ ದೀಕ್ಷೆ ನೀಡಿ, ಬ್ರಹ್ಮಾನಂದ ಸ್ವಾಮೀಜಿಗಳಾಗಿ ಅಭಿದಾನ ಮಾಡಲಾಯಿತು. ಮುಂದಿನ ದಿನಗಳಲ್ಲಿ ಶ್ರೀಗಳು ಯಶಸ್ವಿಯಾಗಿ ಮಠದ ಕಾರ್ಯ ನಿರ್ವಹಿಸಲಿ' ಎಂದು ಹೇಳಿದರು.

ಮಠದ ಶಂಕರಭಾರತೀ ಸ್ವಾಮೀಜಿ, ಕಾಸರಗೋಡು ಎಡನೀರು ಮಠದ ಸಚ್ಚಿದಾನಂದಭಾರತೀ ಸ್ವಾಮೀಜಿ, ಇಂದೋರಿನ ಪ್ರಣವಾನಂದ ಸರಸ್ವತಿಜೀ ಮಹಾರಾಜ್, ಮೈಸೂರು ರಾಮಕೃಷ್ಣ ಮಠದ ಮುಕ್ತಿದಾನಂದಜೀ ಮಹಾರಾಜ್, ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ವೀರೇಶಾನಂದಜೀ ಮಹಾರಾಜ್, ಪಾವಗಡ ರಾಮಕೃಷ್ಣ ಸೇವಾಶ್ರಮದ ಅಧ್ಯಕ್ಷ ಜಪಾನಂದಜೀ ಮಹಾರಾಜ್, ಹೊಳೆನರಸೀಪುರದ ಪ್ರಕಾಶಾನಂದೇಂದ್ರ ಸರಸ್ವತೀ ಮಹಾರಾಜ್, ಕೇರಳದ ಕೃಷ್ಣಾತ್ಮಾನಂದ ಸರಸ್ವತೀ, ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಇದ್ದರು.

ವೇದಿಕೆ ಏರದ ಶಾಸಕ: ಶಾಸಕ ಸಾ.ರಾ.ಮಹೇಶ್ ವೇದಿಕೆಗೆ ಬರಲಿಲ್ಲ. 'ಅವರೊಂದಿಗೆ ವೇದಿಕೆ ಹಂಚಿಕೊಳ್ಳುವುದಿಲ್ಲ' ಎಂದು ವಿಶ್ವನಾಥ್ ಹೆಸರು ಹೇಳದೆ ಜಾರಿ ಕೊಂಡರು.

16 ಕುರಿ ಸಾವು

ಹುಣಸೂರು: ತಾಲ್ಲೂಕಿನ ಬಿಳಿಕೆರೆ ಹೋಬಳಿ ದೇವಗಳ್ಳಿ ಗ್ರಾಮದ ಅನಿಲ್ ಗೌಡರಿಗೆ ಸೇರಿದ 16 ಕುರಿಗಳು ಏಕಾಏಕಿ ಮೃತಪಟ್ಟಿವೆ. ಬುಧವಾರ ಈ ಘಟನೆ ನಡೆದಿದೆ.

ಎರಡು ದಿನಗಳ ಹಿಂದೆ ಅನಿಲ್ ಅವರ ಫಾರಂನಲ್ಲಿ 7 ಜಾನುವಾರು ಒದ್ದಾಡಿ ಮೃತಪಟ್ಟಿದ್ದವು.

ಮರಣೋತ್ತರ ಪರೀಕ್ಷೆ ನಡೆಸಿದ್ದು, ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

ನಿಧನ ವಾರ್ತೆ

ನಿರಂಜನ್ ನಿಕಂ

ಮೈಸೂರು: ಪತ್ರಕರ್ತ ನಿರಂಜನ್ ನಿಕಂ (66) ಹೃದಯಾಘಾತದಿಂದ ಮಂಗಳವಾರ ತಡರಾತ್ರಿ ನಿಧನರಾದರು.

ಇಲ್ಲಿನ ವಿಜಯನಗರ ಮೂರನೇ ಹಂತದ ನಿವಾಸಿಯಾಗಿದ್ದ ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಬುಧವಾರ ಸಂಜೆ ನೆರವೇರಿತು.

ಅವರು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ಮೈಸೂರು ಬ್ಯೂರೊ ಮುಖ್ಯಸ್ಥರಾಗಿ ನಿವೃತ್ತರಾಗಿದ್ದರು. ನಂತರ, ಮೈಸೂರು ವಿಶ್ವವಿದ್ಯಾಲಯದ ಶತಮಾನೋತ್ಸವ ಆಚರಣೆಯ ಸಲಹೆಗಾರರಾಗಿಯೂ ಕಾರ್ಯ ನಿರ್ವಹಿಸಿದ್ದರು. ವಿಶ್ವವಿದ್ಯಾಲಯದ ನೂರು ವರ್ಷಗಳ ಇತಿಹಾಸವನ್ನು ಚಿತ್ರಗಳಲ್ಲೇ ವರ್ಣಿಸುವ 'ಕಾಫಿ ಟೇಬಲ್ ಪುಸ್ತಕ'ದ ಮಾರ್ಗದರ್ಶಕರಾಗಿದ್ದರು.

ಪ್ರಧಾನಿ ಮೋದಿ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆ ತೀರ್ಮಾನ

ಬಾಲನ್ಯಾಯ ಕಾಯ್ದೆ ತಿದ್ದುಪಡಿಗೆ ಅಸ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ-2015ರ ತಿದ್ದುಪಡಿ ಮಸೂದೆಗೆ ಕೇಂದ್ರ ಸರ್ಕಾರವು ಮಂಗಳವಾರ ಅನುಮೋದನೆ ನೀಡಿದೆ. ಉದ್ದೇಶಿತ ತಿದ್ದುಪಡಿಗಳು ಜಿಲ್ಲಾಧಿಕಾರಿಗೆ ಹೆಚ್ಚಿನ ಅಧಿಕಾರ ನೀಡುವುದಲ್ಲದೆ ಮಕ್ಕಳ ರಕ್ಷಣಾ ಘಟಕಗಳು ಹಾಗೂ ಬಾಲ ನ್ಯಾಯ ಪೊಲೀಸ್ ಘಟಕಗಳನ್ನು ಅವರ ಅಧಿಕಾರ ವ್ಯಾಪ್ತಿಯೊಳಗೆ ತರುತ್ತವೆ ಎಂದು ಸರ್ಕಾರ ಹೇಳಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಕೇಂದ್ರದ ಸಚಿವ ಸಂಪುಟ ಸಭೆಯಲ್ಲಿ ಇದಕ್ಕೆ ಅನುಮೋದನೆ ನೀಡಲಾಗಿದ್ದು, ಮುಂದಿನ ಅಧಿವೇಶನದಲ್ಲಿ 'ಬಾಲಾಪರಾಧ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ತಿದ್ದುಪಡಿ ಮಸೂದೆ-2021' ಅನ್ನು ಮಂಡಿಸುವ ಸಾಧ್ಯತೆ ಇದೆ. ತಿದ್ದುಪಡಿ ಮಸೂದೆಯು ಅಂಗೀಕಾರವಾದರೆ ಬಾಲ ನ್ಯಾಯವನ್ನು ಜಾರಿ ಮಾಡುವ ಎಲ್ಲಾ ಘಟಕಗಳ ಮೇಲುಸ್ತುವಾರಿ ಮಾಡುವ ಅಧಿಕಾರ ಜಿಲ್ಲಾಧಿಕಾರಿಗೆ ಲಭಿಸಲಿದೆ.

'ಮಕ್ಕಳ ಕಲ್ಯಾಣ ಸಮಿತಿಗಳ ಕಾರ್ಯನಿರ್ವಹಣೆಯಲ್ಲಿ ಇನ್ನಷ್ಟು ದಕ್ಷತೆಯನ್ನು ತರುವ ಉದ್ದೇಶದಿಂದ ಇಂಥ ಸಮಿತಿಗಳಿಗೆ ಸದಸ್ಯರಾಗಿ ಆಯ್ಕೆಯಾಗುವವರ ಹಿನ್ನೆಲೆಯನ್ನು ಪರೀಕ್ಷಿಸಲು ಸಹ ಅವಕಾಶ ನೀಡಲಾಗಿದೆ. ಪ್ರಸಕ್ತ ಅಂಥ ವ್ಯವಸ್ಥೆ ಇಲ್ಲ' ಎಂದು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಖಾತೆಯ ಸಚಿವೆ ಸ್ಮೃತಿ ಇರಾನಿ ತಿಳಿಸಿದರು.

'ಮಕ್ಕಳ ಆರೈಕೆ ಕೇಂದ್ರದ ನೋಂದಣಿಗಾಗಿ ಸರ್ಕಾರಕ್ಕೆ ಶಿಫಾರಸು ಮಾಡುವುದಕ್ಕೂ ಮುನ್ನ, ಜಿಲ್ಲಾಧಿಕಾರಿಯು ಅಂಥ ಸಂಸ್ಥೆಯ ಹಿನ್ನೆಲೆ ಮತ್ತು ಅದರ ಸಾಮರ್ಥ್ಯವನ್ನು ಕುರಿತು ಪರಿಶೀಲನೆ ನಡೆಸಬೇಕಾಗುತ್ತದೆ. ಈಗಿರುವ ವ್ಯವಸ್ಥೆಯಲ್ಲಿ ಸಂಸ್ಥೆಯೊಂದರ ಸಾಮರ್ಥ್ಯ ಹಾಗೂ ಇತರ ಸೌಲಭ್ಯಗಳ ಪರಿಶೀಲನೆ ನಡೆಸಲು ಅವಕಾಶ ಇಲ್ಲ. ಮಕ್ಕಳ ಕಲ್ಯಾಣ ಸಮಿತಿಗಳು, ಬಾಲನ್ಯಾಯ ಪೊಲೀಸ್ ಘಟಕಗಳು ಹಾಗೂ ನೋಂದಾಯಿತ ಸಂಸ್ಥೆಗಳ ಕಾರ್ಯವೈಖರಿಯ ಬಗ್ಗೆಯೂ ಜಿಲ್ಲಾಧಿಕಾರಿ ಮೌಲ್ಯಮಾಪನ ಮಾಡಬಹುದು. ಮಾನವ ಕಳ್ಳಸಾಗಾಣಿಕೆ, ಮಾದಕ ವ್ಯಸನ, ಪಾಲಕರಿಂದ ತ್ಯಜಿಸಲ್ಪಟ್ಟವರು ಮತ್ತು ಬಾಲಕಾರ್ಮಿಕ ಪದ್ಧತಿಯಿಂದ ರಕ್ಷಣೆಗೆ ಒಳಗಾದ ಮಕ್ಕಳನ್ನು 'ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳು' ಎಂದು ಪರಿಗಣಿಸಲು ಸಾಧ್ಯವಾಗುವಂತೆ ಬಾಲನ್ಯಾಯ ಕಾಯ್ದೆಯ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ' ಎಂದು ಸ್ಮೃತಿ ತಿಳಿಸಿದರು.

ದೂರಸಂಪರ್ಕ ಕ್ಷೇತ್ರಕ್ಕೆ ₹12 ಸಾವಿರ ಕೋಟಿ ಕೊಡುಗೆ

ದೂರಸಂಪರ್ಕ ಸಲಕರಣೆಗಳನ್ನು ಭಾರತದಲ್ಲಿ ತಯಾರಿಸುವುದಕ್ಕೆ ಉತ್ತೇಜನ ನೀಡಲು ₹12,195 ಕೋಟಿ ಕೊಡುಗೆಯ (ಐದು ವರ್ಷಗಳಲ್ಲಿ) ಯೋಜನೆಗೂ ಸಚಿವ ಸಂಪುಟ ಅನುಮೋದನೆ ನೀಡಿದೆ.

'ಈ ಕ್ರಮವು ₹2.44 ಲಕ್ಷ ಕೋಟಿ ಮೌಲ್ಯದ ಸಲಕರಣೆಗಳ ತಯಾರಿಕೆಗೆ ಉತ್ತೇಜನ ನೀಡುವುದರ ಜತೆಗೆ ನೇರ ಹಾಗೂ ಪರೋಕ್ಷವಾಗಿ ಸುಮಾರು 40,000 ಉದ್ಯೋಗಗಳನ್ನು ಸೃಷ್ಟಿಸಲಿದೆ ಎಂದು ನಿರೀಕ್ಷಿಸಲಾಗಿದೆ. 2021ರ ಏಪ್ರಿಲ್ 1ರಿಂದ ಇದು ಜಾರಿಯಾಗಲಿದೆ' ಎಂದು ಕೇಂದ್ರದ ಸಚಿವ ರವಿಶಂಕರ್ ಪ್ರಸಾದ್ ತಿಳಿಸಿದರು.

'ತಯಾರಿಕಾ ಕ್ಷೇತ್ರದಲ್ಲಿ ಭಾರತವನ್ನು ಜಾಗತಿಕ ಮಟ್ಟದ ಶಕ್ತಿಶಾಲಿ ರಾಷ್ಟ್ರವಾಗಿ ರೂಪಿಸುವುದು ಮತ್ತು ವ್ಯಾಪಾರ ಮಾಡಲು ಭಾರತವು ಸೂಕ್ತ ರಾಷ್ಟ್ರ ಎಂಬ ವಾತಾವರಣವನ್ನು ನಿರ್ಮಿಸುವುದು ಸರ್ಕಾರದ ಉದ್ದೇಶ. ದೂರಸಂಪರ್ಕ ಕ್ಷೇತ್ರಕ್ಕೆ ಅಗತ್ಯವಿರುವ ಸಾಧನಗಳ ತಯಾರಿಕೆ ಆರಂಭಿಸುವ ಮೂಲಕ 'ಮೇಕ್ ಇನ್ ಇಂಡಿಯಾ' ಯೋಜನೆಯನ್ನು ಇನ್ನಷ್ಟು ಚುರುಕುಗೊಳಿಸಲು ಪ್ರೋತ್ಸಾಹಕ ಯೋಜನೆಗಳನ್ನು ರೂಪಿಸುವುದು ಅಗತ್ಯವಾಗಿತ್ತು.

'ಈ ಯೋಜನೆಯಿಂದ ದೂರಸಂಪರ್ಕ ಕ್ಷೇತ್ರದ ಸುಮಾರು ₹50,000 ಕೋಟಿ ಮೌಲ್ಯದ ಉಪಕರಣಗಳ ಆಮದು ಕಡಿಮೆಯಾಗುವುದು. 'ಮೇಡ್ ಇನ್ ಇಂಡಿಯಾ' ಟ್ಯಾಗ್ ಹೊಂದಿದ ಉತ್ಪನ್ನಗಳು ದೇಶೀಯ ಮಾರುಕಟ್ಟೆಗೆ ಬರುವುದಲ್ಲದೆ ರಫ್ತು ಕೂಡ ಆಗಲಿವೆ. ಶೀಘ್ರದಲ್ಲೇ ಲ್ಯಾಪ್‌ಟಾಪ್ ಹಾಗೂ ಟ್ಯಾಬ್ ತಯಾರಿಕೆಗೂ ಇಂಥ ಪ್ರೋತ್ಸಾಹ ಯೋಜನೆಯನ್ನು ರೂಪಿಸಲಾಗುವುದು' ಎಂದು ರವಿಶಂಕರ್ ತಿಳಿಸಿದರು.

'2014ರಲ್ಲಿ ದೇಶದಲ್ಲಿ ₹1.9 ಲಕ್ಷ ಕೋಟಿ ಮೌಲ್ಯದ ಎಲೆಕ್ಟ್ರಾನಿಕ್ ಉತ್ಪನ್ನಗಳನ್ನು ತಯಾರಿಸಲಾಗುತ್ತಿತ್ತು. 2019-20ನೇ ಸಾಲಿನಲ್ಲಿ ಅದರ ಪ್ರಮಾಣ ₹5.5 ಲಕ್ಷ ಕೋಟಿಗೆ ಏರಿಕೆಯಾಗಿದೆ. ನೆರೆ ರಾಷ್ಟ್ರದಿಂದ 14 ಕಂಪನಿಗಳನ್ನು ಭಾರತಕ್ಕೆ ಆಕರ್ಷಿಸುವಲ್ಲಿ ಸರ್ಕಾರ ಯಶಸ್ವಿಯಾಗಿದೆ' ಎಂದು ಯಾವ ದೇಶದ ಹೆಸರನ್ನೂ ಉಲ್ಲೇಖಿಸದೆ ಸಚಿವರು ಹೇಳಿದರು.

'ಲಾಕ್‌ಡೌನ್ ಪ್ರಸ್ತಾವ ಇಲ್ಲ: ಸುಧಾಕರ್

ಕೆ. ಸುಧಾಕರ್

ಬೆಂಗಳೂರು: ಕೋವಿಡ್ ಸೋಂಕಿತರ ಸಂಖ್ಯೆಯಲ್ಲಿ ಅಲ್ಪ ಪ್ರಮಾಣದ ಏರಿಕೆ ಕಂಡುಬರುತ್ತಿದ್ದರೂ ರಾಜ್ಯದಲ್ಲಿ ಮತ್ತೆ ಲಾಕ್‌ಡೌನ್ ಜಾರಿಗೊಳಿಸುವ ಯಾವುದೇ ಪ್ರಸ್ತಾವ ರಾಜ್ಯ ಸರ್ಕಾರದ ಮುಂದೆ ಇಲ್ಲ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ವಿಧಾನಸೌಧದಲ್ಲಿ ಬುಧವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ಕೇರಳದಿಂದ ಬರುತ್ತಿರುವವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಸೋಂಕು ದೃಢಪಡುತ್ತಿದೆ. ಆದರೆ, ಯಾರೂ ಆತಂಕಪಡುವ ಅಗತ್ಯವಿಲ್ಲ. ಕೇರಳದಿಂದ ಬರುವ ಜನರ ಮೇಲೆ ವಿಶೇಷ ನಿಗಾ ಇಡಲಾಗುತ್ತಿದೆ. ಲಾಕ್‌ಡೌನ್ ಅಥವಾ ಸೀಲ್‌ಡೌನ್‌ನಂತಹ ಕ್ರಮಗಳು ಮುಂದೆ ಇರುವುದಿಲ್ಲ' ಎಂದರು.

ಕೋವಿಡ್ ನಿಯಂತ್ರಣಕ್ಕೆ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಹೆಚ್ಚಿನ ಸಂಖ್ಯೆಯ ಸೋಂಕಿತರು ಇರುವ ಪ್ರದೇಶವನ್ನು ನಿರ್ಬಂಧಿತ ವಲಯ ಎಂದು ಘೋಷಿಸಲಾಗುತ್ತಿದೆ. ಸೋಂಕಿತರ ಸಂಖ್ಯೆಯಲ್ಲಿ ಇಳಿಮುಖ ಆಗಿದೆ. ಆದರೆ, ಕೋವಿಡ್ ಸಂಪೂರ್ಣವಾಗಿ ನಿರ್ಮೂಲನೆ ಆಗಿಲ್ಲ. ಜನರು ಎಚ್ಚರಿಕೆಯಿಂದ ಇರಲೇಬೇಕು. ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವುದೂ ಕಡ್ಡಾಯ ಎಂದು ಹೇಳಿದರು..

ಆರನೇ ತರಗತಿ ಹಾಗೂ ಅದಕ್ಕಿಂತ ಮೇಲಿನ ತರಗತಿಗಳನ್ನು ಪುನರಾರಂಭ ಮಾಡಲು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಕೈಗೊಂಡಿರುವ ಕ್ರಮ ಸರಿಯಾಗಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಕೋವಿಡ್ ನಿಯಂತ್ರಣ ಕಾರ್ಯಪಡೆ ಮತ್ತು ಶಿಕ್ಷಣ ಇಲಾಖೆ ಅಧಿಕಾರಿಗಳ ಸಭೆಯನ್ನು ಮತ್ತೊಮ್ಮೆ ನಡೆಸಲಾಗುವುದು ಎಂದರು.

ಲಸಿಕೆ: 16 ಮಂದಿಗೆ ಅಡ್ಡ ಪರಿಣಾಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ 28,756 ಮಂದಿ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ ಕೊಪ್ಪಳದ 35 ವರ್ಷದ ಮಹಿಳೆಯೊಬ್ಬರಿಗೆ ಅಡ್ಡ ಪರಿಣಾಮ ಕಾಣಿಸಿಕೊಂಡಿದೆ. ಇದರಿಂದಾಗಿ ಈವರೆಗೆ ತೀವ್ರ ಮತ್ತು ಗಂಭೀರ ಸ್ವರೂಪದ ಅಡ್ಡ ಪರಿಣಾಮ ಎದುರಿಸಿದವರ ಸಂಖ್ಯೆ 16ಕ್ಕೆ ಏರಿಕೆಯಾಗಿದೆ.

ಇವರಲ್ಲಿ ಮೂವರು ಮಾತ್ರ ಆಸ್ಪತ್ರೆಯಲ್ಲಿದ್ದಾರೆ. ಉಳಿದವರು ಚೇತರಿಸಿಕೊಂಡಿದ್ದಾರೆ. ಅಡ್ಡ ಪರಿಣಾಮ ಎದುರಿಸಿದವರಲ್ಲಿ ಎಲ್ಲರೂ 'ಕೋವಿಶೀಲ್ಡ್' ಲಸಿಕೆ ಪಡೆದವರಾಗಿದ್ದಾರೆ.

ಉಸಿರಾಟದ ಸಮಸ್ಯೆ, ಎದೆನೋವು ಸೇರಿದಂತೆ ವಿವಿಧ ಸಮಸ್ಯೆಗಳನ್ನು ಎದುರಿಸಿದ್ದಾರೆ. ಹಾಗಂತ, ಕೋವಿಡ್ ಲಸಿಕೆಯ ಬಗ್ಗೆ ಆತಂಕ ಪಡಬೇಕಿಲ್ಲ. ಇದು ಸುರಕ್ಷಿತವಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಬುಧವಾರ ಲಸಿಕೆ ಪಡೆಯಲು 79,703 ಮಂದಿಯನ್ನು ಗುರುತಿಸಲಾಗಿತ್ತು. ಅವರಲ್ಲಿ ಶೇ 36ರಷ್ಟು ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ. ಉಳಿದವರು ಹಿಂಜರಿಕೆ ಸೇರಿದಂತೆ ನಾನಾ ಕಾರಣಗಳಿಂದ ಗೈರಾಗಿದ್ದಾರೆ.

ರಾಜ್ಯದಲ್ಲಿ ಲಸಿಕೆ ವಿತರಣೆ ಪ್ರಾರಂಭವಾದಾಗಿನಿಂದ ಈವರೆಗೆ ನಿಗದಿಪಡಿಸಲಾಗಿದ್ದ 8,21,939 ಆರೋಗ್ಯ ಕಾರ್ಯಕರ್ತರಲ್ಲಿ 4,14,551 ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಇದರಿಂದ ಶೇ 50ರಷ್ಟು ಗುರಿ ಸಾಧ್ಯವಾಗಿದೆ. ಇವರಲ್ಲಿ 52,608 ಮಂದಿ ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ.

2,84,950 ಮುಂಚೂಣಿ ಯೋಧರನ್ನು ಈವರೆಗೆ ಲಸಿಕೆ ಪಡೆಯಲು ಗುರುತಿಸಲಾಗಿತ್ತು. ಅವರಲ್ಲಿ 96,055 ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ. ಇದರಿಂದ ಶೇ 34ರಷ್ಟು ಗುರಿ ಸಾಧ್ಯವಾಗಿದೆ.

378 ಮಂದಿಗೆ ಸೋಂಕು: ರಾಜ್ಯದಲ್ಲಿ ಬುಧವಾರ 378 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಕೋವಿಡ್ ಪೀಡಿತರಾದವರ ಸಂಖ್ಯೆ 9.46 ಲಕ್ಷ ದಾಟಿದೆ. ಬೆಂಗಳೂರಿನಲ್ಲಿ ಮೂವರು ಮೃತಪಟ್ಟಿರುವುದು ದೃಢಪಟ್ಟಿದೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,276ಕ್ಕೆ ತಲುಪಿದೆ.

ಮಹಿಳಾ ಕೈದಿಗೆ ಗಲ್ಲು: ಜೈಲು ಸಜ್ಜು

ಲಖನೌ: ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ಬಳಿಕ ಇದೇ ಮೊದಲ ಬಾರಿಗೆ ಮಹಿಳಾ ಕೈದಿಯೊಬ್ಬರನ್ನು ಗಲ್ಲಿಗೇರಿಸಲು ಉತ್ತರ ಪ್ರದೇಶದ ಮಥುರಾ ಜಿಲ್ಲಾ ಜೈಲಿನಲ್ಲಿ ಸಿದ್ಧತೆ ನಡೆಸಲಾಗಿದೆ.

ಅಮೋಹ್ರಾ ನಿವಾಸಿಯಾಗಿರುವ ಶಬ್ನಂ, ಪ್ರಿಯಕರನ ಜೊತೆಗೂಡಿ ತನ್ನದೇ ಕುಟುಂಬದ ಏಳು ಮಂದಿಯನ್ನು ಬರ್ಬರವಾಗಿ ಹತ್ಯೆ ಮಾಡಿರುವುದು ಸಾಬೀತಾಗಿತ್ತು. ತಮ್ಮ ಸಂಬಂಧಕ್ಕೆ ಮನೆಯವರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ 2008 ರಲ್ಲಿ ಅಪರಾಧಿಗಳು ಈ ಕೃತ್ಯ ಎಸಗಿದ್ದರು.

ಶಿಕ್ಷೆಯ ವಾರಂಟ್ ಹೊರಡಿಸದ ಕಾರಣ, ಗಲ್ಲಿಗೇರಿಸುವ ದಿನಾಂಕ ಇನ್ನೂ ನಿಗದಿಯಾಗಿಲ್ಲ. ನಿರ್ಭಯಾ ಪ್ರಕರಣದ ಅಪರಾಧಿಗಳನ್ನು ಗಲ್ಲಿಗೇರಿಸಿದ್ದ ಪವನ್ ಜಲ್ಲಾದ್ ಅವರು ಮಥುರಾ ಜೈಲಿಗೆ ಕಳೆದ ಎರಡು ತಿಂಗಳಿನಲ್ಲಿ ಎರಡು ಬಾರಿ ಭೇಟಿ ನೀಡಿದ್ದಾರೆ. ಗಲ್ಲಿಗೇರಿಸಲು ಹಗ್ಗವನ್ನು ಖರೀದಿಸಲು ಆದೇಶಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಶಬ್ನಂ ಕ್ಷಮಾದಾನ ಅರ್ಜಿಯನ್ನು ಅಂದಿನ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ತಿರಸ್ಕರಿಸಿದ್ದರು. ಮರಣದಂಡನೆ ಆದೇಶವನ್ನು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು.

'ರಾಜೀವ್ ಹಂತಕರನ್ನು ಕ್ಷಮಿಸಿದ್ದೇನೆ'

ಪುದುಚೇರಿ (ಪಿಟಿಐ): ತಮ್ಮ ತಂದೆ ರಾಜೀವ್ ಗಾಂಧಿಯವರ ಹತ್ಯೆ ಮಾಡಿದ ಹಂತಕರನ್ನು ಕ್ಷಮಿಸಿರುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಹೇಳಿದ್ದಾರೆ.

ಭಾರತಿದಾಸನ್ ಮಹಿಳಾ ಸರ್ಕಾರಿ ಕಾಲೇಜಿನಲ್ಲಿ ನಡೆದ ಸಂವಾದದಲ್ಲಿ ವಿದ್ಯಾರ್ಥಿನಿಯೊಬ್ಬರು 'ನಿಮ್ಮ ತಂದೆಯನ್ನು ಎಲ್‌ಟಿಟಿ ಉಗ್ರರು ಹತ್ಯೆ ಮಾಡಿದ್ದಾರೆ. ಅವರ ಮೇಲೆ ನಿಮಗೆ ಯಾವ ರೀತಿಯ ಭಾವನೆಗಳಿವೆ' ಎಂದು ಕೇಳಿದ ಪ್ರಶ್ನೆಗೆ ರಾಹುಲ್ ಗಾಂಧಿ ಈ ರೀತಿಯ ಉತ್ತರ ನೀಡಿದ್ದಾರೆ.

'ನಿಜ ನಾನು ನನ್ನ ತಂದೆಯನ್ನು ಕಳೆದುಕೊಂಡಿದ್ದೇನೆ. ನಮ್ಮ ತಂದೆಯನ್ನು ಅವರು ಹತ್ಯೆ ಮಾಡಿದಾಗ ನನ್ನ ಹೃದಯ ತುಂಬಾ ಘಾಸಿಗೊಂಡಿತ್ತು. ನನ್ನಲ್ಲಿ ಅಸಾಧಾರಣ ನೋವು ಆವರಿಸಿತ್ತು. ಆದರೆ, ನನ್ನಲ್ಲಿ ಹಂತಕರ ಮೇಲೆ ಯಾವುದೇ ದ್ವೇಷ ಮತ್ತು ಕೋಪ ಉಳಿದಿಲ್ಲ. ನಾನು ಅವರನ್ನು ಕ್ಷಮಿಸಿಬಿಟ್ಟಿದ್ದೇನೆ. ದ್ವೇಷ ಮತ್ತು ಹಿಂಸೆಯಿಂದ ನಾವು ಏನನ್ನೂ ಸಾಧಿಸಲು ಆಗದು' ಎಂದು ಹೇಳಿದ್ದಾರೆ.

ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಅವರು, 'ಹಿಂಸೆ ನಿಮ್ಮಿಂದ ಏನನ್ನೂ ಕಸಿದುಕೊಂಡು ಹೋಗಲು ಸಾಧ್ಯವಿಲ್ಲ. ನನ್ನ ತಂದೆ ನನ್ನಲ್ಲೇ ಜೀವಂತವಿದ್ದಾರೆ. ನನ್ನ ತಂದೆ ನನ್ನ ಮೂಲಕವೇ ಮಾತನಾಡುತ್ತಿದ್ದಾರೆ' ಎಂದರು.

ಪುದುಚೇರಿಯ ಭಾರತಿದಾಸನ್ ಮಹಿಳಾ ಸರ್ಕಾರಿ ಕಾಲೇಜಿನಲ್ಲಿ ಬುಧವಾರ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವಾಗ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರಿಗೆ ವಿದ್ಯಾರ್ಥಿನಿಯೊಬ್ಬರು ಅಭಿಮಾನ ತೋರಿಸಿದ್ದು ಹೀಗೆ (ಪಿಟಿಐ ಚಿತ್ರ)

ರಾಜೀವ್ ಗಾಂಧಿ ಹತ್ಯೆ ಪ್ರಕರಣದ ಏಳು ಅಪರಾಧಿಗಳನ್ನು ಬಿಡುಗಡೆ ಮಾಡಲು ಬಹುತೇಕ ಪಕ್ಷಗಳು ಬೆಂಬಲ ಸೂಚಿಸಿದ್ದರೂ, ತಮಿಳುನಾಡು ಕಾಂಗ್ರೆಸ್ ಸಮಿತಿ (ಟಿಎನ್‌ಸಿಸಿ) ಇದಕ್ಕೆ ವಿರೋಧ ವ್ಯಕ್ತಪಡಿಸಿದೆ.

ಚೆನ್ನೈ ಸಮೀಪದ ಶ್ರೀಪೆರಂಬೂದೂರ್‌ನಲ್ಲಿ 1991ರ ಮೇ 21ರಂದು ಚುನಾವಣಾ ರ‍್ಯಾಲಿಯಲ್ಲಿ ಭಾಗವಹಿಸಿದ್ದ ರಾಜೀವ್ ಗಾಂಧಿಯವರನ್ನು ಮಹಿಳಾ ಆತ್ಮಾಹುತಿ ಬಾಂಬರ್ ಮೂಲಕ ಎಲ್‌ಟಿಟಿ ಉಗ್ರರು ಹತ್ಯೆ ಮಾಡಿದ್ದರು.

ಮೀನುಗಾರಿಕೆಗೆ ದೋಣಿ ಏರಲಿರುವ ರಾಹುಲ್!: ಮೀನುಗಾರರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಮೀನುಗಾರರೊಂದಿಗೆ ದೋಣಿಯಲ್ಲಿ ಸಮುದ್ರಕ್ಕಿಳಿಯಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಜ್ಜಾಗಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣಾ ರ‍್ಯಾಲಿಗೆ ಚಾಲನೆ ನೀಡಲು ಪುದುಚೇರಿಗೆ ಆಗಮಿಸಿರುವ ರಾಹುಲ್ ಗಾಂಧಿ, ಬುಧವಾರ ಮೀನುಗಾರರ ಸಮುದಾಯದೊಂದಿಗೆ ಸಂವಾದ ನಡೆಸಿದರು.

'ಎಲ್ಲವೂ ಬರೀ ಮಾತುಗಳಿಂದಲೇ ಅರ್ಥವಾಗುವುದಿಲ್ಲ. ಕೆಲವನ್ನು ಅರ್ಥ ಮಾಡಿಕೊಳ್ಳಲು ಸ್ವಅನುಭವವೂ ಬೇಕಾಗುತ್ತದೆ. ಮುಂದಿನ ಬಾರಿ ಭೇಟಿ ನೀಡುವಾಗ, ಮೀನುಗಾರರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಖುದ್ದು ಮೀನುಗಾರರೊಂದಿಗೆ ದೋಣಿಗಳಲ್ಲಿ ಸಮುದ್ರಯಾನ ನಡೆಸುವೆ' ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ್ದಾರೆ.

ಮೋದಿ ವಿರುದ್ಧ ರಾಹುಲ್ ವಾಗ್ದಾಳಿ: 'ತಮ್ಮ ಸುತ್ತ ಏನು ನಡೆಯುತ್ತಿದೆ ಎನ್ನುವ ಅರಿವು ಇಲ್ಲದಿದ್ದರೆ ದೇಶದಲ್ಲಿ ಯಾರಿಗೂ ನ್ಯಾಯಾಂಗ ವ್ಯವಸ್ಥೆಯಲ್ಲಿ ನ್ಯಾಯ ಸಿಗುವುದಿಲ್ಲ' ಎಂದು ಹೇಳಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಮೊದಲ ಸಾರ್ವಜನಿಕ ಸಮಾರಂಭದಲ್ಲಿ ಕೂಡ ಅವರು ಮಾತನಾಡಿದರು.

'ಲೋಕಸಭೆಯಲ್ಲಿ ಸಂಸದರಿಗೆ ಮಾತನಾಡಲು ಅವಕಾಶ ಸಿಗುತ್ತಿಲ್ಲ. ದೇಶದಲ್ಲಿ ಪತ್ರಕರ್ತರ ಜೀವಗಳೂ ಭಯದಲ್ಲಿವೆ. ಸಂಸತ್‌ನಲ್ಲಿ ಯಾವುದೇ ಚರ್ಚೆ ಇಲ್ಲದೆ ಮಸೂದೆಗಳು ಅಂಗೀಕಾರವಾಗುತ್ತಿವೆ. ಏಕೆಂದರೆ ಈ ದೇಶದಲ್ಲಿ ಒಬ್ಬರು ತಾನು ಪ್ರಧಾನಿ ಎಂದುಕೊಂಡಿಲ್ಲ, ನಾನೇ ರಾಜ ಎಂದು ಭಾವಿಸಿದ್ದಾರೆ' ಎಂದು ಅವರು, ಮೋದಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

'ಕಳೆದ 5 ವರ್ಷಗಳಿಂದ ಪುದುಚೇರಿಯಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ಸರಿಯಾಗಿ ಕೆಲಸ ಮಾಡಲು ಪ್ರಧಾನಿ ಬಿಟ್ಟಿಲ್ಲ. ಜನಾಭಿಪ್ರಾಯವನ್ನು ಗೌರವಿಸಲಿಲ್ಲ. ದೇಶದ ಎಲ್ಲ ಸಂಸ್ಥೆಗಳನ್ನು ಹಾಳುಗೆಡವಿದಂತೆ, ಕೇಂದ್ರಾಡಳಿತ ಪ್ರದೇಶದ ಲೆಫ್ಟಿನೆಂಟ್ ಗವರ್ನರ್ ಕಚೇರಿಯನ್ನು ನಾಶಪಡಿಸಿದ್ದಾರೆ' ಎಂದು ದೂಷಿಸಿದ್ದಾರೆ.

'ಕೋವಿಡ್ 19: ಸರ್ಕಾರದ ನಿರ್ಲಕ್ಷ್ಯ ಅತಿವಿಶ್ವಾಸ'

ನವದೆಹಲಿ (ಪಿಟಿಐ): ಕೊರೊನಾ ಸೋಂಕು ಪರಿಸ್ಥಿತಿಯನ್ನು ನಿಭಾಯಿಸುವ ಬಗ್ಗೆ ಕೇಂದ್ರವು ಅತ್ಯಂತ ನಿರ್ಲಕ್ಷ್ಯ ಮತ್ತು ಅತಿಯಾದ ಆತ್ಮವಿಶ್ವಾಸವನ್ನು ಹೊಂದಿದೆ ಎಂದು ಆರೋಪಿಸಿರುವ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಸಾಂಕ್ರಾಮಿಕ ರೋಗ ಇನ್ನೂ ಮುಗಿದಿಲ್ಲ ಎಂದಿದ್ದಾರೆ.

ದಕ್ಷಿಣ ಆಫ್ರಿಕ ಮತ್ತು ಬ್ರೆಜಿಲ್‌ನಲ್ಲಿ ಪತ್ತೆಯಾದ ಕೊರೊನಾ ವೈರಸ್ ರೂಪಾಂತರಗಳು ಭಾರತಕ್ಕೂ ಪ್ರವೇಶಿಸಿವೆ ಎಂದು ವರದಿಯಾದ ನಂತರ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ರಾಹುಲ್ ಗಾಂಧಿ, ಭಾರತ ಸರ್ಕಾರವು ತೀವ್ರ ನಿರ್ಲಕ್ಷ್ಯ ಮತ್ತು ಕೋವಿಡ್-19 ಬಗ್ಗೆ ಹೆಚ್ಚಿನ ವಿಶ್ವಾಸವನ್ನು ಹೊಂದಿದೆ. ಆದರೆ ಕೊರೊನಾ ವೈರಸ್ ರೋಗವು ಇನ್ನು ಕೊನೆಗೊಂಡಿಲ್ಲ' ಎಂದು ಹೇಳಿದ್ದಾರೆ.



ರೈತರ ರ‍್ಯಾಲಿ

ಉತ್ತರಪ್ರದೇಶದ ಮೊರಾದಾಬಾದ್‌ನ ಬಿಲಾರಿಯಲ್ಲಿ ಬುಧವಾರ ನಡೆದ ರೈತರ ರ‍್ಯಾಲಿಯಲ್ಲಿ ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಮಾತನಾಡಿದರು. (ಪಿಟಿಐ ಚಿತ್ರ)

ಹಾರ್ಡ್‌ಡಿಸ್ಕ್ ಒಯ್ದವರ ವಿರುದ್ಧ ದೂರು

ಒಂದನೇ ಪುಟದಿಂದ...

'ಶಿವಲಾಲ್ ಅವರು ಮಂಗಳವಾರವೇ ದೂರು ನೀಡಿದ್ದಾರೆ. ಈ ಬಗ್ಗೆ ತನಿಖೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಬೀಡ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಜಾ ರಾಮಸ್ವಾಮಿ ತಿಳಿಸಿದ್ದಾರೆ.

ಫೆ. 12ರಂದು ಮನೆಗೆ ಬಂದ ಇಬ್ಬರು ಮನೆಯ ಎಲ್ಲ ಕೊಠಡಿಗಳಲ್ಲಿ ಶೋಧ ನಡೆಸಿದ್ದಾರೆ. ಶಾಂತನು ಅವರು ಕೊಠಡಿಯಿಂದ ಕಂಪ್ಯೂಟರ್ ಹಾರ್ಡ್‌ಡಿಸ್ಕ್, ಪರಿಸರಕ್ಕೆ ಸಂಬಂಧಿಸಿದ ಒಂದು ಪೋಸ್ಟರ್, ಒಂದು ಪುಸ್ತಕ ಮತ್ತು ಮೊಬೈಲ್‌ನ ಕವರ್ ಒಂದನ್ನು ಒಯ್ದಿದ್ದಾರೆ. ಈ ಇಬ್ಬರು ಶೋಧದ ವಾರಂಟ್ ಅನ್ನು ತೋರಿಸಿಲ್ಲ ಮತ್ತು ವಸ್ತುಗಳನ್ನು ಒಯ್ಯಲು ಮನೆಯವರ ಅನುಮತಿಯನ್ನು ಕೇಳಿಲ್ಲ ಎಂದು ಶಿವಲಾಲ್ ತಿಳಿಸಿದ್ದಾರೆ.

ವಶಕ್ಕೆ ಪಡೆದ ವಸ್ತುಗಳ ಪಂಚನಾಮೆಯನ್ನೂ ಮಾಡಿಲ್ಲ. ಮನೆ ಶೋಧಕ್ಕೆ ಬಂದವರ ಜತೆಗೆ ಸ್ಥಳೀಯ ಪೊಲೀಸರು ಇರಲಿಲ್ಲ. ಬೀಡ್‌ನ ಸರ್ಕಾರಿ ಅತಿಥಿಗೃಹಕ್ಕೆ ತನಿಖೆಗಾಗಿ ಬರುವಂತೆ ತಮಗೆ ಈ ಇಬ್ಬರು ಸೂಚಿಸಿದ್ದರು ಎಂದೂ ಶಿವಲಾಲ್ ಹೇಳಿದ್ದಾರೆ.

ಅಕ್ಬರ್ ವಿರುದ್ಧ ಪ್ರಿಯಾ ರಮಣಿಗೆ ಗೆಲುವು

ಒಂದನೇ ಪುಟದಿಂದ...

ಹಿರಿಯ ಪತ್ರಕರ್ತರೂ ಆಗಿರುವ ಅಕ್ಬರ್ ಅವರಿಗೆ ಈ ತೀರ್ಪು ಬಹುದೊಡ್ಡ ಹಿನ್ನಡೆ ಎಂದು ಹೇಳಲಾಗಿದೆ.

ಪ್ರಿಯಾ ಮತ್ತು ಇತರ ಕೆಲವು ಮಹಿಳೆಯರು ಅಕ್ಬರ್ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿದ್ದರು. ವಿದೇಶಾಂಗ ಖಾತೆಯ ರಾಜ್ಯ ಸಚಿವರಾಗಿದ್ದ ಅಕ್ಬರ್ ಅವರು ಈ ಆರೋಪದಿಂದಾಗಿ 2018ರಲ್ಲಿ ತಮ್ಮ ಹುದ್ದೆಯನ್ನು ತೊರೆದಿದ್ದರು. ವಿವಿಧ ಪತ್ರಿಕೆಗಳ ಸಂಪಾದಕರಾಗಿದ್ದ ಅವಧಿಯಲ್ಲಿ ತಮಗೆ ಅಕ್ಬರ್ ಅವರು ಲೈಂಗಿಕ ಕಿರುಕುಳ ನೀಡಿದ್ದರು ಎಂದು ಈ ಮಹಿಳೆಯರು ಆಪಾದಿಸಿದ್ದರು.

ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದರೆ ಅದು ಅವರ ಘನತೆ ಮತ್ತು ಆತ್ಮವಿಶ್ವಾಸವನ್ನು ಕುಂದಿಸುತ್ತದೆ. ತಮ್ಮ ಮೇಲೆ ಆದ ದೌರ್ಜನ್ಯದ ನೋವು ಮತ್ತು ಅದಕ್ಕೆ ತಳಕು ಹಾಕಿಕೊಂಡಿರುವ ಅವಮಾನವನ್ನು ಅನುಭವಿಸಿದ ಬಳಿಕ, ಲೈಂಗಿಕ ದೌರ್ಜನ್ಯ ಎಸಗಿದ ವ್ಯಕ್ತಿಯ ಮೇಲೆ ಸಂತ್ರಸ್ತೆಯು ನಡೆಸುವ ದಾಳಿಯು ಅವರ ಸ್ವರಕ್ಷಣೆಯ ಪ್ರತಿಕ್ರಿಯೆ ಆಗಿರುತ್ತದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು.

ದಶಕಗಳ ಹಿಂದೆ ನಡೆದಿದೆ ಎಂಬ ಘಟನೆಯನ್ನು ಇರಿಸಿಕೊಂಡು ತಮ್ಮ ವರ್ಚಸ್ಸಿಗೆ ಮಸಿ ಬಳಿಯಲು ಆರೋಪ ಮಾಡಲಾಗಿದೆ ಎಂಬ ಅಕ್ಬರ್ ಅವರ ವಾದವನ್ನು ನ್ಯಾಯಾಲಯವು ಪುರಸ್ಕರಿಸಲಿಲ್ಲ. ತಮ್ಮ ನೋವನ್ನು ತಮ್ಮ ಆಯ್ಕೆಯ ಯಾವುದೇ ವೇದಿಕೆಯಲ್ಲಿ ದಶಕಗಳ ಬಳಿಕವೂ ವ್ಯಕ್ತಪಡಿಸಲು ಮಹಿಳೆಗೆ ಹಕ್ಕು ಇದೆ ಎಂದು ನ್ಯಾಯಾಲಯವು ಹೇಳಿದೆ.

ತಾವು ಮತ್ತು ತಮ್ಮ ಹಿರಿಯ ಸಹೋದ್ಯೋಗಿಯಾಗಿದ್ದ ಘಝಾಲಾ ವಹಾಬ್ ಅವರ ಹೇಳಿಕೆಯ ಆಧಾರದಲ್ಲಿ ನೋಡುವುದಾದರೆ ಅಕ್ಬರ್ ಅವರು ಬಹುದೊಡ್ಡ ವರ್ಚಸ್ಸು ಇರುವ ವ್ಯಕ್ತಿ ಅಲ್ಲ ಎಂಬ ರಮಣಿ ಅವರ ವಾದವನ್ನು ನ್ಯಾಯಾಲಯವು ಒಪ್ಪಿಕೊಂಡಿತು.

'1993ರ ಡಿಸೆಂಬರ್‌ನ ಒಂದು ದಿನ ಸಂಜೆ ಏಳು ಗಂಟೆಗೆ ಸಂದರ್ಶನಕ್ಕಾಗಿ ನನ್ನನ್ನು ಮುಂಬೈನ ಒಬೆರಾಯ್ ಹೋಟೆಲ್‌ನ ತಮ್ಮ ಕೊಠಡಿಗೆ ಅಕ್ಬರ್ ಅವರು ಕರೆಸಿಕೊಂಡಿದ್ದರು. ಅಲ್ಲಿ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಲಾಗಿದೆ. ಈ ಬಗೆಗಿನ ವಿವರಗಳಿರುವ ಲೇಖನ ಮತ್ತು ಟ್ವೀಟ್ ಅನ್ನು ಸಾರ್ವಜನಿಕ ಒಳಿತಿಗಾಗಿ ಬಹಿರಂಗಪಡಿಸಿದ್ದೇನೆ' ಎಂದು ಪ್ರಿಯಾ ಅವರು ವಾದಿಸಿದ್ದರು.

'ಮಹಿಳೆಯರಿಗೆ ಗೌರವ ಕೊಡಬೇಕು ಎಂಬು ವಿಷಯವನ್ನು ಇರಿಸಿಕೊಂಡು ಮಹಾಭಾರತ ಮತ್ತು ರಾಮಾಯಣದಂತಹ ಮಹಾಕಾವ್ಯಗಳು ರಚನೆಯಾದ ಭಾರತದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿರುವುದು ನಾಚಿಕೆಗೇಡು' ಎಂದು ನ್ಯಾಯಾಧೀಶರು ಹೇಳಿದ್ದಾರೆ.

ಪ್ರಿಯಾಗೆ ಯಾವುದೇ ಕಿರುಕುಳ ನೀಡಿಲ್ಲ. ತಮ್ಮನ್ನು ಅವಮಾನಿಸುವ ಉದ್ದೇಶದಿಂದಲೇ ಅವರು ಈ ಆರೋಪಗಳನ್ನು ಮಾಡಿದ್ದಾರೆ ಎಂದು ಅಕ್ಬರ್ ಮಾನನಷ್ಟ ದೂರಿನಲ್ಲಿ ಹೇಳಿದ್ದರು. ಆದರೆ, ಈ ವಾದವನ್ನೂ ನ್ಯಾಯಾಲಯ ಒಪ್ಪಲಿಲ್ಲ. ಸಮಾಜದಲ್ಲಿ ಉನ್ನತ ಸ್ಥಾನ ಹೊಂದಿರುವವರು ಕೂಡ ಲೈಂಗಿಕ ಕಿರುಕುಳ ನೀಡುವ ಸಾಧ್ಯತೆ ಇದೆ ಎಂದು ನ್ಯಾಯಾಲಯ ಹೇಳಿದೆ.

ಸಮರ್ಥನೆ ಸಿಕ್ಕಿದೆ: ಪ್ರಿಯಾ

'ಇದು ಅದ್ಭುತ ಅನುಭವ. ನನ್ನ ನಿಲುವಿಗೆ ಸಮರ್ಥನೆ ದೊರೆತಿದೆ' ಎಂದು ಪ್ರಿಯಾ ಅವರು ತೀರ್ಪಿನ ಬಳಿಕ ಹೇಳಿದ್ದಾರೆ.

'ಮಹಿಳೆಯರು ಮನಬಿಚ್ಚಿ ಮಾತನಾಡಲು ಈ ತೀರ್ಪು ಉತ್ತೇಜನ ನೀಡಲಿದೆ. ತಮ್ಮಲ್ಲಿರುವ ಸತ್ಯವನ್ನು ಬಹಿರಂಗ ಮಾಡಿದ ಮಹಿಳೆಯರ ವಿರುದ್ಧ ಪ್ರಭಾವಿ ಪುರುಷರು ದೂರು ನೀಡುವುದನ್ನು ಇದು ತಪ್ಪಿಸಲಿದೆ. ಲೈಂಗಿಕ ಕಿರುಕುಳ ಪ್ರಕರಣಕ್ಕೆ ಎಷ್ಟು ಗಮನ ದೊರೆಯಬೇಕೋ ಅಷ್ಟು ಗಮನ ಸಿಕ್ಕಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಪ್ರಿಯಾ ಅವರ ನಿಲುವನ್ನು ಕೋರ್ಟ್ ಒಪ್ಪಿಕೊಂಡಿದೆ. ಅವರು ಹೇಳಿದ್ದು ಸತ್ಯ ಎಂದಿದೆ. ಅವರನ್ನು ನಂಬದೇ ಇರಲು ಕಾರಣವಿಲ್ಲ ಎಂದು ಹೇಳಿದೆ ಎಂದು ಪ್ರಿಯಾ ಪರವಾಗಿ ವಾದಿಸಿದ್ದ ಹಿರಿಯ ವಕೀಲೆ ರೆಬೆಕಾ ಎಂ. ಜಾನ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೆಂಪುಕೋಟೆ ಹಿಂಸಾಚಾರ ಪ್ರಕರಣ: ಖಡ್ಗ ಝಳಪಿಸುತ್ತಿದ್ದ ವ್ಯಕ್ತಿಯ ಬಂಧನ

ನವದೆಹಲಿ(ಪಿಟಿಐ): ಗಣರಾಜ್ಯೋತ್ಸವದ ದಿನದಂದು ದೆಹಲಿಯ ಕೆಂಪುಕೋಟೆ ಬಳಿ ನಡೆದ ಹಿಂಸಾಚಾರದ ವೇಳೆ ಖಡ್ಗ ಹಿಡಿದು ಝಳಪಿಸುತ್ತಾ ಪ್ರತಿಭಟನಕಾರರನ್ನು ಪ್ರಚೋದಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ.

ಬಂಧಿತನನ್ನು ಮಣಿಂದರ್ ಸಿಂಗ್ (30) ಎಂದು ಗುರುತಿಸಲಾಗಿದೆ. ಕಾರ್ ಎಸಿ ಮೆಕಾನಿಕ್ ಆಗಿ ಕೆಲಸ ಮಾಡುತ್ತಿರುವ ಈತನನ್ನು ಮಂಗಳವಾರ ರಾತ್ರಿ 7.45ರ ಸುಮಾರಿಗೆ ವಾಯವ್ಯ ದೆಹಲಿಯ ಪಿತಾಂಪುರದ ಸಿ ಡಿ ಬ್ಲಾಕ್ ಬಸ್ ನಿಲ್ದಾಣದ ಬಳಿ ಬಂಧಿಸಲಾಗಿದೆ.

'ನಮಗೆ ಲಭ್ಯವಾಗಿರುವ ವಿಡಿಯೊದಲ್ಲಿ ಬಂಧಿತ ಸಿಂಗ್, ಕೆಂಪುಕೋಟೆಯ ಬಳಿ ಎರಡು ಕತ್ತಿಗಳನ್ನು ಹಿಡಿದು ಝಳಪಿಸುತ್ತಾ ಪ್ರತಿಭಟನಕಾರರು, ಮಾರಕಾಸ್ತ್ರಗಳಿಂದ ಪೊಲೀಸರ ಮೇಲೆ ಹಲ್ಲೆ ನಡೆಸುತ್ತಿದ್ದವರನ್ನು ಉತ್ತೇಜಿಸುತ್ತಿರುವ ದೃಶ್ಯಗಳಿವೆ' ಎಂದು ಪೊಲೀಸ್ ಉಪ ಆಯುಕ್ತ (ವಿಶೇಷ ಕೋಶ) ಪ್ರಮೋದ್ ಸಿಂಗ್ ಕುಶ್ವಾ ತಿಳಿಸಿದ್ದಾರೆ.

ದೆಹಲಿಯ ಸ್ವರೂಪ್ ನಗರದಲ್ಲಿರುವ ತನ್ನ ಮನೆಯ ಸಮೀಪದ ಖಾಲಿ ಜಾಗದಲ್ಲಿ ಕತ್ತಿ ವರಸೆ ಕಲಿಸುವ ಶಾಲೆ ನಡೆಸುತ್ತಿರುವ ಸಿಂಗ್, ಫೇಸ್‌ಬುಕ್‌ನ ವಿವಿಧ ಗುಂಪುಗಳಲ್ಲಿದ್ದ ಪೋಸ್ಟ್‌ಗಳಿಂದ ಪ್ರಚೋದನೆಗೊಂಡು, ಅದನ್ನು ಬೇರೆಯವರಿಗೂ ಹಂಚಿದ್ದಾನೆ. ಆಗಾಗ್ಗೆ ರೈತರು ಪ್ರತಿಭಟನೆ ನಡೆಸುತ್ತಿದ್ದ ಸಿಂಘು ಗಡಿಗೆ ಭೇಟಿ ನೀಡುತ್ತಿದ್ದ. ಅಲ್ಲಿ ರೈತರ ನಾಯಕರು ಮಾಡುತ್ತಿದ್ದ ಭಾಷಣಗಳಿಂದ ಪ್ರೇರೇಪಿತಗೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದರು.

ಸಾಂದರ್ಭಿಕ ಚಿತ್ರ

ರವೀಂದ್ರನಾಥ ಟ್ಯಾಗೋರ್ ಹ್ಯೂಸ್ಟನ್‌ನ ಭೇಟಿಯ ಶತಮಾನೋತ್ಸವ ಆಚರಣೆ

ಹ್ಯೂಸ್ಟನ್ (ಪಿಟಿಐ): ನೊಬೆಲ್ ಪ್ರಶಸ್ತಿ ಪುರಸ್ಕೃತ ರವೀಂದ್ರನಾಥ ಟ್ಯಾಗೋರ್ ಅವರು ಹ್ಯೂಸ್ಟನ್‌ಗೆ ಭೇಟಿ ನೀಡಿ 100 ವರ್ಷಗಳು ಸಂದಿರುವ ಸಂದರ್ಭದಲ್ಲಿ, ತೀವ್ರ ಚಳಿಯ ನಡುವೆಯೇ ಇಲ್ಲಿ ಶತಮಾನೋತ್ಸವನ್ನು ಆಚರಿಸಲಾಯಿತು.

1921ರ ಫೆಬ್ರುವರಿಯಲ್ಲಿ ರವೀಂದ್ರನಾಥ ಟ್ಯಾಗೋರ್ ಅವರು ಹ್ಯೂಸ್ಟನ್‌ಗೆ ಭೇಟಿ ನೀಡಿದ್ದರು. ಟ್ಯಾಗೋರ್ ಸೊಸೈಟಿ ಆಫ್ ಹ್ಯೂಸ್ಟನ್ (ಟಿಎಸ್‌ಎಚ್) ಎರಡು ದಿನ ಕಾರ್ಯಕ್ರಮವನ್ನು ಹ್ಯೂಸ್ಟನ್‌ನ ರೇ ಮಿಲ್ಲರ್ ಪಾರ್ಕ್‌ನಲ್ಲಿ ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಹ್ಯೂಸ್ಟನ್‌ನ ಕಾನ್ಸುಲ್ ಜನರಲ್ ಅಸೀಮ್ ಮಹಾಜನ್ ಸೇರಿದಂತೆ ಟಿಎಸ್‌ಎಚ್‌ನ ಇತರೆ ಸದಸ್ಯರು ಉಪಸ್ಥಿತರಿದ್ದರು. 2013ರಲ್ಲಿ ರೇ ಮಿಲ್ಲರ್ ಪಾರ್ಕ್‌ನಲ್ಲಿ ಟ್ಯಾಗೋರ್ ಅವರ ಕಂಚಿನ ಪ್ರತಿಮೆಯನ್ನು ಸ್ಥಾಪಿಸಲಾಗಿತ್ತು.

25ರಂದು ಗೋವು ವಿಜ್ಞಾನ ಆನ್‌ಲೈನ್ ಪರೀಕ್ಷೆ: ಯುಜಿಸಿ

ನವದೆಹಲಿ (ಪಿಟಿಐ): 'ಗೋವು ವಿಜ್ಞಾನ' ಕುರಿತು ರಾಷ್ಟ್ರಮಟ್ಟದ ಆನ್‌ಲೈನ್ ಪರೀಕ್ಷೆಯನ್ನು ಇದೇ 25 ರಂದು ಆಯೋಜಿಸಲಾಗಿದೆ.

ಪರೀಕ್ಷೆಯಲ್ಲಿ ಸ್ವಯಂಪ್ರೇರಿತವಾಗಿ ಪಾಲ್ಗೊಳ್ಳುವ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಉತ್ತೇಜಿಸಬೇಕು ಎಂದು ವಿ.ವಿಗಳ ಕುಲಪತಿಗಳಿಗೆ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಪತ್ರ ಬರೆದಿದೆ. ರಾಷ್ಟ್ರೀಯ ಕಾಮಧೇನು ಆಯೋಗವು (ಆರ್‌ಕೆಎ) 'ಕಾಮಧೇನು ಗೋವು ವಿಜ್ಞಾನ ಪ್ರಚಾರ-ಪ್ರಸಾರ ಪರೀಕ್ಷೆ'ಯನ್ನು ಕನ್ನಡ ಸೇರಿದಂತೆ 11 ಪ್ರಾದೇಶಿಕ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಆಯೋಜಿಸಿದೆ.

ಪ್ರಾಥಮಿಕ, ಮಾಧ್ಯಮಿಕ, ಹಿರಿಯ ಮಾಧ್ಯಮಿಕ ಮತ್ತು ಕಾಲೇಜುಗಳ ವಿದ್ಯಾರ್ಥಿಗಳು ಸೇರಿದಂತೆ ಸಾಮಾನ್ಯ ಜನರು ಸಹ ಪರೀಕ್ಷೆ ಬರೆಯಬಹುದು. ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳಲು ಯಾವುದೇ ಶುಲ್ಕವಿಲ್ಲ.

'ಹಸುಗಳ ಸಂರಕ್ಷಣೆ, ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಸರ್ಕಾರ ಆಯೋಗ ರಚಿಸಿದೆ. ಭಾರತೀಯರಲ್ಲಿ ಹಸುಗಳ ಬಗ್ಗೆ ಆಸಕ್ತಿ ಮೂಡಿಸುವುದು, ಅವುಗಳು ಹಾಲು ನೀಡುವುದನ್ನು ನಿಲ್ಲಿಸಿದ ನಂತರವೂ ವ್ಯಾಪಾರ ಅವಕಾಶಗಳ ಬಗ್ಗೆ ಅವರಿಗೆ ಅರಿವು ಮೂಡಿಸುವುದು ಆಯೋಗದ ಉದ್ದೇಶವಾಗಿದೆ. ಆರ್ಥಿಕ, ವೈಜ್ಞಾನಿಕ, ಪರಿಸರ, ಆರೋಗ್ಯ, ಕೃಷಿ ಮತ್ತು ಹಸುವಿನ ಆಧ್ಯಾತ್ಮಿಕ ಪ್ರಸ್ತುತತೆ ಕುರಿತು ಮಾಹಿತಿ ಒದಗಿಸುವ ನಿಟ್ಟಿನಲ್ಲಿ ಪರೀಕ್ಷೆ ಆಯೋಜಿಸಲಾಗಿದೆ' ಎಂದು ಯುಜಿಸಿ ಕಾರ್ಯದರ್ಶಿ ರಜನೀಶ್ ಜೈನ್ ಅವರು ಕುಲಪತಿಗಳಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಜಮ್ಮು ಕಾಶ್ಮೀರದಲ್ಲಿ ವಿಶೇಷ ಸ್ಥಾನಮಾನ ರದ್ದುಗೊಂಡ ನಂತರದ ಪರಿಸ್ಥಿತಿಯ ಅವಲೋಕನ

ಶ್ರೀನಗರಕ್ಕೆ 24 ದೇಶಗಳ ರಾಜತಾಂತ್ರಿಕ ಅಧಿಕಾರಿಗಳ ಭೇಟಿ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿನ ವಿಶೇಷ ಸ್ಥಾನಮಾನವನ್ನು 2019ರಲ್ಲಿ ರದ್ದುಪಡಿಸಿದ ನಂತರ ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಲು ಫ್ರಾನ್ಸ್, ಯುರೋಪ್ ಒಕ್ಕೂಟ ಹಾಗೂ ಮಲೇಷ್ಯಾ ಸೇರಿದಂತೆ 24 ದೇಶಗಳ ರಾಜತಾಂತ್ರಿಕ ಅಧಿಕಾರಿಗಳು ಬುಧವಾರ ಕಣಿವೆ ರಾಜ್ಯಕ್ಕೆ ಬಂದಿಳಿದಿದ್ದಾರೆ.

ಎರಡು ದಿನಗಳ ಭೇಟಿಗಾಗಿ ಆಗಮಿಸಿರುವ ನಿಯೋಗದಲ್ಲಿ ಬ್ರೆಜಿಲ್, ಇಟಲಿ, ಫಿನ್ಲೆಂಡ್, ಬಾಂಗ್ಲಾದೇಶ, ಕ್ಯೂಬಾ, ಚಿಲಿ, ಪೋರ್ಚುಗಲ್, ನೆದರ್ಲೆಂಡ್ಸ್, ಬೆಲ್ಜಿಯಂ, ಸ್ಪೇನ್, ಸ್ವೀಡನ್, ಸೆನೆಗಲ್, ತಜಿಕಿಸ್ತಾನ್, ಕಿರ್ಗಿಸ್ತಾನ್, ಐರ್ಲೆಂಡ್, ಘಾನಾ, ಎಸ್ಟೋನಿಯಾ, ಬೊಲಿವಿಯಾ, ಮಾಲವಿ, ಎರಿಟ್ರಿಯಾ, ಐವರಿ ಕೋಸ್ಟ್ ರಾಷ್ಟ್ರಗಳ ರಾಜತಾಂತ್ರಿಕರು ಇದ್ದಾರೆ.

ನಿಯೋಗವನ್ನು ಬರಮಾಡಿಕೊಂಡ ಅಧಿಕಾರಿಗಳು, ಕಾಶ್ಮೀರದ ಕೇಂದ್ರಭಾಗ ಬುಡ್ಗಾಂನಲ್ಲಿರುವ ಸರ್ಕಾರಿ ಕಾಲೇಜಿಗೆ ಕರೆದೊಯ್ದರು. ಅಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಬಲವರ್ಧನೆಯ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಯಿತು.

ನಿಯೋಗದ ಸದಸ್ಯರು ಪಂಚರು ಮತ್ತು ಸರಪಂಚರ ಜತೆಗೆ ಕಣಿವೆಯಲ್ಲಿ ಮುಕ್ತವಾಗಿ ಪ್ರಯಾಣಿಸುತ್ತಾ, ಅವರ ಕುಂದುಕೊರತೆಗಳನ್ನು ಆಲಿಸಿದರು.

ಗುರುವಾರ ಜಮ್ಮುವಿಗೆ ಭೇಟಿ ನೀಡಿರಲಿರುವ ನಿಯೋಗದ ಸದಸ್ಯರು, ಅಲ್ಲಿ ಕೇಂದ್ರಾಡಳಿತ ಅಧಿಕಾರಿಗಳನ್ನು ಭೇಟಿ ಮಾಡುವ ಸಾಧ್ಯತೆ ಇದೆ. ಜಿಲ್ಲಾ ಅಭಿವೃದ್ಧಿ ಮಂಡಳಿ ಸದಸ್ಯರು ಮತ್ತು ನಾಗರಿಕ ಸಮಾಜದ ಪ್ರತಿನಿಧಿಗಳನ್ನೂ ಭೇಟಿ ಮಾಡಲು ನಿರ್ಧರಿಸಿದ್ದಾರೆ.

ಅಲ್ಲದೇ, ದಾಲ್ ಸರೋವರದ ದಂಡೆಯಲ್ಲಿರುವ ಪವಿತ್ರ ಹಜರತ್ಬಲ್ ಮಂದಿರಕ್ಕೂ ಭೇಟಿ ನೀಡಲಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ಭೇಟಿ ಹಿನ್ನೆಲೆಯಲ್ಲಿ ಶ್ರೀನಗರ ಸೇರಿದಂತೆ ಕಣಿವೆಯ ಹಲವೆಡೆ ಬಿಗಿ ಭದ್ರತೆಯ ವ್ಯವಸ್ಥೆ ಮಾಡಲಾಗಿತ್ತು. ಶ್ರೀನಗರದ ಕೆಲವು ಭಾಗಗಳಲ್ಲಿ ಅಂಗಡಿಮುಂಗಟ್ಟು ಮುಚ್ಚಲಾಗಿತ್ತು. ಲಾಲ್‌ಚೌಕ ಮತ್ತು ಸುತ್ತಮುತ್ತಲ ಪ್ರದೇಶದಲ್ಲೂ ಅಂಗಡಿಮುಂಗಟ್ಟು ಬಂದ್ ಮಾಡಲಾಗಿತ್ತು.

ನಿಯೋಗ ಸಾಗುವ ಮಾರ್ಗದುದ್ದಕ್ಕೂ ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ಹೆಚ್ಚುವರಿ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶ್ರೀನಗರದಲ್ಲಿ ಬುಧವಾರ ವಿದೇಶಿ ರಾಯಭಾರಿಗಳು ಶ್ರೀನಗರದ ಮೇಯರ್, ಜಿಲ್ಲಾ ಅಭಿವೃದ್ಧಿ ಮಂಡಳಿ ಅಧ್ಯಕ್ಷರು, ಸ್ಥಳೀಯ ಸಂಸ್ಥೆಗಳ ಪ್ರಮುಖರು ಹಾಗೂ ವಿವಿಧ ಪಕ್ಷಗಳ ಮುಖಂಡರೊಂದಿಗೆ ಸಂವಾದ ನಡೆಸಿದರು. (ಪಿಟಿಐ ಚಿತ್ರ)

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಶ್ರದ್ಧಾಂಜಲಿ

ಜನನ 23.08.1960 ನಿಧನ 15.02.2021

ಶ್ರೀಮತಿ ಎನ್ ಸುಜಾತಾ

ರವರ ಅಂತ್ಯಕ್ರಿಯೆ 18.02.2021 ಬೆಳಗ್ಗೆ 11.00 ರಂದು ಕಾಡುಗೊಂಡನಹಳ್ಳಿ ರುದ್ರ ಭೂಮಿಯಲ್ಲಿ ನಡಿಯಲ್ಲದೆ.

ಅಂತಿಮ ದರ್ಶನಕ್ಕೆ ಸ್ವಗೃಹ (ವೆಂಕಟೇಶಪುರಂ)ದಲ್ಲಿ ಏರ್ಪಡಿಸಲಾಗಿದೆ.

ಪ್ರಜಾವಾಣಿ

FOR ADVERTISEMENT QUERIES

- OBITUARY
- REMEMBRANCES

Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಸಿಂಘು ಗಡಿಯಲ್ಲಿ ಠಾಣಾಧಿಕಾರಿ ಮೇಲೆ ಹಲ್ಲೆ; ವ್ಯಕ್ತಿ ಬಂಧನ

ನವದೆಹಲಿ: ಕೃಷಿ ಕಾಯ್ದೆಗಳ ವಿರುದ್ಧ ರೈತರು ಪ್ರತಿಭಟನೆ ನಡೆಸುತ್ತಿರುವ ಸಿಂಘು ಗಡಿಯಲ್ಲಿ ದೆಹಲಿಯ ಪೊಲೀಸ್ ಠಾಣೆಯೊಂದರ ಠಾಣಾಧಿಕಾರಿ (ಎಸ್‌ಎಚ್‌ಒ) ಮೇಲೆ ಹಲ್ಲೆ ನಡೆಸಿ ಕಾರಿನಲ್ಲಿ ಪರಾರಿಯಾಗಿದ್ದ ವ್ಯಕ್ತಿಯೊಬ್ಬನ್ನು ಪೊಲೀಸರು ಬಂಧಿಸಿದ್ದಾರೆ.

ಮಂಗಳವಾರ ರಾತ್ರಿ 8 ಗಂಟೆ ಸುಮಾರಿಗೆ ಬಂಧಿಸಲಾಗಿದೆ. ಹಲ್ಲೆಗೊಳಗಾದ ಪೊಲೀಸ್ ಅಧಿಕಾರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಈ ಆರೋಪಿ ಪ್ರತಿಭಟನಾ ಸ್ಥಳದಲ್ಲಿದ್ದ ಅಧಿಕಾರಿಯೊಬ್ಬರಿಂದ ಕಾರಿನ ಕೀಲಿಯನ್ನು ಕಿತ್ತುಕೊಂಡು ಕಾರಿನಲ್ಲಿ ಪರಾರಿಯಾಗುತ್ತಿದ್ದ. ಈತನನ್ನು ಪೊಲೀಸರು ಅಟ್ಟಿಸಿಕೊಂಡು ಹೋದರು. ಆರೋಪಿ ಕಾರು ಬಿಟ್ಟು, ದ್ವಿಚಕ್ರ ವಾಹನ ಏರಿ ಪರಾರಿಯಾದ. ಈ ಆರೋಪಿಯನ್ನು ಹಿಂಬಾಲಿಸಿದ ಪೊಲೀಸರು ಮುಕಾರ್ಬ್ ಚೌಕದ ಬಳಿ ಬಂಧಿಸಿದರು.


ಸಿಂಘು ಗಡಿಯ ಪ್ರತಿಭಟನಾ ಸ್ಥಳ

ಈ ಸಮಯದಲ್ಲಿ ಆರೋಪಿ ಎಸ್‌ಎಚ್‌ಒ ಮೇಲೆ ಕತ್ತಿಯಿಂದ ಹಲ್ಲೆ ಮಾಡಿದ. ಘಟನೆಯಲ್ಲಿ ಎಸ್‌ಎಚ್‌ಒನ ಬೆರಳು ಮತ್ತು ಕುತ್ತಿಗೆಗೆ ತೀವ್ರವಾಗಿ ಗಾಯವಾಯಿತು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಲಾಯಿತು ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ನಗರ ಸ್ಥಳೀಯ ಸಂಸ್ಥೆ ಚುನಾವಣೆ ● 53 ವರ್ಷಗಳ ಬಳಿಕ ಭಟಿಂಡಾದಲ್ಲಿ ಜಯ

ಪಂಜಾಬ್: ಕಾಂಗ್ರೆಸ್‌ಗೆ ಭಾರಿ ಗೆಲುವು

ಚಂಡೀಗಡ (ಪಿಟಿಐ): ಪಂಜಾಬ್‌ನ ನಗರ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಭಾರಿ ಗೆಲುವು ಸಾಧಿಸಿದೆ. ಭಟಿಂಡಾ, ಹೋಷಿಯಾರ್‌ಪುರ, ಕಪುರ್ತಲ, ಅಬೋಹರ್, ಬಟಾಲ ಮತ್ತು ಪಠಾನ್‌ಕೋಟ್ ನಗರಪಾಲಿಕೆಗಳಲ್ಲಿ ಕಾಂಗ್ರೆಸ್‌ಗೆ ಬಹುಮತ ಸಿಕ್ಕಿದೆ. ಶಿರೋಮಣಿ ಅಕಾಲಿ ದಳದ (ಎಸ್‌ಎಡಿ) ನಾಯಕಿ ಹರ್‌ಸಿಮ್ರತ್ ಕೌರ್ ಅವರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಭಟಿಂಡಾ ನಗರ ಪಾಲಿಕೆಯು 53 ವರ್ಷಗಳ ಬಳಿಕ ಕಾಂಗ್ರೆಸ್‌ಗೆ ಸಿಕ್ಕಿದೆ.

ಮೊಗಾ ನಗರಪಾಲಿಕೆಯಲ್ಲಿ ಕಾಂಗ್ರೆಸ್ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದು, ಅಧಿಕಾರಕ್ಕೆ ಏರಲು ಆರು ಸ್ಥಾನಗಳ ಕೊರತೆ ಇದೆ. ಇಲ್ಲಿ, ಪಕ್ಷೇತರ ಸದಸ್ಯರ ಬೆಂಬಲ ನಿರ್ಣಾಯಕ ಆಗಲಿದೆ. ಮೊಹಾಲಿ ನಗರಪಾಲಿಕೆ ಮತ್ತು 109 ನಗರಸಭೆಗಳ ಚುನಾವಣೆಯ ಫಲಿತಾಂಶ ಗುರುವಾರ ಪ್ರಕಟವಾಗಲಿದೆ.

> **ಅಭಿವೃದ್ಧಿಯ ಕಾರ್ಯಸೂಚಿ ಇರಿಸಿಕೊಂಡು ಚುನಾವಣೆ ಎದುರಿಸಿದ್ದೆವು. ಇನ್ನಷ್ಟು ಕಠಿಣವಾಗಿ ಕೆಲಸ ಮಾಡಲು ಈ ಫಲಿತಾಂಶವು ಕಾರ್ಯಕರ್ತರಿಗೆ ಪ್ರೇರಣೆ ನೀಡಲಿದೆ**
>
> **ಸುನಿಲ್ ಜಾಖಡ್,** ಕಾಂಗ್ರೆಸ್‌ನ ಪಂಜಾಬ್ ಘಟಕದ ಅಧ್ಯಕ್ಷ

ಈ ಫಲಿತಾಂಶವು ಕಾಂಗ್ರೆಸ್ ಪಕ್ಷದಲ್ಲಿ ಭಾರಿ ಹುರುಪು ತುಂಬಬಹುದು. ಮುಖ್ಯವಾಗಿ ಪಂಜಾಬ್ ಮತ್ತು ಹರಿಯಾಣದ ರೈತರು ದೆಹಲಿಯಲ್ಲಿ ನಡೆಸುತ್ತಿರುವ ಪ್ರತಿಭಟನೆಗೆ ಕಾಂಗ್ರೆಸ್ ಬೆಂಬಲ ನೀಡುತ್ತಿದೆ. ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಗೆಲುವಿಗೆ ಇದು ಕಾರಣ ಎಂದು ಹೇಳಲಾಗುತ್ತಿದೆ. ಪಂಜಾಬ್ ವಿಧಾನಸಭೆಗೆ ಮುಂದಿನ ವರ್ಷ ಚುನಾವಣೆ ನಡೆಯಲಿದೆ. ಈಗಿನ ಫಲಿತಾಂಶ ವಿಧಾನಸಭೆ ಚುನಾವಣೆಯಲ್ಲಿಯೂ ಪುನರಾವರ್ತನೆ ಆಗಬಹುದು ಎಂಬ ವಿಶ್ವಾಸ ಕಾಂಗ್ರೆಸ್‌ನಲ್ಲಿ ಇದೆ.

ಮೊಗಾದಲ್ಲಿ 50 ವಾರ್ಡ್‌ಗಳಿದ್ದು 20ರಲ್ಲಿ ಕಾಂಗ್ರೆಸ್ ಗೆದ್ದಿದೆ. ಎಸ್‌ಎಡಿ 15, ಆಮ್ ಆದ್ಮಿ ಪಕ್ಷ 4, ಬಿಜೆಪಿ ಒಂದು ಮತ್ತು ಪಕ್ಷೇತರರು 10 ವಾರ್ಡ್‌ಗಳಲ್ಲಿ ಗೆಲುವು ಪಡೆದಿದ್ದಾರೆ.

ಪಟಿಯಾಲ ನಗರಪಾಲಿಕೆ ಚುನಾವಣೆಯಲ್ಲಿ ಗೆದ್ದ ಕಾಂಗ್ರೆಸ್ ಅಭ್ಯರ್ಥಿ ಬಲ್ಜಿಂದರ್ ಕೌರ್ ರಿಂಕಿ ವಿಜಯೋತ್ಸವ ಆಚರಿಸಿದರು.

ಚುನಾವಣಾ ಪ್ರಕ್ರಿಯೆ ಸಂದರ್ಭದಲ್ಲಿ ಪಕ್ಷಗಳ ಕಾರ್ಯಕರ್ತರ ನಡುವೆ ಕೆಲವೆಡೆ ಸಂಘರ್ಷ ನಡೆದಿತ್ತು. ತಮ್ಮ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ತಡೆ ಒಡ್ಡಲಾಗಿದೆ ಎಂದು ವಿರೋಧ ಪಕ್ಷಗಳ ನಾಯಕರು ಆರೋಪಿಸಿದ್ದರು. ಹಾಗಾಗಿಯೇ ಮೊಹಾಲಿ ನಗರಪಾಲಿಕೆಯ ಎರಡು ವಾರ್ಡ್‌ಗಳಲ್ಲಿ ಮರು ಮತದಾನಕ್ಕೆ ರಾಜ್ಯ ಚುನಾವಣಾ ಆಯೋಗ ಆದೇಶಿಸಿತ್ತು. ಈ ಕಾರಣಕ್ಕಾಗಿಯೇ ಅಲ್ಲಿ ಗುರುವಾರ ಮತ ಎಣಿಕೆ ನಡೆಯಲಿದೆ.

ಬಿಜೆಪಿ ನೇತೃತ್ವದ ಎನ್‌ಡಿಎಯ ಭಾಗವಾಗಿದ್ದ ಎಸ್‌ಎಡಿ, ಕೃಷಿ ಕಾಯ್ದೆಗಳನ್ನು ವಿರೋಧಿಸಿ ಎನ್‌ಡಿಎಯಿಂದ ಇತ್ತೀಚೆಗೆ ಹೊರಗೆ ಬಂದಿದೆ. ಹಾಗಾಗಿ, ಈ ಎರಡು ಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು. ಇದೇ 14ರಂದು ಮತದಾನ ನಡೆದಿತ್ತು. ಶೇ 70ಕ್ಕೂ ಹೆಚ್ಚು ಜನರು ತಮ್ಮ ಹಕ್ಕು ಚಲಾಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಾರಸುದಾರರಿಲ್ಲದ ಬ್ಯಾಗ್ ಪತ್ತೆ

ಕಾನ್ಪುರ (ಪಿಟಿಐ): ಉತ್ತರ ಪ್ರದೇಶದಲ್ಲಿ ಸ್ವತಂತ್ರ ಸಂಗ್ರಾಮ್ ಸೇನಾನಿ ವಿಶೇಷ ರೈಲಿನಲ್ಲಿ ₹1.4 ಕೋಟಿ ನಗದು ಇದ್ದ ವಾರಸುದಾರರಿಲ್ಲದ ಬ್ಯಾಗ್ ಪತ್ತೆಯಾಗಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

'ಮಂಗಳವಾರ ದೆಹಲಿಯಿಂದ ಬಿಹಾರದ ಜಯನಗರಕ್ಕೆ ಬರುತ್ತಿದ್ದ ರೈಲಿನಲ್ಲಿ ಈ ಬ್ಯಾಗ್ ಪತ್ತೆಯಾಗಿದೆ' ಎಂದು ರೈಲ್ವೆ ಇಲಾಖೆಯ ಉಪ ಮುಖ್ಯ ಸಂಚಾರ ವ್ಯವಸ್ಥಾಪಕ ಹಿಮಾಂಶು ಶೇಖರ್ ಮಾಹಿತಿ ನೀಡಿದ್ದಾರೆ.

'ವಾರಸುದಾರರಿಲ್ಲದ ಕೆಂಪು ಬಣ್ಣದ ಬ್ಯಾಗ್ ಅನ್ನು ರೈಲಿನ ಆಹಾರ ಪೂರೈಕೆ ಸಿಬ್ಬಂದಿ ಗುರುತಿಸಿದ್ದಾರೆ. ಈ ಕುರಿತ ಮಾಹಿತಿಯನ್ನು ಅವರು ರೈಲ್ವೆ ಇಲಾಖೆಯ ಅಧಿಕಾರಿಗಳಿಗೆ ನೀಡಿದ್ದಾರೆ. ಬಳಿಕ ಈ ಬ್ಯಾಗ್ ಅನ್ನು ರೈಲ್ವೆ ಸಂರಕ್ಷಣಾ ಪಡೆ (ಆರ್‌ಪಿಎಫ್) ಮತ್ತು ಸರ್ಕಾರಿ ರೈಲ್ವೆ ಪೊಲೀಸರ (ಜಿಆರ್‌ಪಿ) ವಶಕ್ಕೆ ನೀಡಲಾಯಿತು. ಅವರು ರೈಲ್ವೆ ವಾಣಿಜ್ಯ ವಿಭಾಗದ ಅಧಿಕಾರಿಗಳ ಸಮ್ಮುಖದಲ್ಲಿ ಬ್ಯಾಗನ್ನು ತೆರೆದು ಪರಿಶೀಲಿಸಿದರು. ಬ್ಯಾಗಿನ ತುಂಬ ಕರೆನ್ಸಿ ನೋಟುಗಳೇ ಆವರಿಸಿದ್ದವು' ಎಂದು ಅವರು ಹೇಳಿದರು.

ಪ್ರತಿವಾದಿ ಸೇರ್ಪಡೆಗೆ 'ಸುಪ್ರೀಂ' ಅನುಮತಿ

ನವದೆಹಲಿ (ಪಿಟಿಐ): ಮದುವೆಗಾಗಿ ಮತಾಂತರ ತಡೆಯಲು ಕೆಲ ರಾಜ್ಯ ಸರ್ಕಾರಗಳು ತಂದಿರುವ ಕಾನೂನುಗಳನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯಲ್ಲಿ ಹಿಮಾಚಲ ಪ್ರದೇಶ ಮತ್ತು ಮಧ್ಯಪ್ರದೇಶ ರಾಜ್ಯಗಳನ್ನು ಪ್ರತಿವಾದಿಗಳಾಗಿ ಸೇರಿಸುವುದಕ್ಕೆ ಸುಪ್ರೀಂ ಕೋರ್ಟ್, ಎನ್‌ಜಿಒಗೆ ಅನುಮತಿ ನೀಡಿದೆ.

ಈ ಸಂಬಂಧ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಪೀಠವು, ಮುಸ್ಲಿಂ ಸಮುದಾಯದ ಪ್ರಮುಖ ಸಂಘಟನೆ ಜಮೀಯತ್ ಉಲೇಮಾ ಎ ಹಿಂದ್‌ಗೂ ಈ ಅರ್ಜಿಯಲ್ಲಿ ಪ್ರತಿವಾದಿಯಾಗಲು ಅನುಮತಿ ನೀಡಿದೆ.

ಅಂತರ್ ಧರ್ಮದ ವಿವಾಹದಿಂದಾಗುವ ಮತಾಂತರಗಳನ್ನು ತಡೆಯುವ ಉದ್ದೇಶದಿಂದ ಉತ್ತರ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಜಾರಿಗೆ ತರಲಾಗಿರುವ ಕಾನೂನುಗಳನ್ನು ಪರಿಶೀಲಿಸಲು ಸುಪ್ರೀಂಕೋರ್ಟ್ ಜನವರಿ 6 ರಂದು ಒಪ್ಪಿಗೆ ಸೂಚಿಸಿತ್ತು.

ವಕೀಲ ವಿಶಾಲ್ ಠಾಕ್ರೆ ಮತ್ತು ಎನ್‌ಜಿಒ ಸದಸ್ಯರೊಬ್ಬರು ಸೇರಿದಂತೆ ಹಲವರು ಮತಾಂತರ ನಿಷೇಧ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪರಿಶೀಲಿಸುವಂತೆ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಪತ್ರಕರ್ತರ ಬಂಧನ

ಗುವಾಹಟಿ: ರಾಜ್ಯದ ಶಿಕ್ಷಣ ಸಚಿವ ಹಿಮಂತ ಬಿಸ್ವ ಶರ್ಮಾ ಅವರ ಕುಟುಂಬಕ್ಕೆ ಕಳಂಕ ತರಲು ಯತ್ನಿಸಿದ ಆರೋಪದ ಮೇಲೆ ನ್ಯೂಸ್ ಪೋರ್ಟಲ್‌ವೊಂದರ ಪ್ರಧಾನ ಸಂಪಾದಕ ಮತ್ತು ಸುದ್ದಿ ಸಂಪಾದಕರನ್ನು ಬುಧವಾರ ಬಂಧಿಸಲಾಗಿದೆ.

ಈ ಸಂಬಂಧ ಸಚಿವರ ಪತ್ನಿ ದೂರು ದಾಖಲಿಸಿದ್ದಾರೆ. ಪ್ರತಿಬಿಂಬ ಲೈವ್.ಕಾಮ್‌ನ ಸುದ್ದಿ ಸಂಪಾದಕ ತೌಫಿಕುದ್ದೀನ್ ಅಹ್ಮದ್ ಮತ್ತು ಸುದ್ದಿ ಸಂಪಾದಕ ಇಕ್ಬಾಲ್ ಬಂಧಿತರು. ಸುದ್ದಿ ಪೋರ್ಟಲ್‌ನಲ್ಲಿ ಶರ್ಮಾ ಮತ್ತು ಅವರ ಮಗಳನ್ನು ಕೆಟ್ಟದಾಗಿ ಬಿಂಬಿಸಿರುವ ಆರೋಪ ಬಂಧಿತರ ಮೇಲಿದೆ.

ನ್ಯೂಸ್ ಪೋರ್ಟಲ್ ಕಚೇರಿಯ ಮೇಲೆ ದಾಳಿ ನಡೆಸಿರುವ ಪೊಲೀಸರು, ಕಂಪ್ಯೂಟರ್ ಮತ್ತು ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

31 ವರ್ಷಗಳ ನಂತರ ಬಾಗಿಲು ತೆರೆದ ಶೀತಲ್ ನಾಥ್ ದೇವಸ್ಥಾನ

ಶ್ರೀನಗರ: ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ಬಾಗಿಲು ಮುಚ್ಚಿದ್ದ, ಶೀತಲ್ ನಾಥ್ ದೇವಸ್ಥಾನವನ್ನು ವಸಂತ ಪಂಚಮಿಯ ಶುಭ ಸಂದರ್ಭದಲ್ಲಿ ಮತ್ತೆ ತೆರೆಯಲಾಗಿದೆ.

ಇಲ್ಲಿಯ ಕ್ರಲ್‌ಖೂಡ್ ಪ್ರದೇಶದಲ್ಲಿರುವ ದೇವಸ್ಥಾನವನ್ನು ಭಯೋತ್ಪಾದನಾ ಚಟುವಟಿಕೆ ಹಿನ್ನೆಲೆಯಲ್ಲಿ 1990ರಲ್ಲಿ ಮುಚ್ಚಲಾಗಿತ್ತು. ಅಂದಿನಿಂದ ಈ ದೇವಸ್ಥಾನದಲ್ಲಿ ಯಾವುದೇ ಪೂಜೆಗಳು ನಡೆದಿಲ್ಲ. ಸುಮಾರು 31 ವರ್ಷಗಳ ನಂತರ ಮಂಗಳವಾರ ಮೊದಲ ಬಾರಿಗೆ ಮೂವತ್ತು ಕಾಶ್ಮೀರಿ ಪಂಡಿತರು ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು. ಭಕ್ತರಿಗೆ ಪ್ರಸಾದವನ್ನು ನೀಡಲಾಯಿತು.

ದೇವಸ್ಥಾನಕ್ಕೆ ಭೇಟಿ ನೀಡಿದ ಶ್ರೀನಗರ ಮೇಯರ್ ಜುನೈದ್ ಅಜೀಂ, 'ದೇವಸ್ಥಾನದ ಅಭಿವೃದ್ಧಿಯ ಜೊತೆಗೆ ಸುರಕ್ಷತೆಗೆ ಅಗತ್ಯವಾದ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

'ದೇವಸ್ಥಾನದ ಬಾಗಿಲನ್ನು ಪುನಃ ತೆರೆದಿರುವುದು ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಈ ಮೂಲಕ ಕಾಶ್ಮೀರ ಸುರಕ್ಷಿತವಾಗಿದೆ ಎಂಬ ಸಂದೇಶ ರವಾನಿಸಲಾಗಿದೆ' ಎಂದು ಅರ್ಚಕರೊಬ್ಬರು ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business to Business

Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು/ ಎನ್.ಪಿ.ಎ/ ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 96257-68775.

ಭವಿಷ್ಯ

Astrology

★॥(ಉಚಿತ ಭವಿಷ್ಯ)॥★ ಶ್ರೀಬನಶಂಕರಿದೇವಿ ಜ್ಯೋತಿಷ್ಯಾಲಯ ರಾಘವೇಂದ್ರಭಟ್ ವ್ಯಾಪಾರ, ಹಣಕಾಸು,ಪ್ರೇಮ ವಿಚಾರ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮೂಲಕ ಕ್ಷಣಮಾತ್ರದಲ್ಲಿ ಪರಿಹಾರ. 8105852273

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ನಿಮ್ಮಾವುದೇ ಘೋರ ನಿಗೂಢ ಗುಪ್ತ ಸಮಸ್ಯೆಗಳಿಗೆ ಕೇವಲ 30ನಿಮಿಷಗಳಲ್ಲಿ ಪರಿಹಾರ ಸೂಚಿಸುತ್ತಾರೆ. ಹಾಗೂ ಉಚಿತವಾಗಿ ಸ್ತ್ರೀಪುರುಷ ವಶೀಕರಣವನ್ನು ಮಾಡಿಕೊಡುತ್ತಾರೆ. ವಿಳಾಸ: ಅಯ್ಯಪ್ಪ ಟೆಂಪಲ್ ಪಕ್ಕದಲ್ಲಿ ಮೆಟ್ರೋ ಸ್ಟೇಶನ್ ಹತ್ತಿರ, ಶ್ರೀರಾಂಪುರ ಬೆಂಗಳೂರು. 9845702800

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕವಶೀಕರಣ, ಸ್ತ್ರೀಯರಿಗೆ7ಗಂಟೆಗಳಲ್ಲಿ ಉಚಿತ ಪರಿಹಾರ. 9845153558

★ಕೊಳ್ಳೆಗಾಲದಿಂದ★ ನೇರಪರಿಹಾರ.ಕೊಳ್ಳೆಗಾಲದ ನಂ.1ಸ್ಪೆಷಲಿಸ್ಟ್ ಪಂಡಿತ್.ಕಾಳಿಪ್ರಸಾದ್ ಗುರೂಜಿ.9740286807 ವಿದ್ಯೆ,ಉದ್ಯೋಗ,ಸ್ತ್ರೀಪುರುಷ ಪ್ರೇಮ,ಸಂತಾನ,ವಿವಾಹ, ಶತ್ರುದೋಷ,ಸಾಲಬಾಧೆ, ವ್ಯಾಪಾರ,ಪ್ರೇತಬಾದೆ, ದೈವದೋಷ,ನಾಗದೋಷ, ದಾಂಪತ್ಯ ಸಮಸ್ಯೆ ಇನ್ನೂ ಅನೇಕ ಕಠಿಣವಾದ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ.#12,ಅಂಬೇಡ್ಕರ್ ಮುಖ್ಯರಸ್ತೆ,ಗೀತಭವನ,ಕೊಳ್ಳೆಗಾಲ

★ಕೆಲಸಆದ ನಂತರಕಾಣಿಕೆ★ ಎಲ್ಲಿಯೂ ಪರಿಹಾರವಾಗದ ಕಠಿಣ, ನಿಗೂಢ ಗುಪ್ತಸಮಸ್ಯೆಗಳಿಗೆ ಶ್ರೀಸಾಯಿರಾಮ್ ದೀಕ್ಷಿತ್‌ರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಹನುಮಂತನಗರ,ಬೆಂಗಳೂರು. 9880382711

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 9ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ಉದ್ಯೋಗಾವಕಾಶ

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ.9739993386, 9916016092

ಸುವರ್ಣಾವಕಾಶ ಪ್ರತಿಷ್ಠಿತ ಕಂಪನಿಗಳಿಗೆ ಹಾಗೂ ಖಾಸಗಿ ಆಫೀಸ್‌ಗಳ ಹುದ್ದೆಗಳಿಗೆ 7th, SSLC, PUC,ITI, Diploma Any Degree Pass/Fail ಆದ ಯುವಕಯುವತಿಯರು ಬೇಕಾಗಿದ್ದಾರೆ.ವಸತಿಯೂಟದೊಂದಿಗೆ ESI/PF +[OT-150/Hour] ಸಂಬಳ 15,600/- ರೂರಿಂದ 34,200/- ರೂವರೆಗೆ.7406000347, 7406000369

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

Wanted

ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

Part-Time Jobs

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9663959295, 9686523337.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

WORK FROM HOME: ಮನೆಯಿಂದಲೇ ಕುಳಿತು ಫಾರಂ ತುಂಬುವ ಕೆಲಸ, ಗಳಿಸಿ ತಿಂಗಳಿಗೆ 15000-22000/- ಕೊರಿಯರ್ ಸೌಲಭ್ಯವಿದೆ. 7338376317, 8749014431

ಕೆಲಸಕ್ಕೆ ಬೇಕಾಗಿದ್ದಾರೆ.ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ MNC ಕಂಪನಿಗಳಿಗೆ,ಆಫೀಸ್ ಗಳಿಗೆ ಕನ್ನಡಬಲ್ಲಂತಹ ಯುವಕರು, ಯುವತಿಯರಿಗೆ ವಸತಿಯೊಂದಿಗೆ +OT 15,800 -86,000 8884054160, 9739544856

ವೈಯಕ್ತಿಕ

Announcements

ಪ್ರಕಟಣೆ

ದಿ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇ)

ಪ್ರಧಾನ ಕಛೇರಿ, ಕೊಲ್ಕತ್ತ, ತಮ್ಮ ಮುಂದಿನ 2021 ರ ಚುನಾವಣೆಗಳನ್ನು ಆನ್‌ಲೈನ್ ಮುಖಾಂತರ ನಡೆಸಲು ನಿರ್ಧರಿಸಲಾಗಿದೆ. ಈ ಆನ್‌ಲೈನ್ ಮುಖಾಂತರ ತಮ್ಮ ಮತ ಚಲಾಯಿಸಲು, ಸಂಸ್ಥೆಯ ಎಲ್ಲ ಸದಸ್ಯರುಗಳು ತಮ್ಮ ಮೊಬೈಲ್ ಸಂಖ್ಯೆ, ಇ–ಮೇಲ್ ಮತ್ತು ವಿಳಾಸದ ಮಾಹಿತಿಗಳನ್ನು ದಾಖಲಾತಿಸುವುದು ಅತ್ಯಾವಶ್ಯಕವಾಗಿರುತ್ತದೆ.

ಈ ಮೂಲಕ ಬದಲಾದ ಅಥವಾ ಒದಗಿಸದ ಸಂಪರ್ಕ ಮಾಹಿತಿಗಳನ್ನು ದಾಖಲಾತಿಸುವುದರಿಂದ ಐಇಐ ಸಂಸ್ಥೆಯು ತಮ್ಮ ಸದಸ್ಯರುಗಳನ್ನು ತಲುಪಲು ಹಾಗೂ ಸಂಸ್ಥೆಯ ಸಂಪೂರ್ಣ ಮಾಹಿತಿಗಳನ್ನು ಪಡೆಯಲು, ಚುನಾವಣೆಯಲ್ಲಿ ಮತ ಚಲಾಯಿಸುವ ಪದ್ಧತಿಯನ್ನು ತಿಳಿದು ಕೊಳ್ಳಲು ಸಹಾಯಕಾರಿಯಾಗಿರುತ್ತದೆ. ಸಂಸ್ಥೆಯ ಸದಸ್ಯರುಗಳಿಗೆ ಈ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ, ತಮ್ಮ ಸಂಪರ್ಕದಲ್ಲಿರುವ ಇತರೆ ಐಇಐ ಸದಸ್ಯರುಗಳಿಗೂ ತಮ್ಮ ಮೊಬೈಲ್, ಇ–ಮೇಲ್ ಹಾಗೂ ವಿಳಾಸಗಳು ಬದಲಾಗಿದ್ದಲ್ಲಿ ಸದಸ್ಯತ್ವದ ಸಂಖ್ಯೆಯೊಂದಿಗೆ ಈ ಕೆಳಕಂಡ ಇಮೇಲ್ ಗೆ ರವಾನಿಸಲು ವಿನಂತಿ.

ಇ–ಮೇಲ್: datamemb@ieindia.org.

ಶ್ರೀ ಜಸ್ಮೇಲ್‌ಸಿಂಗ್, ಅಧ್ಯಕ್ಷರು
ದಿ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇ)
ಕರ್ನಾಟಕ ರಾಜ್ಯ ಕೇಂದ್ರ ಕಛೇರಿ, ಬೆಂಗಳೂರು.

ಸಮಾಜಸೇವೆ

Others

ಪಾರಂಪರಿಕ ವೈದ್ಯ ಪದ್ಧತಿ ಹಾಗೂ ನಾಟಿ ಆಯುರ್ವೇದ ಅದ್ಭುತ ಪ್ರಾವೀಣ್ಯತೆ ಪಡೆದ ವೈದ್ಯರುಗಳ ಕಿರುಪುಸ್ತಕ ಪ್ರಕಟಿಸುತ್ತೇವೆ ನೊಂದಾಯಿಸುವವರು ಸಂಪರ್ಕಿಸಿ: 8892501007/ 9606701007

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 01.03.2021 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯದ ಇಂದೋರ್,ಭೂಪಾಲ್,ಸಾಂಚಿ, ಉಜ್ಜಯನಿ,ಓಂಕಾರೇಶ್ವರ, ಪಚಮಾರಿ,ಬೇಡಿಗಾಟ್, ಅಮರಕಂಠಕ್,ಚಿತ್ರಕೂಟ, ಖಜರಾಹೋ,ಓರ್ಜಾ, ಗ್ವಾಲಿಯರ್,ಮಾಂಡು, ಮಾಹೇಶ್ವರ,ಘುಡಿಯಾಮಾತಾ, 16.04.2021,18.05.2021 23ದಿನಗಳು ಈಶಾನ್ಯ ಭಾರತ ರಾಜ್ಯಗಳ(ಸೇವೆನ್‌ಸಿಸ್ಟರ್ಸ್) ಅಸ್ಸಾಂ,ಅರುಣಾಚಲ, ಮೇಘಾಲಯ,ಮಣಿಪುರ,ತ್ರಿಪುರ, ನಾಗಲ್ಯಾಂಡ್,ಮಿರ್ಝೋರಾಂ, 21.03.2021 10ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ(ವಲ್ಲಭಭಾಯಿ ಪಟೇಲ್ ಪ್ರತಿಮೆ ಸಹಿತ) 10.05.2021 8ದಿನಗಳು ಗ್ಯಾಂಗ್‌ಟಕ್, ಡಾರ್ಜಲಿಂಗ್,ಮಿರಿಕ್,ನಾಂಚಿ, ಲಾಚುಂಗ್. 9743351212/ 9902050065/ 9206979202

ಅಂಡಮಾನ್ ಪ್ರವಾಸ 6ದಿನಗಳು 28-04-2021.ಹ್ಯಾವ್‌ಲಾಕ್ ಐಲ್ಯಾಂಡ್, ನೀಲ್ ಐಲ್ಯಾಂಡ್, ಪ್ಲೋರ್ಟ್‌ಬ್ಲೇರ್, ಭಾರಟ್ಯಾಂಗ್ ಇತರೆ ಊಟ ವಸತಿ ಸೇರಿ ಸುವರ್ಣಯಾತ್ರ. 9008381022, 9019462508

2-4-2021 ಪಾತಾಳ ಭುವನೇಶ್ವರ್,ನೈನಿತಾಲ್ ಕೌಸನಿ 9 ದಿನಗಳು. 14-4-2021 ಗ್ಯಾಂಗ್‌ಟಾಕ್, ಡಾರ್ಜಿಲಿಂಗ್, ಕಲ್ಕತ್ತಾ, ಪೂರಿ 12ದಿನಗಳು. 1-5-2021 ಮುಕ್ತಿನಾಥ್, ಕಟ್ಮಂಡು, ಕಾಶಿ, 11ದಿನಗಳು. 16-5-2021 ಚಾರ್ ಧಾಮ್ ಯಾತ್ರೆ 13ದಿನಗಳು.14-6-2021 ಸಿಂಧೂ ನದಿ ಮಹಾಕುಂಭ ವೈಷ್ಣೋದೇವಿ,ಕಾಶ್ಮೀರ, ಕಾರ್ಗಿಲ್, ಲಡಾಕ್, 12ದಿನಗಳು. ನಂದಿನಿ ಟೂರಿಸ್ಟ್: 9916574089.

ಮಾರ್ಚ್, ಏಪ್ರಿಲ್,ಮೇನಲ್ಲಿ 5 ದಿನಗಳು ಅಂಡಮಾನ್ ಹವಳದ್ವೀಪ. 26/03/2021 15ದಿನಗಳು ರೈಲು/ಬಸ್ಸುನಲ್ಲಿ ದೆಹಲಿ, ಅಗ್ರ,ಅಲಹಾಬದ್, ಕಶಿ,ಗಯ, ಹರಿದ್ವರ್, ಇತ್ಯಾದಿ 15000/=(ಕೆಲವೇ ಸೀಟುಗಳಿವೆ). ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219.

ರಿಯಾಯಿತಿ ದರದಲ್ಲಿ 12 ದಿನಗಳ ಕಾಶಿ,ದೆಹಲಿ ಪ್ರವಾಸ. 17 ದಿನಗಳ ಚಾರ್‌ಧಾಮ್, 6 ದಿನಗಳ ಅಂಡಮಾನ್ ಮತ್ತು 6 ದಿನಗಳ ದಕ್ಷಿಣಭಾರತ ಪ್ರವಾಸ. ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರಿ ಸೇವಸಂಘ, ಗಿರಿನಗರ,ಬೆಂಗಳೂರು. 9916473906, 8861111568

ವಾಹನ

Four Wheelers Selling

Others

TATA Yodha ಟೆಸ್ಟ್ ಡ್ರೈವ್ ಮಾಡಿದ ನಂತರವು ಬೇರೆ ಪಿಕ್‌ಅಪ್ ವಾಹನ ಖರೀದಿಸಿದಲ್ಲಿ ನಮ್ಮಿಂದ ₹5,000/-* ಪಡೆಯಿರಿ

TATA YODHA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

ಕೊಡುಗೆಗಳು ₹45,000/-* ದವರೆಗೆ

ಆಕರ್ಷಕ ಬೈ ಬ್ಯಾಕ್ ಯೋಜನೆ ಲಭ್ಯವಿದೆ!*

₹450000–4 ವರ್ಷದ ನಂತರ*
₹400000–5 ವರ್ಷದ ನಂತರ*
₹350000–6 ವರ್ಷದ ನಂತರ*

ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ

Bangalore/Mysore 95384 14448
Bangalore -72597 84441 96208 63338
Tumkur/Davanagere/ Chitradurga-7829055525
Mangalore/Shivamogga/ Udupi/Hassan/ Chikkamagalur/Karwar 9880142353
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Belgaum/Bidar 8095202223

* ಷರತ್ತುಗಳು ಅನ್ವಯಿಸುತ್ತದೆ.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

DH ಪ್ರಜಾವಾಣಿ Classifieds

EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details

Contact: 9880856233 | 9731810277
9901641752 | 9845114560 | 9886213331

ಹೆಚ್ಚಲಿದೆ ಜಾಹೀರಾತು ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೂಪ್ಎಂ ಇಂಡಿಯಾ ಕಂಪನಿಯು 2021ರ ಕ್ಯಾಲೆಂಡರ್ ವರ್ಷದಲ್ಲಿ ಭಾರತದಲ್ಲಿ ಜಾಹೀರಾತುಗಳ ಮೇಲೆ ಎಷ್ಟು ಹಣ ಖರ್ಚಾಗಬಹುದು ಎಂಬುದರ ಅಂದಾಜನ್ನು ಬಿಡುಗಡೆ ಮಾಡಿದೆ. ಕಂಪನಿಯ ಪ್ರಕಾರ 2021ರಲ್ಲಿ ದೇಶದಲ್ಲಿ ಜಾಹೀರಾತುಗಳ ಮೇಲೆ ₹ 80,123 ಕೋಟಿ ಹೂಡಿಕೆ ಆಗಲಿದೆ.

'ಈ ವರ್ಷ, ಮುಂದಿನ ವರ್ಷ' ಎಂಬ ಶೀರ್ಷಿಕೆ ಹೊತ್ತಿರುವ ಈ ಅಂದಾಜುಗಳ ವರದಿಯು, 2021ರಲ್ಲಿ ಜಾಹೀರಾತುಗಳ ಮೇಲಿನ ಹೂಡಿಕೆಯಲ್ಲಿ ಶೇಕಡ 23.2ರಷ್ಟು ಹೆಚ್ಚಳ ಆಗಲಿದೆ ಎಂದು ಹೇಳಿದೆ. ಜಾಗತಿಕ ಮಟ್ಟದಲ್ಲಿ ಜಾಹೀರಾತುಗಳ ಮೇಲೆ ವೆಚ್ಚ ಮಾಡುವ ದೇಶಗಳ ಸಾಲಿನಲ್ಲಿ ಭಾರತವು 2019ರಲ್ಲಿ 9ನೆಯ ಸ್ಥಾನದಲ್ಲಿತ್ತು. ದೇಶವು 2020ರಲ್ಲಿ 10ನೆಯ ಸ್ಥಾನಕ್ಕೆ ಇಳಿಯಿತು, 2021ರಲ್ಲಿ ಮತ್ತೆ 9ನೆಯ ಸ್ಥಾನವನ್ನು ಗಳಿಸಿಕೊಳ್ಳಲಿದೆ ಎಂದು ವರದಿ ಭವಿಷ್ಯ ನುಡಿದಿದೆ.

ಪ್ರಶಾಂತ್ ಕುಮಾರ್

'2020ರಲ್ಲಿ ಎಲ್ಲ ವಲಯಗಳ ಮೇಲೆಯೂ ಪರಿಣಾಮ ಆದಂತೆ, ಜಾಹೀರಾತು ವೆಚ್ಚಗಳ ಮೇಲೆಯೂ ಪರಿಣಾಮ ಉಂಟಾಯಿತು. ಆದರೆ, 2020ರ ಮೂರನೆಯ ತ್ರೈಮಾಸಿಕದಿಂದ ಚೇತರಿಕೆಯನ್ನು ಕಾಣುತ್ತಿದ್ದೇವೆ. 2021ರ ವಿಚಾರದಲ್ಲಿ ನಾವು ಆಶಾವಾದಿ ಆಗಿದ್ದೇವೆ. ಜಾಗತಿಕ ಮಟ್ಟದಲ್ಲಿ ಜಾಹೀರಾತುಗಳ ಮೇಲಿನ ವೆಚ್ಚವು 2021ರಲ್ಲಿ ಶೇ 10ರಷ್ಟು ಏರಿಕೆ ಕಾಣಲಿದೆ ಎಂಬ ನಿರೀಕ್ಷೆ ಇದೆ. ಇದರಲ್ಲಿ ಶೇ 67ರಷ್ಟನ್ನು ಡಿಜಿಟಲ್ ಮಾಧ್ಯಮವು ಸೆಳೆದುಕೊಳ್ಳುವ ಸಾಧ್ಯತೆ ಇದೆ' ಎಂದು ಗ್ರೂಪ್ಎಂ ಕಂಪನಿಯ ದಕ್ಷಿಣ ಏಷ್ಯಾ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ರಶಾಂತ್ ಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

20 ಆಹಾರ ಸಂಸ್ಕರಣಾ ಯೋಜನೆಗಳಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಎರಡು ಯೋಜನೆಗಳ ಅಡಿಯಲ್ಲಿ ₹ 363.4 ಕೋಟಿ ಮೌಲ್ಯದ 20 ಯೋಜನೆಗಳಿಗೆ ಒಪ್ಪಿಗೆ ನೀಡಿರುವುದಾಗಿ ಕೇಂದ್ರ ಆಹಾರ ಸಂಸ್ಕರಣಾ ಉದ್ಯಮ ಸಚಿವಾಲಯವು ಬುಧವಾರ ತಿಳಿಸಿದೆ. ಕರ್ನಾಟಕದಲ್ಲಿ ಕೂಡ ಈ ಯೋಜನೆ ಅನುಷ್ಠಾನಕ್ಕೆ ಬರಲಿದೆ.

ಕೇಂದ್ರ ಸರ್ಕಾರವು ಈ ಯೋಜನೆಗಳಿಗೆ ₹ 102.91 ಕೋಟಿ ಅನುದಾನ ನೀಡಲಿದೆ. ಇದರಿಂದಾಗಿ 12 ಸಾವಿರ ಉದ್ಯೋಗ ಸೃಷ್ಟಿಯಾಗಲಿದೆ ಹಾಗೂ 42,800 ರೈತರಿಗೆ ಪ್ರಯೋಜನ ಆಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಆಹಾರ ಸಂಸ್ಕರಣಾ ಉದ್ಯಮದ ಸಚಿವ ನರೇಂದ್ರ ಸಿಂಗ್ ತೋಮರ್ ನೇತೃತ್ವದ ಆಂತರಿಕ ಸಚಿವರ ಸಮಿತಿಯ (ಐಎಂಎಸಿ) ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಕರ್ನಾಟಕ, ಹಿಮಾಚಲ ಪ್ರದೇಶ, ಮಣಿಪುರ, ಅರುಣಾಚಲ ಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಮಿಜೋರಾಂ, ಗುಜರಾತ್, ಅಸ್ಸಾಂ, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಈ ಯೋಜನೆಗಳು ಜಾರಿಗೆ ಬರಲಿವೆ.

'ವೇತನ ಸಹಿತ ರಜೆ ಅವಧಿ ಹೆಚ್ಚಳ ಪ್ರಸ್ತಾವ ಕೈಬಿಡಿ'

ಬೆಂಗಳೂರು: 'ಕಾರ್ಮಿಕರಿಗೆ ನೀಡುವ ವೇತನ ಸಹಿತ ರಜೆಗಳನ್ನು 30 ದಿನಗಳಿಂದ 45 ದಿನಗಳಿಗೆ ಹೆಚ್ಚಿಸುವುದರಿಂದ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳಿಗೆ ದೊಡ್ಡ ಹೊಡೆತ ಬೀಳಲಿದೆ. ಆದ್ದರಿಂದ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ತಿದ್ದುಪಡಿ ಮಸೂದೆಯಲ್ಲಿ ಇರುವ ವೇತನ ಸಹಿತ ರಜೆಯ ಹೆಚ್ಚಳದ ಪ್ರಸ್ತಾವವನ್ನು ಕೈಬಿಡಬೇಕು' ಎಂದು ಕರ್ನಾಟಕ ವಾಣಿಜ್ಯೋದ್ಯಮ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಪೆರಿಕಲ್ ಎಂ. ಸುಂದರ್ ಅವರು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಅವರಿಗೆ ಮನವಿ ಮಾಡಿದರು.

ಎಫ್‌ಕೆಸಿಸಿಐ ಬುಧವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಹೆಬ್ಬಾರ್, 'ಮಸೂದೆಯಿಂದ ಸಣ್ಣ ಉದ್ದಿಮೆಗಳಿಗೆ ತೊಂದರೆ ಆಗದಂತೆ, ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಕಾರ್ಮಿಕ ವಿರೋಧಿ ನೀತಿಯನ್ನು ಸರ್ಕಾರ ತಾಳಿದೆ ಎನ್ನುವ ಸಂದೇಶ ಕಾರ್ಮಿಕ ವರ್ಗಕ್ಕೂ ಹೋಗದ ರೀತಿಯಲ್ಲಿ ಎಚ್ಚರಿಕೆಯಿಂದ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

ಎಫ್‌ಕೆಸಿಸಿಐ ಮನವಿ: ಕನಿಷ್ಠ ವೇತನ ವಿಷಯದಲ್ಲಿ ದೊಡ್ಡ ಪ್ರಮಾಣದ ಉದ್ದಿಮೆಗಳ ಜೊತೆಗೆ ಎಂಎಸ್‌ಎಂಇಗಳನ್ನು ಹೋಲಿಸಬಾರದು. ಸರಾಗವಾಗಿ ಉದ್ದಿಮೆ ನಡೆಸಲು ಲೈಸೆನ್ಸ್ ಪಡೆಯಲು ಮತ್ತು ರಿಟರ್ನ್ಸ್ ಸಲ್ಲಿಕೆಗೆ ಆನ್‌ಲೈನ್ ವ್ಯವಸ್ಥೆ ಕಲ್ಪಿಸಬೇಕು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,313
ಇಂದಿನ ಅಂತ್ಯ	15,209
▼	104
ದಿನದ ಗರಿಷ್ಠ	15,170

ವಿನಿಮಯ ದರ

$ ಡಾಲರ್	72.74
£ ಪೌಂಡ್	101.2
€ ಯುರೊ	88.10
¥ ಯೆನ್ (100ಕ್ಕೆ)	69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹473

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1460 (1450)
ಸೋಯಾ (ರಿಫೈನ್ಡ್)	₹1150 (1145)
ಸೂರ್ಯಕಾಂತಿ (ರಿಫೈನ್ಡ್)	₹1430 (1390)
ಪಾಮೋಲಿನ್	₹1130 (1118)

₹ 9,500 ಕೋಟಿಗೆ ಬಿಗ್ ಬಾಸ್ಕೆಟ್ ಖರೀದಿಸಲಿದೆ ಟಾಟಾ

ನವದೆಹಲಿ (ಪಿಟಿಐ): ಆನ್‌ಲೈನ್ ಮೂಲಕ ದಿನಸಿ ವಸ್ತುಗಳನ್ನು ಮಾರಾಟ ಮಾಡುವ 'ಬಿಗ್ ಬಾಸ್ಕೆಟ್'ನ ಶೇಕಡ 68ರಷ್ಟು ಷೇರುಗಳನ್ನು ಟಾಟಾ ಸಮೂಹವು ₹ 9,500 ಕೋಟಿಗೆ ಖರೀದಿಸಲಿದೆ ಎಂದು ಮೂಲಗಳು ತಿಳಿಸಿವೆ.

ಭಾರತದಲ್ಲಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಇ-ಕಾಮರ್ಸ್ ವಲಯದಲ್ಲಿ ತನ್ನ ವಹಿವಾಟನ್ನು ವಿಸ್ತರಿಸಿಕೊಳ್ಳಲು ಟಾಟಾ ಸಮೂಹ ಈ ಖರೀದಿಗೆ ಮುಂದಾಗಿದೆ ಎಂದು ಗೊತ್ತಾಗಿದೆ.

ಬೆಂಗಳೂರು ಮೂಲದ 'ಬಿಗ್ ಬಾಸ್ಕೆಟ್' ನವೋದ್ಯಮದಲ್ಲಿ ಹೆಚ್ಚಿನ ಪಾಲು ಹೊಂದಲು ಪ್ರಯತ್ನಿಸುತ್ತಿರುವ ಟಾಟಾ ಸಮೂಹವು ಒಪ್ಪಂದಕ್ಕೆ ಸಹಿ ಮಾಡಿದೆ ಎಂದು ಈ ಬೆಳವಣಿಗೆಯ ಬಗ್ಗೆ ಮಾಹಿತಿ ಇರುವ ವ್ಯಕ್ತಿಗಳು ತಿಳಿಸಿದ್ದಾರೆ.

ಆಲಿಬಾಬಾ ಸೇರಿದಂತೆ ಹಲವು ಹೂಡಿಕೆದಾರರಿಗೆ ಬಿಗ್‌ಬಾಸ್ಕೆಟ್‌ನಿಂದ ಹೊರಹೋಗಲು ಈ ಒಪ್ಪಂದವು ಅವಕಾಶ ಕಲ್ಪಿಸಲಿದೆ.

ಈ ಬೆಳವಣಿಗೆಯ ಕುರಿತು ಪ್ರತಿಕ್ರಿಯೆ ನೀಡಲು ಟಾಟಾ ಸಮೂಹ, ಬಿಗ್ ಬಾಸ್ಕೆಟ್ ಮತ್ತು ಆಲಿಬಾಬಾ ನಿರಾಕರಿಸಿವೆ.

ಆಮದು ಅವಲಂಬನೆ ತಗ್ಗಿಸಲು ಯತ್ನ: ಮೋದಿ

'ಹಿಂದಿನ ಸರ್ಕಾರಗಳು ತೈಲ ಆಮದು ತಗ್ಗಿಸಬೇಕಿತ್ತು'

ನವದೆಹಲಿ (ಪಿಟಿಐ): ಪೆಟ್ರೋಲ್ ಬೆಲೆಯು ರಾಜಸ್ಥಾನದ ಶ್ರೀಗಂಗಾನಗರದಲ್ಲಿ ಲೀಟರ್‌ಗೆ ₹ 100ರ ಗಡಿ ದಾಟಿರುವ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, 'ಹಿಂದಿನ ಸರ್ಕಾರಗಳು ಇಂಧನ ಆಮದು ಪ್ರಮಾಣ ತಗ್ಗಿಸುವತ್ತ ಗಮನ ನೀಡಿದ್ದಿದ್ದರೆ ಮಧ್ಯಮ ವರ್ಗಕ್ಕೆ ಹೊರೆ ಆಗುತ್ತಿರಲಿಲ್ಲ' ಎಂದು ಹೇಳಿದ್ದಾರೆ.

2019-20ರಲ್ಲಿ ಭಾರತಕ್ಕೆ ಅಗತ್ಯವಿದ್ದ ತೈಲದ ಪೈಕಿ ಶೇಕಡ 85ಕ್ಕಿಂತ ಹೆಚ್ಚಿನ ಪ್ರಮಾಣದ ತೈಲವನ್ನು ಆಮದು ಮಾಡಿಕೊಳ್ಳಲಾಯಿತು, ನೈಸರ್ಗಿಕ ಅನಿಲದ ಅಗತ್ಯತೆಯ ಶೇ 53ರಷ್ಟನ್ನು ಆಮದು ಮಾಡಿಕೊಳ್ಳಲಾಯಿತು ಎಂದು ಪ್ರಧಾನಿ ಹೇಳಿದರು. ಅವರು ತಮ್ಮ ಮಾತಿನಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ನಿರಂತರವಾಗಿ ಹೆಚ್ಚಳ ಆಗುತ್ತಿರುವುದನ್ನು ಉಲ್ಲೇಖಿಸಲಿಲ್ಲ.

'ನಮ್ಮಷ್ಟು ವೈವಿಧ್ಯತೆ ಹೊಂದಿರುವ, ಇಷ್ಟೊಂದು ಪ್ರತಿಭೆ ಹೊಂದಿರುವ ದೇಶವು ಇಂಧನದ ಅಗತ್ಯಗಳಿಗೆ ಈ ಪರಿಯಲ್ಲಿ ಆಮದನ್ನು ಅವಲಂಬಿಸಿರಬೇಕೇ' ಎಂದು ಅವರು ತಮಿಳುನಾಡಿನ ಕಾರ್ಯಕ್ರಮವೊಂದರಲ್ಲಿ ಆನ್‌ಲೈನ್ ಮೂಲಕ ಪಾಲ್ಗೊಂಡು ಪ್ರಶ್ನಿಸಿದರು.

ಮೋದಿ

'ನಾನು ಯಾರನ್ನೂ ಟೀಕಿಸಲು ಬಯಸುವುದಿಲ್ಲ. ಆದರೆ, ಈ ವಿಚಾರವಾಗಿ ನಾವು ಹಿಂದೆಯೇ ಗಮನ ನೀಡಿದ್ದಿದ್ದರೆ ನಮ್ಮ ಮಧ್ಯಮ ವರ್ಗದ ಮೇಲೆ ಹೊರೆ ಬೀಳುತ್ತಿರಲಿಲ್ಲ' ಎಂದು ಹೇಳಿದರು.

ಮುಕ್ತ ಮಾರುಕಟ್ಟೆಯಲ್ಲಿ ಲಭ್ಯವಿರುವ ಪೆಟ್ರೋಲ್ ಬೆಲೆಯಲ್ಲಿ ಶೇಕಡ 60ರಷ್ಟು ಹಾಗೂ ಡೀಸೆಲ್ ಬೆಲೆಯಲ್ಲಿ ಶೇ 54ರಷ್ಟು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಧಿಸಿರುವ ವಿವಿಧ ಸುಂಕ, ತೆರಿಗೆಗಳಿಗೆ ಪಾವತಿ ಆಗುತ್ತವೆ.

ಇಂಧನ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸಲು ಸಾಮೂಹಿಕ ಪ್ರಯತ್ನದ ಅಗತ್ಯವಿದೆ ಎಂದು ಮೋದಿ ಅವರು ಹೇಳಿದರು. 'ಮಧ್ಯಮ ವರ್ಗದವರ ಬಗ್ಗೆ ನಮ್ಮ ಸರ್ಕಾರ ಸಂವೇದನಾಶೀಲವಾಗಿದೆ. ಹಾಗಾಗಿಯೇ ಭಾರತವು ಇಂದು ಎಥೆನಾಲ್ ಬಳಕೆಗೆ ಆದ್ಯತೆ ನೀಡುತ್ತಿದೆ. ಇದು ಗ್ರಾಹಕರಿಗೂ ರೈತರಿಗೂ ಸಹಾಯ ಮಾಡುತ್ತದೆ' ಎಂದರು. ಇಂಧನ ಆಮದನ್ನು ತಗ್ಗಿಸಲು ದೇಶ ಯತ್ನಿಸುತ್ತಿದೆ ಎಂದು ತಿಳಿಸಿದರು.

ಮುಖ್ಯಾಂಶಗಳು

- 2019-20ರಲ್ಲಿ ಶೇ 85ಕ್ಕಿಂತ ಅಧಿಕ ತೈಲ ಆಮದು
- ಇಂಧನ ಕ್ಷೇತ್ರದಲ್ಲಿ ಸ್ವಾವಲಂಬನೆಗೆ ಸಾಮೂಹಿಕ ಪ್ರಯತ್ನ ಅಗತ್ಯ
- ಎಥೆನಾಲ್ ಬಳಕೆಯಿಂದ ಗ್ರಾಹಕ-ರೈತರಿಗೆ ಅನುಕೂಲ

ರಾಜಸ್ಥಾನದಲ್ಲಿ ₹ 100ರ ಗಡಿ ದಾಟಿದ ಪೆಟ್ರೋಲ್

ಒಂದನೇ ಪುಟದಿಂದ...

ಡೀಸೆಲ್ ದೆಹಲಿಯಲ್ಲಿ ₹ 79.95ಕ್ಕೆ, ಮುಂಬೈನಲ್ಲಿ ₹ 86.98ಕ್ಕೆ ಮಾರಾಟವಾಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ₹ 92.54ಕ್ಕೆ, ಡೀಸೆಲ್ ₹ 84.75ಕ್ಕೆ ಮಾರಾಟ ಆಗಿವೆ.

ಮಧ್ಯಪ್ರದೇಶದ ಅನುಪ್ಪುರ್‌ನಲ್ಲಿ ಪೆಟ್ರೋಲ್ ಬೆಲೆ ₹ 99.90ಕ್ಕೆ ತಲುಪಿದೆ. ಇಲ್ಲಿ ಡೀಸೆಲ್ ಬೆಲೆ ₹ 90.35 ಆಗಿದೆ. ಹಿಂದಿನ ಒಂಬತ್ತು ದಿನಗಳ ಅವಧಿಯಲ್ಲಿ ಪೆಟ್ರೋಲ್ ಬೆಲೆ ₹ 2.59ರಷ್ಟು, ಡೀಸೆಲ್ ಬೆಲೆ ₹ 2.82ರಷ್ಟು ಹೆಚ್ಚಳ ಕಂಡಿದೆ.

ತೈಲ ಬೆಲೆ ನಿರಂತರವಾಗಿ ಹೆಚ್ಚಿಸುತ್ತಿರುವುದನ್ನು ಕಾಂಗ್ರೆಸ್ ಸೇರಿದಂತೆ ಹಲವು ವಿರೋಧ ಪಕ್ಷಗಳು ಟೀಕಿಸಿವೆ. ತೆರಿಗೆ ಪ್ರಮಾಣ ತಗ್ಗಿಸಿ, ಜನಸಾಮಾನ್ಯರ ಮೇಲಿನ ಹೊರೆಯನ್ನು ಕಡಿಮೆ ಮಾಡಬೇಕು ಎಂದು ಅವು ಆಗ್ರಹಿಸಿವೆ.

2020ರ ಮಾರ್ಚ್ ಮಧ್ಯಭಾಗದ ನಂತರ ಲೀಟರ್ ಪೆಟ್ರೋಲ್ ದರವು ₹ 19.95ರಷ್ಟು, ಡೀಸೆಲ್ ದರವು ₹ 17.66ರಷ್ಟು ಹೆಚ್ಚಳ ಆಗಿದೆ.

ಮುಂಬೈ ಧಾರಣೆ

ಶೇಂಗಾ

17-2-2021

ಜಾವಾ 70/80(ಹೊಸ)	10850-10900
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1470 (1460)
ಒಂದು ವಾರದ ಡೆಲಿವರಿ	1465 (1455)
ಸೋಯಾ ಕಚ್ಚಾ	1110 (1103)
ಪಾಮ್ ವಾರದ ಡೆಲಿವರಿ	1128 (1116)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1360)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,250 (49,600)
ಬೆಳ್ಳಿ ಕೆ.ಜಿ
68,400 (69,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಬೆಟ್ಟೆ	23020-41499	**ಚನ್ನಗಿರಿ ತುಮ್ಕೋಸ್**	
ಬಂಟ್ವಾಳ		ಬಿಳಿಗೋಟು	16899-32619	ಬೆಟ್ಟೆ	36599-44009
ಕೋಕ	10000-22500	ಚಾಲಿ	29699-44296	ರಾಶಿ	33479-35379
ಹೊಸತು	23500-42500	ರಾಶಿ	35899-44100	**ರಾಮನಗರ ರೇಷ್ಮೆ**	
ಹಳತು	42500-51000	**ಯಲ್ಲಾಪುರ**		ಮಿಶ್ರತಳಿ (ಸಿ.ಬಿ)	285-495
ಪುತ್ತೂರು		ಬಿಳಿಗೋಟು	23800-31399	ದ್ವಿತಳಿ (ಬಿ.ವಿ)	366-542
ಕೋಕ	9500-24000	ಚಾಲಿ	32719-41899		
ಹೊಸತು	29000-42500	ಕೋಕ	21899-29299		
ಸಿದ್ದಾಪುರ		ಕೆಂಪುಗೋಟು	26899-32181		
ಬಿಳಿಗೋಟು	22480-30599	ರಾಶಿ	39919-46000		
ಕೋಕ	21199-30199	ತಟ್ಟಿಬೆಟ್ಟೆ	34299-39701		
ಚಾಲಿ	36099-41011	**ಶಿವಮೊಗ್ಗ**			
ಕೆಂಪುಗೋಟು	22199-31899	ಬೆಟ್ಟೆ	40000-44739		
ರಾಶಿ	39089-43509	ಗೊರಬಲು	17510-32150		
ತಟ್ಟಿಬೆಟ್ಟೆ	34099-39099	ರಾಶಿ	33789-43500		
ಶಿರಸಿ		ಸರಕು	52000-72710		

ಮೂಡಿಗೆರೆ ಕಾಫಿ

	ಮುದ್ರಮನೆ
ಎಪಿ	9925
ಎಸಿ	3975
ಆರ್‌ಪಿ	5100
ಆರ್‌ಸಿ	3000

ಮಧ್ಯಪ್ರದೇಶ ಬಸ್ ಅಪಘಾತ: ಮೃತರ ಸಂಖ್ಯೆ 51ಕ್ಕೆ ಏರಿಕೆ

ರೇವಾ/ಸಿಧಿ (ಪಿಟಿಐ): 'ಮಧ್ಯಪ್ರದೇಶದ ಸಿಧಿ ಜಿಲ್ಲೆಯಲ್ಲಿ ಬಸ್ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ 51ಕ್ಕೆ ಏರಿಕೆಯಾಗಿದ್ದು, ಬುಧವಾರ ನಾಲ್ಕು ಮೃತದೇಹಗಳು ಪತ್ತೆಯಾಗಿವೆ' ಎಂದು ಪೊಲೀಸರು ತಿಳಿಸಿದರು.

ಸಿಧಿ ಜಿಲ್ಲೆಯ ಪಟ್ನಾ ಗ್ರಾಮದ ಬಳಿ ಮಂಗಳವಾರ ಬಸ್‌ವೊಂದು ಸೇತುವೆಗೆ ಡಿಕ್ಕಿಯಾಗಿ ಕಾಲುವೆಗೆ ಉರುಳಿ ಬಿದ್ದಿತ್ತು. ಬಸ್‌ನಲ್ಲಿದ್ದವರ ಪೈಕಿ 20 ಮಹಿಳೆಯರು ಸೇರಿ 47 ಪ್ರಯಾಣಿಕರ ಶವಗಳು ಮಂಗಳವಾರ ಪತ್ತೆಯಾಗಿದ್ದವು. ಇದೀಗ ಮೃತರ ಸಂಖ್ಯೆ 51ಕ್ಕೆ ಏರಿಕೆಯಾಗಿದೆ.

'ಮಂಗಳವಾರ ತಡರಾತ್ರಿ ಸ್ಥಗಿತಗೊಳಿಸಲಾದ ರಕ್ಷಣಾ ಕಾರ್ಯಾಚರಣೆಯು ಬುಧವಾರ ಬೆಳಿಗ್ಗೆ ಪುನರಾರಂಭಗೊಂಡಿದೆ. ಈವರೆಗೆ 51 ಶವಗಳು ಪತ್ತೆಯಾಗಿವೆ. ಸಿಧಿ ಮತ್ತು ರೇವಾದ ಕಾಲುವೆಯಲ್ಲಿ ಶೋಧ ಕಾರ್ಯಾಚರಣೆ ಮುಂದುವರಿದಿದೆ' ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಜುಲತ ಪಟ್ಲೆ ತಿಳಿಸಿದರು.

ಮಧ್ಯಪ್ರದೇಶದ ಬಸ್ ಅಪಘಾತದಲ್ಲಿ ಮೃತಪಟ್ಟವರ ಶವವನ್ನು ಕೊಂಡೊಯ್ಯುತ್ತಿರುವ ಎನ್‌ಡಿಆರ್‌ಎಫ್ ಸಿಬ್ಬಂದಿ —ಪಿಟಿಐ ಚಿತ್ರ

'ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮತ್ತು ಐದು ಜಿಲ್ಲೆಗಳ ಸ್ಥಳೀಯ ಅಧಿಕಾರಿಗಳು ಸೇರಿದಂತೆ ಒಟ್ಟು 600 ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಭಾರತ, ರಷ್ಯಾ ಜಂಟಿ ಸಮಾಲೋಚನೆ

ನವದೆಹಲಿ (ಪಿಟಿಐ): ವಿಶ್ವಸಂಸ್ಥೆ ಭದ್ರತಾ ಸಮಿತಿಯ ಕಾರ್ಯಸೂಚಿ ಕುರಿತಾದ ಪ್ರಮುಖ ವಿಷಯಗಳ ಬಗ್ಗೆ ನಿಕಟವಾಗಿ ಕೆಲಸ ಮಾಡಲು ಭಾರತ ಮತ್ತು ರಷ್ಯಾ ನಿರ್ಧರಿಸಿದೆ.

'ರಷ್ಯಾ ಮತ್ತು ಭಾರತವು ವಿಶ್ವಸಂಸ್ಥೆಯ ಕಾರ್ಯಸೂಚಿಯಲ್ಲಿನ ಪ್ರಮುಖ ವಿಷಯಗಳ ಕುರಿತಾಗಿ ಮಾಸ್ಕೊದಲ್ಲಿ ಮಂಗಳವಾರ ದ್ವಿಪಕ್ಷೀಯ ಸಮಾಲೋಚನೆ ನಡೆಸಿದೆ. ಈ ವೇಳೆ ಕಾರ್ಯಸೂಚಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಜಂಟಿಯಾಗಿ ಕೆಲಸ ಮಾಡಲು ಉಭಯ ರಾಷ್ಟ್ರಗಳು ನಿರ್ಧರಿಸಿವೆ' ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಹೇಳಿದೆ.

'ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಕಾರ್ಯಸೂಚಿ ಬಗೆಗಿನ ಉಭಯ ಪಕ್ಷೀಯ ಸಮಾಲೋಚನೆಯನ್ನು ಎರಡೂ ದೇಶಗಳು ಶ್ಲಾಘಿಸಿವೆ. ಈ ಮೂಲಕ ಎರಡೂ ರಾಷ್ಟ್ರಗಳ ಸಂಬಂಧ ಇನ್ನಷ್ಟು ಸದೃಢಗೊಳ್ಳಲಿದೆ' ಎಂದು ಸಚಿವಾಲಯ ಹೇಳಿದೆ.

ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತದ ತಾತ್ಕಾಲಿಕ ಸದಸ್ಯತ್ವದ (ಎರಡು ವರ್ಷಗಳ) ಅವಧಿ ಜನವರಿ 1ರಂದು ಪ್ರಾರಂಭಗೊಂಡಿದೆ.

ಎಲ್‌ಪಿಜಿ ದರ ₹ 50 ಹೆಚ್ಚಳ

ಬೆಂಗಳೂರು: ಸಬ್ಸಿಡಿ ರಹಿತ ಎಲ್‌ಪಿಜಿ ಸಿಲಿಂಡರ್ ದರದಲ್ಲಿ ₹ 50ರಷ್ಟು ಹೆಚ್ಚಳ ಆಗಿದೆ. ಇದರಿಂದಾಗಿ ಬೆಂಗಳೂರಿನಲ್ಲಿ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ದರ ₹ 772ಕ್ಕೆ ಏರಿಕೆ ಆಗಿದೆ.

ರಾಜ್ಯದಲ್ಲಿ ಎಲ್‌ಪಿಜಿ ದರದಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ವ್ಯತ್ಯಾಸ ಇದೆ.

ಚಿನ್ನ, ಬೆಳ್ಳಿ ದರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರವು ಬುಧವಾರ ಹತ್ತು ಗ್ರಾಮ್‌ಗೆ ₹ 717ರಷ್ಟು ಕಡಿಮೆ ಆಗಿ, ₹ 46,102ಕ್ಕೆ ಮಾರಾಟವಾಗಿದೆ.

ಜಾಗತಿಕ ಮಾರುಕಟ್ಟೆಗಳಲ್ಲಿ ಚಿನ್ನದ ಬೆಲೆ ತಗ್ಗಿದ್ದು, ಅದು ಇಲ್ಲಿಯೂ ಪ್ರತಿಫಲಿತವಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ. ಒಂದು ಕೆ.ಜಿ. ಬೆಳ್ಳಿ ದರದಲ್ಲಿ ₹ 1,274ರಷ್ಟು ಕಡಿಮೆ ಆಗಿದ್ದು, ₹ 68,239ಕ್ಕೆ ಮಾರಾಟವಾಗಿದೆ.

ಶೇಖಾ ಲತೀಫಾ: ಪುರಾವೆ ನೀಡಿ

ಯುಎಇಗೆ ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಡೊಮೆನಿಕ್ ರಾಬ್ ಸೂಚನೆ

ಲಂಡನ್ (ಎಎಫ್‌ಪಿ/ರಾಯಿಟರ್ಸ್): 'ದುಬೈ ಆಡಳಿತಗಾರ ಶೇಖ್ ಮೊಹಮ್ಮದ್ ಬಿನ್ ರಶೀದ್ ಅಲ್-ಮಕ್ತೌಮ್ ಅವರ ಮಗಳು ಶೇಖ್ ಲತೀಫಾ ಅವರು ಜೀವಂತವಾಗಿದ್ದಾರೆಯೇ? ಈ ಬಗ್ಗೆ ಪುರಾವೆಗಳನ್ನು ತೋರಿಸಿ' ಎಂದು ಬ್ರಿಟನ್ ಬುಧವಾರ ಸಂಯುಕ್ತ ಅರಬ್ ಸಂಸ್ಥಾನಕ್ಕೆ (ಯುಎಇ) ಕೇಳಿದೆ.

'ಯುಎಇಯಿಂದ ಪಲಾಯನ ಮಾಡಲು ವಿಫಲ ಯತ್ನದ ನಂತರ ತನ್ನನ್ನು ಸೆರೆಯಲ್ಲಿಡಲಾಗಿದೆ ಮತ್ತು ತನ್ನ ಜೀವಕ್ಕೆ ಅಪಾಯವಿದೆ' ಎಂದು ಶೇಖಾ ಲತೀಫಾ ಅವರು ತಿಳಿಸಿದ್ದಾರೆ ಎನ್ನಲಾದ ವಿಡಿಯೊಗಳು ಮಂಗಳವಾರ ಬಿಬಿಸಿಯಲ್ಲಿ ಪ್ರಸಾರವಾದ ಬೆನ್ನಲ್ಲೇ, ಬ್ರಿಟನ್ ಈ ಪ್ರಶ್ನೆಗಳನ್ನು ಎತ್ತಿದೆ.

'ನಾವು ನೋಡಿರುವ ವಿಡಿಯೊಗಳನ್ನು ನೋಡಿದರೆ ಅವರು ಜೀವಂತವಾಗಿದ್ದಾರೆಯೇ? ಸುರಕ್ಷಿತವಾಗಿದ್ದಾರೆಯೇ ಎನ್ನುವ ಪ್ರಶ್ನೆಗಳು ಏಳುವುದು ಸಹಜ. ಅಷ್ಟೇ ಅಲ್ಲ ಜನರೂ ಇದನ್ನು ಅರಿಯಲು ಬಯಸುತ್ತಾರೆ' ಎಂದು ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ಡೊಮೆನಿಕ್ ರಾಬ್ ಅವರು ಸ್ಕೈ ನ್ಯೂಸ್ ಟೆಲಿವಿಷನ್‌ಗೆ ತಿಳಿಸಿದ್ದಾರೆ.

'ಬಿಬಿಸಿಯಲ್ಲಿ ಪ್ರಸಾರವಾದ ವಿಡಿಯೊ ತುಣುಕುಗಳ ಬಗ್ಗೆ ಬ್ರಿಟನ್ ಗಮನಿಸಿದ್ದು, ಈ ವಿಡಿಯೊವನ್ನು ವಿಶ್ವಸಂಸ್ಥೆಯೂ ಸೂಕ್ಷ್ಮವಾಗಿ ಗಮನಿಸುತ್ತಿದೆ. ಈ ಬಗ್ಗೆ ಮುಂದಿನ ಕ್ರಮಗಳ ಬಗ್ಗೆಯೂ ಯೋಚಿಸಲಾಗುತ್ತಿದೆ' ಎಂದೂ ಡೊಮೆನಿಕ್ ಅವರು ಮಾಹಿತಿ ನೀಡಿದ್ದಾರೆ.

ವಿಡಿಯೊದಲ್ಲಿ, 'ನಾನು ಒತ್ತೆಯಾಳಾಗಿದ್ದೇನೆ ಮತ್ತು ಈ ವಿಲ್ಲಾವನ್ನು ಜೈಲಾಗಿ ಪರಿವರ್ತಿಸಲಾಗಿದೆ. ಮನೆಯೊಳಗೆ ಐದು ಪೊಲೀಸರು ಮತ್ತು ಇಬ್ಬರು ಮಹಿಳಾ ಪೊಲೀಸರು ಇದ್ದಾರೆ. ಪ್ರತಿದಿನವೂ ನನ್ನ ಸುರಕ್ಷತೆ ಮತ್ತು ಜೀವನದ ಬಗ್ಗೆ ನಾನು ಚಿಂತೆ ಮಾಡುತ್ತೇನೆ' ಎಂದು ಹೇಳಿದ್ದಾರೆ.

ಮತ್ತೊಂದು ವಿಡಿಯೊದಲ್ಲಿ, ಲತೀಫಾ 'ನನ್ನ ಪರಿಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಈ ಜೈಲು ವಿಲ್ಲಾದಲ್ಲಿ ನಾನು ಒತ್ತೆಯಾಳಾಗಿ ಇರಲು ಬಯಸುವುದಿಲ್ಲ. ನಾನು ಮುಕ್ತವಾಗಿರಲು ಬಯಸುತ್ತೇನೆ' ಎಂದೂ ಅವರು ಹೇಳಿದ್ದಾರೆ.

ದುಬೈನ ಕೇಂದ್ರ ಕಾರಾಗೃಹದಲ್ಲಿ

ಲತೀಫಾ ಅವರಿಂದ ರಹಸ್ಯ ಸಂದೇಶಗಳು ಬರುವುದು ನಿಂತಿವೆ ಎಂದು ಅವರ ಸ್ನೇಹಿತರು ಕಳವಳ ವ್ಯಕ್ತಪಡಿಸಿದ್ದರಿಂದ ವಿಡಿಯೊವನ್ನು ಪ್ರಸಾರ ಮಾಡಲಾಗಿದೆ ಎಂದು ಬಿಬಿಸಿ ತಿಳಿಸಿದೆ.

ಈ ವಿಡಿಯೊಗಳು ಲತೀಫಾ ಅವರ ಫಿನ್ನಿಷ್ ಸ್ನೇಹಿತೆ ಟೀನಾ ಜುಹೈನೆನ್ ಅವರಿಂದ ಬಂದಿದ್ದು, ಅವರು ಕೂಡ ಸೆರೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದ ಸಮಯದಲ್ಲಿ ಜೊತೆಯಲ್ಲಿದ್ದವರಾಗಿದ್ದರು. ಲತೀಫಾ ಎಲ್ಲಿದ್ದಾರೆ ಎಂಬ ವಿವರಗಳನ್ನು ಸ್ವತಂತ್ರವಾಗಿ ಪರಿಶೀಲಿಸಿದೆ ಎಂದು ಬಿಬಿಸಿ ಹೇಳಿದೆ.

2018ರಲ್ಲಿ, ಲತೀಫಾ ಅವರು ಯುಎಇಯಿಂದ ಪಲಾಯನ ಮಾಡಲು ದೋಣಿಯಲ್ಲಿ ಪ್ರಯತ್ನಿಸಿದರು. ಆಗ ಭಾರತದ ಕರಾವಳಿಯಲ್ಲಿ ಕಮಾಂಡೋಗಳು ಅವರನ್ನು ತಡೆದರು ಎಂದು ಆಕೆಯ ಸಹಚರರು ಮತ್ತು ದುಬೈನಲ್ಲಿ ಬಂಧಿಸಲಾದ ಯುಕೆ ಮೂಲದ ಗುಂಪು ತಿಳಿಸಿದೆ.

ದುಬೈ ಸರ್ಕಾರದ ಮೂಲವೊಂದು ಆಕೆಯನ್ನು 'ಮರಳಿ ಕರೆತರಲಾಯಿತು' ಮತ್ತು ಯುಎಇ ಲತೀಫಾ ಅವರ ಛಾಯಾಚಿತ್ರಗಳನ್ನು ಬಿಡುಗಡೆ ಮಾಡಿ, ಆಕೆಗೆ 'ಅಗತ್ಯವಿರುವ ಆರೈಕೆ ಮತ್ತು ಬೆಂಬಲವನ್ನು ನೀಡಲಾಗುತ್ತಿದೆ' ಎಂದು ಹೇಳಿದೆ. ಇನ್ನು ವಿಲ್ಲಾಕ್ಕೆ ಸ್ಥಳಾಂತರಿಸುವ ಮೊದಲು 2018ರ ಮೇವರೆಗೆ ದುಬೈನ ಅಲ್-ಅವೀರ್ ಕೇಂದ್ರ ಕಾರಾಗೃಹದಲ್ಲಿ ಸುಮಾರು ಮೂರು ತಿಂಗಳ ಕಾಲ ಬಂಧಿಸಲಾಗಿತ್ತು ಎಂದು ಲತೀಫಾ ಹೇಳಿದ್ದಾರೆ.

ಸೆನ್ಸೆಕ್ಸ್ 400 ಅಂಶ ಕುಸಿತ

ಮುಂಬೈ (ಪಿಟಿಐ): ಸತತ ಎರಡನೆಯ ದಿನವೂ ಮಾರಾಟದ ಒತ್ತಡಕ್ಕೆ ಒಳಗಾದ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್, 400 ಅಂಶ ಕುಸಿಯಿತು.

ಐ.ಟಿ., ಎಫ್‌ಎಂಸಿಜಿ ವಲಯದ ಷೇರುಗಳು ಲಾಭ ಗಳಿಕೆಯ ಉದ್ದೇಶದ ಮಾರಾಟಕ್ಕೆ ಒಳಗಾದವು. ರೂಪಾಯಿ ಮೌಲ್ಯ ಕುಸಿದಿದ್ದು ಕೂಡ ಹೂಡಿಕೆದಾರರ ಮೇಲೆ ಪ್ರಭಾವ ಬೀರಿತು ಎಂದು ವರ್ತಕರು ಹೇಳಿದ್ದಾರೆ.

ಬುಧವಾರದ ವಹಿವಾಟಿನಲ್ಲಿ ನಿಫ್ಟಿ 104 ಅಂಶ ಇಳಿಕೆ ಕಂಡಿತು. ನೆಸ್ಲೆ ಇಂಡಿಯಾ ಕಂಪನಿಯ ಷೇರು ಮೌಲ್ಯ ಶೇಕಡ 2.80ರಷ್ಟು ಇಳಿಕೆಯಾಯಿತು.

ಬಜಾಜ್ ಫಿನ್‌ಸರ್ವ್, ಏಷ್ಯನ್ ಪೇಂಟ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಇಂಡಸ್ ಇಂಡ್ ಬ್ಯಾಂಕ್, ಮಾರುತಿ, ಡಾ ರೆಡ್ಡೀಸ್ ಮತ್ತು ಎಚ್‌ಡಿಎಫ್‌ಸಿ ಷೇರು ಮೌಲ್ಯ ಕುಸಿಯಿತು.

ಎಸ್‌ಬಿಐ, ಪವರ್‌ಗ್ರಿಡ್, ಎನ್‌ಟಿಪಿಸಿ, ರಿಲಯನ್ಸ್ ಇಂಡಸ್ಟ್ರೀಸ್, ಬಜಾಜ್ ಆಟೊ ಷೇರುಗಳು ಏರಿಕೆ ಕಂಡವು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.58ರಷ್ಟು ಹೆಚ್ಚಳವಾಗಿದ್ದು, ಪ್ರತಿ ಬ್ಯಾರೆಲ್‌ಗೆ 63.71 ಅಮೆರಿಕನ್ ಡಾಲರ್‌ಗೆ ತಲುಪಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ₹ 72.74ಕ್ಕೆ ಇಳಿದಿದೆ.

ಮ್ಯಾನ್ಮಾರ್: ಹಿಂಸಾಚಾರದ ಭೀತಿ

ಯಾಂಗೂನ್ (ಎಪಿ): 'ಮ್ಯಾನ್ಮಾರ್‌ನಲ್ಲಿ ಮಿಲಿಟರಿ ಆಡಳಿತದ ವಿರುದ್ಧ ಬುಧವಾರವೂ ಪ್ರತಿಭಟನೆ ಮುಂದುವರಿದಿದೆ. ಈ ವೇಳೆ ದೊಡ್ಡ ಪ್ರಮಾಣದಲ್ಲಿ ಹಿಂಸಾಚಾರ ನಡೆಯುವ ಸಾಧ್ಯತೆಯಿದೆ' ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ತಜ್ಞರು ಎಚ್ಚರಿಕೆ ನೀಡಿದ್ದಾರೆ.

'ಯಾಂಗೂನ್‌ಗೆ ಭಾರೀ ಪ್ರಮಾಣದಲ್ಲಿ ಸೇನಾ ಪಡೆಯನ್ನು ಕಳುಹಿಸಲಾಗುತ್ತಿದೆ ಎಂಬ ಮಾಹಿತಿಗಳು ಸಿಕ್ಕಿವೆ' ಎಂದು ವಿಶ್ವಸಂಸ್ಥೆಯ ವರದಿಗಾರ ಟಾಮ್ ಆಂಡ್ರ್ಯೂಸ್ ಅವರು ತಿಳಿಸಿದ್ದಾರೆ.

ಮ್ಯಾನ್ಮಾರ್‌ನ ಯಾಂಗೂನ್ ನಗರದಲ್ಲಿ ಬುಧವಾರ ಮಿಲಿಟರಿ ಆಡಳಿತದ ವಿರುದ್ಧ ಪ್ರತಿಭಟಿಸುತ್ತಿರುವ ನಾಗರಿಕರು —ಎಎಫ್‌ಪಿ ಚಿತ್ರ

'ಈ ಹಿಂದೆಯೂ ಸೇನೆಯ ಈ ರೀತಿಯ ಚಟುವಟಿಕೆಗಳು ದೊಡ್ಡ ಪ್ರಮಾಣದ ಹಿಂಸಾಚಾರಕ್ಕೆ ಎಡೆ ಮಾಡಿಕೊಟ್ಟಿವೆ. ಹತ್ಯೆ, ಸಾಮೂಹಿಕ ಬಂಧನ ಮತ್ತು ನಾಪತ್ತೆಯಾದ ಘಟನೆಗಳೂ ನಡೆದಿವೆ. ಸದ್ಯ ಮ್ಯಾನ್ಮಾರ್‌ನಲ್ಲಿ ಆಗುತ್ತಿರುವ ಬೆಳವಣಿಗೆಗಳು ಇದೇ ಭೀತಿಯನ್ನು ಮೂಡಿಸಿವೆ. ಸೇನೆಯು ತನ್ನ ಪ್ರಜೆಗಳ ವಿರುದ್ಧ ಅಪರಾಧ ಕೃತ್ಯಗಳನ್ನು ನಡೆಸುವ ಸಾಧ್ಯತೆ ಇದೆ' ಎಂದು ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ಪ್ರಸ್ತಾಪಿಸಲಾಗಿದೆ.

ಮ್ಯಾನ್ಮಾರ್‌ನ ಹಲವೆಡೆ ಬುಧವಾರ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪ್ರತಿಭಟಿಸುವ ಸಾಧ್ಯತೆಗಳಿವೆ ಎನ್ನಲಾಗಿದೆ.

ಬ್ರಿಟನ್ ರಾಣಿ ಎಲಿಜಬೆತ್ ಪತಿ ಆಸ್ಪತ್ರೆಗೆ ದಾಖಲು

ಫಿಲಿಪ್

ಇಂಗ್ಲೆಂಡ್ (ರಾಯಿಟರ್ಸ್): ಬ್ರಿಟನ್ ರಾಣಿ ಎಲಿಜಬೆತ್ ಪತಿ, ಫಿಲಿಪ್ ಅಸ್ವಸ್ಥರಾಗಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಬಂಕಿಂಗ್‌ಹ್ಯಾಂ ಅರಮನೆ ಪ್ರಕಟಣೆ ತಿಳಿಸಿದೆ.

'ರಾಜಮನೆತನದ ವೈದ್ಯರ ಸಲಹೆ ಮೇರೆಗೆ ಮುನ್ನೆಚ್ಚರಿಕಾ ಕ್ರಮವಾಗಿ ಫಿಲಿಪ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರು ಕೆಲವು ದಿನಗಳ ಕಾಲ ಆಸ್ಪತ್ರೆಯಲ್ಲೇ ವೈದ್ಯರ ನಿಗಾದಲ್ಲಿ ಇರಲಿದ್ದು, ವಿಶ್ರಾಂತಿ ಪಡೆಯಲಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

1 NATION TAX MARKET GST

Government of India
Ministry of Finance
Department of Revenue
OFFICE OF THE PRINCIPAL CHIEF COMMISSIONER OF CENTRAL TAX,
BANGALORE ZONE, P.B.NO.5400, C.R.BUILDING,
QUEEN'S ROAD, BENGALURU-560001

स्वच्छ भारत एक कदम स्वच्छता की ओर

C.No. GCCO/LGL/MISC/2/2020-LEGAL Dated: 17/02/2021

EXTENSION OF LAST DATE

With reference to the advertisement dated 29.01.2021 inviting applications from the interested eligible candidates in the prescribed format for Renewal/Fresh appointment of Senior and Junior Standing Counsels for handling cases of Indirect Taxation matters (Customs, Goods & Service Tax), before High Court of Karnataka (including Dharwad and Kalaburagi Bench) and other fora, the last date for receiving applications in prescribed format now stands extended till **03.03.2021.**

For further details please visit our website http://www.gstkarnataka.gov.in

Sd/- Additional Commissioner (PCCO),
BENGALURU

ಐಪಿಎಲ್ ಟಿ20 ಕ್ರಿಕೆಟ್ ಟೂರ್ನಿ: ಚೆನ್ನೈನಲ್ಲಿ ಇಂದು ಆಟಗಾರರ ಹರಾಜು; ಮ್ಯಾಕ್ಸ್‌ವೆಲ್ ಮೇಲೆ ಆರ್‌ಸಿಬಿ ಕಣ್ಣು

ಕೊರೊನಾ ಕಾಲದಲ್ಲಿ 'ಲಕ್ಷ್ಮೀ ಕಟಾಕ್ಷ' ಯಾರಿಗೆ?

ಚೆನ್ನೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ 14ನೇ ಆವೃತ್ತಿಯಲ್ಲಿ ಆಡುವ ತಂಡಗಳ ಆಟಗಾರರ ಹರಾಜು ಪ್ರಕ್ರಿಯೆ ಗುರುವಾರ ನಡೆಯಲಿದೆ.

ಒಟ್ಟು 292 ಆಟಗಾರರು ಕಣದಲ್ಲಿದ್ದಾರೆ. ಎಂಟು ಫ್ರ್ಯಾಂಚೈಸಿಗಳು ತಮ್ಮ ತಂಡವನ್ನು ಬಲಿಷ್ಠಗೊಳಿಸಿಕೊಳ್ಳಲು ಘಟಾನುಘಟಿ ಆಟಗಾರರ ಮೇಲೆ ಕಣ್ಣಿಟ್ಟಿದ್ದಾರೆ. ಸ್ಫೋಟಕ ಶೈಲಿಯ ಬ್ಯಾಟ್ಸ್‌ಮನ್‌ಗಳು ಮತ್ತು ಮಧ್ಯಮವೇಗದ ಬೌಲರ್‌ಗಳಿಗೆ ಹೆಚ್ಚು ಮೌಲ್ಯ ದೊರೆಯುವ ಸಾಧ್ಯತೆ ಇದೆ.

ಅದರಲ್ಲಿ ಪ್ರಮುಖವಾಗಿ ಆಸ್ಟ್ರೇಲಿಯಾದ ಗ್ಲೆನ್ ಮ್ಯಾಕ್ಸ್‌ವೆಲ್, ಇಂಗ್ಲೆಂಡ್‌ನ ಮೋಯಿನ್ ಅಲಿ, ಡೇವಿಡ್ ಮಲಾನ್ ಮತ್ತು ಕೇರಳ ರಾಜ್ಯ ತಂಡದ ಮೊಹಮ್ಮದ್ ಅಜರುದ್ದೀನ್ ಅವರಿಗೆ ಹೆಚ್ಚು ಬೇಡಿಕೆ ಕುದುರುವ ನಿರೀಕ್ಷೆ ಇದೆ.ಐಪಿಎಲ್ ಇತಿಹಾಸದಲ್ಲಿ ಒಂದು ಸಲವೂ ಕಪ್ ಗೆಲ್ಲದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಹೋದ ವರ್ಷದ ಟೂರ್ನಿಯಲ್ಲಿ ಪ್ಲೇ ಆಫ್ ತಲುಪಲು ವಿಫಲವಾಗಿದ್ದ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ತಂಡಗಳು ಗ್ಲೆನ್ ಮ್ಯಾಕ್ಸ್‌ವೆಲ್ ಅವರನ್ನು ಬುಟ್ಟಿಗೆ ಹಾಕಿಕೊಳ್ಳಲು ಪೈಪೋಟಿ ನಡೆಸುವ ಸಾಧ್ಯತೆಗಳು ಹೆಚ್ಚಿವೆ. ಹೋದ ವರ್ಷ ಮ್ಯಾಕ್ಸ್‌ವೆಲ್ ಪಂಜಾಬ್ ಕಿಂಗ್ಸ್ ತಂಡದಲ್ಲಿ ಆಡಿದ್ದರು. ಒಟ್ಟು 82 ಪಂದ್ಯಗಳಲ್ಲಿ ಆಡಿರುವ ಅನುಭವಿಯಾಗಿದ್ದಾರೆ.ಆರ್‌ಸಿಬಿಯಲ್ಲಿ ಗರಿಷ್ಠ 11 ಸ್ಥಾನಗಳಿಗೆ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ತಂಡವು ₹ 35.4 ಕೋಟಿಯ ಪರ್ಸ್ ಹೊಂದಿದೆ. ಸನ್‌ರೈಸರ್ಸ್ ಹೈದರಾಬಾದ್ ತಂಡವು ಗರಿಷ್ಠ ಮೂರು ಆಟಗಾರರನ್ನು ಆಯ್ಕೆ ಮಾಡಿಕೊಳ್ಳಬಹುದು. ತನ್ನ ಖಾತೆಯಲ್ಲಿ ₹ 10.75 ಕೋಟಿ ಉಳಿಸಿಕೊಂಡಿದೆ.

ಕನ್ನಡಿಗ ಅನಿಲ್ ಕುಂಬ್ಳೆ ಮುಖ್ಯ ಕೋಚ್ ಆಗಿರುವ ಪಂಜಾಬ್ ಕಿಂಗ್ಸ್ ತಂಡವು ಗರಿಷ್ಠ ಮೊತ್ತದ (₹53.20 ಕೋಟಿ) ಮಿತಿ ಹೊಂದಿದೆ. ಆದರೆ, ಒಂಬತ್ತು ಆಟಗಾರರನ್ನು ಮಾತ್ರ ಖರೀದಿಸಲು ಅವಕಾಶವಿದೆ. ಹೋದ ವರ್ಷ ರಾಜಸ್ಥಾನ್ ರಾಯಲ್ಸ್ ತಂಡದ ನಾಯಕರಾಗಿದ್ದ ಆಸ್ಟ್ರೇಲಿಯಾದ ಸ್ಟೀವ್ ಸ್ಮಿತ್ ಕೂಡ ಹರಾಜಿಗೆ ಲಭ್ಯವಿದ್ದಾರೆ. ಟಿ20 ಕ್ರಿಕೆಟ್‌ನ ಅಗ್ರಶ್ರೇಯಾಂಕದ ಬ್ಯಾಟ್ಸ್‌ಮನ್ ಡೇವಿಡ್ ಮಲಾನ್ ಅವರನ್ನು ಖರೀದಿಸಲೂ ಹೆಚ್ಚಿನ ಸ್ಪರ್ಧೆ ನಡೆಯಬಹುದು. ಅವರು ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ 150ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದ್ದಾರೆ.

ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ತಂಡವು ಅನುಭವಿಗಳಿಗೆ ಮಣೆ ಹಾಕುವ ತನ್ನ ಸಂಪ್ರದಾಯವನ್ನು ಮುಂದುವರಿಸುವ ನಿರೀಕ್ಷೆ ಇದೆ. ಈಚೆಗೆ ಟ್ರೇಡ್‌ನಲ್ಲಿ ಕನ್ನಡಿಗ ರಾಬಿನ್ ಉತ್ತಪ್ಪ ಅವರನ್ನು ತನ್ನ ತಂಡಕ್ಕೆ ಸೇರ್ಪಡೆ ಮಾಡಿಕೊಂಡಿದೆ.

ಹೋದ ವರ್ಷ ಭಾರತದಲ್ಲಿ ಕೊರೊನಾ ವೈರಸ್ ಪ್ರಸರಣ ಹೆಚ್ಚಾಗಿದ್ದ ಕಾರಣ ಐಪಿಎಲ್ ಅನ್ನು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಆಯೋಜಿಸಲಾಗಿತ್ತು. ಆದರೆ ಈ ಸಲ ಏಪ್ರಿಲ್–ಮೇ ನಲ್ಲಿ ಭಾರತದಲ್ಲಿಯೇ ಆಯೋಜಿಸಲು ಬಿಸಿಸಿಐ ಸಿದ್ಧತೆ ನಡೆಸಿದೆ. ಅನುಮತಿ ಕೋರಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನೂ ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ.

ನೇರಪ್ರಸಾರ: ಸ್ಟಾರ್ ನೆಟ್‌ವರ್ಕ್
ಸಮಯ: ಮಧ್ಯಾಹ್ನ 2 ಗಂಟೆ

ಗ್ಲೆನ್ ಮ್ಯಾಕ್ಸ್‌ವೆಲ್

ಫ್ರ್ಯಾಂಚೈಸ್‌ಗಳ ಖರೀದಿ ಸಾಮರ್ಥ್ಯ

8 ಭಾಗವಹಿಸುವ ಫ್ರ್ಯಾಂಚೈಸಿಗಳು

292 ಒಟ್ಟು ಆಟಗಾರರು

• ಸ್ಥಳ: ಚೆನ್ನೈ

ಮಾಹಿತಿ: ಐಪಿಎಲ್ ವೆಬ್‌ಸೈಟ್

ಪ್ರಮುಖ ಆಕಾಂಕ್ಷಿಗಳು: ವಿದೇಶಿ ಆಟಗಾರರು: ಜೇಸನ್ ರಾಯ್ (ಇಂಗ್ಲೆಂಡ್), ಸ್ಟೀವ್ ಸ್ಮಿತ್ (ಆಸ್ಟ್ರೇಲಿಯಾ), ಆ್ಯರನ್ ಫಿಂಚ್ (ಆಸ್ಟ್ರೇಲಿಯಾ), ಗ್ಲೆನ್ ಮ್ಯಾಕ್ಸ್‌ವೆಲ್ (ಆಸ್ಟ್ರೇಲಿಯಾ), ಲಿಯಾಮ್ ಪ್ಲಂಕೆಟ್ (ಇಂಗ್ಲೆಂಡ್), ಶೆಲ್ಡನ್ ಕಾಟ್ರೆಲ್ (ವೆಸ್ಟ್ ಇಂಡೀಸ್), ಮುಸ್ತಫಿಜುರ್ ರೆಹಮಾನ್ (ಬಾಂಗ್ಲಾ), ಟಿಮ್ ಸೌಥಿ (ನ್ಯೂಜಿಲೆಂಡ್), ಮಾರ್ಕ್ ವುಡ್ (ಇಂಗ್ಲೆಂಡ್), ಅಲ್ಜರಿ ಜೋಸೆಫ್ (ವೆಸ್ಟ್ ಇಂಡೀಸ್), ಸ್ಯಾಮ್ ಬಿಲಿಂಗ್ಸ್ (ಇಂಗ್ಲೆಂಡ್), ಅಲೆಕ್ಸ್ ಕ್ಯಾರಿ (ಆಸ್ಟ್ರೇಲಿಯಾ), ಶಕೀಬ್ ಅಲ್ ಹಸನ್ (ಬಾಂಗ್ಲಾ), ಮೋಯಿನ್ ಅಲಿ (ಇಂಗ್ಲೆಂಡ್), ಕೈಲ್ ಜೆಮೀಸನ್ (ನ್ಯೂಜಿಲೆಂಡ್), ಡರೆನ್ ಬ್ರಾವೊ (ವಿಂಡೀಸ್), ಅಲೆಕ್ಸ್ ಹೇಲ್ಸ್(ಇಂಗ್ಲೆಂಡ್), ಶಾನ್ ಮಾರ್ಷ್ (ಆಸ್ಟ್ರೇಲಿಯಾ).

ಭಾರತದ ಆಟಗಾರರು: ಹರಭಜನ್ ಸಿಂಗ್, ಕೇದಾರ್ ಜಾಧವ್, ಮೊಹಮ್ಮದ್ ಅಜರುದ್ದೀನ್, ವಿಷ್ಣು ಸೋಳಂಕಿ, ಅಭಿಮನ್ಯು ಈಶ್ವರನ್, ಕರುಣ್ ನಾಯರ್, ಕೃಷ್ಣಪ್ಪ ಗೌತಮ್, ಜೆ. ಸುಚಿತ್, ಉಮೇಶ್ ಯಾದವ್, ಪಿಯೂಷ್ ಚಾವ್ಲಾ, ಅರುಣ್ ಕಾರ್ತಿಕ್, ಕುಲದೀಪ್ ಯಾದವ್, ವಿಷ್ಣು ವಿನೋದ್, ಶಿವಂ ದುಬೆ, ಪವನ್ ನೇಗಿ, ಬಾಬಾ ಅಪರಾಜಿತ್, ಅರ್ಜುನ್ ತೆಂಡೂಲ್ಕರ್, ರಿಷಿ ಧವನ್, ಕುಲವಂತ್ ಖೆಜ್ರೋಲಿಯಾ, ಶಾರೂಕ್ ಖಾನ್.

ಕರ್ನಾಟಕದ ಆಟಗಾರರು

ಆಟಗಾರ	ಶೈಲಿ	ಮೂಲಬೆಲೆ (₹ ಲಕ್ಷ)
ಕರುಣ್ ನಾಯರ್	ಬ್ಯಾಟ್ಸ್‌ಮನ್	50
ಅಭಿಮನ್ಯು ಮಿಥುನ್	ಬೌಲರ್	50
ಸ್ಟುವರ್ಟ್ ಬಿನ್ನಿ	ಆಲ್‌ರೌಂಡರ್	50
ರೋಹನ್ ಕದಂ	ಬ್ಯಾಟ್ಸ್‌ಮನ್	20
ಮೊಹಮ್ಮದ್ ತಹಾ	ಬ್ಯಾಟ್ಸ್‌ಮನ್	20
ಜೆ. ಸುಚಿತ್	ಬೌಲರ್	20
ಕೆ.ಸಿ. ಕಾರಿಯಪ್ಪ	ಬೌಲರ್	20
ರೋನಿತ್ ಮೋರೆ	ಬೌಲರ್	20
ಕೆ.ಎಲ್. ಶ್ರೀಜಿತ್	ವಿಕೆಟ್‌ಕೀಪರ್	20
ಸಾದಿಕ್ ಹಸನ್ ಕಿರ್ಮಾನಿ	ವಿಕೆಟ್‌ಕೀಪರ್	20
ಶುಭಾಂಗ್ ಹೆಗ್ಡೆ	ಆಲ್‌ರೌಂಡರ್	20
ಕೃಷ್ಣಪ್ಪ ಗೌತಮ್	ಆಲ್‌ರೌಂಡರ್	20

ಹರ್ಭಜನ್ ಸಿಂಗ್ —ಎಎಫ್‌ಪಿ ಚಿತ್ರ

ಅಹಮದಾಬಾದಿನ ಮೊಟೇರಾದ ಕ್ರೀಡಾಂಗಣದ ಆಸನಗಳನ್ನು ಸ್ವಚ್ಛಗೊಳಿಸಿದ ಸಿಬ್ಬಂದಿ –ಎಎಫ್‌ಪಿ ಚಿತ್ರ

ಮೊಟೇರಾ ಕ್ರೀಡಾಂಗಣದಲ್ಲಿ ನೆರಳು ಮರೆಮಾಚಲು ಎಲ್‌ಇಡಿ

ಅಹಮದಾಬಾದ್ (ಪಿಟಿಐ): ಮೊಟೇರಾದ ಸರ್ದಾರ್ ಪಟೇಲ್ ಕ್ರೀಡಾಂಗಣವು ಮೊದಲ ಟೆಸ್ಟ್ ಪಂದ್ಯ ಆಯೋಜಿಸಲು ಸರ್ವಸನ್ನದ್ಧವಾಗಿದೆ.

ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣ ಎಂಬ ಹೆಗ್ಗಳಿಕೆಇರುವ ಇಲ್ಲಿ ಇದೇ 24ರಿಂದ ಭಾರತ–ಇಂಗ್ಲೆಂಡ್ ನಡುವಣ ಹಗಲು–ರಾತ್ರಿ ಟೆಸ್ಟ್ ಪಂದ್ಯ ನಡೆಯಲಿದೆ.

ಅದಕ್ಕಾಗಿ ನಾಲ್ಕು ಡ್ರೆಸ್ಸಿಂಗ್ ಕೋಣೆಗಳನ್ನು ಸಿದ್ಧಪಡಿಸಲಾಗಿದೆ. ಬೇರೆ ಯಾವ ಕ್ರೀಡಾಂಗಣದಲ್ಲೂ ಇಷ್ಟು ಸಂಖ್ಯೆಯ ಡ್ರೆಸ್ಸಿಂಗ್ ರೂಮ್‌ಗಳಿಲ್ಲ. ಪ್ರತಿಯೊಂದು ಕೋಣೆಯಲ್ಲಿಯೂ ಅತ್ಯಾಧುನಿಕ ಜಿಮ್ನಾಷಿಯಂಗಳೂ ಇವೆ ಎಂದು ಗುಜರಾತ್ ಕ್ರಿಕೆಟ್ ಸಂಸ್ಥೆಯ ಜಂಟಿ ಕಾರ್ಯದರ್ಶಿ ಅನಿಲ್ ಪಟೇಲ್ ತಿಳಿಸಿದ್ದಾರೆ.

ಹೊನಲು ಬೆಳಕಿನಲ್ಲಿ ಉಂಟಾಗುವ ನೆರಳಿನ ಬಿಂಬಗಳನ್ನು ಮರೆಮಾಚಲು ಎಲ್‌ಇಡಿ ಬಲ್ಬ್‌ಗಳನ್ನು ಬಳಸ ಲಾಗಿದೆ. ಇದರಿಂದಾಗಿ ಚೆಂಡು ಎತ್ತರದಲ್ಲಿ ಸಾಗಿದಾಗಲೂ ಸ್ಪಷ್ಟವಾಗಿ ಗೋಚರಿಸಲಿದೆ ಎಂದು ಪಟೇಲ್ ಹೇಳಿದ್ದಾರೆ.

ಈ ಕ್ರೀಡಾಂಗಣದಲ್ಲಿ ಪ್ರೇಕ್ಷಕರ ಗ್ಯಾಲರಿ ಸಾಮರ್ಥ್ಯವು 1.10 ಲಕ್ಷವಾಗಿದೆ. ಕೋವಿಡ್ ತಡೆ ಮಾರ್ಗಸೂಚಿಯನ್ವಯ ಸಾಮರ್ಥ್ಯದ ಶೇ 50ರಷ್ಟು ಪ್ರೇಕ್ಷಕರಿಗೆ ಮಾತ್ರ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತಿದೆ. 55 ಸಾವಿರ ಟಿಕೆಟ್‌ಗಳನ್ನು ಮಾರಾಟ ಮಾಡಲಾಗುತ್ತಿದೆ. ಈಚೆಗಷ್ಟೇ ಇಲ್ಲಿ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ನಾಕೌಟ್ ಪಂದ್ಯಗಳು ನಡೆದಿದ್ದವು.

ಕುಸ್ತಿ: ಗೆದ್ದವರಿಗೆ ಅವಕಾಶ ನಿರಾಕರಣೆ ಆರೋಪ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪಂಜಾಬ್‌ನಲ್ಲಿ ಫೆ. 20 ಹಾಗೂ 21ರಂದು ಆಯೋಜನೆಯಾಗಿರುವ ರಾಷ್ಟ್ರೀಯ ಸೀನಿಯರ್ ಗ್ರೀಕೊ ರೋಮನ್ ಪುರುಷರ ಕುಸ್ತಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ಕುಸ್ತಿ ಸಂಸ್ಥೆಯು, ಟ್ರಯಲ್ಸ್‌ನಲ್ಲಿ ಉತ್ತಮ ಪ್ರದರ್ಶನ ತೋರಿದವರನ್ನು ಆಯ್ಕೆ ಮಾಡಿಲ್ಲ ಎನ್ನುವ ಆರೋಪ ಕುಸ್ತಿಪಟುಗಳಿಂದ ಕೇಳಿಬಂದಿದೆ.

ರಾಜೇಂದ್ರ ಮಠಪತಿ (87 ಕೆ.ಜಿ. ವಿಭಾಗ), ಹುಚ್ಚಪ್ಪ (67 ಕೆ.ಜಿ.), ಸಂಜಯ ರಾಣಾ (72 ಕೆ.ಜಿ.) ಮತ್ತು ಮಧುಸೂದನ (130 ಕೆ.ಜಿ.) ಅವರನ್ನು ತಂಡಕ್ಕೆ ಆಯ್ಕೆಮಾಡಿಲ್ಲ ಎಂದು ದೂರಲಾಗಿದೆ. ರಾಜೇಂದ್ರ ಮಠಪತಿ ಈ ಕುರಿತು ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಆಯುಕ್ತರಿಗೆ ಇತ್ತೀಚೆಗೆ ಪತ್ರ ಬರೆದಿದ್ದು, ನ್ಯಾಯ ದೊರಕಿಸಿಕೊಡುವಂತೆ ಕೋರಿದ್ದಾರೆ.

'ನಾನು ರಾಷ್ಟ್ರಮಟ್ಟದ ಕುಸ್ತಿಪಟು. ಡಿ. 27ರಂದು ಕರ್ನಾಟಕ ಕುಸ್ತಿ ಸಂಘದ ಕಾರ್ಯದರ್ಶಿ ಎನ್.ಆರ್. ನರಸಿಂಹ ಅವರ ನೇತೃತ್ವದಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದೆ. 87 ಕೆ.ಜಿ. ವಿಭಾಗದಲ್ಲಿ ಪಾಲ್ಗೊಂಡಿದ್ದ ಎಲ್ಲರನ್ನೂ ಸೋಲಿಸಿದ್ದೆ. ಹೀಗಾಗಿ, ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಬಹುದೆಂದು ಭಾವಿಸಿದ್ದೆ' ಎಂದು ಇಲ್ಲಿನ ರಾಜೇಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ಕೊನೆ ಕ್ಷಣದಲ್ಲಿ ನನ್ನ ಹೆಸರನ್ನು ಕೈಬಿಡಲಾಗಿದೆ. ಕಾರಣ ಕೇಳಿದಾಗ, ಕೋವಿಡ್ ಕಾರಣದಿಂದ ಕಡಿಮೆ ಸಂಖ್ಯೆಯ ಕುಸ್ತಿಪಟುಗಳನ್ನು ಕರೆತರುವಂತೆ ಭಾರತೀಯ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್ಐ) ಸೂಚಿಸಿದೆ ಎಂದು ಕಾರ್ಯದರ್ಶಿ ತಿಳಿಸಿದರು. ಈ ಸ್ಪರ್ಧೆ ಸಲುವಾಗಿ ಬಹಳ ಪರಿಶ್ರಮಿಸಿದ್ದೇನೆ' ಎಂದರು.

ರಾಜೇಂದ್ರ ಮಠಪತಿ

'ಈಚೆಗೆ ನಡೆದ ಸೀನಿಯರ್ ಫ್ರೀ ಸ್ಟೈಲ್ ಕುಸ್ತಿ ಸ್ಪರ್ಧೆಯಲ್ಲಿ ವಿವಿಧ ರಾಜ್ಯಗಳ ಕುಸ್ತಿಪಟುಗಳು ಪಾಲ್ಗೊಂಡಿದ್ದರು. ಆಗ, ಕೋವಿಡ್ ಕಾರಣ ಹೇಳಿರಲಿಲ್ಲ. ಈಗ ಕೋವಿಡ್ ನೆಪ ಮುಂದಿಡಲಾಗಿದೆ. 12 ವರ್ಷಗಳಿಂದ ಅಭ್ಯಾಸ ಮಾಡುತ್ತಿರುವ ನನಗೆ ಅನ್ಯಾಯ ಮಾಡಲಾಗಿದೆ' ಎಂದು ದೂರಿದರು. ಈ ಕುರಿತು ಎನ್. ಆರ್. ನರಸಿಂಹ ಪ್ರತಿಕ್ರಿಯಿಸಿ 'ಉತ್ತಮ ಪ್ರದರ್ಶನ ತೋರಿದವರನ್ನಷ್ಟೇ ರಾಷ್ಟ್ರೀಯ ಟೂರ್ನಿಗೆ ಆಯ್ಕೆ ಮಾಡಲಾಗಿದೆ. ಹಿಂದಿನ ರಾಷ್ಟ್ರೀಯ ಟೂರ್ನಿಯಲ್ಲಿ ಅಗ್ರ 10ರ ಒಳಗೆ ಸ್ಥಾನ ಪಡೆಯದ ಯಾರನ್ನೂ ಆಯ್ಕೆ ಮಾಡಿಲ್ಲ. ಕುಸ್ತಿಪಟುಗಳು ಮಾಡಿದ ಆರೋಪದಲ್ಲಿ ಯಾವುದೇ ಸತ್ಯಾಂಶವಿಲ್ಲ. ಇದರಲ್ಲಿ ಸಂಸ್ಥೆಯ ಹಸ್ತಕ್ಷೇಪ ಇರುವುದಿಲ್ಲ' ಎಂದರು.

ಟೆಸ್ಟ್ ಕ್ರಿಕೆಟ್‌ಗೆ ಫಾಫ್ ಡುಪ್ಲೆಸಿ ವಿದಾಯ

ಜೋಹಾನ್ಸ್‌ಬರ್ಗ್ (ಪಿಟಿಐ): ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದ ಮಾಜಿ ನಾಯಕ ಫಾಫ್ ಡುಪ್ಲೆಸಿ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ.

36 ವರ್ಷದ ಫಾಫ್ ವಿದಾಯದ ಘೋಷಣೆಯನ್ನು ಇನ್ಸ್ಟಾಗ್ರಾಮ್‌ನಲ್ಲಿ ಮಾಡಿದ್ದಾರೆ.

'ಕಳೆದೊಂದು ವರ್ಷದಲ್ಲಿ ನಮಗೆಲ್ಲ ಅಗ್ನಿಪರೀಕ್ಷೆ ಎದುರಾಗಿತ್ತು. ಹಲವು ಅನಿರೀಕ್ಷಿತ ಪರಿಸ್ಥಿತಿಗಳನ್ನು ದಾಟಿ ಬಂದಿದ್ದೇವೆ. ಈ ಹೊತ್ತಿನಲ್ಲಿ ನಾನು ಹಾರ್ದಿಕವಾಗಿ ಹೊಸ ಅಧ್ಯಾಯ ಆರಂಭಿಸಲು ಬಯಸುತ್ತೇನೆ. ಹೊಸ ಹೆಜ್ಜೆ ಇಡಲು ಇದು ಸಕಾಲ. ದೇಶದ ತಂಡದಲ್ಲಿ ಆಡುವ ಅವಕಾಶ ಸಿಕ್ಕಿದ್ದು ದೊಡ್ಡ ಗೌರವ" ಎಂದು ಸಂದೇಶ ಬರೆದಿದ್ದಾರೆ. 'ಮುಂದಿನ ಎರಡು ವರ್ಷಗಳು ಐಸಿಸಿ ಟಿ20 ವಿಶ್ವಕಪ್ ನಡೆಯಲಿವೆ. ಆದ್ದರಿಂದ ಚುಟುಕು ಮಾದರಿಯ ಮೇಲೆ ಹೆಚ್ಚು ಗಮನ ಹರಿಸುತ್ತೇನೆ. ಜಗತ್ತಿನೆಲ್ಲೆಡೆ ಸಾಧ್ಯವಾದಷ್ಟೂ ಹೆಚ್ಚಿನ ಸಂಖ್ಯೆಯಲ್ಲಿ ಟಿ20 ಪಂದ್ಯಗಳನ್ನು ಆಡುವುದು ನನ್ನ ಗುರಿ' ಎಂದು ತಮ್ಮ ಮುಂದಿನ ಯೋಜನೆಗಳನ್ನೂ ಉಲ್ಲೇಖಿಸಿದ್ದಾರೆ.

ಫಾಫ್ ಡು ಪ್ಲೆಸಿ

ಡುಪ್ಲೆಸಿ 69 ಟೆಸ್ಟ್‌ಗಳನ್ನು ಆಡಿದ್ದಾರೆ. ಅದರಲ್ಲಿ 4,163 ರನ್‌ಗಳನ್ನು ಗಳಿಸಿದ್ದಾರೆ. ಅದರಲ್ಲಿ 10 ಶತಕ ಮತ್ತು 21 ಅರ್ಧಶತಕಗಳು ಸೇರಿವೆ.

ಹೋದ ವರ್ಷ ಫಾಫ್, ದಕ್ಷಿಣ ಆಫ್ರಿಕಾದ ಟೆಸ್ಟ್ ಮತ್ತು ಟಿ20 ತಂಡಗಳ ನಾಯಕತ್ವದಿಂದ ಕೆಳಗಿಳಿದಿದ್ದರು. 2016ರಲ್ಲಿ ಎಬಿ ಡಿವಿಲಿಯರ್ಸ್ ನಾಯಕತ್ವ ಬಿಟ್ಟ ಮೇಲೆ ಫಾಫ್ ತಂಡವನ್ನು 36 ಟೆಸ್ಟ್‌ಗಳಲ್ಲಿ ಮುನ್ನಡೆಸಿದ್ದರು. 18ರಲ್ಲಿ ತಂಡವು ಜಯಿಸಿತ್ತು.

ಬಲಗೈ ಬ್ಯಾಟ್ಸ್‌ಮನ್ ಫಾಫ್ 143 ಏಕದಿನ, 50 ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಆಡಿದ್ದಾರೆ.

ಐಎಸ್‌ಎಲ್: ಗೋವಾಕ್ಕೆ ಜಯ

ಫತೋರ್ಡ: ಆತಿಥೇಯ ಗೋವಾ ಎಫ್‌ಸಿ ತಂಡವು ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಬುಧವಾರ ಒಡಿಶಾ ವಿರುದ್ಧ 3–1 ರಿಂದ ಗೆದ್ದಿತು.

ಗೋವಾದ ಅಲ್ಬರ್ಟೊ ನೊಗೆರಾ (18ನೇ ನಿ), ಜಾರ್ಜ್ ಒರ್ಟಿಜ್ ಮೆಂಡೋಜಾ (26ನೇ ನಿ) ಮತ್ತು ಐವಾನ್ ಗಾರ್ಮೆಡೊ ಗೋಂಜಾಲೆಜ್ (75ನೇ ನಿ) ಗೋಲು ಗಳಿಸಿದರು. ಒಡಿಶಾ ತಂಡದ ಡಿಯೆಗೊ ಮಾರ್ಸಿಯೊ (30ನಿ) ಗೋಲು ಗಳಿಸಿದರು.

ಆಸ್ಟ್ರೇಲಿಯಾ ಓಪನ್ ಟೆನಿಸ್: ಬಾರ್ಟಿ ಪರಾಭವ

ನಡಾಲ್ ಓಟಕ್ಕೆ ಸಿಟ್ಸಿಪಾಸ್ ತಡೆ

ಮೆಲ್ಬರ್ನ್: ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಗರಿಷ್ಠ ಗ್ರ್ಯಾನ್‌ಸ್ಲಾಮ್ ವಿಜೇತ ಆಟಗಾರ ಎನಿಸಿಕೊಳ್ಳುವ ರಫೆಲ್ ನಡಾಲ್ ಅವರ ಆಸೆಗೆ ಸ್ಟೆಫಾನೋಸ್ ಸಿಟ್ಸಿಪಾಸ್ ತಣ್ಣೀರು ಸುರಿದರು. ಎರಡು ಸೆಟ್‌ಗಳ ಹಿನ್ನಡೆಯಿಂದ ಪುಟಿದೆದ್ದು ಗೆಲುವಿನ ನಗೆ ಬೀರಿದ ಗ್ರೀಸ್ ಆಟಗಾರ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ನಾಲ್ಕರ ಘಟ್ಟ ತಲುಪಿದರು.

21ನೇ ಗ್ರ್ಯಾನ್‌ಸ್ಲಾಮ್ ಕಿರೀಟ ಮುಡಿಗೇರಿಸಿಕೊಳ್ಳುವ ಹಂತದಲ್ಲಿದ್ದ ಸ್ಪೇನ್‌ನ ನಡಾಲ್ ಅವರನ್ನು ಐದನೇ ಶ್ರೇಯಾಂಕದ ಸಿಸಿಪಸ್ 3–6, 2–6, 7–6, 6–4, 6–5ರಿಂದ ಪರಾಭವಗೊಳಿಸಿದರು. ನಡಾಲ್ ಇಲ್ಲಿ ಎರಡನೇ ಶ್ರೇಯಾಂಕ ಪಡೆದಿದ್ದರು.

'ಮೂರನೇ ಸೆಟ್ ಬಳಿಕ ಏನಾಯಿತೋ ಗೊತ್ತಿಲ್ಲ. ಹಕ್ಕಿಯಂತೆ ಹಾರಿದ ಅನುಭವವಾಯಿತು. ಎಲ್ಲವೂ ನನ್ನ ಪರವಾಯಿತು' ಎಂದು ಪಂದ್ಯದ ಬಳಿಕ ಸಿಟ್ಸಿಪಾಸ್ ನುಡಿದರು.

ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರಲ್ಲಿ ಮೊದಲ ಎರಡು ಸೆಟ್ ಮುನ್ನಡೆಯಲ್ಲಿದ್ದೂ ನಡಾಲ್ ಸೋಲು ಕಂಡಿದ್ದು ಇದು ಎರಡನೇ ಬಾರಿ. ಈ ಮೊದಲು 2015ರ ಅಮೆರಿಕ ಓಪನ್ ಟೂರ್ನಿಯ ಮೂರನೇ ಸುತ್ತಿನ ಪಂದ್ಯದಲ್ಲಿ ಇಟಲಿಯ ಫ್ಯಾಬಿಯೊ ಫಾಗ್ನಿನಿ ಎದುರು ಮಣಿದಿದ್ದರು.

ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಹಾಗೂ ನಡಾಲ್ ಇದುವರೆಗೆ ತಲಾ 20 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯಿಸಿದ್ದಾರೆ. ಇಲ್ಲಿ ಟ್ರೋಫಿ ಗೆದ್ದರೆ 34 ವರ್ಷದ ನಡಾಲ್ ದಾಖಲೆ ನಿರ್ಮಿಸುತ್ತಿದ್ದರು.

ಸ್ಟೆಫಾನೋಸ್ ಸಿಟ್ಸಿಪಾಸ್ ಆಟದ ವೈಖರಿ—ಎಎಫ್‌ಪಿ ಚಿತ್ರ

ಸೆಮಿಫೈನಲ್‌ನಲ್ಲಿ ಸಿಸಿಪಸ್ ಅವರಿಗೆ ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಸವಾಲು ಎದುರಾಗಿದೆ.

ಎಂಟರಘಟ್ಟದ ಮತ್ತೊಂದು ಪಂದ್ಯದಲ್ಲಿ ತಮ್ಮದೇ ದೇಶದ ಆ್ಯಂಡ್ರೆ ರುಬ್ಲೆವ್ ಅವರಿಗೆ ಸೋಲುಣಿಸಿದ ಡ್ಯಾನಿಲ್ ಮೆಡ್ವೆಡೆವ್, ಸೆಮಿಫೈನಲ್ ಪ್ರವೇಶಿಸಿದರು. ಮೆಡ್ವೆಡೆವ್ ಅವರಿಗೆ 7-5 6-3 6-2ರಿಂದ ಜಯ ಒಲಿಯಿತು. ಇದರೊಂದಿಗೆ ಅವರ ಸತತ ಗೆಲುವಿನ ಸರಣಿ 19ಕ್ಕೇರಿತು.

2019ರ ಅಮೆರಿಕ ಓಪನ್ ರನ್ನರ್‌ಅಪ್ ಮೆಡ್ವೆಡೆವ್ ಅವರಿಗೆ ರುಬ್ಲೆವ್ ಎದುರು ಇದು ಸತತ ನಾಲ್ಕನೇ ನೇರ ಸೆಟ್‌ಗಳ ಜಯ.

ಅರ್ಹತಾ ಸುತ್ತಿನಿಂದ ಗೆದ್ದುಬಂದು ಸೆಮಿಫೈನಲ್ ತಲುಪಿರುವ ರಷ್ಯಾದ ಅಸ್ಲನ್ ಕರಾತ್ಸೆವ್ ಅವರು ಮುಂದಿನ ಪಂದ್ಯದಲ್ಲಿ ಅಗ್ರಕ್ರಮಾಂಕದ ಆಟಗಾರ ನೊವಾಕ್ ಜೊಕೊವಿಚ್ ಅವರನ್ನು ಎದುರಿಸಲಿದ್ದಾರೆ.

ಬಾರ್ಟಿಗೆ ಆಘಾತ ನೀಡಿದ ಮುಚೋವ: 43 ವರ್ಷಗಳ ಈ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ಸ್ಥಳೀಯ ಆಟಗಾರ್ತಿ ಎಂಬ ಗರಿಮೆ ತಮ್ಮದಾಗಿಸುವ ನಿರೀಕ್ಷೆಯಲ್ಲಿದ್ದ ಅಗ್ರಶ್ರೇಯಾಂಕದ ಆಟಗಾರ್ತಿ ಆ್ಯಶ್ಲಿ ಬಾರ್ಟಿ ಆಘಾತ ಅನುಭವಿಸಿದರು. ಎಂಟರಘಟ್ಟದ ಹಣಾಹಣಿಯಲ್ಲಿ ಅವರು 6–1, 3–6, 2–6ರಿಂದ ಜೆಕ್ ಗಣರಾಜ್ಯದ ಕರೋಲಿನಾ ಮುಚೋವ ಎದುರು ಮುಗ್ಗರಿಸಿದರು.

ಸೆಮಿಫೈನಲ್ ಹಣಾಹಣಿಯಲ್ಲಿ ಮುಚೋವ, ಅಮೆರಿಕದ ಜೆನಿಫರ್ ಬ್ರಾಡಿ ಅವರನ್ನು ಎದುರಿಸಲಿದ್ದಾರೆ. ಮತ್ತೊಂದು ಪಂದ್ಯದಲ್ಲಿ 22ನೇ ಶ್ರೇಯಾಂಕದ ಜೆನಿಫರ್ 4-6, 6-2, 6-1ರಿಂದ ತಮ್ಮದೇ ದೇಶದ ಜೆಸ್ಸಿಕಾ ಪೆಗುಲಾ ಅವರನ್ನು ಮಣಿಸಿದರು.

ರಾಷ್ಟ್ರೀಯ ಸೀನಿಯರ್ ಟ್ರ್ಯಾಕ್–ಫೀಲ್ಡ್ ಕೂಟ ಇಂದಿನಿಂದ

ಪಟಿಯಾಲ (ಪಿಟಿಐ): ಕೊರೊನಾ ಕಾಲಘಟ್ಟದ ಮೊದಲ ಇಂಡಿಯನ್ ಗ್ರ್ಯಾನ್ ಪ್ರೀ ಸೀನಿಯರ್ ಟ್ರ್ಯಾಕ್ ಮತ್ತು ಫೀಲ್ಡ್ ಕೂಟವು ಗುರುವಾರ ನಡೆಯಲಿದೆ.

85 ಅಥ್ಲೀಟ್‌ಗಳು ಕಣಕ್ಕಿಳಿಯಲಿದ್ದಾರೆ. ಕರ್ನಾಟಕದ ಎಂ.ಆರ್. ಪೂವಮ್ಮ, ಸ್ಪ್ರಿಂಟರ್ ದ್ಯುತಿ ಚಾಂದ್, ಅಂಜಲಿ ದೇವಿ, ಶುಭಾ ವೆಂಕಟೇಶನ್, ವಿ.ಎಂ. ಶಾಲಿನಿ ಮತ್ತು ಚಂದಾ ಅವರು ಮಹಿಳೆಯರ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ.

ಪುರುಷರ ವಿಭಾಗದಲ್ಲಿ ಓಟಗಾರ ಮೊಹಮ್ಮದ್ ಅನಾಸ್ ಯಾಹ್ಯಾ, ಅಮಿಯಾ ಕುಮಾರ್ ಮಲಿಕ್, ಅರೋಕ್ಯಾ ರಾಜೀವ, ನೊಹಾ ನಿರ್ಮಲ್ ಟಾಮ್, ಅಮೋಜ್ ಜೇಕಬ್, ಧಾರುಣ್ ಅಯ್ಯಸಾಮಿ ಮತ್ತು ಯುಗಂತ್ ಶೇಖರ್ ಸಿಂಗ್ ಕಣಕ್ಕಿಳಿಯುವರು.

ಆದರೆ ಪ್ರಮುಖ ಅಥ್ಲೀಟ್‌ಗಳಾದ ಹಿಮಾ ದಾಸ್, ನೀರಜ್ ಚೋಪ್ರಾ ಸ್ಪರ್ಧಿಸುತ್ತಿಲ್ಲ.

ಕರ್ನಾಟಕದಲ್ಲಿ ಮೊದಲ ರಾಷ್ಟ್ರೀಯ ಚಾಂಪಿಯನ್‌ಷಿಪ್: ಗದಗದಲ್ಲಿ ಗರಿಗೆದರಿದ ನಿರೀಕ್ಷೆ

ಮೌಂಟೆನ್ ಬೈಕ್‌ಗೆ 'ಬಿಂಕದ' ಟ್ರ್ಯಾಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲು ಸಾಲು ಮರಗಳ ನಡುವಿನ ಕಡಿದಾದ ಹಾದಿಯಲ್ಲಿ ಬಂಡೆ–ಕಲ್ಲುಗಳ ಸಂದಿಯ ಕಠಿಣ ತಡೆಗಳನ್ನು ದಾಟಿ ಸಾಗುವ ಮೌಂಟೆನ್ ಬೈಕ್ (ಎಂಟಿಬಿ) ಸ್ಪರ್ಧೆ ಕರ್ನಾಟಕದ ಸೈಕ್ಲಿಸ್ಟ್‌ಗಳಿಗೆ ಇನ್ನು ಸುಗಮವಾಗಲಿದೆ. ಗದಗ ಜಿಲ್ಲೆಯ ಬಿಂಕದಕಟ್ಟೆಯಲ್ಲಿರುವ ಸಾಲುಮರದ ತಿಮ್ಮಕ್ಕ ಉದ್ಯಾನದ ಸಹಜ ವಾತಾವರಣದಲ್ಲಿ ಬೆಡಗು–ಬಿನ್ನಾಣದ ಟ್ರ್ಯಾಕ್ ಸಜ್ಜುಗೊಂಡಿದ್ದು ದೇಶದ ಅಪರೂಪದ ಟ್ರ್ಯಾಕ್‌ಗಳಲ್ಲಿ ಒಂದೆನಿಸಿಕೊಂಡಿದೆ.

ಭಾರತದಲ್ಲಿ ಪುಣೆ, ಹಿಮಾಚಲಪ್ರದೇಶ, ಕೇರಳ, ಉತ್ತರಾಖಂಡ ಮುಂತಾದ ಕಡೆಗಳನ್ನು ಹೊರತುಪಡಿಸಿದರೆ ಬೇರೆಲ್ಲೂ ಸಹಜವಾದ ಎಂಟಿಬಿ ಟ್ರ್ಯಾಕ್ ಇಲ್ಲ. ಕರ್ನಾಟಕದಲ್ಲಿ ಮೈಸೂರಿನ ಲಲಿತ್ ಮಹಲ್ ಅರಮನೆ ಸಮೀಪ, ಗದಗ ಜಿಲ್ಲೆಯ ಯತ್ನಳ್ಳಿ ಮತ್ತು ಲಕ್ಷ್ಮೇಶ್ವರದಲ್ಲಿ ಎಂಟಿಬಿ ಟ್ರ್ಯಾಕ್ ಇದೆ. ಆದರೆ ಅದು ರಾಜ್ಯಮಟ್ಟದ ಸ್ಪರ್ಧೆಗಳಿಗಷ್ಟೆ ಸೀಮಿತ.

ರಾಷ್ಟ್ರೀಯ ಮಟ್ಟದ ಐದು ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್ ಮತ್ತು ಒಂದು ಟ್ರ್ಯಾಕ್ ಚಾಂಪಿಯನ್‌ಷಿಪ್ ಆಯೋಜಿಸಿರುವ ಕರ್ನಾಟಕಕ್ಕೆ ಎಂಟಿಬಿ ಚಾಂಪಿಯನ್‌ಷಿಪ್ ಆಯೋಜಿಸುವ ಅವಕಾಶ ಇಲ್ಲಿಯ ವರೆಗೆ ಸಿಗಲಿಲ್ಲ. ಗುಣಮಟ್ಟದ ಟ್ರ್ಯಾಕ್ ಇಲ್ಲದ್ದೇ ಇದಕ್ಕೆ ಕಾರಣ. ಅರಣ್ಯ ಇಲಾಖೆ ಮತ್ತು ರಾಜ್ಯ ಅಮೆಚೂರ್ ಸೈಕ್ಲಿಂಗ್ ಸಂಸ್ಥೆಯ ವರ್ಷಗಳ ಯೋಜನೆಯ ಫಲವಾಗಿ ಈಗ ಟ್ರ್ಯಾಕ್ ಸಿದ್ಧವಾಗಿದ್ದು ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಆತಿಥ್ಯ ವಹಿಸುವ ಅವಕಾಶವೂ ಲಭಿಸಿದೆ.

ಹೊಸ ಎಂಟಿಬಿ ಟ್ರ್ಯಾಕ್‌ನಲ್ಲಿ ಸಾಗಿದ ಸೈಕ್ಲಿಸ್ಟ್ –ಚಿತ್ರ/ನಿಖಿಲ್ ದಾಸ್

ಎಂಟಿಬಿ ಚಾಂಪಿಯನ್‌ಷಿಪ್‌ಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಮಾನದಂಡಗಳನ್ನು ಅನುಸರಿಸಿ ಇದನ್ನು ಸಿದ್ಧಪಡಿಸಿದ್ದು ಒಟ್ಟು ನಾಲ್ಕು ಕಿಲೋಮೀಟರ್ ಉದ್ದದ ಟ್ರ್ಯಾಕ್‌ನ ಮೊದಲ ಒಂದೂವರೆ ಕಿಲೋಮೀಟರ್ ಜೀಪ್ ಟ್ರ್ಯಾಕ್ (ನಾಲ್ಕು ಸೈಕಲ್‌ಗಳು ಸಾಗಬಹುದಾದಷ್ಟು ಅಗಲ) ಇರುವುದು ವಿಶೇಷ.

'ಅರಣ್ಯ ಇಲಾಖೆಗೆ ಸೇರಿದ ಟ್ರೀ ಪಾರ್ಕ್ ಇದು. ಎಂಟಿಬಿಗೆ ಬೇಕಾದ ಏರಿಳಿತ, ತಿರುವು, ದುರ್ಗಮ ಹಾದಿ ಎಲ್ಲವೂ ಇಲ್ಲಿ ಸಹಜವಾಗಿಯೇ ಇದೆ. ಸಣ್ಣಪುಟ್ಟ ಮಾರ್ಪಾಟುಗಳನ್ನು ಮಾಡಿ ಟ್ರ್ಯಾಕ್ ನಿರ್ಮಿಸಲಾಗಿದೆ. ಜನವರಿ 17ರಂದು ನಡೆದ ರಾಜ್ಯ ಎಂಟಿಬಿ ಚಾಂಪಿಯನ್‌ಷಿಪ್ ಈ ಟ್ರ್ಯಾಕ್‌ಗೆ ಸಂಬಂಧಿಸಿ 'ಟ್ರಯಲ್' ಆಗಿತ್ತು. ಅಂದು ಹಾಜರಿದ್ದ ಭಾರತ ಸೈಕ್ಲಿಂಗ್ ಫೆಡರೇಷನ್‌ನ ಮುಖ್ಯ ಕಮಿಷನರ್ ಕೆ.ದತ್ತಾತ್ರೇಯ ಅವರು ಟ್ರ್ಯಾಕ್ ಮಾನ್ಯ ಮಾಡಿದ್ದಾರೆ. ಹೀಗಾಗಿ ರಾಷ್ಟ್ರೀಯ ಚಾಂಪಿಯನ್‌ಷಿಪ್ ಆಯೋಜಿಸಲು ಫೆಡರೇಷನ್ ಅನುಮತಿ ನೀಡಿದೆ' ಎಂದು ರಾಜ್ಯ ಅಮೆಚೂರ್ ಸೈಕ್ಲಿಂಗ್ ಸಂಸ್ಥೆಯ ಗೌರವ ಕಾರ್ಯದರ್ಶಿ ಶ್ರೀಶೈಲ ಎಂ.ಕುರಣಿ 'ಪ್ರಜಾವಾಣಿ'ಗೆ ತಿಳಿಸಿದರು.

'ಅಂತರರಾಷ್ಟ್ರೀಯ ಸ್ಪರ್ಧೆಗೆ ಅನುಕೂಲ'

ಸುನಿಲ್ ನಂಜಪ್ಪ

ಇದು ಸುಸಜ್ಜಿತ, ಅಂತರರಾಷ್ಟ್ರೀಯ ಗುಣಮಟ್ಟದ ಟ್ರ್ಯಾಕ್. ಇದರಿಂದ ರಾಜ್ಯದ ಸೈಕ್ಲಿಸ್ಟ್‌ಗಳಿಗೆ ತುಂಬ ಅನುಕೂಲ ಆಗಲಿದೆ. ದೇಶದ ಇತರ ಕಡೆಗಳಲ್ಲಿ ಇರುವುದೆಲ್ಲ ಸಿಂಗಲ್ ಟ್ರ್ಯಾಕ್. ಆದ್ದರಿಂದ ಇಲ್ಲಿನವರು ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಿಗೆ ಹೋದಾಗ ಜೀಪ್ ಟ್ರ್ಯಾಕ್ ಮತ್ತು ಸಿಂಗಲ್ ಟ್ರ್ಯಾಕ್‌ಗಳಿಗೆ ಹೊಂದಿಕೊಳ್ಳಲು ಕಷ್ಟವಾಗುತ್ತದೆ. ಇನ್ನು ಮುಂದೆ ಈ ಸಮಸ್ಯೆ ಕಾಡದು. ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಸಿದ್ಧವಾಗುತ್ತಿರುವ ರಾಜ್ಯದ ಸೈಕ್ಲಿಸ್ಟ್‌ಗಳಿಗೆ ಇಲ್ಲೇ 15 ದಿನಗಳ ಶಿಬಿರ ಆಯೋಜನೆಯಾಗಿದೆ. ಇದರ ಲಾಭ ಈ ಬಾರಿಯ ಫಲಿತಾಂಶದಲ್ಲಿ ಎದ್ದು ಕಾಣಲಿದೆ ಎಂದು ಟ್ರ್ಯಾಕ್ ವಿನ್ಯಾಸಕಾರ ಸುನಿಲ್ ನಂಜಪ್ಪ ಹೇಳಿದ್ದಾರೆ.

ಸ್ಪರ್ಧೆಗೆ ಇಂದು ಚಾಲನೆ

ಗದಗ: ರಾಷ್ಟ್ರಮಟ್ಟದ 17ನೇ ಮೌಂಟೆನ್‌ಬೈಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್ ಇಲ್ಲಿನ ಬಿಂಕದಕಟ್ಟಿ ಸಾಲುಮರದ ತಿಮ್ಮಕ್ಕ ಉದ್ಯಾನದಲ್ಲಿ ಫೆ. 19ರಿಂದ 21ರ ವರೆಗೆ ನಡೆಯಲಿದ್ದು, ಗುರುವಾರ (ಫೆ. 18) ಸಂಜೆ 5ಕ್ಕೆ ಕಳಸಾಪೂರ ರಸ್ತೆಯಲ್ಲಿರುವ ಒಳಾಂಗಣ ಕ್ರೀಡಾಂಗಣದಲ್ಲಿ ಉದ್ಘಾಟನಾ ಕಾರ್ಯಕ್ರಮ ಜರುಗಲಿದೆ.

ಆರ್ಮಿ ಅಡ್ವೆಂಚರ್ ವಿಂಗ್, ಇಂಡಿಯನ್ ಏರ್‌ಫೋರ್ಸ್, ಸಿಎಫ್ಐ ಸೇರಿದಂತೆ ವಿವಿಧ ರಾಜ್ಯಗಳ ಒಟ್ಟು 450 ಮಂದಿ ಸೈಕ್ಲಿಸ್ಟ್‌ಗಳು ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿರುವ ಬೆಂಗಳೂರಿನ ಕಿರಣ್‌ರಾಜ್, ಮೈಸೂರಿನ ವೈಶಾಖ್ ಮತ್ತು ಆಡೊನೀಸ್ ಟಂಗ್ಟು ಕರ್ನಾಟಕ ತಂಡದ ಭರವಸೆ ಎನಿಸಿದ್ದಾರೆ. ಈ ಮೂವರು ಸೈಕ್ಲಿಸ್ಟ್‌ಗಳು ಅಂತರರಾಷ್ಟ್ರೀಯ ಮಟ್ಟದ ವಿವಿಧ ಟೂರ್ನಿಗಳಲ್ಲಿ ದೇಶವನ್ನು ಪ್ರತಿನಿಧಿಸಿದ್ದಾರೆ.